ಅಂಕುರ

No. 11



ರಿ ಯೋಗಿನಿ - ಕೊಡಗು

ಸಾಹಿತ್ಯ ಮಾಲೆ, ಮಂಗಳೂರು-3.

ವರುಷ ೪ ಕುಸುಮ ೧೯

ಅಂಕುರ

(ಕಥಾಸಂಕಲನ)

ಕುಮಾರಿ ಎಂ. ಎ. ನೀಲಮ್ಮ (ಯೋಗಿನಿ)
ಮಡಿಕೇರಿ.

ಪ್ರಕಾಶಕರು:
ವಿವೇಕ ಸಾಹಿತ್ಯಮಾಲೆ
ಮಂಗಳೂರು-3.

ಮುದ್ರಣಗಾರರು:
ವಿಜಯ ಮುದ್ರಣಾಲಯ
ಮಂಗಳೂರು.

ಮುಖಚಿತ್ರ: ಟಿ. ಕೃಷ್ಣ ರಾವ್.

ಬೆಲೆ: ೧—೦—೦

ಸಂಪಾದಕರು:
ರಾಮ ಮೊಳೆಯಾರ, ವಿದ್ವಾನ್,
ಮಂಗಳೂರು—3.

ನನ್ನ ಮಾತು

ಬರೆಯುತ್ತಾ ಸಾಹಿತಿಯಾಗುವುದು, ಸಾಹಿತಿಯಾಗಬೇಕೆಂದು ಬರಯುವುದು—ಹೀಗೆ ಬರಹಗಾರರಲ್ಲಿ ಎರಡು ಬಗೆ. ಎರಡು ಬಗೆಯವರೂ ಯೋಗ್ಯ ಅಭ್ಯಾಸದ ಮೂಲಕವೇ ಸಾಹಿತ್ಯಕ್ಷೇತ್ರದಲ್ಲಿ ಹೊಳೆಯಬಲ್ಲರಾದರೂ ಆಳವಾದ ಅನುಭವ, ತತ್ಫಲವಾಗಿ ಮೂಡುವ ಸ್ವಾಭಾವಿಕತೆಯ ಅಂಶ ಮೊದಲನೆಯ ವರ್ಗಕ್ಕೆ ಸೇರಿದವರ ಕೃತಿಗಳಲ್ಲಿ ಹೆಚ್ಚಾಗಿರುತ್ತದೆ; ಆಕಾಂಕ್ಷೆ, ತತ್ಫಲವಾಗಿ ಏರ್ಪಡುವ ಪ್ರಯತ್ನದ ಅಂಶ ಎರಡನೆಯ ವರ್ಗದವರ ಕೃತಿಗಳಲ್ಲಿ ಹೆಚ್ಚಾಗಿರುತ್ತದೆ. ಈ ಹೊತ್ತಿಗೆ ಹುಟ್ಟಿಕೊಂಡುದರಲ್ಲಿ ನೂರಕ್ಕೆ ಅರುವತ್ತು ಪಾಲು ನಾನು ಎರಡನೇ ವರ್ಗಕ್ಕೆ ಸೇರಿದವಳು. ದೈವದತ್ತವಾದ ಪ್ರತಿಭೆ ನಮ್ಮಲ್ಲಿ ಎಷ್ಟು ಮಂದಿಗಿದೆ? ಹಾಗೆಯೆ, ಪ್ರಯತ್ನದ ಮೂಲಕವೆ ಮುಂದಕ್ಕೆ ಬಂದವರ ಸಂಖ್ಯೆ ನಮ್ಮಲ್ಲಿ ಎಷ್ಟಿಲ್ಲ? ನನ್ನಲ್ಲಿ ಪ್ರತಿಭೆಯ ಅಂಶ ಎಷ್ಟಿದೆ?— ಅದನ್ನು ತೂಗಿ ಹೇಳಲು ನಾನು ಹೊರಡುವುದಿಲ್ಲ; ಆದರೂ ಯೋಗ್ಯ 'ಪ್ರಯತ್ನ'ದ ಸಾಫಲ್ಯವನ್ನು ಪ್ರಾಯೋಗಿಕವಾಗಿ ಕಾಣಬೇಕೆಂದಾಶಿಸಿ ಬರೆದ ಆರು ಕಥೆಗಳು ಈ ಹೊತ್ತಿಗೆಯಲ್ಲಿ ಅಡಕವಾಗಿವೆ ಎಂದು ಹೇಳಬಲ್ಲೆ. ಇವು ನನ್ನ ತೀರಾ ಮೊಟ್ಟಮೊದಲನೆಯ ಪ್ರಯತ್ನಗಳಾಗಿರುವುದರಿಂದ ಸಾಹಿತ್ಯಕ ಲಕ್ಷಣಗಳನ್ನು ಸಂಪೂರ್ಣ ಒಲ್ಲದಿರಬಹುದು; ಹಾಗೆಯೆ ಸ್ವಲ್ಪ ಮಟ್ಟಿಗೆ ಕಾಲ್ಪನಿಕವಾಗಿ ಹರಿದಿರಬಹುದು. ಆದುದರಿಂದ ನನ್ನ ಮನೀಷೆಯ ಮುಗುಳುಗಳಿಂದ ಕೂಡಿದ ಈ ಹೊತ್ತಿಗೆಗೆ 'ಅಂಕುರ' ಎಂದೇ ಹೆಸರಿಟ್ಟೆ. ಕಥೆಗಳನ್ನು 'ಅಂಕುರ'ದ ಅನ್ವಯಕ್ಕೆ ತೂಗಿ ನೋಡುವುದು ಸಹೃದಯ ಓದುಗರಿಗೆ ಬಿಟ್ಟಿದೆ.

'ಹಿಂದನ ಹೊಲ' ಮತ್ತು 'ವಿಚಿತ್ರಸಂಯೋಗ'ವನ್ನು ಬಿಟ್ಟರೆ ಉಳಿದ ಕಥೆಗಳು ಇದೇ ಮೊದಲಾಗಿ ಬೆಳಕುಕಾಣುತ್ತಿವೆ. 'ಹಿಂದನ ಹೊಲ'ಕ್ಕೆ ಮಡಿಕೇರಿಯಲ್ಲಿ ನಡೆದ ಗೌರಮ್ಮಸ್ಮಾರಕ ಕಥಾ ಸ್ಪರ್ಧೆಯಲ್ಲಿ ಬಹುಮಾನ ಬಂದಿದೆ. ಇದರ ಬಗೆಗೆ "ಸ್ವಂತ ಕೃತಿಯಲ್ಲ" ಎಂಬ ಸಂಶಯವನ್ನು ಹಲವರು ವ್ಯಕ್ತಪಡಿಸಿದ್ದಾರೆ. ಅಂಥವರ ಸಂಶಯಕ್ಕೆ "ಇದು ಕೃತಿಚೌರ್ಯದ ಫಲವಂತೂ ಅಲ್ಲವೇ ಅಲ್ಲ" ಎಂದು ಆತ್ಮಸಾಕ್ಷಿಯಾಗಿ ಹೇಳುತ್ತೇನೆ. ಆತ್ಮ

ಸಾಕ್ಷಿಗೆ ವಿಶಾರಿದ ಸತ್ಯನಿದರ್ಶನವನ್ನು ನಾನು ಬೇರೆ ಕಾಣುತ್ತಿಲ್ಲ ಈ ಕಥೆಯನ್ನು ತಮ್ಮ ಪತ್ರಿಕೆಯಲ್ಲಿ ಪ್ರಕಟಿಸಿದ 'ಜನ್ಮಭೂಮಿ'ಯ ಸಂಪಾದಕರಿಗೂ ಮತ್ತು 'ವಿಚಿತ್ರ ಸಂಯೋಗ'ಕ್ಕೆ ಪ್ರಥಮತ ಬೆಳಕು ಕಾಣಿಸಿದ 'ಕಂಠೀರವ' ಪತ್ರಿಕೆಯ ಒಡೆಯರಿಗೂ, ಹಲವು ವಿಧಗಳಿಂದ ಸಹಕರಿಸಿದ ಉದಾರಬಂಧುಗಳಿಗೂ, ಪ್ರಕಟಣಾಕಾರ್ಯದಲ್ಲಿ ಯೋಗ್ಯ ಸಲಹೆಗಳನ್ನಿತ್ತು ಸಹಕರಿಸಿದ ಮಂಗಳೂರ ಚಿತ್ರವಾಣಿ ಪತ್ರಿಕೆಯ ಸಂಪಾದಕರಾದ ಶ್ರೀ। ಬಿ. ಎಸ್. ಎಮ್. ಕುಮಾರರಿಗೂ, ತಮ್ಮ ಮಾಲೆಯಲ್ಲಿ ನನ್ನ ಪ್ರಥಮ ಪುಷ್ಪವನ್ನು ಪೋಣಿಸಲು ಒಪ್ಪಿದ ವಿವೇಕ ಸಾಹಿತ್ಯಮಾಲೆಯ ಪ್ರಕಾಶಕರಾದ ರಾ. ಮೊ. ವಿಶ್ವಾಮಿತ್ರರಿಗೂ ಮತ್ತು ಬಯಸಿದ ಕಾಲಕ್ಕೆ ಪುಸ್ತಕವನ್ನು ಅಂದವಾಗಿ ಮುದ್ರಿಸಿಕೊಟ್ಟ ವಿಜಯ ಪ್ರೆಸ್ಸಿನ ಮಾಲಕರಿಗೂ, ನನ್ನ ಪರವಾಗಿಯೂ ಪ್ರಕಾಶಕರ ಪರವಾಗಿಯೂ ಹೃತ್ಪೂರ್ವಕ ವಂದಿಸುತ್ತೇನೆ.

೨೪—೨—೫೬

ಸಿಲ್ವರ್‌ಜ್ಯುಬ್ಲಿ ಬಿಲ್ಡಿಂಗ್,
ಮಡಿಕೇರಿ.

"ಯೋಗಿನಿ"

ಎರಡು ಮಾತು

"ಅಂಕುರ" ಕಥಾ ಸಂಕಲನವನ್ನಿದೀಗ ನಮ್ಮ ಹತ್ತೊಂಭತ್ತನೆಯ ಪ್ರಕಟಣೆಯಾಗಿ ನಿಮ್ಮ ಮುಂದಿಡಲು ಸಂತೋಷಪಡುತ್ತಿರುವೆವು.

ಈ ಸಂಕಲನದಲ್ಲಿರುವ ಆರು ಕಥೆಗಳೂ ತಾತ್ವಿಕ ಹಿನ್ನೆಲೆಯಿಂದ ಮಾರ್ಮಿಕವಾಗಿ ಚಿತ್ರಿತವಾಗಿವೆ. ಈ ಕತೆಗಳನ್ನೋದಿದಾಗ ಟಾಲ್‌ಸ್ಟಾಯಿಯ ಕತೆಗಳ ನೆನಪು ಹುಟ್ಟುತ್ತಿದೆ. ಉತ್ತಮ ಕಥೆಗಳನ್ನೊಳಗೊಂಡ ಈ ಕಥಾ ಸಂಕಲನವನ್ನು ನಮ್ಮ ಸಾಹಿತ್ಯಮಾಲೆಯಲ್ಲಿ ಪ್ರಕಟಿಸಲು ಅನುಮತಿಯಿತ್ತ ಕುಮಾರಿ ಎಂ. ಎ. ನೀಲಮ್ಮ "ಯೋಗಿನಿ," ಇವರಿಗೆ ಹೃತ್ಪೂರ್ವಕ ವಂದನೆಗಳು.

ಪುಸ್ತಕವನ್ನು ಸಕಾಲದಲ್ಲಿ ಮುದ್ರಿಸಿ ಕೊಟ್ಟ ವಿಜಯ ಪ್ರೆಸ್ಸಿನ ಶ್ರೀ। ರಾಮಚಂದ್ರ ರಾಯರಿಗೂ, ಪಡಿಯಚ್ಚನ್ನಿತ್ತ ಗೆ॥ ಮಂಗೇಶ ರಾಯರಿಗೂ, ಹಲವು ಬಗೆಗಳಿಂದ ಸಹಕರಿಸಿದ ಗೆ॥ ಕುಮಾರರಿಗೂ ಒಲವಿನ ವಂದನೆಗಳು.

—ಸಂಪಾದಕ.

೧೧ನೆಯ ಪುಟದಲ್ಲಿ ಚಿತ್ತ ಎಂದು ಮುದ್ರಣವಾಗಿರುವುದನ್ನು ಚೈತ್ರ ಎಂದು ತಿದ್ದಿಕೊಳ್ಳಬೇಕಾಗಿ ವಿನಂತಿ.

ಅರ್ಪಣೆ

ಸಾಹಿತ್ಯ ಕ್ಷೇತ್ರದಲ್ಲಿ ಮೆಲ್ಲಡಿಯಿಡಲು
ಮೆಲುನುಡಿಯಿಂದ ಪ್ರೇರೇಪಿಸಿ
ಅಕ್ಕರೆಯ ತಿಳಿಯೊರತೆಯನ್ನು
ಹರಿಸುತ್ತಿರುವ

ಅಕ್ಕ
ಭಾಗ್ಯಳಿಗೆ

ಪರಿವಿಡಿ

ಪಾರಿಜಾತ

ಆಶೆಯೆಂಬುವದೇನು ?
ನಗುವ ಕಾಮನ ಬಿಲ್ಲು;
ಕೆಸರಲ್ಲಿ ಕಾಲಿಡುತ
ಅದರ ಬೆಂಬತ್ತಿಹರು ಕಿರಿತರಳರು;
ಹೋದ ಹೋದಂತೆಲ್ಲ
ಆಚೆ ಸಾಗುತ್ತಿಹುದು;
ಭ್ರಮೆಯು ಕೈಗಳ ಚಾಚಿ
ಹಿಡಿಯಲೆಳಸುತಲಿಹರು ಆ ಮರುಳರು.

(ಅನುವಾದ: ಗಂಗಪ್ಪಬಾಲಿ.)

ಇಂದಿಗೆ ನಾಲ್ಕು ದಶಕಗಳ ಹಿಂದಿನ ಮಾತು.

ನಾನಾಗ ಮೂವತ್ತು ವರ್ಷ ಪ್ರಾಯದ ಯುವಕನಾಗಿದ್ದೆ.

ಇಂದು ನನ್ನ ತಲೆ, ಮುಖ, ಎದೆಗಳಲ್ಲೆಲ್ಲ ಬೂಸುರು ಹಿಡಿದಂತೆ ಬಿಳೀ ಕೂದಲುಗಳು ಹಬ್ಬಿವೆ; ಕಣ್ಣುಗಳ ಪಾಟವವು ನಿಂಶುಹೋಗಿದೆ; ಕೈಕಾಲುಗಳಲ್ಲಿ ನಡುಕ ತಲೆದೋರಿದೆ— ದೇಹ ನಿತ್ರಾಣಗೊಂಡಿದೆ. ಎಂಭತ್ತು, ತೊಂಭತ್ತು ವರ್ಷದ ಮುದುಕರು ಪಾಶ್ಚಾತ್ಯ ರಾಷ್ಟ್ರಗಳಲ್ಲಿ ಮಂತ್ರಿಪದವಿ ನೋಡುತ್ತಿದ್ದಾರೆ; ಮತ್ತೊಂದು ಜಾಗತಿಕ ಯುದ್ಧದಲ್ಲಿ ತಮ್ಮ ಕೆಚ್ಚನ್ನು ಮೆರೆಯಿಸಲು ಹವಣಿಸುತ್ತಿದ್ದಾರೆ. ನಾನಾದರೋ ಇಷ್ಟರಲ್ಲೇ ನಿರ್ವೀರ್ಯನಾಗಿ ಹೋಗಿದ್ದೇನೆ; ಪರಲೋಕದ ಯಾತ್ರೆಗಾಗಿ ಟಿಕೇಟು ಕೊಂಡುಕೊಳ್ಳಲು ಸಂಜ್ಞಾಪುತ್ರನನ್ನು ಇದಿರು ನೋಡುತ್ತಿದ್ದೇನೆ.

ಆದರೂ, ಈ ನಿಸ್ಸಹಾಯತೆಯಲ್ಲೂ ಒಂದು ಸಂತೋಷ: ಪ್ರತಿಯೊಬ್ಬ ಭಾರತೀಯನ ಸರಾಸರಿ ಪ್ರಾಯ ಇಪ್ಪತ್ತೇಳು ಆಗಿರುವಾಗ ನಾನು ಈ ಅವಸ್ಥೆಯನ್ನಾದರೂ ಮುಟ್ಟಿರುವೆನಲ್ಲಾ ಎಂದು.

ನಾನೀಗ ನಿಮಗೆ ಹೇಳುತ್ತೇನೆಂದ ಮಾತು—ಅಲ್ಲ—ಅದೊಂದು ಘಟನೆ, ಹೌದು; ಘಟನೆಯೇ— ಅದನ್ನು ನೆನೆಯುವಾಗ ಈಗಲೂ ನನಗೆ ಒಂದು ತರವಾದ ಹುರುಪುಂಟಾಗುತ್ತದೆ: ಸುಕ್ಕುಗಟ್ಟಿರುವ ಚರ್ಮವು ನಯವಾದಂತಾಗಿ, ನಾಡಿಗಳಲ್ಲಿ ಹಿಂಗಿಹೋಗುತ್ತಿರುವ ರಕ್ತವು ತುಂಬಿ ಹರಿದಂತಾಗಿ, ಕುಸಿದು ಹೋಗಿರುವ ಧೈರ್ಯವು ಕೊನರಿದಂತಾಗಿ ಅಪೂರ್ವವಾದೊಂದು ಹರೆಯದ

ರಸಾನುಭವ ಉಂಟಾಗುತ್ತದೆ. ಅದನ್ನು ನೆನೆದು ನನ್ನ ರಾಣಿ ಕೂಡ ಹೇಳು ತ್ತಾಳೆ— **ओह! वह कैसा अनोखा अनुभव था, मेरे सनम!** (ಹೋ! ವಹ್ ಕೈಸಾ ಅನೋಖಾ ಅನುಭವ್ ಥಾ, ಮೇರೇ ಸನಮ್!)--ಎಂದು ಅದನ್ನು ಕೇಳಿ ನನಗೆ ಆಶ್ಚರ್ಯವಾದರೂ ಸಿಡುಕಿನಿಂದಲೇ ಒದರುತ್ತೇನೆ ನಾನು— **अरे नारी? तू क्या यह बहाना कर रहा है न? चुप रह! तेरी जैसी नारियाँ साक्षात् दानवी ही सही।** (ಅರೇ ನಾರೀ? ತೂ ಕ್ಯಾ ಯಹ್ ಬಹಾನಾ ಕರ್ ರಹಾ ಹೈ ನಾ? ಚುಪ್ ರಹ್! ತೇರೀ ಜೈಸೀ ನಾರೀಯಾ ಸಾಕ್ಷಾತ್ ದಾನವೀ ಹೀ ಸಹೀ)— ಎಂದು ನನ್ನ ಸಿಡುನುಡಿಗೆ ಒಂದಿಷ್ಟೂ ಅಳುಕದೆ ನಸುನಗುತ್ತಲೇ ಅವಳೆನ್ನುತ್ತಾಳೆ— **अबे! आप नाराज हो गये क्या? आप चाहे मेरी कायरता पर सैकडों झिडकियाँ दें, परवाह नहीं। क्योंकि, उस घटना से मुझे अतीव लाभ ही पहँचा है बाद में।** (ಅಬೇ! ಆಪ್ ನಾರಾಜ್ ಹೋಗಯೇ ಕ್ಯಾ? ಆಪ್ ಚಾಹೆ ಮೇರೆ ಕಾಯರತಾ ಪರ್ ಸೈಕಡೊ ಝಿಡ್‌ಕಿಯಾ ದೇ, ಪರ್‌ವಾಹ್ ನಹೀ। ಕ್ಯೋಂಕೀ, ಉಸ್ ಘಟನಾ ಸೆ ಮುಝೆ ಅತೀವ ಲಾಭ್ ಹೀ ಪಹುಂಚಾ ಹೈ ಬಾದ್ ಮೇ) ಅಂತ. ಅವಳ ನುಡಿಯ ಮುಂದೆ ನಾನು ನಿರುತ್ತರನಾಗುತ್ತೇನೆ.

ನಿಮಗೆ ಅಚ್ಚರಿಯಾಗಬಹುದು, ಎಪ್ಪತ್ತು ವರ್ಷಗಳ ಹಿಂದಿನ ಮನು ಷ್ಯರು, ಅದರಲ್ಲೂ ಕೊಡಗಿನವರು ಹಿಂದಿಯಲ್ಲಿ ಮಾತಾಡುತ್ತಾರೊ ಎಂದು. ಇದಕ್ಕೆ ಸರಿಯಾದ ಉತ್ತರ ಕೊಡುತ್ತೇನೆ.

ನೋಡಿ, ಈಗ ಭಾರತದ ಆದ್ಯಂತ ರಾಷ್ಟ್ರಭಾಷೆಯ ಪ್ರಚಾರ ನಡೆಯು ತ್ತಿದೆ. ಅದರ ಜೊತೆಗೆ ವಯಸ್ಕರ ಶಿಕ್ಷಣವೂ ಒಂದುಕೂಡಿಕೊಂಡಿದೆ ನಮ್ಮಿಬ್ಬರಿಗೆ–ಅಂದರೆ ನನಗೆ ಮತ್ತು ನನ್ನ ಹೆಂಡತಿಗೆ ಮಾತೃಭಾಷೆ ಮತ್ತು ವಿದೇಶೀ ಭಾಷೆಗಳೆರಡು ಬರುತ್ತವಾದರೂ ರಾಷ್ಟ್ರಭಾಷೆಯೊಂದು ತಿಳಿದಿ ಲಿಲ್ಲ. ಈ ವಯಸ್ಕ–ಶಿಕ್ಷಣ ಪ್ರಚಾರದಿಂದಾಗಿ ಅದನ್ನೂ ಕಲಿಯುತ್ತಿದ್ದೇ ಈಗ. ರಾತ್ರಿ ಅಧ್ಯಾಪಕರುಗಳಿಗೆ ಸರಾಗವಾಗಿ ಉತ್ತರಿಸಬೇಡವೆ?– ಅ ಕ್ಕಾಗಿ ಸಂಭಾಷಣೆಯ ಪ್ರಸಂಗದಾಗಲೆಲ್ಲಾ ನಾವು ಹಿಂದಿಯಲ್ಲೇ ಮಾತಾ ಅಭ್ಯಾಸಮಾಡಿಕೊಳ್ಳುತ್ತೇವೆ. ಸಾಯುವ ಕಾಲದಲ್ಲಿ ಅಕ್ಷರಾಭ್ಯಾಸ ಮಾ ವುದು (ಬೇರೆಯವರು) ಹೊಸ ಭಾಷೆ ಕಲಿಯುವುದು (ನಾವಿಬ್ಬರು)– ಇದ ಘಾತಕ್ಕೆಂದು ಒಮ್ಮೊಮ್ಮೆ ವಿಚಾರಮಾಡಿ ನೋಡುತ್ತೇನೆ; ತನ್ನಷ್ಟಕ್ಕೇ ನ

ತ್ತೇನೆ ಸಾಧಾರಣ ಮಧ್ಯ ವಯಸ್ಕರಿಗೇನೋ ಈ ತೆರನ ಶಿಕ್ಷಣ ಯೋಜನೆಯಿಂದ ಪ್ರಯೋಜನವಿದೆ, ಎನ್ನಿ. ಆದರೆ ಈ ಪ್ರಪಂಚದಿಂದ ಇಂದೋ ನಾಳೆಯೋ ಎಂದೆನ್ನುವ ಸ್ಥಿತಿಯಲ್ಲಿರುವವರಿಗೆಲ್ಲ ನೇತ್ರಗಳಲ್ಲಿ ಹೋದ ಶಕ್ತಿಯನ್ನು ಬರಿಸಿಕೊಂಡು ಮಾಡುತ್ತಿರುವ ಈ ವಿದ್ಯಾ ಹೋರಾಟ ಯಾತಕ್ಕಾಗಿ? ಅಂಥಾ ವಿದ್ಯೆಯನ್ನು ಉಪಯೋಗಿಸುವುದಾದರೂ ಯಾವಾಗ ಮತ್ತು ಎಲ್ಲಿ?- ಎಂದೆಲ್ಲ ಯೋಚಿಸಿ ನೋಡುವಾಗ ನನಗನಿಸುತ್ತದೆ—ಪ್ರಾಯಶಃ ಸತ್ತ ಬಳಿಕ ವಿಚಾರಣೆಗಾಗಿ ಯಮನ ಮುಂದೆ ನಿಂತಾಗ ಮೂರು ನಾಲ್ಕು ಭಾಷೆಗಳ ಒಂದೊಂದು ಪದ ಸೇರಿಸಿ, ಒಂದು ವಾಕ್ಯಮಾಡಿ ದೈನ್ಯದಿಂದ ಪ್ರಾರ್ಥಿಸಿಕೊಂಡುಬಿಟ್ಟರೆ-ಇದೇನೋ ತನಗರಿಯದ ಹೊಸ ಭಾಷೆ ಎಂದು ಭಾವಿಸಿ, ಅಂಥಾ ಭಾಷೆಯನ್ನು ಸೃಷ್ಟಿಸಿದ ಮಾನವನ ಮೇಧಾಶಕ್ತಿಗೆ ಅಚ್ಚರಿಪಟ್ಟು, ಮುಗ್ಧನಾಗಿ ಅವನು ಪಾಪಿಗಳಾದ ನಮ್ಮನ್ನು ತಿರುಗಿ ಭೂಲೋಕಕ್ಕೆ "ಸುಖಿಯಾಗಿ ಬಾಳಿರಿ" ಎಂದು ಆಶೀರ್ವದಿಸಿ ಬಿಟ್ಟುಬಿಡಬಹುದೇನೋ- ಎಂದು ಯಾರಿಗೆ ಗೊತ್ತು? ಹುಂ- ಅದಂತಿರಲಿ ಎಲ್ಲಿಂದ ಎಲ್ಲಿಗೋ ನಡೆದು ಹೋಗಿಬಿಟ್ಟೆ. ನಿಮಗೂ ಈ ಅಜ್ಜನ ಅಡ್ಡಾದಿಡ್ಡಿ ಅಲೆತವನ್ನು ಕಂಡು ಎಲ್ಲಾದರು ಬೇಸರ ಬಂದೀತು ಮತ್ತೆ— ಮುಂದಕ್ಕೆ ಹೊರಡೋಣ!

ನಾನೊಬ್ಬ ಉಪಾಧ್ಯಾಯನಾಗಿದ್ದೆ ಆಗ. ಈಗ? ಸರ್ಕಾರದಿಂದ ಪೆನ್ಶನ್ ಪಡೆಯುತ್ತಿದ್ದೇನೆ. ಈ ಕೆಲವು ವರ್ಷಗಳಿಂದ ಈ ಮಡಿಕೇರಿ ನಗರಕ್ಕೆ ಅದೆಷ್ಟೋ ಹೊಸ ಹೊಸ ಉದ್ಯೋಗಸ್ಥರು ಬರುತ್ತಾ, ಹಳೆಯವರು ಹೋಗುತ್ತಾ ಇರಬಹುದು; ಅದರ ಲೆಕ್ಕಾಚಾರವೇ ನನಗಿಲ್ಲ. ಆದರೆ ಪೋಸ್ಟಾಫೀಸಿಗೆ ಬಂದುಹೋಗುವ ಎಲ್ಲಾ ಪೋಸ್ಟ್‌ಮಾಸ್ಟರರದ್ದೂ ಪರಿಚಯ ನನಗಿದೆ. ಎಲ್ಲಿಗಿಲ್ಲದಿದ್ದರೂ ತಿಂಗಳಂತ್ಯದಲ್ಲಿ ಪೋಸ್ಟಾಫೀಸಿಗೊಂದು ಚುಟುಕು ಪ್ರಯಾಣವನ್ನು ನಾನು ಮಾಡಿಯೇ ತೀರುತ್ತೇನೆ. ಹಾಗೆ ಹೋದಾಗಲೆಲ್ಲಾ ಹಳೆಯ ಪೋಸ್ಟ್‌ಮಾಸ್ಟರನು ಹೋಗಿದ್ದರೆ ಸಂತಾಪ ನಟಿಸಿ, ಹೊಸಬನ ಪರಿಚಯವನ್ನು ಮಾಡಿಕೊಂಡು, ರೂಪ್ಯಾ ಗಂಟಿಸ್ಕೊಂಡು ಬರುತ್ತೇನೆ. ನಾನು ಹೀಗೆ ಸಂತಾಪ ನಟಿಸಿ, ಪರಿಚಯಮಾಡಿಕೊಂಡು, ರೂಪ್ಯಾ ಈಸ್ಕೊಂಡು ಬಂದುಬಿಡುತ್ತೇನೆಂದು ಬೇಗಬೇಗನೆ ಹೇಳಿಬಿಡುತ್ತೇನೆಂದರೆ, ಈ ಕೆಲಸ ಅಷ್ಟೇನು ಸರಾಗ ಅಂತ ನೀವು ಭಾವಿಸ್ಕೋಬೇಡಿ. ಅಯ್ಯಯ್ಯೋ! ಆ ನಾಲ್ವತ್ತು ರೂಪಾಯಿನ ಗಂಟು ನನ್ನ ಅಂಗೈಮೇಲೆ ಬೀಳಬೇಕಾದರೆ 'ರಾಮು! ರಾಮಾ!' ಎಂದು ಹೇಳಿ ಹೋಗುತ್ತದೆ. ನಾನೇಕೆ ಈ ನೌಕರಿ

ಹಿಡಿದೆನೋ, ಪರಶಿವಾ! ಎಂದು ಮರುಗಬೇಕಾಗುತ್ತದೆ......ಇರಲಿ; ನಾನು ಪೆನ್ಶನ್ ಹಣ ಪಡೆಯುವ ಈ ಕಥೆಯನ್ನು ವಿಸ್ತರಿಸಿ ಹೇಳಿದರೆ ನಿಮಗದು ತಲೆಹರಟೆಯಾಗಿ ಕಂಡೀತು—ಅದನ್ನು ಬಿಟ್ಟುಬಿಡುತ್ತೇನೆ.

ನಾನು ಉಪಾಧ್ಯಾಯನಾಗಿದ್ದುದು ಇಲ್ಲಿನ ಸೆಂಟ್ರಲ್ ಹೈಸ್ಕೂಲಿನಲ್ಲಿ. ಮಾಧ್ಯಮಿಕ ಶಾಲೆಗೆ ಕನ್ನಡಪಂಡಿತನಾಗಿದ್ದೆ....ಅದೇಕೆ ನೀವು ಕಣ್ಣು ಕಣ್ಣು ಬಿಡೋದು? ನಾನು ಪಂಡಿತ–ಕನ್ನಡ ಪಂಡಿತನಿದ್ದೆ- ಎಂಬುದು ನಿಮಗೆ ಅಚ್ಚರಿಯನ್ನುಂಟುಮಾಡಿತ್ತೇನೊ? ಹೂಂ ಕಾಂಣ್ರೀ, ನಾನು ಪಂಡಿತನಾಗಿದ್ದೆ– ನಿಜಕ್ಕೂ ಕನ್ನಡಪಂಡಿತನಾಗಿದ್ದೆ. ಆ ಪಂಡಿತಗಿರಿಯ ಜೊತೆಗೆ ಎಡದಲ್ಲಿ, ಬಲದಲ್ಲಿ ಅದು, ಇದು ಎಂದು ಕೊಸರು ಪಾಠಗಳನ್ನು ಮಾಡುತ್ತಿದ್ದೆ. ಅಂತು, ಏನೇ ಪಾಠಮಾಡಿರಲಿ, ನೋಟ ಬೀರಿರಲಿ– ನಾನೊಬ್ಬ ಉಪಾಧ್ಯಾಯನಾಗಿದ್ದನೆಂಬುದು ಅಕ್ಷರಶಃ ನಿಜ.

ನಾನು ಹುಟ್ಟಿದ್ದು ಹಳ್ಳಿಯ ಸುಂದರವಾದ ವಾತಾವರಣದಲ್ಲಿ ಬೆಳೆದದ್ದೂ ಅಲ್ಲಿಯೆ. ನನ್ನರ್ಧ ವಿದ್ಯಾಭ್ಯಾಸ ನಡೆದುದೂ ಹಳ್ಳಿಯದೇ ಒಂದು ಐಗಳಮಠದಲ್ಲಿ. ಮುಂದೆ ಒಂದರಲ್ಲಿ ಕಾಲಂಶದಷ್ಟು ವಿದ್ಯೆ ಕಲಿಯಲು ನಾನು ಪಟ್ಟಣ ಸೇರಿದೆ. ಮುಕ್ಕಾಲುಪಾಲು ವಿದ್ಯೆ ಕಲಿತ ನಂತರ ಹೊಟ್ಟೆ ಹೊರೆಯುವುದಕ್ಕಾಗಿ ಪಟ್ಟಣದಲ್ಲೇ ನಿಂತೆ, ಉಪಾಧ್ಯಾಯನಾಗಿ.

ಪಟ್ಟಣದ ಶಾಲೆಯಲ್ಲಿ ಉಪಾಧ್ಯಾಯನಾಗಿಯೇನೊ ಸೇರಿಕೊಂಡೆ. ಆದರೆ ನನಗೆ ಪಟ್ಟಣದ ಜೀವನ ಏನೇನೂ ಹಿಡಿಸಲಿಲ್ಲ. 'ಪಟ್ಣ' ಎಂದರೆ ಮೈಯೆಲ್ಲಾ ಉರಿಯುತ್ತಿತ್ತು. ಈ ಅಶಾಂತಿಮಯ ಪ್ರಪಂಚದಿಂದ ದೂರದ ಯಾವುದಾದರೊಂದು ಹಳ್ಳಿಗೆ ಓಡಿಹೋಗಬೇಕೆಂದೆನಿಸುತಿತ್ತು; ಎನಿಸುತ್ತಿದ್ದುದೇ ಅಲ್ಲ, ಅದಕ್ಕಾಗಿ ಮನ ಹಂಬಲಿಸಿ ಕಾತರಿಸುತ್ತಿತ್ತು. ಹಳ್ಳಿಯಲ್ಲಾದರೆ ನಿರ್ಮಲವಾದ ತಂಗಾಳಿಯಿದೆ. ಸ್ವಚ್ಛವಾದ ಜಲಾಶಯಗಳಿವೆ. ಪರಿಶುದ್ಧವಾದ ಜನಮನವಿದೆ. ಎಲ್ಲಕ್ಕೂ ಮಿಗಿಲಾಗಿ ಶಾಂತಿಯ ವಾತಾವರಣವಿದೆ. ಹಕ್ಕಿಗಳ ಕಲರವ, ಶುಕಗಳ ಮಂಜುಳ ಗೀತೆ, ಕೋಗಿಲೆಗಳ ಕೂಜನ, ಮಯೂರಗಳ ಕುಣಿತ, ಭ್ರಮರಗಳ ಝೇಂಕಾರ, ಮೃಗಗಳ ಮುಗ್ಧತೆ, ಪ್ರಾಕೃತಿಕ ಸುಂದರತೆ—ಇವುಗಳು ಹಳ್ಳಿಗೆ ನಿತ್ಯನೂತನತೆ, ಅನುಪಮ ಶೋಭೆಯನ್ನು ಕೊಡುತ್ತೇವೆ. ಅವುಗಳ ದರ್ಶನಮಾತ್ರದಿಂದಲೇ ಸಾಂಸಾರಿಕ ತಾಪಗಳೆಲ್ಲ ಮರೆತುಹೋಗುತ್ತವೆ; ದೇಹ ಮನಸ್ಸುಗಳು ತುಷಾರದಂತೆ ಶೀತಲವಾಗುತ್ತವೆ........

ಇಂಥ ವಿಸ್ತೃತ ರಮಣೀಯ ನೈಸರ್ಗಿಕ ನಿವಾಸವನ್ನು ಬಿಟ್ಟು ಜೀವನದ ಆರಂಭದಲ್ಲಿಯೇ ಪಟ್ಟಣವೆಂಬ ಪೆಟ್ಟಿಗೆಯನ್ನು ಸೇರಿಕೊಂಡೆನಲ್ಲ— ಎಂದು ನಾನು ಪಶ್ಚಾತ್ತಾಪಪಡುತ್ತಿದ್ದೆ. ಪಟ್ಣ-ಪೆಟ್ಟಿಗೆಯಲ್ಲಿ ಸ್ವೇಚ್ಛೆಗೆ ಎಡೆಯಿದ್ದರೂ ಅದರಲ್ಲಿ ಆಸ್ಥೆಯಿಲ್ಲ. ಕಣ್ಣಿಗೆ ಸುಂದರವಾಗಿ ಕಂಡರೂ ಅದರ ಸುಂದರತೆಯು ಕೃತ್ರಿಮದಿಂದ ಕೂಡಿದೆ. ಕಿವಿಗೆ ಬಗೆಬಗೆಯ ಶಬ್ದಗಳು ಕೇಳಿಸಿದರೂ ಅವುಗಳಲ್ಲಿ ಮನಸ್ಸನ್ನು ಕೆರಳಿಸುವ, ದೇಹವನ್ನು ಉರಿಸುವ ಕರ್ಕಶತೆ, ಉನ್ಮಾದತೆಯಲ್ಲದೆ ಶಾಂತಿಪ್ರದಾಯಕವಾದ, ಭಾವಪ್ರಧಾನವಾದ ಮಧುರತೆಯಾಗಲಿ, ಪವಿತ್ರತೆಯಾಗಲಿ ಇಲ್ಲ......

ಹೆಪ್ಪುಗಟ್ಟಿದ ಹಾಲಿನಂತೆ ರಸಾತ್ಮಕವಾದುದು ಹಳ್ಳಿಯ ಜೀವನ. ಕಡೆದ ಮಜ್ಜಿಗೆಯಂತೆ ನೀರಸವಾದುದು ಪಟ್ಣದ ನಿವಾಸ. ಈ ನಿವಾಸ ಸುಖವನ್ನನುಭವಿಸುತ್ತಿದ್ದ ನನ್ನ ಜೀವನ, ನಿಸ್ಸಾರವಾದ ನೀರು ಮಜ್ಜಿಗೆಯನ್ನು ಸೇವಿಸುವವರಂತೆ ಶುದ್ಧ ಬರಡೋಬರಡಾಗಿತ್ತು.

ಕೆಲವೊಮ್ಮೆ ತರಗತಿಯ ಹುಡುಗರಲ್ಲಿ ಅನ್ನುತ್ತಿದ್ದೆ. "ಮಕ್ಕಳಿರಾ! ನಾನು ಕೊಡುವ ಈ ಕಾರ್ಜಿ, ಹಿಡಿಯುವ ಈ ಚಿತ್ರ, ಓದಿಸುವ ಈ ಪುಸ್ತಕ, ಧರಿಸಿರುವ ಈ ಆಂಗ್ಲಾ ಉಡುಪು—ಇವನ್ನೆಲ್ಲ ನಿಮ್ಮಲ್ಲಿ ಒಬ್ಬನು ತಕ್ಕೊಂಡು ನನ್ನ ಚಾರ್ಜು ವಹಿಸಿಕೊಳ್ಳಲಿ. ನಿಮ್ಮ ಮನೆಗಳಲ್ಲಿ ಮೂಲೆ ಪಾಲಾಗಿರುವ ಹರಕು ಅರಿವೆ, ಪ್ರತಿಯೊಬ್ಬರೂ ಒಂದೊಂದರಂತೆ ದನ ಮತ್ತು ಚೆಲ್ಲೋದಾದ ಒಂದು ಕೊಳಲು ನನಗೆ ಕೊಡಿ. ನನ್ನ ಹೊಟ್ಟೆಗೆ ಬೇಕಲ್ಲ? ಅದಕ್ಕಾಗಿ ಪ್ರತಿಯೊಬ್ಬರೂ ಒಂದೊಂದರಂತೆ ತಿಂಗಳಿಗೆ ಕೆಲವು ರೂಪಾಯಿಗಳನ್ನು ಕೊಟ್ಟುಬಿಡಿ! ನಾನೊಬ್ಬ ದನಪಾಲನಾಗಿ ವಿಶಾಲವಾದ ಬಯಲುಗಳಲ್ಲಿ ಸ್ವೇಚ್ಛೆಯಿಂದ ನಿಮ್ಮ ದನಗಳನ್ನು ಕಾಯುತ್ತೇನೆ. ಹಾಗೆಂದು, ಇದ್ದ ದನಗಳನ್ನು ಕಾಡಿಗೆ ಬಿಡುವ ದನಪಾಲಶೆಟ್ಟಿಯೆಂದು ನನ್ನನ್ನು ಭಾವಿಸಬೇಡಿ. ಬಹಳ ಎಚ್ಚರಿಕೆಯಿಂದ ಅವುಗಳ ರಕ್ಷಣೆ ಮಾಡುತ್ತೇನೆ."

ಅದಕ್ಕೆ ಆ ಹುಡುಗರೋ?— ಕಾಡು ಕಪಿಗಳನ್ನು ಒಂದಂಗುಲ ಹೆಚ್ಚು ಮೀರಿಸಿದವರು. ಕೇಕೇ ಹಾಕಿ ನಗಲು ತೊಡಗಿದರೆಂದರೆ, ನನ್ನ ಭಾವನಾಪರವಶತೆ, ಪರಿಹಾಸ್ಯ—ಎಲ್ಲ ಓಡಿಹೋಗಬೇಕು; ನನ್ನ ಮಾರುದ್ದದ ಚಿತ್ತ ಅವರ ಬೆನ್ನುಗಳನ್ನು ನೀಟಕ್ಕೆ ಅಳೆಯಬೇಕು— ಅದು ನಿಲ್ಲಬೇಕಾದರೆ.

ನಾನು ಹೀಗೆಲ್ಲ ಹಳ್ಳಿವಾಸವನ್ನು ಮೆಚ್ಚಿ, ಬಯಸಿ, ನುಡಿಯುತ್ತಿರುವಾಗ ನೀವು ಪ್ರಶ್ನೆ ಹಾಕೇ ಕೇಳುತ್ತೀರಿ— ಹಿಂದೆ ಹಳ್ಳೀ ಶಾಲೆಗಳು ಇಲ್ಲದೇ

ಇರಲಿಲ್ಲ; ಹಳ್ಳಿ ಅಷ್ಟೊಂದು ಮೆಚ್ಚಿಕೆಯಾಗಿದ್ದಿದ್ದರೆ ಪಟ್ಟಣದ ಶಾಲೆ ಬಿಟ್ಟು ಬಿಟ್ಟು ಹಳ್ಳೀ ಶಾಲೆಗೆ ಹೋಗಲಿಕ್ಕೆತ್ತೇನು ಧಾಡಿ; ಕೆಲಸದ ಬಂಧನ ತಪ್ಪಿ, ಪೆನ್‌ಶನ್ ಪಡೆಯುತ್ತಿರುವಾಗ, ಈಗಲಾದರೂ ಯಾವುದಾದರೊಂದು ಹಳ್ಳಿಗೆ ಹೋಗಿ ತುಂಬು ಜೀವನ ನಡೆಸಲಿಕ್ಕೇನು ಅಡ್ಡಿ?– ಎಂದು ಮುಂತಾಗಿ. ನಿಮ್ಮ ಈ ಪ್ರಶ್ನೆಗಳು ತೀರಾ ಉಚಿತ. ಅಂತೇ ನಾನವಕ್ಕೆ ಪೂರ್ಣ ಉತ್ತರ ವಿತ್ತರೆ ನಿಮ್ಮೊಡನೆ ನನ್ನ ಮಾತೂ ಪೂರಾ ಪೂರಾ ಮುಗಿದುಹೋಗುವುದು.

ಹಳ್ಳಿಯಲ್ಲಿ ಹುಟ್ಟಿ ಮೊದಲಿಗೆ ಪಟ್ಟಣದ ಶಾಲೆಯಲ್ಲಿ ಉಪಾಧ್ಯಾಯನಾಗಿ ಸೇರಿಕೊಂಡ ನಾನು ದೌರ್ಭಾಗ್ಯವಶಾತ್ ಮದುವೆಯಾದೆ–ಓರ್ವ 'ಶಹರದ' ಹುಡುಗೆಯನ್ನು. ನನ್ನ ತುಂಬು ಜೀವನಕ್ಕಿರುವ ತೊಡಕೆಂದರೆ ಈ ಮಹಾ ರಾಣಿಯೇ– ಪಟ್ಟಣದ ಶುಕ. ನಿಜಕ್ಕೂ ಅವಳ ಹೆಸರಿರುವುದೂ ಹಾಗೇನೆ– ಶುಕರಾಣಿ–ಎಂದು. 'ರಾಣಿ'–'ಶುಕು'— ಇವು ನನ್ನ ಪ್ರೇಮದ ಕರೆಗಳಷ್ಟೆ!

ಆಹಾ! ಏನು ಸುಂದರವಾದ ಹೆಸರು ನೋಡಿ!—

ಶುಕರಾಣಿ!

ಈ ಶುಕರಾಣಿಗೆ ತನ್ನ ಹೆಸರಿಗೆ ತಕ್ಕಂತೆ ಶುಕಮುನಿಗಿದ್ದಂಥಾ ಭಕ್ತಿ-ವೈರಾಗ್ಯಗಳಾಗಲೀ, ಇಲ್ಲವೇ ಸಾಮಾನ್ಯ ಶುಕಕ್ಕಿರುವಂಥಾ ಅರಣ್ಯ ಪ್ರಿಯತೆ ಯಾಗಲೀ ಇಲ್ಲವೇ ಇಲ್ಲ. ಅವಳ ಅಂಗ–ಪ್ರತ್ಯಂಗವೂ ಸದಾ ನಗರಸುಖದ ಕನಸನ್ನೇ ಕಾಣುವಂಥಾದ್ದು. ಈ ದೃಷ್ಟಿಯಿಂದ ನೋಡಿದರೆ ಅವಳಿಗಿರುವ 'ಶುಕರಾಣಿ'ಗಿಂತ 'ಶೋಕಿರಾಣಿ' ಎಂಬ ಹೆಸರೇ ಒಪ್ಪುವಂಥಾದ್ದು. ಇನ್ನಿ ವಳ ತಂದೆತಾಯಿಯರೋ? ಶಿವಶಿವಾ! ಕೇವಲ ವಿಲಾಸಕ್ಕಾಗಿಯೇ ಹಳ್ಳಿ ಯಿಂದ ನಗರಕ್ಕೆ ಬಂದು ನೆಲೆಸಿದ್ದರು. ಅಂಥಾ ತಾಯಿತಂದೆಯರ ಮಗಳಾ ದವಳು ಮತ್ತೆ ಹೇಗಿರಬೇಡ? ನನ್ನೊಂದಿಗೆ ಅಂದಾದರು ಇಂದಾದರು ಅವಳು ಹಳ್ಳಿಗೆ ಬಂದಾಳೇ; ಅವಳೊಂದಿಗೆ ನನ್ನ ಭೂತ–ವರ್ತಮಾನಗಳು ಹೇಗೆ ಕಳೆದಿರಬಹುದು— ಕಳೆಯುತ್ತಿರಬೇಕೆಂಬ ಬಗೆಗೆ ಉತ್ತರವನ್ನು ಮುಂದೆ ಕಾಣಿರಿ.

ನನ್ನ ಮತ್ತು ಶೋಕಿ ರಾಣಿಯು–ಅಲ್ಲ–ಶುಕರಾಣಿಯು —ನೋಡಿದಿರಾ ಮತ್ತೆ? ನನ್ನ ಬಾಯಿಗೆ ಆಕೆಯ ಅನ್ವರ್ಥನಾಮವೇ ಬಂದುಹೋಯಿತು!.... ಹೂಂ– ಅವಳ ಮತ್ತು ನನ್ನ ಮದುವೆಯಾಗಿ ಎಂಟು ವರ್ಷಗಳು ಕಳೆದು ಹೋಗಿದ್ದುವು. ಆದರೂ ಆಕೆ ಒಂದೇ ಒಂದು ಪಿಳ್ಳೆಯನ್ನೂ ಹಡೆಯಲಿಲ್ಲ. ಈ ಮಕ್ಕಳಿಲ್ಲದ ಚಿಂತೆಯೊಂದು ಅವಳನ್ನು ಬಲವಾಗಿ ಬಾಧಿಸುತ್ತಿತ್ತು. ಈ

A. B. Krishna Raja.

ವೇದನೆಯಿಂದ ವಿರಸಗೊಂಡ ಅವಳ ಜೀವವುಂಟೇ ಹಳ್ಳಿಯ ಏಕಾಂಗಿತೆಯಲ್ಲಿ ಬಾಳುವುದು? ಜೊತೆಗೆ ನಗರ ನಿವಾಸದ ಪ್ರೇಮ ಬೇರೆ. ನಿತ್ಯ ಪರದೆ ಇಳಿಬಿಟ್ಟ ಕನ್ನಡಿ ಕಿಡಿಕಿಯ ಹಿಂದೆ ನಿಂತು ರಸ್ತೆಯಲ್ಲಿ ನಡೆಯುವ ವಿವಿಧ ಜನರನ್ನೀಕ್ಷಿಸುವುದು, ತಡವೆಯಿಲ್ಲದೆ ಓಡಾಡುವ ವಾಹನಗಳನ್ನು ನೋಡುವುದು, "ನೋಡಿ ತಂದೆ! ನೀಡಿ ತಾಯಿ! ಪುಣ್ಯ ಕಟ್ಟಿಕೊಳ್ಳಿರಪ್ಪಾ!" ಎಂದು ಕರುಣಾನ್ವಿತ ಸ್ವರದಿಂದರಚುತ್ತ, ಜೋಳಿಗೆಗಳನ್ನು ಮುಂದಕ್ಕೆ ಮಾಡಿಕೊಂಡು ದ್ವಾರದೆಡೆಗೆ ಬರುವ ಭಿಕ್ಷುಕ-ಭಿಕ್ಷುಕರಿಗೆ ಹಿಡಿ ಹಿಡಿದಾನ ಮಾಡುವುದು, ವೃತ್ತ ಪತ್ರಿಕೆಗಳನ್ನು ಓದುವುದು—ಇವೇ ಅವಳ ಕೆಲಸಗಳಾಗಿದ್ದುವು. ಅವಳ ಪಾಲಿಗೆ ನಗರದ ಈ ಕೋಲಾಹಲಗಳೇ ಮಗುವಾಗಿತ್ತು. ನನ್ನ ಪಾಲಿಗೊ?......

ನನ್ನ ಪಾಲಿಗೆ ನಿಸರ್ಗವೇ ಮಗುವಾಗಿತ್ತು. ಆದರೆ ಆ ಮಗುವನ್ನು ಪಡೆಯುವುದು ಹೇಗೆ? ನನ್ನ ಅಂತರಂಗವು ಅದನ್ನು ಪಡೆಯುವುದಕ್ಕಾಗಿ ಹಂಬಲಿಸುತ್ತಿತ್ತು; ಮೊರೆಯಿಡುತ್ತಿತ್ತು.

ಕೊನೆಗೂ ನನ್ನ ಮೊರೆಯು ಕರುಣಾಮಯನಾದ ಭಗವಂತನಿಗೆ ಕೇಳಿಸಿತೇನೋ?—ಒಂದು ದಿನ ಡಿ.ಓ. ಸಾಹೇಬರಿಂದ ನನಗೆ ಅಪ್ಪಣೆ ಬಂತು, "ಮ॥....ರೇ", ನಿಮ್ಮನ್ನು ಅಂಕನಹಳ್ಳಿಗೆ ಸ್ಥಳಾಂತರಗೊಳಿಸಿದ್ದೇನೆ. ವಾರದೊಳಗೆ ನೀವು ಚಾರ್ಜು ವಹಿಸಿಕೊಳ್ಳಬೇಕು" ಎಂದು.

ಅಂಕನಹಳ್ಳಿಯಿರುವುದು ಕೊಡಗಿನ ಉತ್ತರ ದಿಸೆಯಲ್ಲಿ. ಇದು ಪುಷ್ಪಗಿರಿಯ ದಕ್ಷಿಣಕ್ಕೆ-ಗುಡ್ಡಬೆಟ್ಟಗಳ ನಡುವೆ ಹುದುಗಿಕೊಂಡಿರುವ ಚಿಕ್ಕ ಊರು. ಅಲ್ಲಿ ಮಳೆಗಾಲದ ಸಮಯ ಪ್ರಕೃತಿ-ಪ್ರಕೋಪ ಹೇಳತೀರದು. ಜನರೋ ತೀರ ಅನಾಗರಿಕರು. ಆದರೂ ಒಂದು ಆಶ್ಚರ್ಯದ ಸಂಗತಿಯೆಂದರೆ ಅಲ್ಲಿ ವಿದ್ಯೆಗಾಗಿ ಒಂದು ಮಾಧ್ಯಮಿಕ ಶಾಲೆಯ ವ್ಯವಸ್ಥೆಯಿದ್ದು ಯಾವ ಉಪಾಧ್ಯಾಯನೂ ಆ ಶಾಲೆಯಲ್ಲಿ ಕೆಲಸಮಾಡಲು ಅಂಜುತ್ತಿದ್ದನು. ಕಾರಣ, ಅಲ್ಲಿನ ವಾತಾವರಣ ಇದ್ದುದೇ ಹಾಗೆ— ಕಾಡು ಮನುಷ್ಯರಿಗೆ ತಕ್ಕಹಾಗೆ.

ನನಗೂ ಇಷ್ಟವಿಲ್ಲದಿದ್ದಲ್ಲಿ ಅಲ್ಲಿ ಹೋಗದೆ ಮಡಿಕೇರಿಯಲ್ಲೇ ನಿಲ್ಲಬಹುದಾಗಿತ್ತು. ಈ 'ನಿಲ್ಲಬಹುದಾಗಿತ್ತು' ನುಡಿಗೆ ಒತ್ತಾಸೆಯೆಂದರೆ, ವಿದ್ಯಾಧಿಕಾರಿಗಳು ನನಗೆ ಪರಿಚಿತರು ಮಾತ್ರವಲ್ಲ, ನನ್ನ ಮಾವನವರಿಗೆ ದೂರದ ಸಂಬಂಧಿಕರೂ ಆಗಿದ್ದರು!

ಹಾಗೆಂದು ತಾನೇ ತಾನಾಗಿ ಕೈಗೆಸಿಕ್ಕಿದ ಬೇಟೆಯನ್ನು ಕಳಕೊಳ್ಳುವವನೇ ನಾನು? ಎಷ್ಟಾದರೂ ಕಾಡುಮನುಷ್ಯರ ಸ್ವಭಾವದವನಲ್ಲವೇ? ರೋಗಿ ಬಯಸಿದ್ದೂ ಹಾಲು, ವೈದ್ಯ ಕೊಟ್ಟದ್ದೂ ಹಾಲು– ಎಂಬಂತೆ ನಾನು ಬಯಸಿದ್ದೂ ಕಾಡು, ಅಧಿಕಾರಿಗಳು ಕೊಟ್ಟದ್ದೂ ಕಾಡು! ಅಂಥಾ ಅರಣ್ಯಸುಖವನ್ನು ನಿಜವಾದ ಅರಣ್ಯ ಮನುಷ್ಯ ಅನಾಗರಿಕ ದೃಷ್ಟಿಯಿಂದ ನೋಡಿ ಸುಖಿಸಿದರೆ ನಾನು ನಾಗರಿಕ ದೃಷ್ಟಿಯಿಂದ ನೋಡಿ ಆನಂದಿಸುತ್ತೇನೆ.

ಆದ್ದರಿಂದಲೇ ಮೇಲಾಫೀಸಿನಿಂದ ಆ ಆಜ್ಞೆ ಬಂದದಿನ ನನ್ನ ಸಂತೋಷಕ್ಕೆ ಪಾರವೇ ಇರಲಿಲ್ಲ. ಸಂಜೆಗೆ ಶಾಲೆ ಬಿಟ್ಟೊಡನೆ ಹುಚ್ಚನಂತೆ ಒಳದನಿಯಲ್ಲಿ ಬಾಯಿಗೆ ಬಂದ ಹಾಡುಗಳನ್ನು ಆಲಾಪಿಸುತ್ತ ಉಬ್ಬಿನಿಂದ ಮನೆಸೇರಿದೆ. ನಾನು ವರ್ಗಾಯಿಸಲ್ಪಟ್ಟ 'ಸುವಾರ್ತೆ'ಯನ್ನು ಹರ್ಷದಿಂದ ಹೇಳಿಕೊಂಡೆ– ಅತ್ತೆಮಾವಂದಿರ, ವೈದುನ–ನಾದಿನಿಯರ, ಮತ್ತು ಹೆಂಡತಿಯ ಮುಂದೆ, ಆ ಸುದ್ದಿಯನ್ನು ನಾನೆಷ್ಟು ಹರ್ಷದಿಂದ ಹೇಳಿಕೊಂಡೆನೋ ಅಷ್ಟೇ ಶೋಕದಿಂದ ಅವರದನ್ನು ಕೇಳಿದರು. ಹಿರಿಯರಿಬ್ಬರು ನಾನು ಅಂಕನಹಳ್ಳಿಗೆ ಹೋಗಕೂಡದೆಂದು ತರತರದಿಂದ ಬೋಧಿಸಿದರು. ರಾಣಿಯಂತೂ ಗೊಳೋ ಎಂದು ಅಳಲಿಕ್ಕೇ ಮೊದಲಿಟ್ಟಳು. ಅವಳ ಸೋದರ–ಸೋದರಿಯರೂ ಕೂಡ ನಾನು ಹೋಗಕೂಡದೆಂದು ಹಟಮಾಡಿದರು.

ಆದರೆ ಅವರ ಅಳುವಾಗಲಿ, ಪ್ರಯತ್ನವಾಗಲಿ ನನ್ನ ಕುಣಿಯುತ್ತಿದ್ದ ಮನವನ್ನು ತಡೆಹಿಡಿಯಲಾರದಾಯಿತು. ಆಗಸದಲ್ಲಿ ಕಾರ್ಮುಗಿಲು ಕವಿದಿದೆ, ಗುಡುಗು ಕೇಳಿಸುತ್ತಿದೆ, ಮಿಂಚು ಹೊಂಚುತ್ತಿದೆ; ಆ ಸಮಯದಲ್ಲಿ ಭೂಮಿಯಲ್ಲಿ ದೀಪವೊಂದು ಹೊತ್ತಿ ಬೆಳಗಿತೆಂದರೆ ನವಿಲು ತನ್ನ ಕುಣಿತವನ್ನು ನಿಲ್ಲಿಸೀತೇ!

ಅಂಕನಹಳ್ಳಿಯಲ್ಲಿದ್ದುದು ಬರೀ ಎರಡೇ ಎರಡು ಅಂಗಡಿಗಳದೊಂದು ಕೊಂಪೆ–ಪೇಟೆಯ ನಿಶಾನಿಮಾತ್ರಕ್ಕೆ. ವಾರಾಂತ್ಯದೊಳಗೆ ನಾಲ್ಕು ಬಾರಿ ಅಲ್ಲಿಗೆ ಪಯಣ ಬೆಳೆಸಿ ವಾಸಕ್ಕೊಂದು ಕಿರುಮನೆಯನ್ನು ಗೊತ್ತುಮಾಡಿಕೊಂಡೆ; ಉಪಯೋಗಕ್ಕೆ ಬೀಳಬಹುದಾದ ಹಲಕೆಲವು ಪ್ರಾಮುಖ್ಯ ಪಾತ್ರೆ-ಪಡಗಗಳನ್ನು ತುಂಬಿಸಿದೆ. ಕೊಂಚ ಹೆಚ್ಚು ಪರಿಶ್ರಮಪಟ್ಟ ಮೇಲೆ ಅದು ಮನುಷ್ಯ ನಿವಾಸಕ್ಕೆ ಯೋಗ್ಯ! ಎಂಬಂತಾಯಿತು.

ವಾಸಕ್ಕೆ ಮನೆಯೇನೋ ಸಿದ್ಧವಾಯಿತು. ಆದರೀಗ ಅಲ್ಲಿರುವ ಮನುಷ್ಯ ಶ್ರೇಷ್ಠರಾರು? ವ್ಯವಸ್ಥಾಪಕನಾದ ನಾನೇನೂ ಇದ್ದೆನಂತಪ್ಪ! ಆದರೆ....ಜೊತೆಗೊಬ್ಬಳು ವ್ಯವಸ್ಥಾಪಕಿ ಇರಬೇಡವೇ?....

ಹೊಸೂರಿನ, ಹೊಸಬಿಡಾರ–ವ್ಯವಸ್ಥೆಯ ಓಡಾಟದ ನಡುನಡುವೆ ನಾನು ರಾಣಿಯನ್ನೆಷ್ಟೋ ಬಗೆಯಲ್ಲಿ ಪುಸಲಾಯಿಸಿ ನೋಡಿದೆ– ನನ್ನೊಂದಿಗೆ ಬರಲು. ಆದರೆ ಏನೇನು ಮಾಡಿದರೂ ಆಕೆ ಒಪ್ಪಲೇ ಇಲ್ಲ.

ಕೊನೆಗೆ ನಾಳೆ ನಾನು ಅಂಕನಹಳ್ಳಿಗೆ ಹೊರಡುವುದೆಂದರೆ ಇವೊತ್ತು ರಾತ್ರಿ ಅವಳನ್ನು ಹೇಗಾದರೂ ಮಾಡಿ ನನ್ನ ಮುಷ್ಟಿಯೊಳಗೆ ತಂದೆ......

ರಾತ್ರಿ ಆಕೆ ಮಲಗಲು ಕೋಣೆಗೆ ಬರುತ್ತಾ ಎಂದಿನಂತೆ ಒಂದು ಲೋಟ ಹಾಲು ತಂದುಕೊಟ್ಟಳು. ನಾನು ಹಾಲನ್ನು ಹೀರಿ ಆಕೆಗೆ ಲೋಟವನ್ನು ಹಿಂದಿರುಗಿಸುತ್ತಾ ಕೇಳಿದೆ:

"ಹಾಗಾದರೆ......ನಾಳೆ ನೀನು ನನ್ನೊಂದಿಗೆ ಬರೋದಿಲ್ಲವೇ?"

ಆಕೆ ನನ್ನ ಕೈಯಿಂದ ಲೋಟವನ್ನಿಸಗೊಂಡು ಅಲ್ಲೇ ಪಕ್ಕದಲ್ಲಿದ್ದ ನಾಗೊಂದಿಗೆಯ ಮೇಲಿಟ್ಟು, ಮೊದಲೇ ನಿರ್ಧಾರಮಾಡಿಟ್ಟುಕೊಂಡಿದ್ದವಳಂತೆ ಫಕ್ಕನೆ ದೃಢತೆಯಿಂದೆಂದಳು: "ಇಲ್ಲ"

"ಇದು ನಿನ್ನ ಕೊನೆಯ ನಿರ್ಧಾರವೆ?"

"ಹುಂ"

"ಖಂಡಿತವಾಗಿಯೂ?"

"ಅಲ್ಲಾ, ಅಷ್ಟು ದೂರದ ಗೊಂಡಾರಣ್ಯಕ್ಕೆ ಹೋಗುವುದಕ್ಕೆ ನಿಮಗೆ ಮನಸ್ಸಾದರೂ ಹೇಗೆ ಬರುತ್ತೋ ನಾಕಾಣೆ. ಡಿ. ಇ. ಓ. ಸಾಹೇಬರನ್ನು ಕಂಡು ಹೇಳೋದಕ್ಕೆ ನಿಮಗೆ ಅಂಜಿಕೆಯಾದರೆ ನಾನು ತಂದೆಯವರಿಂದ ಹೇಳಿಸ್ತೇನೆ. ಅಂತೂ ನೀವು ಹೋಗಬೇಡಿ....ನಿಮಗೆ ದಮ್ಮಯ್ಯ..."– ಮಂಚದಲ್ಲಿ ಕುಳಿತಿದ್ದ ನನ್ನಿಂದ ಮೊಳದೂರದಲ್ಲಿ ಗೋಡೆಗೆ ಒರಗಿಕೊಂಡು ಆಕೆ ದೀನತೆಯಿಂದ ನುಡಿದಳು.

ನನಗೇನೋ ಆಕೆಯ ದೈನ್ಯವನ್ನು ನೋಡಿ ಎಲ್ಲಿಲ್ಲದ ಕೋಪ ಉದಿಸಿತು; ಕಟುವಾಗಿ ನುಡಿದೆ:

"ಹೋಗೋದು ಬರೋದು ನನಿಷ್ಟ! ಅದನ್ನು ಕೇಳೋದಕ್ಕೆ ನೀ ನಾರು? ಸಾಹೇಬರನ್ನು ನಿನ್ನ ತಂದೆಯೂ ಕೇಳೋದ್ಬೇಡ, ನಿನ್ನ ತಂದೆ ತಾತ, ಮುತ್ತಾತನೂ ಕೇಳೋದ್ಬೇಡ! ಅವರ ಹತ್ತಿರ ಹೇಳೋದಕ್ಕೆ ನನಗೆ ಅಂಜಿಕೆಯಾಗುತ್ತದಂತೆ ಅಂಜಿಕೆ! ಹಾಗೆಲ್ಲ ಅಂಜಿಕೊಳ್ಳೋದಕ್ಕೆ ನಾನು ನಿನ್ನ ತಂದೆಗಿಂತ ಕಡಿಮೆಯಾದವಾಂತ ನೆನಸ್ಕೊಂಡಿದೀಯಾ ನೀನು? ಅಲ್ಲ, ನಿನ್ನಂಥಾ ಹೆಣ್ಣು, ಪುಕ್ಕಲು ಹೆಣ್ಣು–ಅಂತ ಭಾವಿಸ್ಕೊಂಡಿದೀಯಾ?...."

ನನ್ನ ಈ ಒದರಿಕೆಯನ್ನು ಕೇಳಿ ಆಕೆ ಇನ್ನಷ್ಟು ಗೋಡೆಗೆ ಅಂಟಿಹೋದಳು. ಆಕೆಯ ನಯನಾರವಿಂದಗಳು ಹನಿಕೂಡಿ ಅಶ್ರುಬಿಂದುಗಳನ್ನು ಮಿಡಿದುವು......

ನಾನೆಲ್ಲವನ್ನು ಸಹಿಸಿಕೊಂಡೇನು; ಆದರೆ ರಾಣಿಯ ಕಂಬನಿಗಳನ್ನು ಮಾತ್ರ ನೋಡುವುದಕ್ಕೆ ನನ್ನಿಂದ ಎಂದಿಗೂ ಸಾಧ್ಯವಿಲ್ಲ. ಅಂತೆಯೇ, ಒಡ್ಡು ಅಡ್ಡವಾಗಿ ಬಂದಾಗ ಪ್ರವಾಹ ತನ್ನ ವೇಗವನ್ನು ಒಮ್ಮೆಲೆ ತಡೆದಿಡುವಂತೆ ನನ್ನ ಕೋಪಾವೇಗವೂ ಇಳಿಯಿತು. ಪಶ್ಚಾತ್ತಾಪದಿಂದ ಮನಸಮರುಗಿತು......

ಬೆದರಿದ ಹರಿಣಿಯಂತೆ ನನ್ನೆಡೆಗೆ ನೋಡುತ್ತಾ ಮೌನವಾಗಿ ಕಣ್ಣೀರು ಮಿಡಿಯುತ್ತಿದ್ದಾಕೆಯನ್ನು ಬಳಿಸೆಳೆದು ಬದಿಯಲ್ಲಿ ಕೂಡಿಸಿಕೊಂಡು, ಆಕೆಯ ಮುಂಗುರುಳನ್ನು ನೇವರಿಸುತ್ತ ಮೃದುವಾಗಿ ಕೇಳಿದೆ:

"ಶುಕು, ನನ್ನೊಡನೆ ಬರೋದಕ್ಕೆ ನಿನಗೇಕೆ ಇಷ್ಟೊಂದು ಭಯ? ನಾನೇನು ನಿನಗೆ ಬ್ರಹ್ಮರಾಕ್ಷಸನೆ?"

ಮಂಜುಮುಸುಕಿದ ಕಣ್ಣುಗಳಿಂದ ನನ್ನನ್ನು ದಿಟ್ಟಿಸುತ್ತ ಆಕೆಯೆಂದಳು:

"ಹಾಗೆಂದು ಹೇಳಿದೆನೇ ನಾನು? ನೋಡಿ, ನಿಮಗೆ ಹೆಂಗಸರ ಹೃದಯವನ್ನರಿತುಕೊಳ್ಳುವ ಶಕ್ತಿಯೇ ಇಲ್ಲ. ಅಂದ ಬಳಿಕ ನನ್ನ ದುಃಖದ ಪರಿಚಯವಾದರೂ ನಿಮಗೆ ಹೇಗಾದೀತು? ಇಂಥಾ ತುಂಬಿದ ಸ್ಥಳದಲ್ಲೇ ದಿನಕಳೆಯೋದು ನನಗೆ ದುಸ್ತರವಾಗಿರುವಾಗ ಅಂಥಾ ನಿರ್ಜನ ಸ್ಥಳದಲ್ಲಿ ನನ್ನ ಬಾಳು ಸಾಗೋದು ಹೇಗೆ? ಸ್ವಲ್ಪವಾದ್ರೂ ಯೋಚಿಸಬೇಡವೇ ನೀವು?"

"ಯೋಚಿಸಿದ್ದೇನೆ, ರಾಣಿ, ಚೆನ್ನಾಗಿಯೇ ಯೋಚಿಸಿದ್ದೇನೆ. ನನಗೂ ನಿನ್ನಂತೆ 'ಆ' ದುಃಖವಿಲ್ಲಾಂತ ಭಾವಿಸಿದ್ದೀಯಾ ನೀನು? ಒಂದೇ ಠಾವಿನಲ್ಲಿದ್ದರೆ ಅಂಥ ದುಃಖ ಹೆಚ್ಚಾಗುತ್ತದಲ್ಲದೆ ಕಡಿಮೆಯಾಗದು. ಸ್ಥಳ ಬದಲಿಸುತ್ತಾ ಇದ್ದರೆ ಮನಸ್ಸಿಗೆ ಕೊಂಚವಾದರೂ ಉಲ್ಲಾಸವಾಗುತ್ತೆ...."

"ನಿಮಗೆ ಆಗಬಹುದು, ನನಗೆ ಆಗಲಿಕ್ಕಿಲ್ಲ."

"ನಿನಗೂ ಆಗೇ ಆಗುತ್ತದೆ ಕಣೇ! ಅಯ್ಯೋ, ಹುಚ್ಚಿ! ಇಷ್ಟುವರ್ಷಗಳಾದರೂ ಈ ನಗರದ ಬೂಟಾಟಿಕೆಯಲ್ಲಿ ಅಸಹ್ಯ ಹುಟ್ಟಬಾರದೇ ನಿನಗೆ? ಅನುಭವಿಸಿದ ಸುಖವನ್ನೇ ಅನುಭವಿಸುವುದರಲ್ಲಿ, ನೋಡಿದ ವಸ್ತುಗಳನ್ನೇ

ನೋಡುವುದರಲ್ಲಿ ಏನು ಸಾರವಿದೆಯೋ ನಾನು ಬೇರೆ ಕಾಣೆ. ಹಳ್ಳಿಯಲ್ಲಾದರೆ ನೋಡು! ತರತರದ ಪ್ರಾಣಿಗಳು, ಬಣ್ಣಬಣ್ಣದ ಹಕ್ಕಿಗಳು, ಹಸುಹಸುರಾದ ಗಿಡಮರಗಳು– ನೋಡುವುದಕ್ಕೆ, ಅನುಭವಿಸುವುದಕ್ಕೆ ಎಷ್ಟೊಂದು ಚೆಲುವಾಗಿರುತ್ತವೆ! ಮನೋಹರವಾಗಿರುತ್ತವೆ! ಪವಿತ್ರತಮವಾಗಿರುತ್ತವೆ! ಶಾಂತಿದಾಯಕವಾಗಿರುತ್ತವೆ! ಅವುಗಳನ್ನು ಪ್ರತ್ಯಕ್ಷ ಕಂಡರಿಯಬೇಕು, ರಾಣಿ! ಆಹಾ! ಯೋಚಿಸುವಾಗಲೇ ಮೈನವಿರೇಳುತ್ತದೆ ಕಣೇ!" ಬಾಯಲ್ಲಿ ನೀರು ತಂದುಕೊಂಡು ಹೇಳಿದೆ ನಾನು.

ಅದಕ್ಕೆ ರಾಣಿಯ ಉತ್ತರ?—

"ಆ ಮುದ್ದು ಜೀವಿಗಳ, ಜಡಪ್ರಕೃತಿಯ ಹುಚ್ಚು ಮೋಹ ನಿಮಗುಂಟಾಗಿದೆಯೆಂದರೆ ಎಲ್ಲರಿಗೂ ಉಂಟಾಗುತ್ತದೆಯೇ? ಒಂದು ವೇಳೆ ಅಂಥ ಭಾವನೆ ನಿಮಗಿದ್ದರೆ, ಅದು ಕೇವಲ ನಿಮ್ಮ ಭ್ರಮೆಯಷ್ಟೆ. ನನಗಂತು ಇಂಥಾ ನಿಸರ್ಗ ಮೋಹದಲ್ಲಿ ಯಾವ ಹುರುಳೂ ಕಾಣಿಸೋದಿಲ್ಲಪ್ಪ"— ಔದಾಸೀನ್ಯದಿಂದುಸುರಿದಳಾಕೆ.

"ಹಾಗಾದರೆ ನಿನಗೆ ಹುರುಳುಕಾಣಿಸುವ ವ್ಯಾಮೋಹವಾದರೂ ಏನು? ಅದನ್ನಾದರೂ ಹೇಳಬಾರದೆ"—ಆಕೆಯ ಉದಾಸೀನ ಪ್ರಕೃತಿಯನ್ನು ಚೇತರಿಸಲು ನಸುನಕ್ಕು ನುಡಿದೆನಿದು,—"ಓ ತಿಳಿಯಿತು! ವೃತ್ತಪತ್ರಿಕೆಗಳಲ್ಲವೇ? ನಿಜ! ಕೇಳು ರಾಣಿ! ಯಾವ್ಯಾವ ಪತ್ರಿಕೆ ಬೇಕೋ ಅವನ್ನೆಲ್ಲಾ ತರಿಸಿಕೊಡುತ್ತೇನೆ. ನಾನು ಶಾಲೆಯಿಂದ ಬರೋತನಕ ಓದಿಕೊಂಡಿರು. ಪತ್ರಿಕಾವಾಚನದಿಂದ ಏಕಾಂತಭಾವ ಲುಪ್ತವಾಗುತ್ತದೆ. ಹೇಗೆ? ಆಯಿತೇನು? ಅಃಂ?"

ನನಗೆ ಗೊತ್ತು! ಅಂಕನಹಳ್ಳಿಯಲ್ಲಿ ಅಂಚೆಯಂಗಡಿ ಇಲ್ಲವೆಂದು. ಆ ಊರಿಗೆ ಕಾಗದಪತ್ರಗಳನ್ನು ಅಂಚೆಯವನೇ ಹೊತ್ತು ತರಬೇಕು, ಹೊರಪಟ್ಟಣದಿಂದ. ಬೇಸಿಗೆಯಲ್ಲಿ ವಾರಕ್ಕೊಮ್ಮೆ ಊರವರಿಗೆ ಕಾಗದ ಬಟವಾಡೆಯಾಗುತ್ತಿದ್ದರೆ, ಮಳೆಗಾಲದಲ್ಲಿ ತಿಂಗಳಿಗೊಮ್ಮೆ ಆಗುವುದೂ ಕಷ್ಟಸಾಧ್ಯ ಮಳೆಗಾಲದಲ್ಲಿ ಆ ಊರನ್ನಾವರಿಸಿ ಹರಿಯುವ ಸಣ್ಣಪುಟ್ಟ ಹೊಳೆಗಳು ಜಲಭರಿತವಾದುವೆಂದರೆ ಆ ಊರು ಒಂದು ಎರಡನೆಯ ಶ್ರೀರಂಗಪಟ್ಟಣವೇ ಆಗಿಹೋಗುತ್ತದೆ. ಜನರು ತಿಂಗಳುಗಟ್ಲೆ ಪಂಜರದಲ್ಲಿ ಸಿಕ್ಕಿಬಿದ್ದಂತಿರಬೇಕು ಊರೊಳಗೆ.

ನಿಜಸ್ಥಿತಿ ಹೀಗಿರುವಾಗ ನನಗುಂಟೇ ಸಾಧ್ಯ? — ರಾಣಿಗೆ ಕ್ರಮವಾಗಿ ಪತ್ರಿಕೆಗಳನ್ನು ತರಿಸಿಕೊಡಲು? ಇಲ್ಲ, ತರಿಸಿದೆನೆಂದೇ ಇಟ್ಟುಕೊಳ್ಳಿ — ಬಡ ಉಪಾಧ್ಯಾಯನಾದ ನಾನೆಲ್ಲಿಂದ ತರಬೇಕು ಪತ್ರಿಕೆಗಳಿಗೆ ಬೇಕಾದ ಅಷ್ಟೊಂದು ಹಣವನ್ನು? ಆದರೂ ಆಕೆಯನ್ನು ಒಲಿಸುವುದಕ್ಕೆ ನಾನು ಹೂಡಿದ ಉಪಾಯವಿದು! ಅದಕ್ಕೆ ಅವಳೋ? ರಾಮ ರಾಮಾ! ಕೌಟಿಲ್ಯನನ್ನೂ ಮೀರಿಸಿದವಳು. ನಾನೆಂದುದನ್ನು ಕೇಳಿ ಆಕೆ ಮುಗುಳು ನಕ್ಕಳು. ಕಣ್ಣಂಚಿನಿಂದಲೇ ನೋಡಿ ತನಗೆಲ್ಲ ತಿಳಿದಿದೆಯೆಂಬರ್ಥದಲ್ಲಿ ಕೊರಳು ಕೊಂಕಿಸಿ ಆಕೆಯೆಂದಳು:

“ಏನು ಜಾಣರು ಕಾಣ್ರೀ ನೀವು! ನಾನು ಹುಟ್ಟಿ ಬೆಳೆದ ಪುಟ್ಟದೇಶದ ಭೂಸರ್ಗ ತಿಳಿಯದೇನು ನನಗೆ? ನಿಮ್ಮ ಕಾಡೂರಿಗೆ ಅಂಚೆಯವನ ದರ್ಶನವಾಗುವುದೇ ವರ್ಷದಲ್ಲಿ ಅಮವಾಸ್ಯೆಗೋ ಯುಗಾದಿಗೋ ಒಮ್ಮೆ. ಹೀಗಿರುವಾಗ ನೀವು ನಿಮ್ಮ ನುಡಿಯನ್ನು ಚೆನ್ನಾಗಿ ಪರಿಪಾಲಿಸುವಿರೆಂಬ ಭರವಸೆಯಿದೆ ನನಗೆ. ಅಲ್ಲದೆ ಅಷ್ಟೊಂದು ಪೇಪರುಗಳನ್ನು ದಿನವಿಡೀ ಓದುತ್ತಾ ಕುಳಿತಿದ್ದರೆ ನನ್ನ ತಲೆಯನ್ನು ಮತ್ತೆ ತಿಪ್ಪೇಗುಂಡಿಗೆ ಎಸೀಬೇಕು. ನನ್ನಲ್ಲಿ ನಿಮ್ಮ ಈ ಯಾವ ಉಪಾಯವೂ ನಡೆಯದು.”

ಎಷ್ಟಾದರೂ ನಾನು ಪುರುಷನಲ್ಲದೆ? ಪುರುಷನಾದವನು ಹೆಂಗಸರ ಮುಂದೆ ಸೋಲೊಪ್ಪಿಕೊಳ್ಳುವುದು ಬಹಳ ಹೀನಾಯವಾದುದು ನನ್ನ ದೃಷ್ಟಿಯಲ್ಲಿ! ಆದ್ದರಿಂದ ಕೋಪದಿಂದವಳನ್ನು ಅತ್ತದೂಡಿ, ಚಟಚಟನೆ ಹಾಸಿಗೆಯುದ್ದಕ್ಕೂ ಕಾಲುಚಾಚಿದೆ; ಮುಖತುಂಬ ಮುಸುಕು ಹೊದ್ದುಕೊಂಡು ಭರಭರನೆ ಉಸಿರೆಳೆಯ ತೊಡಗಿದೆ.

ಯೋಚಿಸಿದೆ– ಈ ಹೆಣ್ಣು ನರಿಯನ್ನು ನನ್ನ ಸಿಕ್ಕುಬಲೆಯಲ್ಲಿ ಹೇಗೆ ಬಿಗಿಯಲೆಂದು. ಕ್ಷಣಕಾಲದಲ್ಲಿ ನನಗೊಂದು ಹಂಚಿಕೆ ಹೊಳೆಯಿತು. ಆಕೆ ನನ್ನನ್ನು ಅಗಲಿ ನಿಮಿಷವೂ ಇರಲಾರದ ಸ್ವಭಾವದವಳು. ಆದ್ದರಿಂದಲೇ ನನ್ನನ್ನಿಲ್ಲಿಯೇ ತಡೆದಿರಿಸಲು ಪಟ್ಟುಹಿಡಿದು ಕುಳಿತ್ತಿದ್ದಳು. ಅವಳ ಈ ನಿರ್ಬಲತೆಯ ಆಧಾರದಿಂದಲೇ ಅವಳನ್ನು ಸೋಲಿಸಬೇಕೆಂದು ಬಗೆದು, ಮೆಲ್ಲನೆ ಹೊದಿಕೆಯನ್ನು ಸರಿಸಿ ಹೊರಕ್ಕೆ ಇಣಿಕಿ ನೋಡಿದೆ......

ಅವಳು ನನ್ನ ಕಾಲಬುಡದಲ್ಲೆ ಕುಳಿತಿದ್ದಳು. ತನ್ನೆದುರಿಗೆ ಉರಿಯುತ್ತಿದ್ದ ದೀಪವನ್ನು ದಿಟ್ಟಿಸುತ್ತಿದ್ದಳು. ಮುಖದಲ್ಲಿ ಅಸಹಾಯತೆಯ ರೇಷೆಯಾಡಿತ್ತು.

ನಾನು ಎಡಮಗ್ಗುಲಿಂದ ಬಲಕ್ಕೆ ಬಲಮಗ್ಗುಲಿಂದ ಎಡಕ್ಕೆ ತಡೆಬಡೆನೆ ಹೊರಳಾಡಿ ಮೇಲ್ಮೊಗವಾಗಿ ಮಲಗಿಕೊಂಡೆ. ಹೊದಿಕೆಯನ್ನು ಕೆಳಹೊಟ್ಟೆಯ ತನಕ ಜಾರಿಸಿದೆ. ಆ ಮೇಲೆ ಬಿರುಸಿನಿಂದಲೇ ಆಕೆಯನ್ನು ಕೂಗಿದೆ:

"ಶಂಕು!"

"......" ಆಕೆ ಮೌನವಾಗಿ ನನ್ನ ಕಡೆಗೆ ತಿರುಗಿದಳು.

"ರಾಣಿ!" ಇನ್ನೂ ತಾರಸ್ವರದಿಂದ ಕರೆದೆ.

"ಆ?" ಆಕೆ ಒಳದನಿಯಿಂದ ಓಗೊಟ್ಟಳು. ಅವಳ ಶರೀರವೆಲ್ಲ ಕಂಪಿಸುತ್ತಿದ್ದಂತೆ ನನಗೆ ತೋರಿತು. ಅದೇ ಸಮಯವೆಂದು ನಾನು ಕೆಣಕಿದ ಸಿಂಹದಂತೆ ಎದ್ದು ಕುಳಿತು ಎಂದೆ:

"ಇಲ್ಲಿ ಕೇಳು, ರಾಣಿ! ನೀನು ನನ್ನೊಡನೆ ಬರಲಾರೆಯಲ್ಲವೇ ಏಕೆ? ಇಲ್ಲಿಯಂತೆ ಅಲ್ಲಿ ಪರದೆಯ ಹಿಂದೆ ನಿಂತುಕೊಂಡು ಹಣಿಕಿ ನೋಡಿದರೆ ವಿಶಾಲವಾದ ಬೀದಿಯನ್ನು ಕಾಣಲಾರೆ. ಬೀದಿ ನಡೆಯುವ ತರತರದ ಮುಖಭಂಗಿಗಳ ಸಹಸ್ರಾರು ಜನರನ್ನು ನೋಡಲಾರೆ. ವಿವಿಧ ಗುಲ್ಲುಗದ್ದಲಗಳನ್ನು ಕೇಳಲಾರೆ. ಇಲ್ಲಿನ ಲಾರಿ, ಕಾರು, ಮೋಟಾರುಗಳ ಆರ್ತನಾದವನ್ನಾಲಿಸಲಾರೆ; ಅಲ್ಲಿನ ಪ್ರಾಚೀನ ಕಾಲದ ಗಾಡಿಗಳು ಕಿರಿಕಿರಿದಾದವು. ನಿನ್ನ ಕಿವಿಗೆ ಹಿಡಿಸವು. ಆದ್ದರಿಂದಲೇ ಸುಂದರವಾದ ಊರನ್ನು ಕಾಡೂರಿಗೆ ಹೋರಿಸಿ ಬರಲಾರೆನೆಂದು ಇಲ್ಲದ ನೆಪ ಹೂಡಿರುವೆ. ಆದರೆ ನೋಡು! ಜ್ಞಾಪಕವಿರಲಿ! ನಿನಗೆ ನಗರದ ಬೂಟಾಡಿಕೆಯ ಜೀವನ, ತಂದೆತಾಯಿಗಳು, ಅಕ್ಕತಂಗಿಯರು, ಅಣ್ಣತಂಗಿಯರು, ಅಣ್ಣತಮ್ಮಂದಿರೇ ನನಗಿಂತ ಪ್ರಿಯವಾದರೆ ಇಲ್ಲೇ ಇರಬಹುದು. ನೋಡು! ಇದು ನನ್ನ ಕಡೆಯ ಮಾತು...... ನಮ್ಮೆದುರಿಗೆ ದೀಪ ಉರಿಯುತ್ತಿದೆ. ಅದನ್ನೀಗಲೇ ನೊಂದಿಸಿ ನುಡಿಯುತ್ತಿದ್ದೇನೆ ಈ ಮಾತನ್ನು. ಆ ದೀಪ ನೊಂದುವಂತೆ ನಮ್ಮಿಬ್ಬರ ಸ್ನೇಹವೂ ಮುಂದೆ ನೊಂದಿಹೋಗಬೇಕು......ಹುಂ ನೀನು ಅವಶ್ಯವಾಗಿ ಇಲ್ಲೇ ಇರಬಹುದು. ನಾನು ಮಾತ್ರ ನಾಳೆ......"

ಹೀಗೆ ನುಡಿಯುತ್ತಾ ದೀಪವನ್ನಾರಿಸಲು ನಾನು ಮಂಚದಿಂದ ಕೆಳಗಿಳಿಯಲು ಹವಣಿಸಿದೆ.

ಅಷ್ಟರಲ್ಲಿ ರಾಣಿಯ ಶಿರವು ಹೂವಿನಂತೆ ನನ್ನ ಕಲ್ಲೆದೆಗೆ ತಾಗಿ, ಆಕೆಯ ಕರಗಳು ಲತೆಯಂತೆ ನನ್ನ ಕೊರಳನ್ನು ಸುತ್ತುವರಿದು ನನ್ನನ್ನು ಕುಳಿತಲ್ಲಿಂದ ಮಿಸುಕಾಡದಂತೆ ಮಾಡಿತು. ಜೊತೆಗೆ ಆಕೆ ಮೌನರೋದನಕ್ಕೂ ಮೊದ

ಲಿಟ್ಟು ತನ್ನ ಬಿಸಿ ಅಶ್ರುಧಾರೆಯಿಂದ ಆಗಲೇ ಕಣ್ಣಾಗುತ್ತಾ ಬಂದಿದ್ದ ನನ್ನ ಶಿಲಾಹೃದಯವನ್ನು ಕರಗಿಸಿಬಿಟ್ಟಳು. ಕೂಡಲೇ ನನ್ನ ನಟನೆಯ ಕೋಪವು ಹಾರಿಹೋಯಿತು. ಅವಳು ಬಿಡುತ್ತಿದ್ದ ಬಿಸಿಯುಸಿರಿನಲ್ಲಿ ಗಾಳಿ ಯಲ್ಲಿ ತರಗೆಲೆ ತೇಲಿಹೋದಂತೆ. ಒಂದು ಕೈಯಿಂದ ಅವಳ ಮುಂಗುರು ಳನ್ನು ತೀಡುತ್ತಾ ಇನ್ನೊಂದು ಕೈಯಲ್ಲಿ ಅವಳ ಬೆನ್ನು ಸವರುತ್ತಾ ಮೆಲ್ಲನೆ ಆಕೆಯ ಕಿವಿಯಲ್ಲೆಂದೆ:

"ರಾಣಿ?......"

"......ಆಕೆ ಇನ್ನೂ ತನ್ನ ಮುಖವನ್ನು ನನ್ನ ಎದೆಗಾನಿಸಿಕೊಂಡು ಅಳುತ್ತಲೇ ಇದ್ದಳು.

ತಿರುಗಿ ಕರೆದೆ—"ನನ್ನ ರಾಣಿ......?"

ಆಕೆ ಕಣ್ಣೊರಸಿಕೊಂಡು ಮುಖ ನೇಲಕ್ಕೆತ್ತಿದಳು.

"ನನ್ನ ಹೃದಯವೇ! ನನ್ನೊಡನೆ ಬರಲಾರೆಯಾ? ನನ್ನ ಆಸೆಯನ್ನು ಪೂರಯಿಸಲಾರೆಯಾ?" ಬದಿಗೆ ಕುಳಿತಿದ್ದ ಆಕೆಯ ಹಣೆಯನ್ನು ಮೃದು ವಾಗಿ ಮುತ್ತಿಟ್ಟು ಕೇಳಿದೆ.

ಆಕೆ ಪ್ರತಿಯಾಗಿ ಏನನ್ನೂ ನುಡಿಯಲಿಲ್ಲ; ಬದಲು, ಮಗು ತನ್ನ ತಾಯಿಯ ಮೊಗವನ್ನು ದಿಟ್ಟಿಸುವಂತೆ ನನ್ನನ್ನು ನೋಡ ತೊಡಗಿದಳು

ಇನ್ನೇನು ಹೇಳಲಿ? "ಮೌನಂ ಸಮ್ಮತಿ ಲಕ್ಷಣಂ" ಅಲ್ಲವೇ?— ನನ್ನ ರಾಣಿ ನನ್ನೊಡನೆ ಬರಲು ಸಮ್ಮತಿ ಸೂಚಿಸಿದಳು!

೨

ಮಾರನೆಯ ದಿನ ಬೆಳಿಗ್ಗೆ:

ಜ್ಯೇಷ್ಠಮಾಸದ ಕೊನೆ. ಮೂಡುದಿಕ್ಕಿನಲ್ಲಿ ಎಂದಿನಂತೆ ಉದಿಸಿ ಬರುವ ಸುಪ್ರಭಾನುವಿನ ದರ್ಶನವಾಗಲಿಲ್ಲ. ದೇವೇಂದ್ರನ ಮೇಘದಂಡು ಅವನನ್ನು ಮುತ್ತಿಗೆ ಹಾಕಿ ಜಯಿಸಿತ್ತು; ದ್ಯುಲೋಕವನ್ನೆಲ್ಲ ತನ್ನ ವಶಮಾಡಿ ಕೊಂಡಿತ್ತು; ಜಯೋತ್ಕರ್ಷದಿಂದ ಹರ್ಷಘೋಷ ಮಾಡುತ್ತಿರುವಂತೆ 'ಜರೋ' ಎಂದು ಜಲಾವರ್ಷಗೈಯುತ್ತಿತ್ತು. ಅದರ ಕರಿವರ್ಣದ ಛಾಯೆ ಯಿಂದ ಭೂಮಿ ಕತ್ತಲೆಗಟ್ಟಿತ್ತು. ಒಂದೇ ಸಮನೆ ಬೀಳುತ್ತಿದ್ದ ಜಲಾಘಾತ ವನ್ನು ತಾಳಲಾರದೆ ಭೂದೇವಿ ತಲೆತಗ್ಗಿಸಿ, ಮುಖ ಮುಚ್ಚಿಕೊಂಡು ಭಗವಂ ತನಿಗೆ ಮೊರೆಯಿಡುತ್ತಿರುವಂತೆ ಭಾಸವಾಗುತ್ತಿತ್ತು.

ಹೊರಗಡೆ ಹೀಗೆ ಭೂದೇವಿ ಅಳುತ್ತಿದ್ದರೆ ಮನೆಯೊಳಗೆ ಮಾನುಷೀ ದೇವಿಯೊಬ್ಬಳು ಅಳುತ್ತಿದ್ದಳು. ಆಕೆ ಮೌನವಾಗಿ ರೋದಿಸುತ್ತಿದ್ದರೆ ಈಕೆ ತಡೆಯಿಲ್ಲದೆ ಸುರಿಯುತ್ತಿದ್ದ ಮಳೆಯ ನಿನಾದಕ್ಕೆ ಶ್ರುತಿಗೊಟ್ಟು ರೋದಿಸುತ್ತಿದ್ದಳು.

ಈ ಮಾನುಷೀ ದೇವಿಯಾರು? ಅವಳು ಯಾಕೆ ಅಳುತ್ತಿದ್ದಾಳೆ? ಎತ್ತ-ಹೇಗೆ?— ಎಂದೆಲ್ಲಾ ನೀವು ಕೆದಕಿ ಕೆದಕಿ ಕೇಳಬೇಡಿ. ಪ್ರಸಂಗ-ಪರಿಚಯವಿದ್ದೂ ನೀವು ಪ್ರಶ್ನೆಹಾಕಿದರೆ, ಅದಕ್ಕೆ ಸರಿಯಾಗಿ ನಾನು ಉತ್ತರಿಸಿದರೆ ವಿಷಯಾಂಕಣದಲ್ಲಿ ಪುನರುಕ್ತಿ ಬಂದುಹೋಗಿ ರಸಾಭಾವಕ್ಕೆ ಎಡೆಯಾಗುತ್ತದೆ.

ಸರಿ; ಸುಮಾರು ಒಂಭತ್ತೂ ಮೂವತ್ತಕ್ಕೆ ನಾನು ನನ್ನ ಅತ್ತೆಮಾವಂದಿರಿಂದಲೂ, ನಾದಿನಿ-ಮೈದುನರಿಂದಲೂ ಮತ್ತು ರಾಣಿ ತನ್ನ ತಂದೆತಾಯಿಯರಿಂದಲೂ, ಸೋದರ ಸೋದರಿಯರಿಂದಲೂ ಬೀಳ್ಕೊಂಡು ಬಸ್ ನಿಲ್ದಾಣಕ್ಕೆ ಹೋದೆವು. ಆಳೊಬ್ಬನು ನಮ್ಮ ಬಟ್ಟೆಬರೆಗಳ ಟ್ರಂಕ್ ಒಂದನ್ನು ಬಸ್ಸಿನ ಮೇಲೇರಿಸಿ ಹೊರಟುಹೋದ. ನಾವು ಒಳಗೆ ಕುಳಿತೆವು. ಮಳೆ ಬಿರುಸಾಗಿ ಬೀಳುತ್ತಿದ್ದುದರಿಂದ ಬಸ್ಸಿಗೆ ಮುಸುಕು ಹೊದಿಸಲ್ಪಟ್ಟಿತು. ಇನ್ನರ್ಧತಾಸಿನಲ್ಲಿ ಬಸ್ಸು ನಿಲ್ದಾಣವನ್ನು ಬಿಟ್ಟಿತು.

ದಾರಿಯಲ್ಲಿ ಸಿಗುವ ಹಾಲೇರಿ, ಜಂಬೂರು, ಗರವಾತಿ ಮೊದಲಾದ ಹಳ್ಳಿಪೇಟೆಗಳನ್ನು ಹಾದು ಮಧ್ಯಾಹ್ನ ಹನ್ನೆರಡೂವರೆ ತಾಸಿನ ಹೊತ್ತಿಗೆ ಬಸ್ಸು ಸುರ್ಲಬ್ಬಿ ಬೆಟ್ಟವನ್ನು ಏರತೊಡಗಿತು.

ಬೆಟ್ಟಗಳ ಸಂದಿನಲ್ಲಿ ಹೋಗುವ ಈ ರಸ್ತೆಯ ಪಾಡೋ! ಶ್ರೀಹರಿಯೊಬ್ಬನೇ ವರ್ಣಿಸಬಲ್ಲ. ಅದನ್ನು ಮಾಡಿದ ಪುಣ್ಯಾತ್ಮರು ಬಹುಶಃ ಸತ್ತು ಹತ್ತು ಶತಮಾನಗಳೇ ಸಂದಿರಬಹುದೇನೊ! ಆದರೂ ಅಲ್ಲಿಂದೀವರೆಗೆ ಒಂದೇ ಒಂದು ಎಂಜಿನೂ ಅದರ ರಿಪೇರಿ ಕೆಲಸಕ್ಕೆ ಹೋಗಿರಲಿಕ್ಕಿಲ್ಲ. ಹೋಗುವುದಾದರೂ ಹೇಗೆ? ಇಡಿಯ ಕೊಡಗಿಗಾಗಿ ಈಗಲೇ ಇರುವುದು ಆರು ನಂಬರಿನದೋ ಏಳು ನಂಬರಿನದೋ ಒಂಟಿ ಇಂಜಿನು! ಮತ್ತೆ ಆಗ? ಆರೇಳು ದಶಕಗಳ ಹಿಂದಕ್ಕೆ?– 'ಎಂಜಿನ್' ಎಂಬ ಶಬ್ದವನ್ನು ಹಳ್ಳಿಗಾಡಿನ ರಸ್ತೆಯ ಮಧ್ಯೆ ನಿಂತು ಯಾರಾದರೂ ಉಚ್ಚರಿಸಿಬಿಟ್ಟರೆ ಸ್ವರ್ಗದಿಂದೊಂದು ಹೊಸ ಪದ ಸಿಡಿದುಬಿದ್ದಂತೆ. ಹೋಗಲಿ! ಎಂಜಿನನ್ನು ಬಿಡಿ! ಅದಿಲ್ಲದಿದ್ದರೆ ಈಗಿನಂತೆ ಜನರೇ ಒಟ್ಟುಸೇರಿ ತಂತಮ್ಮ ಗ್ರಾಮದ ರಸ್ತೆಯನ್ನು ದುರ

ಸ್ಪಿಪಡಿಸಿಕೊಳ್ಳುವಂತೆ ಪ್ರೇರಿಸುವ 'ಕಮ್ಯುನಿಟಿ ಪ್ರಾಜೆಕ್ಟ್' ಅನ್ನುವ ಕಾನೂ ನೇನಾದರೂ ಇದ್ದೀತೋ ಎಂದು ಕೇಳಿ! ಇಲ್ಲ! ಅದೂ ಇರಲಿಲ್ಲ ಆಗ ಅಂಥಾ ಇಂಥಾ ಕಾನೂನುಗಳೇನು ಇರದಿದ್ದರೂ ಜನರೇ ತಮ್ಮ ಒಳಿತ ಕೆಡುಕುಗಳನ್ನು ಗಮನಿಸಿ, ತಕ್ಕ ಸಮಾಲೋಚನೆ ನಡೆಸಿ ಕೆಲಸಮಾಡುವ ತಿಳುವಳಿಕೆಯೂ ಇದ್ದಿರಲಿಲ್ಲ. ಇಂದಿನ 'ಸುಧಾರಿತ' ನಾಗರಿಕತೆಯಲ್ಲಿ ಅನಾಗರಿಕ ವರ್ತನೆಗಳು ಎದ್ದುಕಾಣುತ್ತಿರುವಾಗ ಅಂದಿನ ಆ ಅನಾಗರಿಕ ತೆಯ ಸ್ಥಿತಿ ಹೇಗಿದ್ದಿರಬೇಡ? ಜೊತೆಗೆ ಪರಕೀಯರ ರಾಜ್ಯಭಾರ ಬೇರೆ ನಗರಗಳಲ್ಲಿ ಮುಂದಾಳುಗಳು ದೇಶದ ಉದ್ಧಾರಕ್ಕಾಗಿ ಹೋರಾಡುತ್ತಿದ್ದರೆ ತಮ್ಮ ಎಲ್ಲ ಭಾಗಗಳನ್ನು ಅವರಿಗೇ ಒಪ್ಪಿಸಿ ನಿಶ್ಚಿಂತೆಯಿಂದ ಕೂಡಿಕೊಂಡಿ ದ್ದರು ಹಳ್ಳಿಯ ಜನ......

ಇರಲಿ! ರಸ್ತೆಯ ವರ್ಣನೆಗೆ ಹೊರಡುತ್ತೇನೆ—

ಗುಡ್ಡಗಳಿಂದ ಉರುಳಿಬಂದು ಬಿದ್ದ ಚಿಕ್ಕದೊಡ್ಡ ಕಲ್ಲುಗಳು ರಾಶಿ ರಾಶಿಯಾಗಿ ರಸ್ತೆಯ ಉದ್ದಗಲಕ್ಕೆ ಹರಡಿದ್ದುವು. ಒಂದೆಡೆ ದಿಣ್ಣೆಯಾದರೆ ಸ್ವಲ್ಪ ಮುಂದೆ ಹೋಗುವುದರಲ್ಲಿ ಹಳ್ಳ! ಹಳ್ಳಗಳಲ್ಲೋ ತುಂಬಿ ನಿಂತಿರುವ ರಾಡಿನೀರು! ಅವುಗಳ ಮೇಲೆ ವಾಹನ ಹರಿಯುವಾಗ ನೀರು ಅಷ್ಟೆತ್ತರಕ್ಕೆ ಪಚಕ್ಕೆಂದು ಹಾರುವುದು. ಆಗ ಬದಿಯಲ್ಲಿ ನಿಂತು ನೋಡುವವರಿಗೆ ಅನಿಸ ಬೇಕು—ರಸ್ತೆಯ ದುರವಸ್ಥೆಯನ್ನು ನೋಡಿ ಪ್ರಯಾಣಿಕರೆಲ್ಲ ತೆರೆದ ಬಾಯ ಳಿಂದ ಒಟ್ಟಿಗೆ ಉಗುಳುತ್ತಿದ್ದಾರೆಂದು. ಹಳ್ಳತಿಟ್ಟುಗಳಿಂದ ಕೂಡಿದ, ಮೇ ಲೆದ್ದು ನಿಂತ ಅಶ್ಮಗಳಿಂದಾವೃತವಾಗಿರುವ ರಸ್ತೆಯ ಮೇಲೆ ಓಡುವಾಗ ನನ ಬಸ್ ರಾಮನು ಮಾಡುತ್ತಿದ್ದ ಕಸರತ್ತೋ! ಹೊಟ್ಟೆಯಲ್ಲಿ ತ್ರೈಲೋಕಗಳನ್ನಿ ಟ್ಟುಕೊಂಡು ಶ್ರೀ ವಿಷ್ಣುವೆತ್ತುವ ಅವತಾರದಂತೆ! ಅದು ಮಾಡುವ ಕಸರ ತ್ತಿನ ರಭಸಕ್ಕೆ ಒಳಗಿರುವವರೆಲ್ಲ ಬಜ್ಜಿಯಾಗಬೇಕು. ಅದು ಮೇಲಕ್ಕೆ ಹಾರಿ ಕೆಳಕ್ಕೆ ಬೀಳುವ ಕುಣಿತಕ್ಕೆ—ತುಂಬು ಗರ್ಭಿಣಿಯರೆಲ್ಲಾದರು ಒಳಗೆ ಕುಳಿತಿದ್ದರೆ ಅವರ ಗರ್ಭಪಾತವೇ ಆಗಿಹೋಗಬೇಕು. ಅದು ತಿರುವುಮು ರುವುಗಳಲ್ಲಿ ಓಡುವಾಗಲಂತು ಕೈ-ಕೈಗಳಿಂದ, ಬಾಯಿ-ಬಾಯ್ಗಳಿಂದ ಜಗಳ ವಾಗುವುದು ಒಟ್ಟು ತಲೆ-ತಲೆಗಳಿಂದಲೇ ಹೊಡೆದಾಡಿಕೊಳ್ಳುತ್ತಿದ್ದರು ಪ್ರಯಾಣಿಕರು.

ಮಡಿಕೇರಿಯಿಂದ ಹೊರಟನಂತರ ನಾನು ಮತ್ತು ರಾಣಿ, ಪರಸ್ಪ ಪಿಟ್ ಅಂತ ಉಸಿರೆತ್ತಿರಲಿಲ್ಲ ಆ ತನಕ.

ನನಗೋ ಅವಳೊಂದಿಗೆ ಮಾತನಾಡಬೇಕೆಂಬ ಹಂಬಲ! ಆದರೆ ಬಾಯಿಬಿಡುವಂತಿಲ್ಲ. ಯಾಕೆಂದರೆ, ಏನಾದರು ದುಗುಡವಿದ್ದಲ್ಲಿ ಬೇರೆಯವರು ಮಾತಾಡಿಸಿದಾಕ್ಷಣ ಅತ್ತುಬಿಡುವುದು ಕೆಲವರ ಅಭ್ಯಾಸ. ರಾಣಿಗಂತು ಅದೊಂದು ರೂಢಿ! ಮನೆಯಲ್ಲಿ ಅತ್ತರೆ ಪರವಾ ಇಲ್ಲ ಅನ್ನಿ. ಆದರೆ ಇಲ್ಲಿ ಹಾಗಲ್ಲ ನೋಡಿ! ಅವಳು, ಹುಳಿಹಿಂಡಿದ ಮಿಾನಿನಂತೆ ಮುಖ ಗಂಟಿಕ್ಕಿ ಕುಳಿತ್ತಿದ್ದಳು; ತಗ್ಗಿಸಿದ ಮೋರೆಯನ್ನು ತಗ್ಗಿಸಿಯೇ ಇಟ್ಟಿದ್ದಳು; ನನ್ನನ್ನು ಕಣ್ಣೆತ್ತಿಯೂ ನೋಡುತ್ತಿರಲಿಲ್ಲ. ಅಂತೂ, ಹೇಗಾದರೂ ಮಾಡಿ ಆಕೆಯನ್ನು ಮಾತಾಡಿಸಿಯೇ ತೀರಬೇಕೆಂದುಕೊಂಡೆ.

ಇದಕ್ಕಾಗಿ ಅಂಕುಡೊಂಕುಗಳಲ್ಲಿ ಬಸ್ಸು ಬದಿಯಿಂದ ಬದಿಗೆ ವಾಲುತ್ತಿದ್ದಾಗಲೆಲ್ಲಾ ಬೇಕುಬೇಕೆಂದೇ ನಾನು ನನ್ನ ತಲೆಯನ್ನು ಅವಳ ತಲೆಗೆ ತಾಗಿಸಿದೆ. ನನ್ನ ಮೂರುನಾಲ್ಕು ಪೆಟ್ಟುಗಳನ್ನೇನೊ ಆಕೆ ಸಹಿಸಿಕೊಂಡಳು. ಕೊನೆಗೆ ತಡೆಯಲಾಗಲಿಲ್ಲವೆಂದು ಕಾಣುತ್ತೆ, ಮುಖ ಮೇಲಕ್ಕೆತ್ತಿ, ಕೋಪದಿಂದ ದುರುಗುಟ್ಟಿ ನೋಡಿದಳು ನನ್ನೆಡೆಗೆ.

ನಾನಾದರೂ ಅವಳ ನೋಟಕ್ಕೆ ಸೋಲದವನಂತೆ ನಗುನಗುತ್ತಲೇ ನೋಡಿದೆ ಆಕೆಯ ಮೋರೆಯನ್ನು.

ಈ ದೃಷ್ಟಿಯುದ್ಧದಲ್ಲಿ ಆಕೆಯೇ ಸೋತಳು; ಮೊಗತಿರುಗಿಸಿಕೊಂಡು ಬಿಟ್ಟಳು ಬೇರೆಡೆಗೆ. ಪುಣ್ಯಾತ್ಮಳು ಪಿಟ್ಟೆಂದು ಉಸಿರೆತ್ತಲಿಲ್ಲ. ನಾನೆಂಥ ಅಭಾಗ್ಯನಿದ್ದೆನೋ ಏನೋ!

ಇಷ್ಟೆಲ್ಲಾ ನಡೆಯುವ ಹೊತ್ತಿಗೆ ಬಸ್ ನಾವು ಇಳಿಯಬೇಕಾದ ಸ್ಥಳವನ್ನು ಸಮಿಾಪಿಸಿತು. ನಾನು ಎಚ್ಚರಿಕೆ ಕೊಡಲಾಗಿ ಅದು ನಿಂತಿತು; ನಾವಿಬ್ಬರು ಕೆಳಗಿಳಿದೆವು. ಕಂಡೆಕ್ಟರ್ ಟ್ರಂಕನ್ನು ಮೇಲಿನಿಂದ ಇಳಿಸಿಕೊಟ್ಟನಂತರ ಬಸ್ ಮುಂದಕ್ಕೆ ಹೊರಟುಹೋಯಿತು, ನಾವು ನಮ್ಮ ದಾರಿ ಹಿಡಿದು ನಡೆದೆವು.

ನಾವಿಳಿದ ಸ್ಥಳದಿಂದ ಅಂಕನಹಳ್ಳಿಯ ನಮ್ಮ ಮೊಕ್ಕಾಮಿಗೆ ನಾಲ್ಕು ಮೈಲಿಗಳ ಕಾಡುದಾರಿ ಹಿಡಿದು ಹೋಗಬೇಕಾಗಿತ್ತು.

—ಆದಾಗಿಯೂ........! ಅದಕ್ಕೆ ದಾರಿಯೆಂದಲ್ಲ, ಕಿರುಕಣಿವೆಯೆಂದೇ ಹೇಳಬೇಕು. ಮಳೆಗಾಲದಲ್ಲಿ ಗುಡ್ಡಗಳ ಮೇಲಿನಿಂದ ಇಳಿದುಬರುವ ನೀರು ಹರಿದು ಹರಿದು ಇಕ್ಕಟ್ಟಾದ ಕೊರಕಲು ಓಣಿಯಂತಾಗಿತ್ತದು. ಮುಂಜಾ

ವಿಗೆ ಪ್ರಾರಂಭವಾಗಿದ್ದ ಮಳೆ ಬಸ್‌ನಲ್ಲಿದ್ದಾಗ ಶಾಂತವಾಗಿದ್ದರೂ ಈಗ ಜಡಿಮಳೆಯಾಗಿ ಸುರಿಯತೊಡಗಿತ್ತು. ಇಕ್ಕೆಡೆಯ ಗುಡ್ಡಗಳಿಂದ ನೀರು ಬಳಬಳನೆ ರಭಸದಿಂದ ಹರಿದುಬಂದು ಆ ದಾರಿಗೆ ಬೀಳುತ್ತಿತ್ತು. ದಾರಿಯ ಆಚೀಚೆ ಗುಡ್ಡಗಳ ಬದಿಯಲ್ಲಿ ದೊಡ್ಡದೊಡ್ಡ ಬಂಡೆಗಳು; ದಟ್ಟಡವಿಗಳು. ಜೊತೆಗೆ ಬಿರುಗಾಳಿಯ ಹೊಡೆತಬೇರೆ. ದಾರಿಯಾದರೂ ಸಮತಲವಾಗಿತ್ತೊ? ಅದೂ ಇಲ್ಲ; ಇಳಿಜಾರಾಗಿದ್ದ ಹಳ್ಳಕಿಟ್ಟೆಗಳಿಂದ ಕೂಡಿತ್ತು. ಹಳ್ಳಕಿಟ್ಟೆಗಳು ಕೆಸರು ನೀರಿನಲ್ಲಿ ಗೋಚರಿಸುತ್ತಿರಲಿಲ್ಲವಾಗಿ ಕಾಲುಗಳು ದುಡುಂ ದುಡುಕ್ ಅಂತ ಮುಗ್ಗರಿಸುತ್ತಿದ್ದುವು.

ನಾನು ಷರಾಯಿಯನ್ನು ಕಳೆದು ಬರಿ ನಿಕ್ಕರಿನಲ್ಲಿ ಉಳಿದುಕೊಂಡೆ. ತಲೆಯಲ್ಲಿ ಹೊರಲಸಾಧ್ಯವಾದ ಟ್ರಂಕ್; ಅದನ್ನು ಆದರಿಸಿಕೊಂಡ ಕೈಯಲ್ಲಿ ಬಿಚ್ಚಿದ ಕೊಡೆ. ಇನ್ನೊಂದು ಕೈಯಲ್ಲಿ ಒಂದೇ ಸವನೆ ಕಣ್ಣೀರು ಸುರಿಸುತ್ತಿದ್ದ ನನ್ನಾಕೆಯ ಕೈ. ನನ್ನ ಫಜೀತಿ ಕೇಳಬೇಕೇ! ಮೊಳಕಾಲುದ್ದ ಆಳದ ನೀರಿನಲ್ಲಿ ಕಾಲುಗಳನ್ನು ಜಾಡಿಸಿ ಜಾಡಿಸಿ ನಡೆದೆ.

ಮೈ ಥಂಡಿಯಾಗಿರಬೇಕಾದ ಸಮಯದಲ್ಲೂ ನನಗೆ ಧಾರಕಾರವಾಗಿ ಬೆವರುತ್ತಿತ್ತು.

ಪಟ್ಟಣದಲ್ಲಿ ಕಷ್ಟವನ್ನು ಕಂಡರಿಯದೆ ಸುಖವಾಗಿ ಬೆಳೆದ ರಾಣಿ, ಎಂದೂ ಕಾಣದ ಆರುದ್ರಭಯಾನಕ ದೃಶ್ಯವನ್ನು ನೋಡಿ ಹೆದರಿಕೆಯಿಂದ ಅಳುತ್ತಿದ್ದಳು. ಆದರೂ ನನಗಾ ಸಮಯದಲ್ಲಿ ತಡೆಹಿಡಿಯಲಾರದ ಆನಂದ- ಆ ಪ್ರಕೃತಿಯ ಪ್ರಕೋಪವನ್ನು ನೋಡಿ! ಎಂಥಾ ಸ್ವಭಾವ ವೈಪರೀತ್ಯ!

ಹೇಗೂ ಆ ದಾರಿಯನ್ನು ಕಳೆದು ನಾವು ಮುಂದೆ ಸಮತಟ್ಟಾದ ಕಾಡು ದಾರಿಗೆ ಬಂದೆವು. ಈ ದಾರಿಯಲ್ಲಿ ಹರಿವರಾಡಿನೀರಿನ ಉಪಟಳವಾಗಲಿ, ಏರುತಗ್ಗುಗಳಾಗಲಿ ಇರಲಿಲ್ಲ. ಆದರೆ ಗಾಳಿಯ ಹೊಡೆತಕ್ಕೆ ಉದುರಿದ ಹಸಿ ಎಲೆಗಳ ಪದರು, ಅದರ ಮೇಲೆ ಬಿದ್ದಿದ್ದ ಮಳ್ಳಿನ ಹಾಸುಗೆ ಕಾಲಿಗೆ ಬಹು ಮೆತ್ತಗಾಗಿತ್ತು! ಪ್ರತಿಯೊಂದು ಎಲೆಯ ಮೇಲೂ ಮೂತಿಗಳನ್ನು ನೆಟ್ಟಗೆ ಮಾಡಿಕೊಂಡು "ಅಲರ್ಟ್‌ಪೊಜಿಶನ್"ನಲ್ಲಿ ನಿಂತುಕೊಂಡಿದ್ದ ಜಿಗಳೆಗಳೆಂ (beches)ಬ ಅರಣ್ಯಯೋಧರು ತಮ್ಮ ಅಖಂಡ ದೇಹಸಹಿತ ನಮ್ಮ ಕಾಲುಗಳಿಗೆರಗುತ್ತಿದ್ದರು. ಅವುಗಳ ಪ್ರತಿಧಾಳಿಯ ಸಮಯದಲ್ಲೂ ರಾಣಿಯ ಕೂಗು ಅಂತರಿಕ್ಷವನ್ನು ಮುಟ್ಟುತ್ತಿತ್ತು. ಆ ದಾರಿಯುದ್ದಕ್ಕೂ ಜಿಗಳೆಗಳ

ತಂಡಕ್ಕೂ ನಮಗೂ ನಡೆದ ಕಚ್ಚಾಟ-ಎಳೆದಾಟಗಳಲ್ಲಿ ರಕ್ತದ ಕೋಡಿಯೇ ಹರಿಯಿತು.

ಈ ರಾದ್ಧಾಂತವನ್ನು ಕಳೆದು ನಾವು ಮನೆಸೇರಬೇಕಾದರೆ ರಾತ್ರಿ ಆರು ಗಂಟೆಯಾಯಿತು.

ನಾನೊಬ್ಬನೇ ಆಗಿದ್ದರೆ ಎಂದೋ ತಲಪಬಿಡುತ್ತಿದ್ದೆ. ಆದರೆ ಜೊತೆಗೊಬ್ಬಳು ಇದ್ದಳಲ್ಲ, ಮಂದಗಮನೆ? ಅವಳ ದೆಸೆಯಿಂದಾಗಿ ಅಷ್ಟು ಹೊತ್ತಾಯಿತು ನೋಡಿ!

ಮನೆಸೇರಿದ ಅನಂತರ ಸುತ್ತುಮುತ್ತಲಿನ ವಾತಾವರಣ, ಮನೆ ನಿಂತ ಸ್ಥಳದ ಏಕಾಂತತೆ, ತಾಯಿತಂದೆಯಿಲ್ಲದ, ಮಕ್ಕಳುಮರಿಯಿಲ್ಲ. ಭಣ ಭಣ ಎನ್ನುತ್ತಿದ್ದ ಮನೆ— ಇವುಗಳನ್ನೆಲ್ಲ ನೋಡಿ ರಾಣಿ ಎಷ್ಟೊಂದು ಅತ್ತಳೋ— ಅದರ ಅಂದಾಜು ನನಗಿನ್ನೂ ಗೊತ್ತಿಲ್ಲ.

— ಇಷ್ಟುಮಾತ್ರ ಈಗಲೂ ನೆನಪಿದೆ: ನಾನವಳಿಗೆ ಸಾಂತ್ವನ ನುಡಿಗಳನ್ನು ಹೇಳಿ ಹೇಳಿ ನನ್ನ ಬಾಯಿಯಲ್ಲಿ-ಗಂಟಲಲ್ಲಿ ನೀರೇ ಆರಿಹೋದರೂ ಆಕೆ ಅಡಿಗೆಮಾಡಲು ಏಳದೇಹೋದುದು, ನಾನೇ ಒಲೆ ಹೊತ್ತಿಸಿದ್ದು, ಚಹಮಾಡಿದ್ದು, ಆಕೆ ಕುಡಿಯದೆಹೋಗಲು ನಾನೇ ಎಲ್ಲವನ್ನೂ ಹೊಟ್ಟೆ ತುಂಬಾ ಕುಡಿದುಕೊಂಡದ್ದು!

೩

ನನ್ನಲ್ಲಿಟ್ಟಿದ್ದ ಪತಿಭಕ್ತಿಯಿಂದಲೋ, ಇಲ್ಲವೇ ಕಳೆದ ಇಡೀದಿನದ ಉಪವಾಸವ್ರತದಿಂದ ಹತಾಶಳಾಗಿಯೋ ರಾಣಿ, ಮರುದಿನ ಬೆಳಗ್ಗೆ ಬೇಗನೆ ಎದ್ದು ಕಾಫಿ ತಿಂಡಿಮಾಡಿದಳು. ನೇತ್ರಗಳಿಂದ ಗಂಗಾಜಮುನ ಧಾರೆಗಳು ಮಾತ್ರ ತಪ್ಪದೆ ಹರಿಯುತ್ತಲೇ ಇದ್ದುವು. ಆದರೆ, ಇಡಿಯ ರಾತ್ರೆಯೆಲ್ಲಾ ಹರಿದು ಹರಿದು ಅವುಗಳ ನೆರೆಯ ಉಬ್ಬರ ಇಳಿದು ಹೋಗಿ ಕೇವಲ ತೊಟ್ಟಿಕ್ಕುತ್ತಿದ್ದುವಷ್ಟೆ!

ನಾನವಳನ್ನು ಹೆಚ್ಚಿಗೆ ಮಾತಾಡಿಸುವ ಗೋಜಿಗೆ ಹೋಗಲಿಲ್ಲ. ಒಂದು ವೇಳೆ ಹಾಗೆ ಮಾತಾಡಿಸಿದೆನೆಂದೇ ಇಟ್ಟುಕೊಳ್ಳಿ!—ನನ್ನ ಬಾಯಿಯಿಂದ ಶಬ್ದಗಳು ಹೊರಬೀಳುವುದಕ್ಕಿಂತ ಇಮ್ಮಡಿ ಮುಮ್ಮಡಿಯಾಗಿ ಅವಳ ಕಣ್ಣಿ

ನಿಂದ ಕಂಬನಿಗಳುದುರುತ್ತಿದ್ದುವು. ಈ ದಾದ್ಪಾಂತವನ್ನು ನೋಡುವುದು ಯಾರಿಗೆ ಬೇಕು ಎಂದು ಹೇಳಿ! ಅಂತೆಯೆ ಬಾಯಿಯ ಚಲನೆಯನ್ನು ನಾನು ಹದಕ್ಕೆ ತಂದುಕೊಂಡೆ. ಅಲ್ಲದೆ ಅ ದಿನವೆಲ್ಲ ಕೆಣಕಾಟ ನಡೆಸಿ ಆಕೆಯ ಮಧುಮಧುರವಾದ ನಯನ–ಜಲವನ್ನು ನೋಡುತ್ತಿರುವ ಸುಯೋಗವೂ ನನಗಿರಲಿಲ್ಲ; ಶಾಲೆಗೆ ತಪ್ಪದೆ ಹಾಜರಾಗಬೇಕಿತ್ತು.

ಆ ದಿನ ಶಾಲೆಗೆ ಹೋಗಿ ಹೆಡ್ಮಾಸ್ತರನ್ನು ಕಂಡು ಮಾತಾಡಿದಾಗ ಅವರು ಅತಿಯಾದ ಆನಂದ ತಾಳಿದರು. ಹಸನ್ಮುಖದಿಂದ ಕೇಳಿದರು,

"ಹೋ! ಬಂದುಬಿಟ್ಟಿರಾ? ಎಂದು ಬಂದಿರಿ?"—

"ನಿನ್ನೆ ಸಂಜೆಗೆ" ಎಂದು ನಾನೆಂದಾಗ ಅವರು ನಗುತ್ತಾತಿರುಗಿ ಕೇಳಿದರು, "ನೀವೊಬ್ಬರೇ ಬಂದಿರಾ, ಅಲ್ಲ ……?" ಎಂದು ಅರ್ಧ ವಾಕ್ಯವನ್ನು ಬಾಯೊಳಗೇ ಸಿಕ್ಕಿಸಿಕೊಂಡ—

"ಇಲ್ಲ, ನನ್ನ ಹೆಂಡತಿಯೂ ಬಂದಿದ್ದಾಳೆ."—ನಾನವರ ಸಂಕುಚಿತ ಪ್ರಶ್ನೆಗೆ ತಟ್ಟನೆ ಉತ್ತರಿಸಿದೆ.

"ಹಾಗಾದರೆ ನೋಡಿ,…….ನಾನನ್ನುವುದನ್ನು ಅನ್ಯಥಾ ಭಾವಿಸಬೇಡಿ ……." - ಎಂದು ಜೋರಾಗಿ ನಕ್ಕು ನುಡಿದರವರು—"ನಿಮ್ಮ ಹೆಂಡತಿ ನಿಮ್ಮೊಂದಿಗೆ ಬಂದಿದ್ದರೆ, ಅವರು ಇಲ್ಲೇ ಇರುವರಾದರೆ ನೀವು ಸ್ವರ್ಗದಲ್ಲಿರುತ್ತೀರೆಂದೇ ಭಾವಿಸಬೇಕು!"

ಆ ಹೆಡ್ಮಾಸ್ತರ ಹೆಸರೇನೆಂಬುದು ನನಗೆ ಈಗ ಮರೆತುಹೋಗಿದೆ. ಆದರೆ, ಆ ಕ್ಷಣಕ್ಕೆ, ಅವರೂ ನನ್ನಂತೆಯೇ ಒಬ್ಬರು ಪ್ರಕೃತಿ ಭಕ್ತರೆಂಬುದು ಅವರ ಮಾತಿನಿಂದ ನನಗೆ ವ್ಯಕ್ತವಾಯಿತು. ಅವರ ನಗುಮಾತಿಗೆ ಪ್ರತಿಯಾಗಿ ನಾನೂ ನಕ್ಕುಬಿಟ್ಟು ಅವರ ಅಭಿಪ್ರಾಯವನ್ನು ಅನುಮೋದಿಸಿಬಿಟ್ಟೆ. ಈ ಅನುಮೋದನೆಯ ಕಾಲದಲ್ಲಿ ನನ್ನ ಮತ್ತು ರಾಣಿಯ ಪರಸ್ಪರ ವಿರೋಧೀ ಮನೋಭಾವಗಳ ನೆನಪೇ ನನಗುಳಿದಿರಲಿಲ್ಲ! ಅಂತೆಯೇ ನಾನು ಹೆಡ್ಮಾಸ್ತರ ಮುಂದೆ ಸಂಭಾವಿತನೆನ್ನಿಸಿಕೊಂಡೆ!

ಮಧ್ಯಾಹ್ನ ಊಟಕ್ಕೆಂದು ಮನೆಗೆ ಹೋದಾಗ ರಾಣಿಯ ಕಣ್ಣೀರ ಪ್ರವಾಹ ಸಂಪೂರ್ಣ ಬತ್ತಿಹೋಗಿತ್ತು. ನನ್ನ ಊಟ ಅರ್ಧಕ್ಕೆ ತಲಪಿದಾಗ ಪಕ್ಕದಲ್ಲೇ ಕುಳಿತು ನನಗೆ ಗಾಳಿ ಹಾಕುತ್ತಿದ್ದ ಆಕೆಯನ್ನು ಕುರಿತೆಂದೆ:

"ರಾಣಿ, ಹೆಡ್ಮಾಸ್ತ್ರು ಕೂಡ ಹೇಳುತ್ತಾರೆ……"

"ಏನೆಂದು ?" ಗಾಳಿಹಾಕುವುದನ್ನು ನಿಲ್ಲಿಸಿ ಥಟ್ಟನೆ ಕೇಳಿದಳಾಕೆ.

"ನಾವು ಸ್ವರ್ಗದಂಥ ಸ್ಥಳಕ್ಕೆ ಬಂದಿದ್ದೇವಂತೆ. ನಾನು ಇಂದ್ರನಂತೆ. ಮತ್ತು ನೀನು......"

"ಅಯ್ಯೋ!"—ಆಕೆ ನನ್ನ ಮಾತನ್ನು ಅಷ್ಟಕ್ಕೇ ಕತ್ತರಿಸಿ ಸಿಡಿದು ನುಡಿದಳು—ಸ್ವರ್ಗದಂಥ ಸ್ಥಳಕ್ಕೆ ಬಂದಿದ್ದೇವಂತೆ! ತಾವು ಮಹಾ ಇಂದ್ರನಂತೆ ಹುಂ! ಮತ್ತೆ ನಾನೇನೋ?........."

"ಅದನ್ನು ಹೇಳುತ್ತಿದ್ದಾಗಲೇ ನೀನು ನಡುವೆ ಬಾಯಿಹಾಕಿದರೆ ನಾನೇನು ಮಾಡಲಿ, ಹೇಳು? ನಾನು ಇಂದ್ರನಂತಲ್ಲ? ಮತ್ತೆ ನೀನು......"

ಕೂಡಲೆ ಆಕೆ ತನ್ನ ಕಿವಿಗಳನ್ನು ಮುಚ್ಚಿಕೊಂಡು "ಸಾಕು! ಮುಂಗೆ ನುಡಿಯಬೇಡಿರಿ! ನನಗೆಲ್ಲ ತಿಳಿದಿದೆ. ನಾವು ನರಕದಂಥಾ ಜಾಗಕ್ಕೆ ಬಂದಿದ್ದೇವೆ. ನನ್ನನ್ನಿಲ್ಲಿಗೆ ಎಳೆದುಕೊಂಡು ಬಂದ ನೀವು ಸಾಕ್ಷಾತ್ ಯಮನೇ ಸರಿ. ಮತ್ತೆ ನಾನು......" ಎಂದು ಕೋಪದಿಂದ ನುಡಿದವಳು ಅಷ್ಟಕ್ಕೆ ತಡೆದುಬಿಟ್ಟಳು.

"ಆಯಿತು! ತೀರಿತಂತಲ್ಲ? ಈ ಅಂಕನ ಹಳ್ಳಿಯೇ ನರಕ, ನಾನೇ ಯಮ, ನೀನೇ ಪಾಪಿ! ಅಲ್ಲವೇ?" ಹೀಗೆಂದು ಹೇಳಿ ನಾನು ಗಟ್ಟಿಯಾಗಿ ನಕ್ಕುಬಿಟ್ಟೆ.

ರಾಣಿ ಅಲ್ಲಿಂದೆದ್ದು ಹೋಗಿಬಿಟ್ಟಳು. ಉಳಿದರ್ಧ ಊಟವನ್ನು ನಾನೇ ಬಡಿಸಿಕೊಂಡು ಉದರಭಾಂಡವನ್ನು ಪೂರ್ತಿಗೊಳಿಸಿದೆ.

ಅಲ್ಲಿಂದ ಮುಂದೆ, ಈ ರೀತಿಯ ಜಗಳಗಳಿಂದಲೇ ನನ್ನ ಇಂದ್ರಪದವಿಯು ಸಾಗುತ್ತಹೋಯಿತು ಮನೆಯೊಳಗೆ. ಮನೆಯ ಹೊರಗೊ?

ನಾವಿದ್ದ ಮನೆಯಿಂದ ಅರ್ಧಮೈಲು ಪಶ್ಚಿಮಕ್ಕೆ ಹೋದರೆ ಅಲ್ಲೇ ಗುಡ್ಡಗಳ ಸಾಲೊಂದಿತ್ತು. ಅರುಣೋದಯಕ್ಕೆ ಮುಂಚಿತವಾಗಿ ನಾನು ಹಾಸಿಗೆಯಿಂದೆದ್ದು ಆ ದಿಸೆಗೆ ನಡೆಯುತ್ತಿದ್ದೆ.

ಗುಡ್ಡದ ಬುಡದಲ್ಲಿ ಸದಾ ನೀರು ತುಂಬಿ ಹರಿಯುವ ತೊರೆಯೊಂದಿತ್ತು. ನನ್ನ ಅಭ್ಯಂಗನ ನಡೆಯುತ್ತಿದ್ದುದು ಹೆಚ್ಚಾಗಿ ಅದರಲ್ಲೇ.

ದೇಹದಲ್ಲೊಂದು ಬನೀನು, ಸುತ್ತಿದ ಪಂಚೆ, ಹೆಗಲ ಮೇಲೊಂದು ಟವೆಲ್—ಇಷ್ಟೇ ಮೈಮೇಲಿರುತ್ತಿದ್ದ ಬಟ್ಟೆಗಳು ಆ ಸಮಯದಲ್ಲಿ. ಹಲ್ಲು

ಜ್ಜಲು ಈಗಿನಂತೆ ಆಗ (ನನಗೆ ಮಾತ್ರ) ಟೂತ್‌ಪೌಡರ್, ಟೂತ್‌ಪೇಸ್ಟ್, ಟೂತ್‌ಬ್ರಶ್ ಮುಂತಾದ ಆಡಂಬರದ ಸಾಮಗ್ರಿಯೇನು ಇರುತ್ತಿರಲಿಲ್ಲ. ನಿಸರ್ಗಪ್ರೇಮಿಯಾದ ನನಗೆ ನಿಸರ್ಗವೇ ಒದಗಿಸುತ್ತಿತ್ತು ಬೇಕಾದಷ್ಟು ಮಾವೆಲೆಗಳನ್ನು. ದಾರಿನಡೆಯುವಾಗ ಬದಿಯಲ್ಲಿರುತ್ತಿದ್ದ ಗಿಡಗಳಿಂದ ನಾಲ್ಕೆಂಟು ಎಲೆಗಳನ್ನು ಕಿತ್ತು, ಹಲ್ಲು ತಿಕ್ಕುತ್ತಾ ತೊರೆಯನ್ನು ತಲಪುತ್ತಿದ್ದೆ, ತೊರೆಯನ್ನು ತಲಪಿದಾಗ ಶೀತಲಗಾಳಿಯ ಸ್ಪರ್ಶದಿಂದ ನಡುಗುವ ಮೈ, ಮುಂಜಾವಿನ ನಸುಬೆಳಕಿಗೆ ಹೊಳೆಹೊಳೆಯುತ್ತ ಬುಳುಬುಳು ನಾದದಿಂದ ಹರಿಯುವುದನ್ನು ನೋಡಿ ಇನ್ನಷ್ಟು ನಡುಗುತ್ತಿತ್ತು; ನೀರಲ್ಲಿ ಕಾಲಿಡುತ್ತಲೇ ಜುಮ್ಮೆನ್ನುತ್ತಿತ್ತು.

ನೀರಿನಲ್ಲಿ ಮೊದಲು ಬಾಯಿ ಮುಕ್ಕಳಿಸಿ, ಅನಂತರ ಬಟ್ಟೆಬಿಚ್ಚಿ ಸ್ನಾನಕ್ಕೆ ಇಳಿಯುತ್ತಿದ್ದೆ. ಮನಸ್ಸಿಗೆ ಬಂದ ಹಾಗೆಲ್ಲ ನೀರೆರಚಿಕೊಂಡು ಬರಿದೆ ಮೈಯನ್ನು ತಿಕ್ಕುತ್ತಿದ್ದೆ! ಸೋಪುಗೀಪು, ಸೀಗೆ ಪುಡಿಯೆಲ್ಲ ಮನೆಯಲ್ಲೇ ಬೆಚ್ಚಗೆ ಮಲಗಿರುತ್ತಿದ್ದುವು ರಾಣಿಯಂತೆ! ನೀರಿನಿಂದ ಮೇಲೆಬಂದು ಟವಲಿನಿಂದ ಮೈಯನ್ನು ಚೆನ್ನಾಗಿ ಒರಸಿ, ಉಟ್ಟಬಟ್ಟೆಯನ್ನೇ ತಿರುಗಿ ತೊಡುತ್ತಿದ್ದೆ! ಒರಸು ಬಟ್ಟೆಯನ್ನೇ ತಿರುಗಿ ತೊಡುತ್ತಿದ್ದೆ! ಒರಸು ಬಟ್ಟೆಯನ್ನು ನೀರಿನಲ್ಲಿ ಜಾಲಾಡಿಸಿ, ಹಿಂಡಿ, ಒಂದು ಬಂಡೆಯ ಮೇಲಿಡುತ್ತಿದ್ದೆ.

ಈ ಉಗ್ರಹ ಸ್ನಾನಾನಂತರ ನನ್ನ ಮನಸ್ಸು ಚಿಗರಿಮರಿಯಂತೆ ಕುಣಿದಾಡುತ್ತಿತ್ತು! ಮೈಯ ರೋಮಗಳಲ್ಲಿ ಚಳಿಯಿಂದ ನಮಿರೇಳುತ್ತಿದ್ದುವು! ಈ ಮನದ ಕುಣಿದಾಟ, ರೋಮಗಳ ನಮಿರಾಟದಿಂದ ಹುರುಪುಗೊಂಡ ನನ್ನ ದೇಹವು ಸರಸರನೆ ಬೆಟ್ಟವನ್ನಡರುತ್ತಿತ್ತು!

ಗುಡ್ಡವೊಂದರ ತುಟ್ಟತುದಿಗೆ ಹೋಗಿ, ಎತ್ತರವಾದ ಬಂಡೆಯೊಂದರ ಮೇಲೆ ಕುಳಿತು, ಮೂಡುದಿಕ್ಕಿನಲ್ಲಿ ಗಳಿಗೆಗಳಿಗೆಗೂ ಬದಲಾಗುತ್ತಿದ್ದ ಪ್ರಭಾತಕಾಲೀನ ಸೌಂದರ್ಯವನ್ನು ಈಕ್ಷಿಸುತ್ತಿದ್ದೆ. ಬೆಳ್ಮುಗಿಲನ್ನು ಭೇದಿಸಿಕೊಂಡು ಕೆಂಬಟ್ಟೇ ಮಡಿಹಾಸಿದ ಆಕಾಶಮಾರ್ಗವಾಗಿ ಬಾಲರವಿಯು ಕುಣಿಕುಣಿಯುತ್ತಾ ಮೇಲೇರಿ ಬರುವಾಗ ಪ್ರಕೃತಿಯ ಮೇಲೇರ್ಪಡುತ್ತಿದ್ದ ಸೊಬಗನ್ನು ಹೀರುತ್ತಿದ್ದೆ......ಗುಡ ಗಳ ಬದಿಯಲ್ಲಿ ಹೂಬಿಟ್ಟು, ತಳಿರೊಡೆದು ನಾನಾ ಮರಗಿಡಗಳ ಮೇಲೆ ಎಳಕಿರಣಗಳು ಪಸರಿಸುವಾಗ ಅವು ಸ್ವರ್ಣವೃಕ್ಷಗಳಂತೆ ಕಾಣುತ್ತಿದ್ದುವು. ಆ ಮರಗಳ ರೆಂಬೆಗಳ ಮೇಲೆಲ್ಲಾ ಕುಳಿತು ಚಿಲಿಪಿಲಿಗುಟ್ಟುತ್ತ, ಕೊಕ್ಕುಗಳಿಂದ ಗರಿಗಳನ್ನು ಕುಕ್ಕುವ ಹಕ್ಕಿ

ಗಳು ದಿನೇಶನಿಗೆ ಸಾಮಮಂತ್ರವನ್ನು ಜಪಿಸುತ್ತ ಪದ್ಮದಳಗಳನ್ನೆರಚುವ ಭಕ್ತರಂತೆ ತೋರುತ್ತಿದ್ದುವು. ಎಳಗಾಳಿಗೆ ಮೆಲ್ಲಮೆಲ್ಲನೆ ಅಲುಗಾಡುವ ವೃಕ್ಷಶಾಖೆಗಳು ದ್ಯುಮಣಿಗೆ ಚಾಮರಬೀಸುವ ಸೇವಕರಂತೆ ಭಾಸವಾಗುತ್ತಿದ್ದುವು. ಗುಡ್ಡದ ಮೇಲಿನಿಂದ ತೀವ್ರವಾಗಿ ಕೆಳಕ್ಕೆ ಹರಿಯುವ ಕಿರುಝರಿಯೊಂದರ ಜುಳುಜುಳು ನಾದವು ದಿನಪನ ಗುಣಗಳನ್ನು ಕೊಂಡಾಡುವ ಭಾಟರ ಭ್ರಮೆಯನ್ನುಂಟುಮಾಡುತ್ತಿತ್ತು.

—ಇಡಿಯ ಪ್ರಕೃತಿಯೇ ಬಾಲಭಾನುವಿನ ಸ್ವಾಗತ ಸಮಾರಂಭದಲ್ಲಿ ಲೀನವಾಗಿರುವಂತೆ ಸರ್ವತ್ರ ಕಂಡುಬರುತ್ತಿತ್ತು. ಅದನ್ನು ನೋಡಿ ನೋಡಿ ನಾನು ಮುಗ್ಧನಾಗುತ್ತಿದ್ದೆ. ಭಕ್ತಿಭರದಿಂದ ನನ್ನ ಕರಗಳು ತಾವಾಗಿಯೇ ಮುಗಿಯುತ್ತಿದ್ದುವು ಆವಿವಸ್ವಂತನಿಗೆ. ನನ್ನ ಮನವು ಸೌಂದರ್ಯರಸ ಪ್ರವಾಹದಲ್ಲಿ ತೇಲಿಹೋಗಿ ಸೂರ್ಯಪರಿಧಿಯ ಸುತ್ತಲೂ ಪ್ರದಕ್ಷಿಣೆ ಹಾಕುತ್ತಿತ್ತು. ಮಾತೆಯ ಮಡಿಲಲ್ಲಿ ಸುಖನಿದ್ದೆಗೈಯುವ ಹಸುಗೂಸಿನಂತೆ ನನ್ನ ದೇಹವು ನಿಶ್ಚೇಷ್ಟಿತವಾಗಿ ಮಂಡಿಸಿರುತ್ತಿತ್ತು, ಅಚಲಾಶ್ಮದ ಮೇಲೆ.

ಬಹಳ ಹೊತ್ತಿನವರೆಗೆ ಆಶಾಂತಿಪ್ರಸಾರಿತ, ಮನೋಹ್ಲಾದಕರ ಸುಂದರ ದೃಶ್ಯಾವಲೋಕನದಲ್ಲಿ ಮೈಮರೆತಿದ್ದು, ಆ ಮೇಲೆ ಕ್ಷಣಕ್ಷಣಕ್ಕೂ ಕಾವೇರುವ ವಾತಾವರಣದ ಬಿಸಿಸ್ಪರ್ಶದಿಂದೆಚ್ಚೆತ್ತು ಮನೆಗೆ ಹಿಂದಿರುಗುತ್ತಿದ್ದ. ಹಿಂದಿರುಗುವಾಗ ತೊರೆಯ ತಡಿಯಲ್ಲಿ, ಬಂಡೆಯ ಮೇಲಿರುತ್ತಿದ್ದ ಟವಲನ್ನು ಎತ್ತಿಕೊಳ್ಳುತ್ತಿದ್ದೆ.

"ಇಷ್ಟೊತ್ತು ಎಲ್ಲಿಗೆ ಹೋಗಿದ್ದೀರಿ?" ಅಂತ ರಾಣಿ ಕೇಳಿದರೆ, "ಸ್ನಾನಕ್ಕೆ" ಎಂದು ಹೇಳಿಬಿಡುತ್ತಿದ್ದೆ. ಆಯಿತು! ಅಲ್ಲಿಂದಾಚೆ ಆಕೆಯೂ ನಾನೂ ಸುಮ್ಮನಾಗುತ್ತಿದ್ದ.

ಉಪಹಾರದನಂತರ ಶಾಲೆಗೆ ಹೋಗುತ್ತಿದ್ದೆ. ಅಲ್ಲಿಯಾದರೊ ಸಂಜೆಯ ತನಕ ಮಕ್ಕಳೊಡನೆ ಹರ್ಷದಿಂದ ಕಲೆತು ಪಾಠಹೇಳುತ್ತಿದ್ದೆ. ಪದ್ಯ ಹೇಳುವಾಗ ಎಲ್ಲಿಲ್ಲದ ರಾಗ ಬೀರುತ್ತಿತ್ತು ನನಗಾ ಊರಿನಲ್ಲಿ! ಕೆಲವೊಮ್ಮೆ ಮಕ್ಕಳು ನನ್ನನ್ನು ಹರಿಕಥೆಯ ದಾಸನೆಂದೇ ಭ್ರಮಿಸಿ ತಮ್ಮ ಹೊಣೆಗಾರಿಕೆಯನ್ನು ಮರೆತು ವರ್ತಿಸುತ್ತಿದ್ದುದೂ ಉಂಟು. ಅದರ ಪ್ರತಿಫಲವನ್ನು ಮರುದಿನ ನನ್ನ ಚಿತ್ತವು ಕಾಣಿಸುತ್ತಿತ್ತವರಿಗೆ!

ಇನ್ನು ನನ್ನ ಸಂಜೆಯ ತಿರುಗಾಟ! ಇದಕ್ಕೆ ಹೆ|| ಮಾ|| ರೂ ಸೇರಿಕೊಳ್ಳುತ್ತಿದ್ದರು. ತಿರುಗಾಟದ ಸ್ಥಳವೆಂದರೆ ಅದೇ ಆ ಪರ್ವತಾವಳಿಯ

ಪ್ರದೇಶ! ಬೆಳಿಗ್ಗೆ ಮೂಡುವ ಸೂರ್ಯನನ್ನು ನೋಡಿದರೆ ಸಂಜೆಗೆ ಕಂತುವ ಸೂರ್ಯನನ್ನು ದರ್ಶಿಸುವುದು!.........

ಸೂರ್ಯಾಸ್ತಮಯದ ವೇಳೆ ತುಸು ತೇವಭರಿತ ಮುಗಿಲುಗಳು ಬಾನಲ್ಲಿ ಹರಡಿದ್ದರೆ ಅವು ತರತರದ ಬಣ್ಣಗಳಿಂದ ಕಂಗೊಳಿಸುತ್ತವೆ. ಬೆಟ್ಟಗಳ ಮರೆಯಲ್ಲಿ ಸೂರ್ಯನು ಮುಳುಗುತ್ತಿರುವಾಗ ಹತ್ತಿಯ ಹೂಗಳಂತೆ ಮುಗಿಲುಗಳ ರಾಶಿಯು ಅವನ ಸುತ್ತಲೂ ಆವರಿಸಿ ಹೊಂಬಣ್ಣದಿಂದ ಮಿರುಗುತ್ತವೆ. ಕೆಲವೊಮ್ಮೆ ಅವುಗಳ ತೆಳುಪದರು ಹೊಗೆಯ ಮಾಲೆಯಂತೆ ಬೆಟ್ಟಗಳ ಶಿಖರಗಳನ್ನು ಸುರುಳಿ ಸುತ್ತುತ್ತ ಕ್ಷಿತಿಜದಲ್ಲಿ ಲೀನವಾಗುತ್ತವೆ. ನೇಸರು ಸಂಪೂರ್ಣ ಬಿದ್ದು, ಶುಭ್ರ ಸ್ವರ್ಣಛಾಯೆಯು ದಿಗಂತದಲ್ಲಿ ವ್ಯಾಪಿಸಿ, ಅದರ ಕಾಂತಿಗೆ ಪ್ರಕೃತಿ ಕತ್ತಲುಗಟ್ಟಿ, ನೀಲಾಕಾಶದಲ್ಲಿ ಅಲ್ಲೊಂದು ಇಲ್ಲೊಂದು ನಕ್ಷತ್ರ ಗೋಚರಿಸಿ ಹೊಳೆದಾಗ ಚಂದ್ರಾಗಮನಕ್ಕೆ ನಿಶಾದೇವಿಯು ರಂಗಮಂಟಪವನ್ನು ಕಟ್ಟುತ್ತಿರುವಳೋ ಎಂಬಂತೆ ಭಾಸವಾಗುವುದು. ಇದನ್ನೆಲ್ಲಾ ನೋಡುವುದರಲ್ಲಿ ಮನಸ್ಸಿಗೊಂದು ಅತೀವ ಆನಂದ; ಸಮಾಧಾನ.

ನಾನಾರೀತಿಯಲ್ಲಿ ಸಂಜೆಯ ಚೆಲ್ವಿಕೆಗೆ ಬೆರಗಾದರೆ ಗುಲಾಬಿ ಬಣ್ಣಾವರಿಸಿದ ಆಗಸದಲ್ಲಿ ಬೇರೆ ಬೇರೆ ಗುಂಪುಗಳಾಗಿ ಕಾಂತಿಯಿಂದ ಹೊಳೆದು ತೇಲುವ ಮುಗಿಲುಗಳಿಗೆ ಪ್ರಾಣಿಗಳು, ಪಕ್ಷಿಗಳು, ಮನುಷ್ಯರು, ಯತಿಗಳು, ದೇವತೆಗಳು—ಮುಂತಾದ ಆಕಾರಗಳನ್ನು ಕಲ್ಪಿಸಿ, ಅವುಗಳ ಗತಿವಿಧಿಗಳನ್ನು ನೋಡಿ ನಲಿಯುವುದು ಆ ಹೆಡ್ಮಾಸ್ತರ ಕೆಲಸ!

—ಆ ಒಂದು ಹೊತ್ತಿನಲ್ಲಿ ನಾವಿಬ್ಬರೂ ಹಸುಗೂಸುಗಳಾಗುತ್ತಿದ್ದೆವು; ಸೇವಕ–ಸೇವ್ಯ, ಹಿರಿಯ ಕಿರಿಯ ಭಾವಗಳು ನಮ್ಮಲ್ಲಿರುತ್ತಿರಲಿಲ್ಲ.

ಈ ದೃಶ್ಯವನ್ನು ಸಾಕಷ್ಟು ನೋಡಿ ಮನಸ್ಸು ತಣಿಯಲು, ಸಂಧ್ಯಾಕಾಲೀನ ತಂಗಾಳಿಗೆ ಮೈ ಪುಲಕಿತಗೊಳ್ಳಲು ಹರಟೆಕೊಚ್ಚುತ್ತ ಸಿಧಾನವಾಗಿ ಗುಡ್ಡವನ್ನಿಳಿದು ತೊರೆಯ ತಟಕ್ಕೆ ಬರುತ್ತಿದ್ದೆವು. ಅಲ್ಲಿ ಸ್ವಲ್ಪ ಹೊತ್ತು ಪೊದೆಗಳ ಮರೆಯಲ್ಲಿ ಅಡಗಿ ಕುಳಿತಿದ್ದು, ನೀರು ಕುಡಿಯಲು ತೊರೆಗೆ ಬರುತ್ತಿದ್ದ ಜಿಂಕೆ, ನರಿ, ಕಡವೆ ಮುಂತಾದ ಪ್ರಾಣಿಗಳನ್ನು ನೋಡಿ, ಅದಕ್ಕಿಂತಲೂ ಹರ್ಷದಾಯಕವಾದ ಕಪಿಗಳ ಕಿರುಚಾಟವನ್ನು ಕೇಳಿ ಮನೆಯದಾರಿ ಹಿಡಿಯುತ್ತಿದ್ದೆವು.

ಇಷ್ಟೆಲ್ಲಾ ಕೆಲಸನುಗಿಸಿ ಮನೆಗೆ ಬರುವ ಹೊತ್ತಿಗೆ ಗೃಹದ್ವಾರವು ನನಗಾಗಿ ತೆರೆದಿರದೆ ಮುಚ್ಚಿರುತ್ತಿತ್ತು! ನನ್ನ ರಾಣಿಯ ಸ್ವಭಾವ ನಿಮಗೆ

ಗೊತ್ತೇ ಇದೆ! ಮೊದಲೇ ಆ ಊರು ನರಕವೆಂತಲೂ ನಾನು ಯಮ ನೆಂತಲೂ ಹೇಳಿದ್ದಳಾಕೆ. ಅಲ್ಲದೆ, ಹಳ್ಳಿಗಳಲ್ಲಿ ಭೂತಪಿಶಾಚಗಳ ಉಪದ್ರ ಹೆಚ್ಚೆಂದು ಹೇಳಿಕೆ-ಕೇಳಿಕೆಗಳಿಂದ ಗಟ್ಟಿಮಾಡಿಕೊಂಡಿದ್ದಳು. ಅದರ ಮೇಲೆ ಅಲ್ಲಿ ಹತ್ತಿರ ಹತ್ತಿರ ಮತ್ಯಾರ ಮನೆಗಳೂ ಇದ್ದಿರಲಿಲ್ಲ.

ಹೀಗಿರುವಾಗಿ, ಅವಳ ಭೀರುತನವನ್ನು ತಿಳಿದೂ ಕೂಡ ನಾನು ಭ್ರಾಂತನ ಹಾಗೆ ವರ್ತಿಸುತ್ತಿದ್ದುದು ನನ್ನದೇ ತಪ್ಪೆಂದು ಈಗ ಹೊಳೆಯುತ್ತದೆ. ಆದರೆ ಆಗ, ನಾನು ಮಾಡಿದ್ದೇ ಸರಿಯೆಂದೆನಿಸುತ್ತಿತ್ತು. ಆದ್ದರಿಂದಲೇ ಆಗ ಮಾಡ ಬೇಕಾಗಿದ್ದ ಉಪಶಮನವನ್ನು ಈಗ ಹೇಳಿ ಪ್ರಯೋಜನವಿಲ್ಲೆಂದೂ ನನಗೆ ಗೊತ್ತು. ಅಂತಲೇ, ಅದನ್ನಿಲ್ಲಿಗೇ ನಿಲ್ಲಿಸಿ ಮುಂದೆ ಹೊರಡುವೆ.

ಸರಿ! ನಾನು ರಾತ್ರಿ ಬರುವ ವೇಳೆಗೆ ಅವಳು ಬಾಗಿಲು ಮುಚ್ಚಿ ಬಿಟ್ಟಿರುತ್ತಿದ್ದಳು. ಬರೀ ಕದವನ್ನಿಕ್ಕಿ ಬಾಕಿವಹಾಡುತ್ತಿರಲಿಲ್ಲ; ಅದರ ಮೇಲೆ ಅಗಳಿಕೂಡ ಜಡಿದುಬಿಡುತ್ತಿದ್ದಳು. ಆ ಮಹಾದ್ವಾರದ ಪಾಡೇನೋ ಹೀಗಾಯಿತು; ಕಿಟಿಕಿಗಳೋ? ಕಿಟಿಕಿಗಳನ್ನು ಕೂಡ ಒಂದೂಬಿಡದೆ (ಇಡಿಯ ಮನೆಗಾಗಿ ಇದ್ದುದೇ ಎರಡು,) ಮುಚ್ಚಿ, ಅವುಗಳಿಗೂ ಬಲವಾದ ಅಗಳಿಗಳೇ! ಅರ್ಧರಾತ್ರಿಯಲ್ಲಿ ಹೊರಗಡೆ ನಿಂತ ನನ್ನ ಪಾಡೇನಾಗಬೇಕೋ?

ಮಲಗುವ ಕೋಣೆಯ ಕಿಟಿಕಿ ಬಾಗಿಲುಗಳನ್ನು ಹೇಗೆ ಇಕ್ಕಿದರೂ ಅವುಗಳ ಅಂಚುಗಳು ಒಂದಕ್ಕೊಂದು ಸೇರುವೆಡೆಯಲ್ಲಿ ಒಂದಂಗುಲದಷ್ಟಗ ಲಕ್ಕೆ ಕಂಡಿಯಿರುತ್ತಿತ್ತು. ನಾನು ಆಕೆಯನ್ನು ಕೂಗಿಕರೆಯುವುದಕ್ಕೆ ಮೊದಲು ಆ ಕಂಡಿಯಿಂದ ಇಣಿಕಿ ಒಳಕ್ಕೆ ನೋಡುತ್ತಿದ್ದೆ.

ಹಾಗೆ ನೋಡುವಾಗ ಕಾಣುತ್ತಿದ್ದ ದೃಶ್ಯ.........!

ಕೋಣೆಯಲ್ಲಿ ಒಂದಲ್ಲ, ಎರಡೆರಡು ದೀಪಗಳು ಉರಿಯುತ್ತಿದ್ದುವು! ಆಕೆಯೋ...? ತಲೆಯ ಒಂದೆಳೆ ಕೂದಲೂ ಹೊರಗಿರದಂತೆ ತಲೆತುಂಬಾ ಮುಸುಕು ಹೊದ್ದುಕೊಂಡು ಮಂಚದ ಒಂದು ಮೂಲೆಯಲ್ಲಿ ಗಟ್ಟಿಯಾಗಿ ಮಲಗಿರುತ್ತಿದ್ದಳು! ಹಾಗೆಂದು ನಿದ್ದೆಹೋಗಿರುತ್ತಾಳೆಂದು ಭಾವಿಸುತ್ತೀರಾ? ಹೊದಿಕೆಯೊಳಗಡೆ ತುಸುವಾದರೂ ಗಾಳಿಯಿಲ್ಲದಿರುವುದು ಒಂದೆಡೆ, ಹೆದ ರಿಕೆ ಇನ್ನೊಂದೆಡೆ! ಹೇಗೆ ನಿಮೀಲಿತವಾಗಲು ಸಾಧ್ಯವಿದೆ, ಹೇಳಿ, ಆಕೆಯ ಕಣ್ಣುಗಳು! ಬಸಬಸನೆ ಬಿಡುತ್ತಿದ್ದ ನಿಶ್ವಾಸದ ಒತ್ತಡಕ್ಕೆ ಮೂಗಿನ ಸನಿಹ ದಲ್ಲಿ ಹೊದಿಕೆ ಮೇಲಕ್ಕೂ ಕೆಳಕ್ಕೂ ಚಲಿಸುತ್ತಿರುವುದು ಅಷ್ಟು ದೂರಕ್ಕೇ ನನಗೆ ಕಾಣಿಸುತ್ತಿತ್ತು!

ಅಂಥಾ ದೃಶ್ಯವನ್ನು ನೋಡಿ ಆದಾವನು ತಾನೇ ನಗದಿರಲಾರನು ? ಆದರೆ— ನನಗೆ ಆ ನಗುವ ಭಾಗ್ಯವೂ ಇರಲಿಲ್ಲ. ಯಾಕೆಂದರೆ, ಯಾವೊಂದೂ ಭಯಾನಕ ಘಟನೆಯನ್ನು ನೋಡದೆಯೇ ಅಷ್ಟೊಂದು ಹೆದರಿಕೆಯಿಂದ ಬಿದ್ದಿರುವಾಕೆ—ಆಕಸ್ಮಿಕ ವಿಕಟ ನಗೆಯನ್ನು ಕೇಳಿ, ಜೀವದಿಂದ ಉಳಿದಾಳೆ? ಇಲ್ಲ, ಉಳಿಯುವ ಸಂಭವವಿಲ್ಲ. ನಾನು ನಗಲೂ ಬೇಕು— ಅದೇನು—ಎಂಬ ಉಭಯಸಂಕಟದಲ್ಲಿ ಬಿದ್ದು ಕಡಲ ತೆರೆಗಳಂತೆ ಒಂದರ ಹಿಂದೊಂದಾಗಿ ಒತ್ತಿಬರುತ್ತಿದ್ದ ನಗೆಯಲೆಗಳನ್ನು ತಡೆದು ಹಿಡಿಯಲು ಪಡುತ್ತಿದ್ದ ಹೋರಾಟವನ್ನು ಭುಕ್ತಭೋಗಿಯೇ ಅರಿದಿರಬಲ್ಲ.

ಮೊದಲು ಮೆಲ್ಲಗೆ, ಆ ಮೇಲೆ ಕೊಂಚ, ಜೋರಾಗಿ, ಕೊನೆಗೆ ಜೋರು ಜೋರಾಗೇ ಕರೆದು ಆಕೆಯನ್ನು ಎಬ್ಬಿಸಿ, ಬಾಗಿಲು ತೆಗೆಸಬೇಕಾದರೆ ನನ್ನ ದಿನದ ಜೀವನದಲ್ಲಿ ಎರಡನೆ ಜೀವಬಂದಂತೇ ಸರಿ.

ಹೇಗೂ ಕೆಲಹೊತ್ತು ಅವಳ ನಾಮಜಪಮಾಡುತ್ತ ಕಂಠಶೋಷಣೆ ಮಾಡಿದನಂತರ ಅವಳು ಏಳುವಳು. ಎದ್ದವಳೇ ಬಡಬಡಿಸಿಕೊಂಡು ಬಂದು ಬಾಗಿಲು ತೆರೆವಳು—"ಸ್ವಲ್ಪವೂ ಹೃದಯವಿಲ್ಲದವರು ! ಹಾಳೂರಿಗೆ ಎಳೆದು ತಂದು ಹಾಕಿದ್ದೂ ಸಾಲದೆ ದಿನವೆಲ್ಲಾ ಒಬ್ಬಳನ್ನೇ ಬಿಟ್ಟುಬಿಟ್ಟು ಎಲ್ಲೆಲ್ಲಿಗೊ ಅಲೆದಾಡಲು ಹೋಗುತ್ತಾರೆ ಮುದ್ದಾನೆಯಂತೆ. ಆ ಮೇಲೆ ಹೊತ್ತಲ್ಲದ ಹೊತ್ತಿಗೆ ಬಂದು ನಾಯಿ ಕಿರ್ಚುವ ಹಾಗೆ ಕಿರುಚುತ್ತಾರೆ ಯಾರ್ಯಾರ ನಿದ್ದೆ ಕೆಡಿಸೋದಕ್ಕೆ"—ಎಂದು ಮುಂತಾಗಿ ಮುಂತಾಗಿ.........!

ನಾನು ಒಳಗೆ ಸೇರಿಕೊಂಡೆನೆಂದರೆ, ಮತ್ತೆ ಆಕೆಯ ಬಾಯಿಗೆ ಬೀಗಮುದ್ರೆ! 'ಚರಕ್' ಅಂತ ಉಸಿರೆತ್ತಲಿಕ್ಕಿಲ್ಲ ನೋಡಿ, ಆ ಮೇಲಾಕೆ.

ಆಕೆಯಲ್ಲಿ ಮೊದಲಿದ್ದ ವಾಚಾಳಿತನ ಅದೆಲ್ಲೋ ಮಾಯವಾಗಿ ಹೋಗಿತ್ತು. ನಿತ್ಯ ನನ್ನ ದರ್ಶನವಾದರೂ ಇದೆಯಲ್ಲಾ ಎಂಬಾಸೆಯಿಂದ ನನ್ನೊಡನೆ ವಿವಶಳಾಗಿ ಬಂದಾಕೆಗೆ ನನ್ನ ದರ್ಶನಭಾಗ್ಯವೂ ಅಪರೂಪವಾಯಿತು! ನನ್ನ ಒಂದಿಗೆ ಅಲೆದಾಡುವಿಕೆಯಿಂದ ಅವಳಿಗೆ ಬೇಸರ ಬಂದಿತ್ತು. ತನ್ನ ಹುಟ್ಟೂರು, ತಾಯ್ತಂದೆಯರು, ಒಡಹುಟ್ಟಿದವರ ಯೋಚನೆಯೇ ಅಧಿಕವಾಗಿತ್ತು. ನನಗಾವುದೋ ನಿಸರ್ಗದ ಹುಚ್ಚುಮೋಹ ಹಿಡಿದಿತ್ತು!

೪

ನಾವು ಅಂಕನ ಹಳ್ಳಿಗೆ ಬಂದು ಹತ್ತು ತಿಂಗಳು ತುಂಬಿಹೋಗಿದ್ದುವು. ಈ ಅವಧಿಯಲ್ಲಿ ನಾನು ನಮ್ಮ ಹೆ॥ ಮಾ॥ ರೊಂದಿಗೆ ಸೇರಿಕೊಂಡು ಆ ಊರಲ್ಲಿದ್ದ ಬೆಟ್ಟ, ಗುಡ್ಡ, ಜಲಪಾತ, ಅಬ್ಬಿ, ತೊರೆ, ವಿಪಿನ—ಎಂದು ಒಂದನ್ನೂ ಬಿಡದೆ ಎಲ್ಲವನ್ನೂ ತುಳಿದುಹಾಕಿದೆ, ಕಣ್ದಣಿಯೆ ಮನದಣಿಯೆ ನೋಡಿ ನೋಡಿ ಹಿಗ್ಗಿದೆ. ಆ ಊರೊಳಗೇ ಅಲ್ಲದೆ ಹೊರಊರುಗಳಿಗೂ ಎಷ್ಟೋ ಸಲ ಹೋಗಿ ಸುತ್ತಾಡಿಕೊಂಡು ಬಂದೆ. ಆದರೂ ನನ್ನ ತೃಪ್ತಿ ಬೊಗಸೆ ತುಂಬಲಿಲ್ಲ. ಕಾಮುಕನಿಗೆ ವಿಷಯಲಾಲಸೆ ಹೆಚ್ಚುತ್ತ ಹೋಗುವಂತೆ ನನಗೆ ನಿಸರ್ಗಪ್ರೇಮ ಹೆಚ್ಚುತ್ತಾಹೋಯಿತು. ನಿಸರ್ಗದ ದೇಹದಲ್ಲಿ ನನ್ನ ಹೃದಯವು ಐಕ್ಯವಾಗಿ ಹೋಯಿತು. ದಿನವಿಡೀ ಶಾಲೆಯಲ್ಲಿ ಕೆಲಸ, ಮುಂಜಾನೆ-ಮುಸ್ಸಂಜೆಗೆ ಅಡವಿಯಲ್ಲಿ ಅಲೆತ, ರಾತ್ರಿ ಮನೆಗೆ ಬಂದರೆ 'ಮೂಕಿ' ಹೆಂಡತಿಯ ದರ್ಶನದಲ್ಲಿ ಹರ್ಷ-ನನಗೆ!

ಪ್ರಕೃತಿದೇವಿಯೊಂದಿಗೆ ಮೂಕ ಸಂಭಾಷಣೆನಡೆಸಿ ಮನೆಗೆ ಬಂದರೆ ಪತ್ನಿದೇವಿಯೊಂದಿಗೂ ಅದೇ ಸುಖವನ್ನು ಅನುಭವಿಸಬೇಕೆಂದು ನನಗೆ ದೇವರ ಅಭಿಶಾಪವಿದ್ದಿತ್ತೋ ಏನೋ—ರಾಣಿ ಆಂತರಿಕ ದುಗುಡದಿಂದಲೊ ಅಥವಾ ನನ್ನ ಮೇಲಣ ಸಿಟ್ಟಿನಿಂದಲೊ ಏನೊ ನನ್ನೊಡನೆ ಹೆಚ್ಚು ಮಾತಾಡುತ್ತಿರಲಿಲ್ಲ. ಅವಳು ಮಾತಾಡುತ್ತಿರಲಿಲ್ಲವಾದರೂ ಅವಳ ಸುಂದರ ಮುಖ, ಮುಗ್ಧನೋಟ, ಮೋಹಕ ಕೃತಿ—ಈ ಒಂದೊಂದೂ ನನ್ನೊಂದಿಗೆ ಮಾತನಾಡುತ್ತಿತ್ತು. ನಿಸರ್ಗದ ನೋಟ-ನನ್ನ ಸುಖಸಂತೋಷಕ್ಕೆ ದೇಹವಾದರೆ ರಾಣಿಯ ದರ್ಶನ ಅದಕ್ಕೆ ಪ್ರಾಣದಂತೆ ಇತ್ತು.

ನನ್ನ ರಾಣಿಯ ಈ ತೆರದ ನಿರುತ್ಸಾಹದಾಯಕ ವರ್ತನೆ ಆರು ತಿಂಗಳ ವರೆಗೆ ಇತ್ತು. ಆರು ತಿಂಗಳು ಕಳೆದು ಏಳನೆ ತಿಂಗಳು ಮೊದಲಾಗುತ್ತ ಆಕೆ ಮೆಲ್ಲಮೆಲ್ಲನೆ ಪೂರ್ವಸ್ಥಿತಿಗೆ ತಿರುಗಿಕೊಂಡಳು. ಪೂರ್ವಸ್ಥಿತಿಗೇ ಏಕೆ? ಅದಕ್ಕಿಂತಲೂ ಒಂದು ಹೆಚ್ಚಿನ ಸ್ಥಿತಿಗೆ ಎಂದಂದರೂ ಸರಿಯೆ.

—ದಿನಗಳೆದಂತೆ ಆಕೆ ಮಾತಿನಮಲ್ಲಿಯಾದಳು. ನಗೆಯಕಡಲಾದಳು. ಆಕೆ ಎಂದಿಗಿಂತ ಸುಂದರಳಾಗಿ ಕಾಣತೊಡಗಿದಳು ನನಗೆ. ಅವ

ಳೀಗ ನನ್ನ ಬಾಳಿನ ಹೊರಗೂ ಒಳಗೂ ತುಂಬಿಕೊಂಡಳು. ನನ್ನ ಸುಖ ಜೀವನದ ರಸಕಲಶವು ತುಂಬಿತುಳುಕಿತು.

ಒಮ್ಮೊಮ್ಮೆ, ಎಡೆಸಿಕ್ಕುವಾಗ, ಅವಳ ಈ ಆಕಸ್ಮಿಕ ಸ್ಥಿತಿಸಲ್ಲಟನೆಗೆ ಕಾರಣವೇನಿರಬಹುದೆಂದು ಯೋಚಿಸುತ್ತಿದ್ದೆ. ಆದರೆ, ಹಾಗೆ, ಎಡೆಯೇ ನನಗೆ ಸಿಕ್ಕುತ್ತಿರಲಿಲ್ಲವಾಗಿ, ಕೆಲಸದಮಧ್ಯೆ ಆ ಯೋಚನೆಬಂದಾಗ ಕೂಡಲೇ ಅದನ್ನು ಅತ್ತತಳ್ಳಿ ಬಗೆಯನ್ನು ನಿರಾತಂಕವಾಗಿ ಹರಿಯಬಿಡುತ್ತಿದ್ದೆ. ತಡೆಯು ದಾದಾಗ, ಬಹುಶಃ ಈ ಹೊಸ ಸ್ಥಳ ಆಕೆಗೆ ಹಿಡಿಸಿರಬಹುದೆಂದು ಸಮಾಧಾನ ಹೇಳಿಕೊಳ್ಳುತ್ತಿದ್ದೆ. ವಿಷಯದ ಹೊರ ವೀಕ್ಷಣದಿಂದಲೇ ತೃಪ್ತಿಗೊಂಡು ಒಳಕ್ಕಿಳಿಯಲು ಒಡಂಬಡದ ನನ್ನ ಸ್ವಭಾವವೇ ಇದಕ್ಕೆ ಕಾರಣವಾಗಿತ್ತು.

ಅಂದು ರಜಾದಿನ ದಿನವಾಗಿತ್ತು—ಬೇಸಿಗೆಯ ರಜೆ......

"ರಜೆ" ಎಂಬ ಶಬ್ದವನ್ನುಚ್ಚರಿಸುವಾಗ ಒಂದು ವಿಚಾರ ನೆನಪಿಗೆ ಬಂತು! ಅದನ್ನಿಲ್ಲಿ ಹೇಳದೇ ಹೋಗುವುದರಲ್ಲಿ ಔಚಿತ್ಯವಿಲ್ಲ. ಯಾಕೆಂದರೆ ಹಾಗೆಮಾಡಿದರೆ ಒಂದನ್ನು ನುಂಗಿ ಒಂದನ್ನು ಬಿಟ್ಟಂತಾಗುತ್ತದೆ!

ನಾನು ಅಂಕನಹಳ್ಳಿಯಲ್ಲಿ ಅನುಭವಿಸಿದಷ್ಟು ರಜಾದಿನಗಳನ್ನು ಎಲ್ಲಿಯೂ ಅನುಭವಿಸಲಿಲ್ಲ. ಅಲ್ಲಿ ಹತ್ತು ತಿಂಗಳು ಶಾಲಾದಿನಗಳಲ್ಲಿ ಮೂರು ತಿಂಗಳು ರಜಾದಿನಗಳು. ಆ ರಜಾದಿನಗಳನ್ನು ಮಕ್ಕಳು ತಮಗೆ ಬೇಕಾದಾಗ ಉಪಯೋಗಿಸಿಕೊಳ್ಳಬಹುದೆಂದು ವಿನಾಯಿತಿ ಇತ್ತು. ಇದಕ್ಕೆ ಕಾರಣ, ಅಲ್ಲಿ ಮಳೆಗಾಲದಲ್ಲಿ ಉಂಟಾಗುತ್ತಿದ್ದ ಆತಂಕಗಳು. ಅಲ್ಲಿಯ ನದಿಗಳು—ಅವಕ್ಕೆ 'ನದಿ' ಎಂಬ ಹೆಸರೇ ಅನ್ವಯಿಸದು, ಕೊಡಗಿನ ಭೂಪಠದಲ್ಲಿ ಅವಕ್ಕೆ ಜಾಗವಿಲ್ಲ, ಕೇವಲ ತೊರೆತೋಡುಗಳಷ್ಟೇ—ನೀರಿನಿಂದ ತುಂಬಿದರೆ ಹೊರ ಊರುಗಳಿಂದ ಬರುತ್ತಿದ್ದ ವಿದ್ಯಾರ್ಥಿಗಳಿಗೆ ತಡೆಯಾಗುತ್ತಿತ್ತು. ಬೇಸಿಗೆ ಕಾಲದಲ್ಲಿ ಅವನ್ನು ದಾಟಲು ಹಾಕಿರುತ್ತಿದ್ದ ಪಾಲಗಳು ಪ್ರವಾಹದಲ್ಲಿ ಕೊಚ್ಚಿಹೋಗುತ್ತಿದ್ದವು. ಕೆಲವೊಮ್ಮೆ ಪ್ರತಿ ತರಗತಿಯಲ್ಲಿ ಇಬ್ಬರು ಮೂವರು ಮಕ್ಕಳಿರುತ್ತಿದ್ದರು. ಆವಾಗಲೆಲ್ಲಾ ಶಾಲೆಗೆ ರಜೆಯೇ! ತೆರವಿಲ್ಲದ ಅಲೆದಾಟದಲ್ಲಿ ಬಿಟ್ಟೀಬಸವಯ್ಯನಾದ ನಾನು, ಆದರಿಂದ ಹೇರಳ ಉಪಯೋಗ ಪಡೆಯುತ್ತಿದ್ದೆ!

ಸರಿ, ಆ ದಿನ ರಜೆ, ನಾನು ಪರೀಕ್ಷಾ ಉತ್ತರಪತ್ರಗಳನ್ನು ತಿದ್ದುತ್ತ ಮನೆಯಲ್ಲಿ ಕುಳಿತಿದ್ದೆ.

ಎರಡುಮೂರು ಪತ್ರಗಳನ್ನು ತಿದ್ದಿಮುಗಿಸುವಷ್ಟರಲ್ಲಿ ರಾಣಿ ಮುಸಿ ಮುಸಿ ನಗುತ್ತಾ ಬಂದು ನನ್ನ ಬದಿಯಲ್ಲಿ ಕುಳಿತಳು.

"ಏನೇ ಅದು ? ಅತಿಯತಿಯಾಗಿ ಲವರಿಸುತ್ತಿದೆ ನಿನ್ನ ನಗೆ ? ಏನದು ಮಹಾ ಸಂತೋಷ ನಿಂದು ?"—ಪೆನ್ಸಿಲನ್ನು ಕೆಳಗಿಟ್ಟು, ಕಾಗದಗಳನ್ನು ಅತ್ತ ಸರಿಸಿ ಕೇಳಿದೆ ನಾನು. ನನ್ನ ಕೈ ಆಕೆಯ ಕುತ್ತಿಗೆಯನ್ನು ಸುತ್ತು ವರಿದು ಆಕೆಯನ್ನು ಮತ್ತಷ್ಟು ಹತ್ತಿರಕ್ಕೆ ಸೆಳೆಯಿತು.

"ಆ? ಸಂತೋಷವೆ? ಸಂತೋಷವಲ್ಲದೆ ಮತ್ತೇನು ?"—ಆಕೆ ತನ್ನನ್ನು ನನ್ನ ಬಾಹುಬಂಧನದಿಂದ ಬಿಡಿಸಿಕೊಂಡು ನಿಧಾನವಾಗಿ ತಲೆಯಲ್ಲಾಡಿ ಸುತ್ತಾ, ಅದಕ್ಕೆ ಸರಿಯಾಗಿ ಕೈಗಳನ್ನು ಮೇಲಕ್ಕೂ ಕೆಳಕ್ಕೂ ತಾಳ ಹಾಕಿ ಸುತ್ತಾ ಹೇಳಿದಳು—"ಈ ಅಂಕನ ಹಳ್ಳಿಯೇ ಅಮರಾವತಿ; ಈ ಮನೆಯೇ ಅಮರೇಂದ್ರನ ಅರಮನೆ! ಅದೇಕೋ ಇವತ್ತು ದೇವೇಂದ್ರ ನಂದನವನದ ತಿರುಗಾಟಕ್ಕೆ ಹೋಗದೆ ಅರಮನೆಯಲ್ಲೇ ಕುಳಿತುಬಿಟ್ಟನಲ್ಲಾ ! ಅಂತ !"

ಅವಳ ಮಾತಿನರ್ಥ ನನಗಾಯಿತು! 'ಪರವಾಯಿಲ್ಲ, ಕಲಿತಿದ್ದಾಳೆ, ಎಂದು ಮನದಲ್ಲೇ ಚಿಂತಿಸಿಕೊಂಡೆಂದೆ:

"ಹೌದಹುದೇ! ದೇವೇಂದ್ರ ಅಪೂರ್ವವಾಗಿ ಅರಮನೆಯಲ್ಲಿ ಸಿಕ್ಕಿ ಬಿದ್ದ, ತಾನು ಅವನ ಬದಿಯಲ್ಲೇ ಕುಳಿತಿರುವೆನೆಂದಲ್ಲವೇ ಸಂತೋಷ— ಹಾಗಾದರೆ ನಿನಗೆ ?"

"ಅಲ್ಲದೆ ಮತ್ತೇನು !" ಕಣ್ಣಂಚಿನಲ್ಲಿ ನೋಟವನ್ನು ಮಿಂಚಿಸಿ, ಕೊರ ಳನ್ನು ಕೊಂಕಿಸಿ ನುಡಿದಳಾಕೆ.

ಅವಳಾ ಅಂಗಭಂಗಿಯಿಂದ ಉನ್ಮತ್ತನಾದ ನಾನು! ಅವಳನ್ನು ಬೇ ಕೆಂದೇ ಕೆರಳಿಸಬೇಕೆಂದು, "ಅಂದ್ರೆ ನೋಡೆ! ಕೇವಲ ನನ್ನ ಹತ್ತಿರ ಕುಳಿತು ಕೊಂಡಿರುವುದರಿಂದಲೇ ನಿನಗೆ ಸಂತೋಷವಾದರೆ, ಹಾಗೇ ಸುಮ್ಮನೆ ಕುಳಿ ತಿರು. ನಾನು ನನ್ನ ಕೆಲಸ ಮಾಡುತ್ತೇನೆ, ನೀನು ಕುಳಿತಿರುತ್ತಾ ಏನೆಲ್ಲಾ ಮಾಡುವೆಯೋ ಅದೆಲ್ಲಾ ಮಾಡು; ಇಲ್ಲದಿದ್ದರೆ ನಡಿಯಾಚೆ!" ಎಂದು ಹೇಳಿ ಪೆನ್ಸಿಲನ್ನು ಎತ್ತಿಕೊಳ್ಳಲು ಕೈಚಾಚಿದೆ.

ಕೂಡಲೇ ಆಕೆ ಪೆನ್ಸಿಲನ್ನು ತಾನೆತ್ತಿಕೊಂಡು, "ಅಷ್ಟೇ ಅಲ್ಲರೀ........ ಮತ್ತೂ ಒಂದು ಕೆಲಸವಿದೆ ನಿಮ್ಮಲ್ಲಿ ನನಗೇ......" ಎಂದಳು.

"ಅದೇನೆ ಮತ್ತೊಂದು ನಿಂದು? ಬೇಗನೆ ಹೇಳಿ, ತೀರಿಸಿಕೊಂಡು ಹೊರಟು ಹೋಗುತ್ತಿಯೋ ಇಲ್ಲೋ?—ಕೋಪವನ್ನು ನಟಿಸಿ ಒದರಿದೆ ನಾನು.

"ನಾನು ಹೋಗೋದಕ್ಕೇನು ಅಡ್ಡಿಯಿಲ್ಲರೀ! ಆದರೆ ನೋಡಿ!—ನನ್ನ—ಕೆಲಸವನ್ನು—ತೀರಿಸಿಕೊಡುವ ಧೈರ್ಯ— ನಿಮಗಿದೆಯೋ ಎಂದು—ಮೊದಲು ಹೇಳಿ?

"ನನಗೆ ಎಲ್ಲ ಧೈರ್ಯವೂ ಇದೆ! ಬೇಗ ಹೇಳಿ ಮುಗಿಸೇ ನಿನ್ನ....!"

"ಹಾಗಾದರೆ—ಇಲ್ಲಿ ಕೇಳಿ"—ಆಕೆ ನಿಧಾನವಾಗಿ ಮತ್ತು ಗಂಭೀರವಾಗಿ ಹೇಳಿದಳು—"ನಾವಿಲ್ಲಿಗೆ ಬಂದು ಇಷ್ಟು ಸಮಯವಾಯಿತು. ಆದರೂ ಒಮ್ಮೆಯೂ ನೀವು ನನ್ನನ್ನು ಮಡಿಕೇರಿಗೆ ಕಳಿಸಲಿಲ್ಲ. ನನಗೆ ಅಮ್ಮ-ಅಪ್ಪರನ್ನು ನೋಡಬೇಕೆಂದು ಆಸೆ. ಆದ್ದರಿಂದ ನೀವು ನನ್ನನ್ನು ಕಳಿಸಿ ಕೊಡಿ? ಹುಂ. ಬೇಗನೆ ಅಂದಿರಲ್ಲ, ಬೇಗನೆ!"

ನನ್ನ ದರ್ಪೋಕ್ತಿಯ ಉರುಳಲ್ಲಿ ನಾನೇ ಸಿಲುಕಿಕೊಂಡು ಭಾನಿಂದ ಭೂಮಿಗೆ, ಭೂಮಿಯಿಂದ ಅತಲಕ್ಕೆ, ಅಲ್ಲಿಂದ ಅಧಕ್ಕೆ—ಅಧಕ್ಕೆ ಪಾತಾಳಕ್ಕೆ ಉರುಳಿಬಿದ್ದ ಆಕೆಯ ಮಾತು ಕೇಳಿ. ನನ್ನ ನಟನೆಯ ಸಿಟ್ಟು ಓಟ ಹೂಡಿತು ಅದೆಲ್ಲಿಗೋ. ಸೌಮ್ಯನಾದೆ. ತಗ್ಗಿದನಿಯಿಂದ ಕೇಳಿದೆ:

"ಇದೇನು ಹೇಳುತ್ತಿರುವೆ, ರಾಣಿ?"

"ಅದೇ ಹೇಳ್ತಿದೇನೆ, ರಾಜಾ, ನನ್ನನ್ನೊಮ್ಮೆ ಮಡಿಕೇರಿಗೆ ಕಳಿಸಿಕೊಡೀ ಅಂತ...."

"ತಮಾಷೆಯಾಡ್ತೀಯಾ?"

"ತಮಾಷೆಯೇ? ಅಲ್ಲ! ನಾನೀಗ, ಇದು ನಿಜಕ್ಕೂ ಹೇಳುತ್ತಿರುವ ಮಾತು."

"ನೋಡು ಶುಕು! ನೀನೇ ಹೇಳಿದೆಯಲ್ಲವೇ ಈಗ—ನಾನಿವತ್ತು ನಂದನ ವನದ ತಿರುಗಾಟಕ್ಕೆ ಹೋಗದೆ ಮನೆಯಲ್ಲೇ ಕುಳಿತಿರುವೆನೆಂದು? ಅದೇಕೆಂದು ಬಲ್ಲೆಯಾ ನೀನು?—ನೀನು ತಿಳಿದುಕೊಂಡಿರುವಂತೆ ನಿಸರ್ಗವಾಗಲಿ, ಈ ಮನೆಯಾಗಲಿ, ನೀನಾಗಲಿ, ನಾನಾಗಲಿ, ಬೇರೆ ಬೇರೆಯಲ್ಲ. ಈ ಅಂಕನ ಹಳ್ಳಿ, ಅದರಲ್ಲಿರುವ ಈ ಮನೆ, ನೀನು, ನಾನು—ಎಲ್ಲವೂ ನಿಸ

A. B. Krishna Raja.

ರ್ಗದ ಅಂಗಗಳೇ. ಈಗ ನಾನು ಕುಳಿತು ನಿನ್ನೊಡನೆ ಮಾತಾಡುತ್ತಿರುವ ಈ ಸ್ಥಳವೂ ಕೂಡ ನಿಸರ್ಗದ್ದೇ ಒಂದು ಅಂಗ. ಈ ಸಮಯದಲ್ಲಿ ಪ್ರಾಯಶಃ ಅದರ ಬೇರೆ ಅಂಗಗಳಾದ ಬೆಟ್ಟ, ಗುಡ್ಡ, ನದಿ, ಕಾಡು ಮುಂತಾದುವುಗಳು ನನಗೆ ಕಾಣಿಸಲಿಕ್ಕಿಲ್ಲ. ಆದರೆ, ಅದರ ಇನ್ನೊಂದು ಅಂಗವಾದ ಜೀವಿಗಳಲ್ಲಿ ನನಗೆ ಅತಿಪ್ರಿಯವಾದ ಜೀವಿ, ನೀನು ನನ್ನ ಹತ್ತಿರ, ಬಹು ಹತ್ತಿರ, ನನ್ನ ಕಣ್ಣೆದುರಿನಲ್ಲಿರುತ್ತೀ. ಆದ್ದರಿಂದ ಇಂದು ನಾನು ಮನೆಯಲ್ಲೇ ಕುಳಿತಿದ್ದರೂ ನಿಸರ್ಗವೆಂಬ ನಂದನವನದ ತಿರುಗಾಟಕ್ಕೆ ಹೋದಂತೆಯೇ ಸರಿ."

"ಹೂಂ! ಮತ್ತೇss ?—ಆ ಮೇಲೇss" ಗೋಣನ್ನು ಉದ್ದಮಾಡಿ, ರಾಗವಾಗಿ ಕೇಳಿದಳಾಕೆ.

"ಒಂದು ವೇಳೆ ನೀನು ಹೋಗಿ ಬಿಟ್ಟರೆ, ನನಗೆ ಈ ನಂದನವನ ರುಚಿಸದು...."

"ಯಾಕsಕೊ ?" ಮತ್ತಷ್ಟು ರಾಗವಾಗಿ ಕೇಳಿದಳು.

"ರಾಣಿ! ನನ್ನ ಗೇಲಿ ಮಾಡಬೇಡ ನೀನು. ನೋಡು, ನಂದನವನಕ್ಕೆ ಭೂಷಣಪ್ರಾಯವಾದುದು ಪಾರಿಜಾತ ವೃಕ್ಷ. ಆ ವೃಕ್ಷವೊಂದಿಲ್ಲದ ವನ ಯಾವ ದೇವತೆಗೂ ಪ್ರಿಯವೆನಿಸದು. ನನ್ನ ನಿಸರ್ಗವೆಂಬ ನಂದನವನಕ್ಕೆ ನೀನು ಪಾರಿಜಾತ ಗಿಡದಂತಿರುವೆ. ಆ ಗಿಡದ ದರ್ಶನವಿಲ್ಲದೆ ನಾನಿರುವುದಕ್ಕೆ ಸಾಧ್ಯವಿದೆಯೇ ? ಹೇಳು ?"

"ಅಯ್ಯಬ್ಬಾ! ಏನು ಜಾಣರು—ಏನು ಜಾಣರು! ಸಾಕೋ ಸಾಕು!— ಬಿಡಬೇಡಿ ನಿಮ್ಮ ಹೊಗಳಿಕೆಯನ್ನು, ಪಾರಿಜಾತ ಗಿಡವಂತೆ, ಪಾರಿಜಾತ! ಹುಂ! ಅಷ್ಟೊಂದು ಪ್ರೀತಿಯಿದ್ದಿದ್ದರೆ, ಹಗಲೂ ಇರುಳು ಏಕಾಕಿಯಾಗಿ ಬಿಟ್ಟಿರುತ್ತಿದ್ದಿರೇ ನೀವು? ನಿಮ್ಮ ಹೊಗಳಿಕೆಯ ಬಲೆಗೆ ನಾನೇನು ಸಿಲುಕುವವಳಲ್ಲ."

"ರಾಣಿ ನನ್ನನ್ನು ಕ್ಷಮಿಸು! ಇನ್ನೆಂದಿಗೂ, ಎಲ್ಲಿಗೂ ನಿನ್ನೊಬ್ಬಳನ್ನೇ ಬಿಟ್ಟೋಗಲ್ಲ ನಾನು. ಶಾಲೆಗೆ ಹೋಗೋತನಕ, ಬಂದ ಮೇಲೆ ನಿನ್ನ ಹತ್ತಿರವೇ ಇರುತ್ತೇನೆ ಮುಂದಕ್ಕೆ. ನನ್ನ ಮಾತಿನಲ್ಲಿ ವಿಶ್ವಾಸವಿಡು."

"ಹಾಗೆ ವರ್ತಿಸಲು ನಿಮಗೆ ಸಾಧ್ಯವಿಲ್ಲ, ನಿಮ್ಮ ಮಾತಿನಲ್ಲಿ ವಿಶ್ವಾಸ ವಿಡುವುದು ನನಗೆ ಸಾಧ್ಯವಿಲ್ಲ."

"ಹಾಗಾದರೆ ನಾನು—ನಿನಗೆ ಬೇಡವಾದೆನೆ? ಶುಕು. ಬೇಡವಾದೆನೇ—ಹೇಳು!"

ಆಕೆ ತುಸು ಯೋಚಿಸಿ ಅಂದಳು:

"ನಿಮ್ಮ ಹೇಳಿಕೆಯ ಪ್ರಕಾರ ನಾನು ಪಾರಿಜಾತ ಗಿಡವಲ್ಲವೇ?"

"ಹೌದೇ ಹೌದು."

"ಅಂದರೆ, ಈಗ–ನೋಡಿ. ಈ ಗಿಡವು ಕುಸುಮಿಸುವ ಕಾಲವು ಬಂದಿದೆ....ಅದಕ್ಕೆ ಇನ್ನು ಸ್ವಲ್ಪ ಕಾಲದ ವರೆಗೆ ವಾತ್ಸಲ್ಯಜಲದ ಸಿಂಚನವಲ್ಲದೆ ಪ್ರೇಮಜಲದ ಸಿಂಚನ ಯೋಗ್ಯವಾದುದಲ್ಲ. ಏಕೆಂದರೆ ಪ್ರೇಮಿಗಳು ಹೂ ಬಿಟ್ಟಾಕ್ಷಣಕ್ಕೇ ಅದನ್ನು ಕುಯ್ದು, ಮುದ್ದಿಸಿ, ಬಾಡಿಸಿ ಧೂಳಲ್ಲಿ ಎಸೆದುಬಿಡುತ್ತಾರೆ. ಆದ್ದರಿಂದ ನನ್ನನ್ನೊಮ್ಮೆ ದಯಮಾಡಿ ಕಳಿಸಿಕೊಡಿ."

ಮುಳುಗುತ್ತಿರುವ ಕೊಡ ಮುಳುಗುತ್ತಲೇ ಹೋಗಬೇಕು. ತಳತಲಪಿದಾಗಲ್ಲವೇ ಅದಕ್ಕೆ ಹಿಂದುಮುಂದಿನ ಸ್ಥಿತಿಯರಿವಾಗುವುದು. ರಾಣಿಯ ಬಗೆಯನ್ನು ನೋಡಿ ಕಳವಳಗೊಂಡ ನಾನೂ ಕೂಡ ಔದಾಸೀನ್ಯದಲ್ಲಿ ಮುಳುಗುತ್ತಲಿದ್ದೆ. ನನ್ನರಿವೇ ನನಗಿರಲಿಲ್ಲ, ಕೇಳಿದೆ.

"ಇದೇನು ರಾಣಿ, ಒಗಟೆಯಂಥಾ ಮಾತಾಡುತ್ತಿರುವಿ ನೀನು? ನನಗೊಂದೂ ಅರ್ಥವೇ ಆಗುತ್ತಿಲ್ಲವಲ್ಲಾ?"

"ಉಪಾಧ್ಯಾಯರಾಗಿದ್ದೂ ಅರ್ಥವಾಗುತ್ತಿಲ್ಲವೇ ಸಾಮಾನ್ಯ ಸ್ತ್ರೀಯೊಬ್ಬಳ ಮಾತು? ಸರಿಹೋಯಿತು! ಸದ್ಯಕ್ಕೆ ಅರ್ಥವಾಗದಿರುವುದೇ ಒಳಿತು.

"ಅಂದರೆ?"

"ಅಂದರೆ, ನಿಮಗೆ ಈ ಊರಿಗೆ ಬಂದು ಚೆಲೋದಾದ ನಿಸರ್ಗ ಲಾಭವಾಯಿತು. ನನಗೋ ಒಂದು ಅಪೂರ್ವ ಲಾಭವೇ ಆಗಿದೆ. ಅದೆಂಥಾ ಲಾಭವೆಂದು ಮಾತ್ರ ಈಗ ಹೇಳಲಾರೆ. ಅದನ್ನು ಹಿಂದಿನಿಂದ ತಿಳಿಸಿದರೇನೆ ನನಗೂ ಸುಖ, ನಿಮಗೂ ಶಾಂತಿ! ಅದಂತಿರಲಿ, ನೀವು ನನ್ನನ್ನು ಕಳಿಸಿಬಿಟ್ಟುಬರುತ್ತೀರಾ? ಒಂದೇ ಒಂದು ವಾರಕ್ಕೆ ಹೆಚ್ಚಿಲ್ಲ."

"ಒಂದೇ ವಾರಕ್ಕೆ?"

"ಹೌದು. ಅದಕ್ಕಿಂತ ಹೆಚ್ಚಿಲ್ಲ."

"ಈಗ ನನಗೆ ಪುರುಸತ್ತಿಲ್ಲ. ನೀನೊಬ್ಬಳೇ ಹೋಗಬಲ್ಲೆಯಾ ?"

"ಒಬ್ಬಳೇ ಹೋಗೋದು ನನ್ನಿಂದಾಗದು. ಒಂದು ದಿನಕ್ಕೆ ಬಿಟ್ಟು ಬನ್ನಿ. ಅಷ್ಟಕ್ಕೆ ನಿಮ್ಮದಿಲ್ಲೇನು ಹಾರಿ ಹೋಗೋದಿಲ್ಲ."

"ಹಿಂದಕ್ಕೆ ಯಾರೊಡನೆ ಬರುವಿ? ಗಡಿ ಗಡಿ ಬರುವುದು ನನ್ನಿಂದಾಗದು."

"ಅದರ ಚಿಂತೆ ನಿಮಗೇಕೆ? ಯಾರನ್ನಾದರೂ—ತಂದೆಯವರನ್ನೋ ತಮ್ಮಂದಿರಲ್ಲೊಬ್ಬನನ್ನೋ ಕರೆದುಕೊಂಡುಬರುವೆ."

ಮೇಲಿನ ಘಟನೆಯ ನಂತರ ಹಾಗೂ ಹೀಗೂ ನಾಲ್ಕೈದು ದಿನ ಮುಂದೂಡಿದೆ. ಅದರ ಮೇಲೆ ಅವಳ ಹಟ ಮಿತಿಮೀರಿತು. ನಾನೇ ಹೋಗಿ ಬಿಟ್ಟುಬರುವುದು ಅಸಾಧ್ಯವಾಗಿ ತೋರಿತು. ಏಕೆಂದರೆ, ಅಪರೂಪಕ್ಕೆ ಹೋಗುವ ನನ್ನನ್ನು ಮಾವನ ಮನೆಯವರು ಒಂದೆರಡು ದಿನಗಳಲ್ಲಿ ಬಿಟ್ಟು ಬಿಡುವುದು ಅಸಂಭವವಾಗಿ ತೋರಿತು. ಹಾಗೆ ದೀರ್ಘ ಸಮಯ ಇದ್ದು ಬಿಡುವುದೆಂದರೆ ಇಲ್ಲಿ ಪರೀಕ್ಷಾ ಫಲಿತಾಂಶವನ್ನು ಹೊರಬೀಳಿಸುವ ಗಲಾಟೆ ಜೋರಾಗಿತ್ತು. ಹೀಗಾಗಿ ಏನು ಮಾಡುವುದೆಂದು ತೋರದೆ ಸಂದಿಗ್ಧತೆಯ ಜೋಕಾಲಿಯ ಮೇಲೆ ನೇತಾಡುತ್ತಿದ್ದೆ. ಆದರೆ ಅಷ್ಟರಲ್ಲಿ ಮಾವನವರೇ ಮಗಳು ಮತ್ತು ಅಳಿಯನನ್ನು ನೋಡಲು ನನ್ನ ಮನೆಗೆ ಬಂದರು. ಎರಡು ದಿನಗಳು ಕಳೆದ ಬಳಿಕ ತನ್ನ ತಾಯಿ ಮತ್ತು ಸೋದರ ಸೋದರಿಯರನ್ನು ನೋಡಲು ರಾಣಿ ಅವರೊಂದಿಗೆ ಮಡಿಕೇರಿಗೆ ಹೊರಟುಹೋದಳು. ಹೋಗುವಾಗ "ವಾರಕ್ಕೆ ಮಿಾರಿ ಯೋಚನೆ ಹರಿಬೇಡಿ, ಬಂದುಬಿಡುವೆ" ಎಂದಳಾಕೆ. ಅವಳ ಆ ಹೇಳಿಕೆಯದೊಂದೇ ಧೈರ್ಯ, ವಿಶ್ವಾಸ ನನಗೆ!

೫

ರಾಣಿ ನನ್ನಿಂದ ಆಗಲಿ ಹೋಗಿ ವಾರ ಕಳೆದರೂ ಬರಲಿಲ್ಲ. ಒಂದೊಂದಾಗಿ ವಾರಗಳು ಕಳೆಯುತ್ತ ತಿಂಗಳಿಗೆ ತಿರುಗಿತು. ಆದರೂ ಆಕೆಯಾಗಲಿ, ಆಕೆಯ ಪತ್ರವಾಗಲಿ ನನಗೆ ಬರಲಿಲ್ಲ.

ಆಕೆಯ ಅವಿಧೇಯತೆ ನೋಡಿ ನನ್ನಲ್ಲಿ ಕೋಪ ದುಃಖಗಳೆರಡೂ ಒಮ್ಮೆಲೇ ಉದಿಸಿದುವು.

ಅಬ್ಬಾ! ಸ್ತ್ರೀಯೇ! ನಿನ್ನದೆಂಥಾ ಕಪಟ! ಏನು ಮಾಯೆ! ಏನ
ಮಂತ್ರ!

ವಾರ ಕಳೆಯುತ್ತಲೇ ಬರುತ್ತೇನೆಂದು ಹೇಳಿ, ನಂಬಿಸಿ, ಬಾರದೇ
ವಂಚಿಸಿದೆಯಲ್ಲಾ ನೀನು! ನೀನೆಂಥಾ ಮಾಯಾಂಗನೆಯೋ! ಓ ಸ್ತ್ರೀ
ಹೃದಯವೇ ನೀನೆಂಥ ಮಾಯಾವಿ!

ಪುರುಷ ಎಂಥವನಾದರೂ ನಂಬಬಹುದು; ಆದರೆ ಸ್ತ್ರೀಯನ್ನು ನಂಬ
ಲಾಗದು! ಆಕೆಯನ್ನು ನಂಬಿ ಜೀವನ ನಡೆಸುವ ಪುರುಷನು ಪಾಮಾಜಿ
ಹಿಡಿದ ಬಂಡೆಯ ಮೇಲೆ ನಡೆಯುವಂತೆಯೆ ಸರಿ!

ಯೋಚಿಸುತ್ತಾ ಹೋದಂತೆ ನನ್ನ ಕೋಪ ಮಿತಿಮೀರಿತು. ಅಭಿ
ಮಾನ ಕೆರಳಿತು! ಪುರುಷದರ್ಪ ಕೆನೆದೆದ್ದು ನಿಂತಿತು. ನಾನೂ ಆಕೆಯನ್ನು
ಕರಕೊಂಡು ಬರಲು ಹೋಗಲಿಲ್ಲ. ಇಷ್ಟೇ ಅಲ್ಲ; ಅವಳಿಗೆ ಪತ್ರ ಕೂಡ
ಹಾಕುವುದಿಲ್ಲವೆಂದು ಶಪಥವನ್ನೇ ಹಾಕಿಕೊಂಡು ಬಿಟ್ಟೆ. ಇಷ್ಟರಲ್ಲಿ ರಜೆ
ತೀರಿ ಶಾಲೆಯೂ ಮೊದಲಾಯಿತು. ನಾನು ಬೇರಾವ ಯೋಚನೆಯೂ
ಇಲ್ಲದೆ ಶಾಲೆಗೆ ಹೋಗಿ ಬರತೊಡಗಿದೆ ಕಷ್ಟ ಒಂದೇ ಒಂದಾಗಿತ್ತು—
ಸ್ವತಃ ಮಾಡ್ಯುಣ್ಣುವುದು!

ಹೀಗೆ ಮತ್ತೊಂದು ತಿಂಗಳು ಕಳೆಯಿತು. ರಾಣಿಯ ಸಮಾಚಾರವೇ
ಇಲ್ಲ. ನನ್ನ ಎರಡು ತಿಂಗಳ ಘೋರ ಸ್ಥಿರತೆ ಸಡಿಲಾಗುತ್ತಾ ಬಂತು
ಬರಬರುತ್ತಾ ಉದ್ವಿಗ್ನತೆ ಸಂಪೂರ್ಣವಾಗಿ ನನ್ನನ್ನಾವರಿಸಿಬಿಟ್ಟಿತು. ನನ್ನ
ಅವಸ್ಥೆ ತೀರ ಹದಗೆಟ್ಟಿತು ಇದ್ಯಾಕೆಂದು ನೀವು ಪ್ರಶ್ನೆ ಹಾಕಬಹುದಲ್ಲವೆ?

ನೋಡಿ! ಮನುಷ್ಯನ ಜೀವನವೇ ವಿಚಿತ್ರವಾದುದು. ಎರಡು ಜೀವಿ
ಗಳು ಪರಸ್ಪರ ದುರ್ಗುಣಗಳಿಂದ ಪರಿಚಿತರಾದರೂ ಒಬ್ಬರಿಂದಿನ್ನೊಬ್ಬರು
ಅಗಲಿ ಚಿರಕಾಲ ಬದುಕುವಂತಿಲ್ಲ ಯಾವುದೋ ಒಂದು ಅಗಮ್ಯ ಬಂಧನ
ಕ್ಕೊಳಗಾಗಿ, ಕಾದುತ್ತಾ ಏದುತ್ತಾ ಅಶಾಂತಿಮಯ ಬಾಳು ಸಾಗಿಸುತ್ತಿದ್ದು
ಒಂದು ದಿನ ಇಹದಿಂದ ಮರೆಯಾಗುವುದೇ ಪ್ರಕೃತಿ ನಿಯಮ. ವಿಚಾರಿಸಿ
ನೋಡಿದರೆ, ಅಂಥಾ ಅಶಾಂತಿಮಯ ಜೀವನದಲ್ಲೇ ಮಧು ಮಧುರವಾದ
ಸವಿಯು ತುಂಬಿರುವುದು. ಸುಖ ದುಃಖಗಳಲ್ಲಿ ಏರುತಗ್ಗುಗಳಿಲ್ಲದ ಬಾಳ
ಯಾರಿಗೂ ಬಹುಕಾಲದ ವರೆಗೆ ರುಚಿಸಲಾರದು. ಅತಿಯಾದ ಸಂಕಷ್ಟ
ಗಳಿಂದ ಕೊರಗಿದ ನಂತರ ಬರುವ ಸುಖವನ್ನೇ ಮನುಷ್ಯನು ಅತಿಯಾದ

ಆಸಕ್ತಿಯಿಂದ ಅನುಭವಿಸಬಲ್ಲನು. ಹಾಗೆ ಸದಾ ಸುಖಿಯಾಗಿರುವವನು ಸಹ ಎಂದಾದರೂ ಬರುವ ಕಷ್ಟವನ್ನು ಧೈರ್ಯಗೆಡದೆ ಸ್ವಾಗತಿಸುತ್ತಾನೆ. ಏಕೆಂದರೆ ಆ ಸಂಧಿ ಕಳೆದ ನಂತರ ತಿರುಗಿ ಸುಖ ಬಂದೇ ಬರುವುದೆಂಬ ಆಸೆ–ಭರವಸೆ–ಅಂತರಾಳದ ಒಂದು ಕೊನೆಯಲ್ಲಿ ಅಡಗಿದ್ದೇ ಇರುತ್ತದೆ. ರಾತ್ರಿ ಕಳೆದ ಬಳಿಕ ಹಗಲು ಬಂದೇಬರಬೇಕಷ್ಟೆ?

ಸಾಮಾನ್ಯವಾಗಿ ಮಾನವ ಕುಲದ ಜೀವನದ ತತ್ವವೇ ಹೀಗಿರುವಾಗ ನಾನೊಂದು ಕೀಟ ಆ ತತ್ವದಿಂದ ಸರಿದು ನಿಲ್ಲಲಾಗುತ್ತದೆಯೇ? ಮಳೆಯ ಎಲ್ಲಾ ಬಿಂದುಗಳು ಭೂಮಿಗೆ ಬೀಳುವಾಗ ಒಂದು ಒಂದು ಮುಷ್ಕರ ಹೂಡಿದರೆ ಅದರ ಪ್ರಯತ್ನ ಎಲ್ಲಿಯ ತನಕ ಸಾಗೀತು! ನನ್ನ ಗತಿಯೂ ಇಷ್ಟಕ್ಕೇ ಬಂತೀಗ. ಅಂದರೆ— ರಾಣಿಯೊಂದಿಗೆ ದೀರ್ಘ ಸಹಜೀವನ ನಡೆಸಿದ ನಂತರ ನನ್ನ ಮನಸ್ಸು ಏಕಾಂಗಿತೆಯನ್ನು ಉತ್ಸಾಹದಿಂದ ಸ್ವೀಕರಿಸಿತು. ಆದರೆ ಎರಡೇ ಎರಡು ತಿಂಗಳಲ್ಲಿ ಆ ಉತ್ಸಾಹವು ತಗ್ಗಿ, ಮನಸ್ಸು ತಿರುಗಿ ಸಹಜೀವನವನ್ನು ಬಯಸಿತು.

ಮೊದಲು ಆಕೆಯ ಹೆಸರನ್ನೂ ಸಹ ಉಚ್ಚರಿಸುವುದಿಲ್ಲವೆಂದು ಶಪಥ ಹಾಕಿಕೊಂಡಿದ್ದವನು ನಿಮಿಷ–ನಿಮಿಷಕ್ಕೂ 'ರಾಣಿ' ಎನ್ನತೊಡಗಿದೆ; ಆಕೆಗೆ ಪ್ರಿಯವಾದ ವಸ್ತುವನ್ನು ಕಂಡಾಗಲೆಲ್ಲಾ 'ರಾಣೀ' ಎನ್ನತೊಡಗಿದೆ; 'ರಾಣೀ ರಾಣೀ' ಎಂದು ರಾಣಿಯದೇ ಜಪವಾಗಿ ಹೋಯಿತು ನನಗೆ. ಆಕೆಯನ್ನು ಎಂದು ಕಂಡೇನೆಂದು ಆತುರಪಡತೊಡಗಿದೆ. ಶಾಲೆ, ಮನೆ, ನಿಸರ್ಗ— ಕೊನೆಗೆ ಆ ಊರೇ ನೀರಸವಾಗಿ ಹೋಯಿತು; ನಾನು ಅವುಗಳ ಸಂಪರ್ಕದಿಂದ ಪೂರ್ಣ ಜಡನಾದೆ.

ರಾಣಿ ನನಗಾಗಿ ಏನೂ ಮಾಡುವುದು ಬೇಡ; ಆಕೆ ನನ್ನೊಂದಿಗೆ ಮಾತಾಡಬೇಕಿಲ್ಲ; ನನ್ನನ್ನು ನೋಡಬೇಕಿಲ್ಲ; ನನ್ನನ್ನು ಮುಟ್ಟಬೇಕಿಲ್ಲ; ನನಗೆ ಅಡುಗೆ ಮಾಡಿ ಬಡಿಸುವುದೂ ಬೇಕಿಲ್ಲ— ಜೀವಂತ ಶಿಲಾ ಪ್ರತಿಮೆಯಾಗಿ ನನ್ನೆದುರಿಗೆ ನಿಂತಿದ್ದರೆ ಅಷ್ಟೇ ಸಾಕು. ಆಕೆಯ ದರ್ಶನದಿಂದಲೇ ನಾನು ತೃಪ್ತ; ಆಕೆಯ ದರ್ಶನವೊಂದೇ ನನ್ನನ್ನು ನಡೆಸುವ ಪ್ರೇರಕಶಕ್ತಿ.

ಎಲ್ಲಕ್ಕೂ ಪ್ರಿಯವಾದ ನಿಸರ್ಗದ ದರ್ಶನವಿಲ್ಲದಿದ್ದರೂ ನಾನು ಜೀವಿಸಿಯೇನು; ರಾಣಿಯ ದರ್ಶನವಿಲ್ಲದ ಜೀವನವೇ ಶುದ್ಧಬರಡು— ಎನ್ನುವಂತಾಯಿತು ಕೊನೆಗೆ.

ಹೀಗೆ—ಹುಚ್ಚು ಮೋಹವು ನನ್ನನ್ನು ಕುಣಿಸುತ್ತಿದ್ದರೂ ಆತ್ಮಾಭಿಮಾನ ತನ್ನ ಮುಷ್ಟಿಯನ್ನು ಬಿಗಿಹಿಡಿದೇ ಇತ್ತು. ಅದೇ ನಾನಾಕೆಗೆ ಬರೆಯುವುದನ್ನೂ ಸ್ವತಃ ಆಕೆಯಲ್ಲಿಗೆ ಹೋಗುವುದನ್ನೂ ನಿಲ್ಲಿಸಿಬಿಟ್ಟಿತು. ಆದ್ದರಿಂದ ನಿರಾಶೆಯನ್ನು ಛಲದಿಂದ ಹತ್ತಿಕ್ಕಿ ದಿನ ದೂಡುತ್ತಿರಲಾಗಿ ಮೂರನೆಯ ತಿಂಗಳೂ ಕಳೆದು ಹೋಯಿತು—ನಾಲ್ಕನೆ ತಿಂಗಳು ಮೊದಲಾಯಿತು.

ನಾಲ್ಕನೆ ತಿಂಗಳ ಮೊದಲವಾರ ಕಳೆಯುತ್ತಲೇ ಆಕೆಯಿಂದ ಪತ್ರ ಬಂತು.

ಅದು ಕೈಗೆ ಬಂದಾಗ ಎತ್ತಿಕೊಂಡು ಹೋಗಿ ಅಗ್ನಿ ದೇವನಿಗೆ ಆಹುತಿ ಮಾಡಬೇಕೆನ್ನಿಸಿತು. ಆದರೂ ಅದರೊಳಗೆ ಏನಿದ್ದೀತೆಂದು ನೋಡುವ ಹಂಬಲ ಪಿಶಾಚ ರೂಪ ತಾಳಿ ನನ್ನನ್ನು ಕಾಡಿತು. ಆಯಿತು; ಒಮ್ಮೆ ಓದಿಯೇ ಬಿಡುವುದೆಂದು ನಿರ್ಧರಿಸಿದೆ. ಒಂದು ಸಾರೆ ನೋಡಿಕೊಂಡಾದ ಬಳಿಕ ಒಂದಲ್ಲ ಹಲವು ಸಲ ಹಲವು ಟಿನ್ ಕೆರಸಿನ್ ಹಾಕಿ ಸುಡಬಹುದೆಂದುಕೊಂಡೆ—ಅಷ್ಟು ಸಿಟ್ಟು ಬಂದಿತ್ತು, ಆ ಕಾಗದವನ್ನು ಹೊರಗಿನಿಂದ ನೋಡಿದ ಕ್ಷಣಕ್ಕೆ.

ಪತ್ರವನ್ನೊಡೆದು ಓದಿದೆ; ಓದಿ ವಿಪರೀತ ಅಚ್ಚರಿಗೊಂಡೆ.

ನಾನು ಹೀಗೆ ಹೇಳುವಾಗ ನಿಮಗೂ ಅಚ್ಚರಿಯಾದೀತಲ್ಲವೇ? ಆ ಪತ್ರದಲ್ಲಿ ಏನಿದ್ದೀತೆಂದು ತಿಳಿಯುವ ಕುತೂಹಲವಾದೀತಲ್ಲವೇ? ಇಗೊಳ್ಳಿ! ಅದನ್ನು ನಿಮ್ಮ ಮುಂದೆ ತೆರೆದಿಡುತ್ತೇನೆ; ನೀವೇ ನೋಡಿಕೊಳ್ಳುವಿರಂತೆ... ಇಲ್ಲ, ಪತ್ರವನ್ನು ನಿಮ್ಮ ಮುಂದೆ ಬಿಚ್ಚುವುದಿಲ್ಲ. ಹಾಗೆ ಬಿಚ್ಚುವುದರಲ್ಲಿ ಔಚಿತ್ಯವಿಲ್ಲ. ಯಾಕೆಂದರೆ ಪ್ರೇಮ ಪತ್ರವನ್ನು ಬಹಿರಂಗಪಡಿಸುವುದು ಸಭ್ಯತನದ ಲಕ್ಷಣವಲ್ಲ; ಕ್ಷಮಿಸಿ.

ಈಗ ನೀವು ತುಂಬಾ ನಿರಾಶೆಗೊಂಡಿದ್ದೀರಿ!-ಅದು ನನಗೆ ತಿಳಿಯಿತು. ಈ ವಿಷಯದಲ್ಲಿ ನಿಮ್ಮನ್ನು ಪೂರ್ಣವಾಗಿ ಸಂತೋಷಗೊಳಿಸಲು ನಾನು ಅಸಮರ್ಥ; ಆದರೂ ಆ ಪತ್ರದ ಬಗೆಗೆ ನಾನೆಷ್ಟು ವಿವರಣೆಯನ್ನೀಯಬೇಕೋ ಅಷ್ಟನ್ನು ರಾಣಿಯದೇ ಬರಹ ಮೂಲಕ ನಿಮ್ಮ ಮುಂದಿಟ್ಟು ನಿಮ್ಮನ್ನು ಸಮಾಧಾನಪಡಿಸಬಲ್ಲೆ—ನೋಡಿಕೊಳ್ಳಿ:—

"......ಸ್ವಾಮಿ! ಈ ಪಾರಿಜಾತ ಗಿಡ ಕುಸುಮಿಸುವ ಕಾಲ ಬಂದಿದೆ ಎಂದು ನಾನಿಲ್ಲಿಗೆ ಹೊರಡುವ ಮುನ್ನವೇ ನಿಮಗೆ ಹೇಳಿದ್ದೆನಷ್ಟೆ? ಆದರೆ

ನೀವು ನನ್ನಾವಾತನ್ನು ಅರ್ಥವಾಡಿಕೊಳ್ಳಲೇ ಇಲ್ಲ. ನಿಜಕ್ಕೂ, ಇಲ್ಲಿಗೆ ಬಂದು ನಿಮ್ಮ ನಂದನವನದ ನೆಚ್ಚಿನ ಗಿಡವು ಸೊಗಸಾದೊಂದು ಹೂವನು ಬಿಟ್ಟಿದೆ. ಹೂವು ತನ್ನ ಹುಟ್ಟುವಿಕೆಗೆ ಕಾರಣವಾದ ಮೂಲ ವಸ್ತುವಿನ್ನ ಪ್ರೀತಿಯನ್ನು ಹೊಂದಬೇಕಾದುದು ಆವಶ್ಯ. ನೀವದಕ್ಕಾಗಿ ತಪ್ಪದೆ ಬರುವಿರಾಗಿ ನಂಬಿದ್ದೇನೆ. ಅದಕ್ಕೆ ನಿಮ್ಮನ್ನು ಅರಿತುಕೊಳ್ಳುವ ಶಕ್ತಿಯಿಲ್ಲವಾದರೂ, ನೀವದನ್ನು ನೋಡಿ ಹರ್ಷಿತರಾಗುವಿರೆಂಬುದರಲ್ಲಿ ಸಂಶಯವಿಲ್ಲವಷ್ಟೆ? ನಿಮ್ಮ ಚೆಲುವಿನ ಊರು, ಚಿರದುಃಖಿನಿಯಾದ ನನಗೆ ಅಮೂಲ್ಯವಾದೊಂದು ಜೀವರತ್ನವನ್ನು ಕರುಣಿಸಿದೆ. ಉಪಕಾರ ಸ್ಮರಣೆಗಾಗಿ ಇಲ್ಲಿಂದಲೇ ನಾನಾ ಊರಿಗೆ ನನ್ನ ಕೃತಜ್ಞತೆಯನ್ನರ್ಪಿಸುತ್ತಿದ್ದೇನೆ! ಆದರೆ, ತಿರುಗಿ ಎಂದೆಂದಿಗೂ ಅಲ್ಲಿಗೆ ಕಾಲಿಡಲಾರೆ! ನೀವು ಬಂದರೂ ಸರಿಯೆ; ಬಾರದಿದ್ದರೂ ಸರಿಯೆ......"

ಓರ್ವ ಸ್ತ್ರೀಯ ಕೈಹಿಡಿದ ಗಂಡ; ಒಂಭತ್ತು ವರ್ಷಗಳ ಸುಮಧುರ ದಾಂಪತ್ಯ; ಸದಾ ಆಕೆಯನ್ನು ನೋಡುತ್ತಾ(!) ಇದ್ದವ— ಆಕೆಯ ಶರೀರದಲ್ಲಾದ ಬದಲಾವಣೆಯನ್ನು ಕಾಣದೇ ಹೋದೆನಲ್ಲಾ! ಹಾ! ನಾನೂ ಒಬ್ಬ ಗಂಡನೆ!......

ಓರ್ವ ಪುರುಷನ ಕೈಹಿಡಿದ ಸ್ತ್ರೀ; ಸದಾ ಅವನ ಜೀವಕ್ಕೆ ಅಂಟಿಕೊಂಡಿದ್ದವಳು; ಅವನನ್ನೇ ತನ್ನ ಜೀವನದ ಸರ್ವಾಧಾರವೆಂದು ನಂಬಿದ್ದವಳು— ತನ್ನ ಗುಟ್ಟನ್ನು— ಅಂಥಿಂಥಾ ಗುಟ್ಟಲ್ಲ, ಎಂಥವರೂ ಕೇಳಿ ಸಂತಸಪಡಬೇಕಾದುದನ್ನು— ತನ್ನ ಸ್ವಂತ ಪತಿಗೆ ತಿಳಿಸದೇ ಹೋದಳಲ್ಲಾ! ಹಾ! ರಾಣಿಯೂ ಒಬ್ಬಳು ಹೆಂಡತಿಯೇ!— ಅಂದುಕೊಂಡೆ ನಾನು.

* * * *

ನಿಸರ್ಗವೆಂಬ ನನ್ನ ನಂದನವನದ ಪಾರಿಜಾತ ವೃಕ್ಷವಾದ ರಾಣಿಯು ಬಿಟ್ಟ ಆ "ಹೂವಿ"ಗೆ ಪಾರಿಜಾತವೆಂದೇ ಹೆಸರಿಟ್ಟೆ. ಈಗ ಪಾರಿಜಾತಳಿಗೆ ೩॥ ವರ್ಷ ಪ್ರಾಯ. ಹಳ್ಳಿಯಲ್ಲಿ ಹುಟ್ಟಿದರೆ ಚೆನ್ನಾಗಿ ಪರಿಮಳಿಸಲಾರಳೆಂದು ಆಕೆಯ ತಾಯಿ ನಗರಕ್ಕೆ ಹೋಗಿ ಜನ್ಮವಿತ್ತಳಾಕೆಗೆ. ನಾನು ನಗರವಿರೋಧಿ; ನನ್ನ ಮಗಳು ಹಳ್ಳಿ ವಿರೋಧಿಯೋ ಎಂಬಂತೆ ನಗರದಲ್ಲೇ ಹುಟ್ಟಿ, ನಗರದಲ್ಲೇ ಬೆಳೆದು, ನಗರದಲ್ಲೇ ಸೌಗಂಧ ಬೀರುತ್ತಿದ್ದಾಳೆ ಈಗ— ನಗರದ ಸುವಾಸಿನಿಯಾಗಿ!

ಜಾತಿ -- ಜಾತಿಯ ಮಿಲನ

ಒಲವಿನ ಪ್ರಕಾಶ !

ನಿನ್ನೋಲೆ ಬಂದು ಹಲವು ದಿನಗಳಾದುವು. ಅದಕ್ಕೆ ನಾನಂದೇ ಬದಲು ಬರೆಯಬೇಕಿತ್ತು; ಅದಾಗಲಿಲ್ಲ. 'ಕಾರಣವೇನು ?' — ಎಂದು ನೀನು ಪ್ರಶ್ನಿಸಬಹುದು. ನೀನು ಎಷ್ಟೊಂದು ಅಸಮಾಧಾನದಿಂದ ಈ ಪ್ರಶ್ನೆಯನ್ನು ಹಾಕುತ್ತೀಯೋ ಅದಕ್ಕೆ ನಾನಷ್ಟೇ ನಿಶ್ಚಿಂತೆಯಿಂದ ಉತ್ತರ ಬರೆಯುತ್ತೇನೆ. ಯಾವುದೊಂದೂ ಸಾರ್ಥಕತೆಯಿಲ್ಲದ ಪತ್ರ ವರುಷ ಕ್ಕೊಂದು ಬರೆದರೂ ಅದರಿಂದ ಪತ್ರ–ಲೇಖನಕಲೆಗೆ ಬಹುದೊಡ್ಡ ಲಾಂಛನ ವಿದೆ ಎಂಬ ಅಭಿಪ್ರಾಯವನ್ನು ನಿನ್ನ ಪ್ರತಿಯೊಂದು ಕಾಗದವೂ ನನಗೆ ಪರೋಕ್ಷವಾಗಿ ನುಡಿದಿದೆ. ನೀನು ನಿನ್ನ ಕಳೆದ ಸಲದ ಪತ್ರದಲ್ಲಿ "ಅಂತ ರ್ಜಾತೀಯ ವಿವಾಹದ ಬಗೆಗೆ ನಿನ್ನ ಅಭಿಪ್ರಾಯವೇನು ?" ಎಂದು ಕೇಳಿ ರುವೆ. ನಿನ್ನಾ ಪ್ರಶ್ನೆಗುತ್ತರವೀಯುತ್ತಾ ಆಗಲೇ ಮರು ಓಲೆ ರವಾನಿಸಿ ಬಿಡುವುದೆಂದರೆ, ಆ ವಿಷಯದ ಕುರಿತು ನನಗಾಗ ಸರಿಯಾದ ತಿಳುವಳಿಕೆ ಯಿರಲಿಲ್ಲ. ಒಂದು ವೇಳೆ, ನಿನಗೆ ಆದಷ್ಟು ಬೇಗನೆ ಪ್ರತ್ಯುತ್ತರವೀಯುವ ಆತುರದಲ್ಲಿ ಬೇರಿತರರ ಅಭಿಪ್ರಾಯಗಳನ್ನೇ ಅನುಕರಿಸಿ ಬಿಡುವುದೆಂದರೆ ಅದು ಅಳತೆ ಮೀರಿದ ಆತ್ಮವಂಚನೆಯಾಗಬಹುದು. ಹಾಗೆಂದು ಅಡ್ಡಾ ದಿಡ್ಡಿ ಗೀಚಿ ಹಾಕಿಬಿಡುವುದೆಂದರೆ ನಿನ್ನ ಮಾತಿನ ಪ್ರಕಾರ ನನ್ನ ಪತ್ರ ತನ್ನ ಸಾರ್ಥಕತೆಯನ್ನು ಕಳೆದುಕೊಂಡೀತು. ಹೀಗೆ, ಈ ಎಲ್ಲಾ ಗೊಂದಲ ಗಳಲ್ಲಿ ಬಿದ್ದಿರುತ್ತಾ ಅಂತರ್ಜಾತೀಯ ವಿವಾಹದ ಬಗ್ಗೆ ತಕ್ಕ ಅನುಭವ ಪರಿಜ್ಞಾನ ನೀಗುವವರೆಗೂ ಕಾದಿದ್ದು, ಇದೀಗ ನೆಮ್ಮದಿಯಿಂದ ನಿನಗೆ ಬರೆಯ ಹೊರಟಿದ್ದೇನೆ, ನೋಡು !

ಮೊನ್ನೆ ಒಂದು ಕೆಲಸಕ್ಕಾಗಿ ನಾನು ಮಡಿಕೇರಿಗೆ ಹೋಗಿದ್ದೆ. ಕೆಲಸ ಮುಗಿದ ಅನಂತರ ಮನೆಗೆ ಹಿಂದಿರುಗಲು ಬಸ್ ಸ್ಟ್ಯಾಂಡನ್ನು ಸೇರಿದಾಗ ಮಧ್ಯಾಹ್ನ ಎರಡು ಗಂಟೆಯಾಗಿತ್ತು. ನಮ್ಮೂರ ಬಸ್ ಬೇರೆಡೆಗೆ ಹೋ ಗಿದ್ದು, ಅದು ಹಿಂದಿರುಗಿ ಬಂದು, ತಿರುಗಿ ಹೋಡುವುದಕ್ಕೆ ಇನ್ನೂ ಒಂದೂ ವರೆ ಗಂಟೆ ಉಳಿದಿತ್ತು. ಬಿಸಿಲಿನ ಝಳ ಪ್ರಖರವಾಗಿತ್ತು. ಜೊತೆಗೆ ಕೊಡೆಯನ್ನು ಕೊಂಡೊಯ್ಯಲು ಬೇರೆ ಮರೆತಿದ್ದೆಯಾಗಿ, ಆ ಒಂದೂವರೆ

ಗಂಟೆಯ ಅವಕಾಶವನ್ನು ಉರಿಯಲ್ಲೇ ನಿಂತು ನೂಕುವುದು ದುಸ್ಸಾಧ್ಯ ವೆನಿಸಿತು. ವ್ಹೇಯಿಟಿಂಗ್ ಶೆಡ್ಡಿಗೆ ಹೋಗಿ ಕುಳ್ಳಿರಬಹುದಾಗಿತ್ತಾದರೂ ಅದಕ್ಕೆ ಮನಸ್ಸಾಗಲಿಲ್ಲ. ಕೊನೆಗೆ ಅಲ್ಲೇ ಇದ್ದ ಬುಕ್ಕಿಂಗ್ ಆಫೀಸಿನ ಕಿರುಜಗಲಿಯತ್ತ ನೋಟ ಹರಿಯಿಸಿದೆ—ಅದರ ಮೇಲೇರಿ ನಿಂತಿರೋಣಾಂತ.

ಆದರೆ ಆ ಜಗಲಿಯು ತುಂಬಾ ದೂರ ಪ್ರಯಾಣಕ್ಕೆ ಅಗತ್ಯವೆನಿಸುವ ಹಾಸಿಗೆ, ಪೆಟ್ಟಿಗೆ ಮತ್ತು ಇನ್ನಿತರ ಕೆಲವು ವಸ್ತುಗಳು ಅಷ್ಟೆತ್ತರಕ್ಕೆ ಬಿದ್ದಿದ್ದುವು. ಒಂದರ ಮೇಲೊಂದರಂತೆ ಇಟ್ಟಿದ್ದ ಎರಡು ಪೆಟ್ಟಿಗೆಗಳ ಮೇಲೆ ಯುವತಿಯೊಬ್ಬಳು ಕೂತಿದ್ದಳು. ಅವಳ ಮಡಿಲಲ್ಲಿ, ಸುಮಾರು ಒಂದೂವರೆ ವರ್ಷ ಎನ್ನಬಹುದಾಗಿದ್ದ ಗಂಡು ಮಗುವೊಂದು ಆಟವಾಡುತ್ತಿತ್ತು. ಸನಿಯದಲ್ಲೇ ಗೋಡೆಗೆ ಒರಗಿ ಯುವಕನೊಬ್ಬ ನಿಂತಿದ್ದ. ಹಾಸುಗೆಯ ಸುರುಳಿಯೊಂದು ತೆರವಾಗಿದ್ದುದನ್ನು ಕಂಡು ನಾನದರ ಮೇಲೆ ಮಂಡಿಸಿದೆ.

ನಾನು ಕುಳಿತೊಡನೆ ಯುವತಿಯ ಮಡಿಲಲ್ಲಿದ್ದ ಆ ಮಗು, ನನ್ನ ಕಡೆಗೆ ತನ್ನ ಪುಟ್ಟ ಕರಗಳಿಂದ ಸನ್ನೆ ಮಾಡುತ್ತ, ತನ್ನ ಪ್ರಾರಂಭಿಕ ಭಾಷೆಯಲ್ಲಿ ತಾಯಿಗೆ ದೂರುಕೊಟ್ಟಿತು. ಆಗ ತಾಯಿ, ನನ್ನನ್ನು ನೋಡಿ ಮುಗುಳ್ನಕ್ಕು, ಆ ಮೇಲೆ ಅದರ ಮುಂದಲೆಯನ್ನು ತೀಡುತ್ತಾ, "ಪಾಪ, ಕುಳಿತಿರಲಿ ಬಿಡಪ್ಪಾ!" ಎಂದಳು ಮಲೆಯಾಳಿ ಭಾಷೆಯಲ್ಲಿ.

ಅದಕ್ಕೆ ತಾಯಿಯ ಸಮಾಧಾನೋಕ್ತಿ ಸರಿಬೀಳಲಿಲ್ಲವೇನೋ, ಬದಿಯಲ್ಲೇ ನಿಂತಿದ್ದ ಗಂಡಸಿನ ಮುಖವನ್ನು ಸಿಟ್ಟಿನ ಮುದ್ರೆಯಿಂದೀಕ್ಷಿಸಿತು. ಆಗ ಆತ, "ನೀನು ಅವರನ್ನು ಇಚ್ಛಿಸುವುದಿಲ್ಲವೇನು?" ಎಂದು ಮಲೆಯಾಳಿಯಲ್ಲಿಯೇ ಕೇಳುತ್ತ, ಬಗ್ಗಿ, ಅದರ ಎಳೆಯ ಸುಕೋಮಲ ಎದೆಯ ಮೇಲೆಲ್ಲಾ ಕಚಗುಳಿಯಿಟ್ಟು ಅದು ಕಿಲಕಿಲನೆ ನಗುವಂತೆ ಮಾಡಿದ.

ಆ ಯುವತಿ ಪ್ರಾಯದಲ್ಲಿ ಇಪ್ಪತ್ತೈದನ್ನು ದಾಟಿರದವಳಂತೆ ತೋರುತ್ತಿದ್ದಳು. ಅವಳ ಮುಖ ಅಷ್ಟೇನು ಸುಂದರವಲ್ಲದಿದ್ದರೂ ಆಕರ್ಷಕವಾಗಿತ್ತು. ಆಕೆ ತೊಟ್ಟಿದ್ದ ಬಟ್ಟೆಬರೆಗಳೆಲ್ಲ ಮೇಲ್ಮಟ್ಟದವುಗಳಾಗಿದ್ದುವು. ಪ್ರತಿಯೊಂದು ಸ್ಥಿತಿಯಲ್ಲೂ ಆಕೆ ಸುಶಿಕ್ಷಿತೆಯಂತೆ ಕಾಣಬರುತ್ತಿದ್ದಳು. ಗಂಡಸು ಇಪ್ಪತ್ತೆಂಟು—ಮೂವತ್ತು ವರುಷದವ ಎನ್ನುವಂತಿದ್ದ. ಆತನದು ದೃಢವಾದ ಮತ್ತು ಸುಂದರವಾದ ಮೈಕಟ್ಟು. ಹಾವಭಾವಗಳಲ್ಲಿ ಸ್ಥಿರತೆಯಿತ್ತು. ಇಂಗ್ಲೀಷ್ ಉಡುಗೆಯನ್ನು ಅಚ್ಚುಕಟ್ಟಾಗಿ ಧರಿಸಿದ್ದ. ತಲೆಗೆ

ಹ್ಯಾಟ್ ತೊಟ್ಟಿದ್ದ. ಮಗುವಿನ ಅಲಂಕಾರವಾದರೂ ಸುಸಂಸ್ಕೃತವೂ ಉಚ್ಚತರವೂ ಆಗಿತ್ತು.

ಆ ಮೂವರೂ ಜೀವಿಗಳ ಪರಸ್ಪರ ವರ್ತನೆ—ತಾವು ತಂದೆ-ತಾಯಿ-ಮಕ್ಕಳಿರಬೇಕೆಂಬ ಊಹೆಯನ್ನು ನನಗೆ ತಂದಿತು; ಮತ್ತು ಆ ಕುರಿತಾಗಿ ನಾನು ತಿಳಿಯಲಪೇಕ್ಷಿಸಿದೆ.

ನಾನು ಮಲೆಯಾಳಿ ಭಾಷೆಯನ್ನು ಕೇಳಿ ಅರ್ಥಮಾಡಬಲ್ಲೆನಾದರೂ ಸ್ವತಃ ಸ್ಫುಟವಾಗಿ ನುಡಿಯಲು ಬರುವುದಿಲ್ಲ. ಆದ್ದರಿಂದ ತಡವರಿಸಿಕೊಂಡು ಆಕೆಯನ್ನು ಕೇಳಿದೆ— "ನಿಮಗೆ ಕನ್ನಡ ಬರುತ್ತದೆಯೇ ?" ಎಂದು ಆಕೆ ಅದಕ್ಕೆ "ಇಲ್ಲ"ವೆಂದು ತಲೆ ಅಲ್ಲಾಡಿಸಲು ನಾನು, "ನಿಮ್ಮ ಊರಾವುದು?" ಎಂದು ಕೇಳಿದೆ.

"ತಿರುವಾಂಕೂರು" ಆಕೆಯಿಂದ ಉತ್ತರ ಬಂತು.

"ಎಲ್ಲಿಗೆ ಬಂದಿದ್ದೀರಿ ? ಈಗೆಲ್ಲಿಗೆ ಹೋಗುತ್ತಿದ್ದೀರಿ ?" ನಾನು ತಿರುಗಿ ಕೇಳಿದೆ.

ನನ್ನ ಕ್ಷೀಣ ಮಲೆಯಾಳಿಯನ್ನು ಕೇಳಿ ಆಕೆಗೆ ತಮಾಷೆಯ ಅನುಭವವಾಗಿರಬೇಕು. ಅಂತೇ ಮುಸಿ ಮುಸಿ ನಕ್ಕು," ಇಲ್ಲಿನ ಭಾಗಮಂಡಲಕ್ಕೆ ಬಂದಿದ್ದೆವು. ಈಗ ತಿರುಗಿ ತಿರುವಾಂಕೂರಿಗೇ ಹೋಗುತ್ತಿದ್ದೇವೆ" ಎಂದು, ಆ ಗಂಡಸಿನೊಡನೆ ನನ್ನ ವಿಚಾರವಾಗಿ ಇಂಗ್ಲೀಷಿನಲ್ಲಿ ಹೇಳಿದಳು— "ಇವಳಿಗೆ ಮಲೆಯಾಳಿ ಚೆನ್ನಾಗಿ ಬರುತ್ತಿಲ್ಲ, ಅಲ್ಲವೇ ?" ಎಂದು. ಆತನದಕ್ಕೆ "ಇರಬೇಕೆ"ಂದು ಇಂಗ್ಲಿಷಿನಲ್ಲೇ ಹೇಳುತ್ತಾ ತಲೆ ಅಲ್ಲಾಡಿಸಿದ.

ನನ್ನ ಸಾದಾ ರೀತಿಯನ್ನು ನೋಡಿ, ನಾನು ಅವಿದ್ಯಾವತಿ ಹಾಗೂ ಇಂಗ್ಲಿಷ್ ಬಾರದವಳೆಂದು ಅವರಿಬ್ಬರೂ ಭಾವಿಸಿಕೊಂಡಂತೆ ತೋರಿತು ನನಗೆ. ಆದರೆ ಆ ಕೂಡಲೆ ನಾನು, "ನಿಮ್ಮ ವಿದ್ಯಾಯೋಗ್ಯತೆ ಎಷ್ಟು?" ಎಂದು ಆಕೆಯನ್ನು ಇಂಗ್ಲೀಷಿನಲ್ಲಿ ಪ್ರಶ್ನಿಸಿದೆ.

ಅದಕ್ಕವಳು ತುಂಬಾ ಅಚ್ಚರಿ ಪ್ರಕಟಿಸುತ್ತಾ "ನಾನು ತಿರುವಾಂಕೂರಿನ ನೇಷನಲ್ ಕಾಲೇಜಿನಲ್ಲಿ ಇಂಟರ್‌ಮೀಡಿಯಟ್ ಪ್ಯಾಸಾಗಿದ್ದೇನೆ. ನಾನು ನಿಮಗೆ ಇಂಗ್ಲೀಷ್ ಬರುವುದಿಲ್ಲವೆಂದು ಭಾವಿಸಿದೆ. ಆದರೆ ನೀವು ಚೆನ್ನಾಗಿ ಆಡಬಲ್ಲವರಂತೆ ತೋರುತ್ತೀರಿ, ಕ್ಷಮಿಸಿ." ಎಂದು ಇಂಗ್ಲೀಷಿನಲ್ಲೇ ಹೇಳಿ ಮತ್ತೆ ಕೇಳಿದಳು. "ನಿಮ್ಮ ವಿದ್ಯೆ ಎಷ್ಟು ?" ಎಂದು.

ನಾನು ನನ್ನ ವಿದ್ಯೆಯನ್ನು ತಿಳಿಸಿ, “ನಾನು ಇಂಗ್ಲೀಷಿನಲ್ಲಿ ಮಾತನಾಡ ಬಲ್ಲೆ” ಎಂದಾಗ ಆಕೆ, “ತುಂಬಾ ಸಂತೋಷ; ಇನ್ನು ನಿರಾತಂಕವಾಗಿ ಮಾತುಬೆಳೆಸಬಹುದಲ್ಲ !” ಎಂದಳು.

ಅಷ್ಟರಲ್ಲಿ ನನಗೆ ಕಂಡು ಪರಿಚಯವಿದ್ದ ಕೊಡಗರೊಬ್ಬರು ಅಲ್ಲಿಗೆ ಬಂದು ಆ ಯುವಕನನ್ನು ಕೊಡಗುಭಾಷೆಯಲ್ಲಿ ಮಾತನಾಡಿಸಿ ಹೋದರು.

ಆಗ ನಾನು ಕುತೂಹಲದಿಂದ ಅವನ ಮೋರೆಯನ್ನು ದಿಟ್ಟಿಸಿದೆ.

ನನ್ನ ದೃಷ್ಟಿಯನ್ನು ಹಿಡಿದಾತ ಎಂದ— “ನಾನು ಅಚ್ಚಕೊಡಗ ! ಕೊಡಗು ಭಾಷೆ ಚೆನ್ನಾಗಿಬಲ್ಲೆ !”

ಆಗ ನಾನು ಇನ್ನಷ್ಟು ಕುತೂಹಲ ವ್ಯಕ್ತಪಡಿಸಿ, “ಮತ್ತೆ ಇವರು ?” ಎಂದು ಆ ಯುವತಿಯನ್ನು ನಿರ್ದೇಶಿಸಿ ಕೊಡಗು ಭಾಷೆಯಲ್ಲಿ ಕೇಳಿದೆ.

ಅದಕ್ಕೆ ಆತ, “ಮೆನನ್; ನನ್ನ ಹೆಂಡತಿ.” ಎಂದು ಹೇಳಿ ಒಳಕ್ಕೆ ನಡೆದುಬಿಟ್ಟ.

ಇಲ್ಲಿ ನಾನು ಅವನನ್ನು “ಮತ್ತೆ ಇವರು ?” ಎಂದು ಅವಳ ಕುರಿತಾಗಿ ಕುತೂಹಲದಿಂದ ಕೇಳಲು ಒಂದು ಕಾರಣವಿತ್ತು. ಅದೇನೆಂದರೆ, ಕೊಡಗು ಸ್ತ್ರೀಯರ ಉಡುಗೆ ಇತರ ಕನ್ನಡಸ್ತ್ರೀಯರ ಉಡುಗೆಗಿಂತ ಭಿನ್ನವಾಗಿರುತ್ತದೆ; ಕೊಡಗನೊಬ್ಬನ ಹೆಂಡತಿಯನ್ನು ಕನ್ನಡಿಗರ ಉಡುಪು ಧರಿಸಿ ಗಂಡ ನೊಡನೆ ಕಾಣುವುದು ತುಂಬಾ ಅಪರೂಪ. ಆದರೆ ಈಕೆ ಶುದ್ಧ ಕನ್ನಡಿಗರ ಉಡುಗೆಯಲ್ಲಿದ್ದಳು.

ಅವರು ಒಳನಡೆದೊಡನೆ ನಾನು ಅವಳನ್ನು ಕುರಿತು, ‘ನೀವು ಅಂತ ಜಾತೀಯ ವಿವಾಹವನ್ನು ಸ್ವಾಗತಿಸಿದಂತೆ ಕಂಡಿತು. ನಿಮ್ಮಿಬ್ಬರ ಸಂಬಂಧ ಬೇರ್ಪಟ್ಟ ಬಗೆಯನ್ನು ತಿಳಿಸುವಿರಾ ?” ಎಂದು ಕೇಳಿದೆ.

ಅದಕ್ಕೆ ಅವಳು, “ನಾನು ಇಂಟರ್ ಆದನಂತರ ನರ್ಸ್ ತರಬೇತು ಹೊಂದಿ ಮಿಲಿಟರಿ ಆಸ್ಪತ್ರೆಯಲ್ಲಿ ದಾದಿಯಾಗಿ ಸೇರಿಕೊಂಡೆ. ನಾನು ರಾಂಚಿಯಲ್ಲಿದ್ದಾಗ ಅಲ್ಲಿಯ ಮಿಲಿಟರಿ ಆಸ್ಪತ್ರೆಯಲ್ಲಿ ಕಂಪೌಂಡರ್ ಆಗಿದ್ದ ಸೋಮಣ್ಣ (ಅವಳ ಗಂಡ—ಆ ಯುವಕ)ನೊಡನೆ ನನ್ನ ನಿಕಟ ಪರಿಚಯ ವಾಯಿತು; ಅಂತೇ ಕೆಲಸಮಯದಲ್ಲಿ ನಮ್ಮೊಳಗೆ ಅನ್ಯೋನ್ಯ ಸಲಿಗೆ ಬೆಳೆ ಯಿತು. ನಮ್ಮೊಳಗೆ ಸ್ನೇಹಬೇರ್ಪಟ್ಟ ಎರಡು ವರ್ಷಗಳಲ್ಲಿ ನಾವು ರಿಜಿ ಸ್ಟರ್ಡ್ ಲಗ್ನದಲ್ಲಿ ಒಂದಾದೆವು. ನಂತರ ಅದೇ ವರುಷ ತಿರುವಾಂಕೂರಿಗೆ

ಬಂದೆವು. ಅಲ್ಲಿಂದ, ಮುಂದೆ ನಾನು ಕೆಲಸಕ್ಕೆ ರಾಜಿನಾಮೆಯನ್ನಿತ್ತುಬಿಟ್ಟೆ. ಈಗ ನಾನು ಅಲ್ಲೇ ನಮ್ಮ ತಂದೆಯವರ ಮನೆಯಲ್ಲಿರುತ್ತಿದ್ದೇನೆ. ಇದೀಗ ನಮ್ಮ ವಿವಾಹವಾಗಿ ನಾಲ್ಕನೆ ವರ್ಷ ನಡೆಯುತ್ತಿದೆ. ನಮಗೆ ಈ ಮಗು ಜನಿಸಿ ಒಂದು ವರ್ಷ, ಹತ್ತು ತಿಂಗಳ ಮೇಲಾಯಿತು. ವರ್ಷಕ್ಕೊಮ್ಮೆ 'ಅವರು' ರಜೆಯಲ್ಲಿ ಬಂದಾಗ ನಾವಿಬ್ಬರೂ ಕೆಲದಿನಗಳಿಗೆ ಕೊಡಗಿಗೆ ಬಂದು ಭಾಗಮಂಡಲದಲ್ಲಿರುವ ನನ್ನ ಅತ್ತೆಯನ್ನು ನೋಡಿಕೊಂಡು ಹೋಗುತ್ತಿದ್ದೇವೆ" ಎಂದಳು.

"ನಿಮ್ಮ ಸಂಬಂಧವನ್ನು ನಿಮ್ಮ ಬಂಧುಗಳ್ಯಾರೂ ವಿರೋಧಿಸಲಿಲ್ಲವೇ?"

"ವಿರೋಧಿಸಿದರು—ಬಲವಾಗಿಯೆ ವಿರೋಧಿಸಿದರು. ನನ್ನ ತಂದೆ ತಾಯಿಗಳು ಹಲವು ತಿಂಗಳ ವರೆಗೆ ನನ್ನನ್ನು ತಮ್ಮಿಂದ ಬೇರೆಯಿಟ್ಟರು. ನನ್ನ ಅತ್ತೆ ಮೊದಲಿಗೆ ನನ್ನನ್ನು ತಮ್ಮ ಮನೆಗೆ ಕಾಲಿಡಗೊಡಲಿಲ್ಲ. ಆದರೆ ಕ್ರಮೇಣ ಎಲ್ಲಾ ಸರಿಹೋಯ್ತು. ಧೈರ್ಯ, ನಿಶ್ಚಲತೆ ಮತ್ತು ಸೌಮ್ಯ ವರ್ತನೆಗಳಿಂದ ನಾನೆಲ್ಲರನ್ನೂ ಜಯಿಸಿಬಿಟ್ಟೆ. ಈಗ ನಮ್ಮನ್ನೆಲ್ಲರೂ ಪ್ರೀತಿಯಿಂದ ಕಾಣುತ್ತಿದ್ದಾರೆ."

"ಈ ತೆರನ ವಿವಾಹದ ಬಗೆಗೆ ನಿಮ್ಮ ಅನುಭವವನ್ನು ಹೇಳುವಿರಾ?"

"ಅಗತ್ಯವಾಗಿ. ನೋಡಿ, ನಮ್ಮ ತಂದೆಗೆ ಇರುವುದೆಲ್ಲಾ ಹೆಣ್ಮಕ್ಕಳೇ. ನಾವು ಒಂಭತ್ತು ಜನ ಅಕ್ಕ ತಂಗಿಯರಿದ್ದೇವೆ. ನಾನೇ ಹಿರಿಯವಳು. ನಮ್ಮೆಲ್ಲರ ವಿವಾಹವೂ ನಮ್ಮ ಜಾತಿಯೊಳಗೇ ನಡೆಯಬೇಕಿದ್ದರೆ ಹೇರಳ ಧನದ ಆವಶ್ಯಕತೆಯಿತ್ತು. ಹಾಗಿಲ್ಲದಿದ್ದರೆ ಯೋಗ್ಯ ವರರು ಸಿಗುವುದು ಅಸಂಭವವಾಗಿತ್ತು. ಏಕೆಂದರೆ, ನಮ್ಮ ತಂದೆ ಅಷ್ಟೇನೂ ಧನಿಕರಾಗಿಲ್ಲ. ಈಗ ನಾನು ಹಾಕಿದ ಈ ಮಾದರಿಯಿಂದಾಗಿ ತಮ್ಮ ಮಕ್ಕಳ ಬಗೆಗೆ ನಮ್ಮ ತಂದೆಯವರ ಯೋಚನೆ ನಿರಾತಂಕವಾಗಿದೆ. ಅಲ್ಲದೆ, ಈಗ ನಮ್ಮದು ಸಮಗ್ರ ರಾಷ್ಟ್ರೀಯ ಜೀವನ. ಜಾತೀಯತೆಯ ಬಂಧನದೊಳಗೇ ಸಿಲುಕಿರುತ್ತಾ ನಮ್ಮ ಮನೋಭಿಪ್ರಾಯಗಳು, ಆಚಾರವಿಚಾರಗಳು, ನಡೆನುಡಿಗಳು ಮತ್ತು ಸಂಪರ್ಕಗಳೆಲ್ಲಾ ಕುಂಠಿತವಾಗಿರಬೇಕಾದ್ದಿಲ್ಲ."

ಅವಳು ಹೀಗೆ ಹೇಳಿ ಮುಗಿಸುವಷ್ಟಕ್ಕೆ, ಅವಳ ಮಗು ನನ್ನೆದೆಗೆ ಸಲಿಗೆಯಿಂದ ಕೈಚಾಚಿತು. ನಾನು ಅದನ್ನೆತ್ತಿಕೊಂಡು ಅದರ ಗುಲಾಬಿ ಬಣ್ಣದ ಕೆನ್ನೆಗಳೆರಡಕ್ಕೂ ಮುತ್ತಿಟ್ಟೆ ಆಗ ಅದರ ಕಮಲದಂಥಾ ಮುಖವು ಅರಳಿ, ಆಗತಾನೇ ಮೊಳೆಯುತ್ತಿದ್ದ ದಂತಗಳು ಜಾಜಿಮಲ್ಲಿಗೆಯ ಮೊಗ್ಗು

ಗಳನ್ನು ಜ್ಞಾಪಕಕ್ಕೆ ತಂದುವು. ಎರಡು ಜಾತಿಗಳ ಸುಮಿಲನದಿಂದ ಹುಟ್ಟಿದ ಅದನ್ನು 'ಚಿನ್ನ' ಎಂದು ಅರ್ಥಕೊಡುವ 'ಪೊನ್' ಎಂಬ ಹೆಸರಿನಿಂದ ಕರೆಯುತ್ತಿದ್ದರು.

ನಾನು ಪೊನ್ನನ್ನು ಅದರ ತಾಯಿಗೆ ಹಿಂದಿರುಗಿಸುತ್ತಿದ್ದ ಸಮಯದಲ್ಲೇ ಅದರ ತಂದೆ ಹೊರಕ್ಕೆ ಬಂದು, "ಪ್ರೇಮ, ಕುಡಿಯುಲು ತರಿಸಲೇನು?" ಎಂದು ಕೇಳಿದ.

ಪ್ರೇಮ "ಹುಂ" ಎಂದು ತಲೆ ಅಲ್ಲಾಡಿಸಿದಳು.

ಎರಡೇ ನಿಮಿಷದಲ್ಲಿ ಪಕ್ಕದ ಹೋಟೇಲಿನಿಂದ 'ಟೀ' ಬಂತು!

ಅವರಿಬ್ಬರೂ ಕುಡಿದರು!

ಆದರೆ—ಅವರು ಕುಡಿಯುವುದಕ್ಕೆ ಮೊದಲು ನನಗೆ ಬಲಾತ್ಕಾರದಿಂದಿತ್ತಿದ್ದರು!

ಅವರಿಬ್ಬರ ಸುಮಿಲನಕ್ಕೆ ಸಂತೋಷಾಭಿವ್ಯಕ್ತಿಯ ಚಿಹ್ನೆಯಾಗಿ ನಾನದನ್ನು ಪೂರ್ಣ ತೃಪ್ತಿಯಿಂದ ಕುಡಿದೆ!

ಸ್ವಲ್ಪ ಹೊತ್ತಿನಲ್ಲೇ ನಮ್ಮೂರ ಬಸ್ ಬರಲಾಗಿ ನಾನವರಿಂದ ಪ್ರೀತಿಪೂರ್ವಕವಾಗಿ ಬೀಳ್ಕೊಂಡು ಅದನ್ನೇರಿ ಬಂದು ಮನೆಸೇರಿಕೊಂಡೆ!

ನನ್ನ ಮಮತೆಯ ಪ್ರಕಾಶಬಾಬು!

ನಮ್ಮ ಭಾರತಾದ್ಯಂತ ಈ ತೆರನ ವಿವಾಹಗಳೇರ್ಪಟ್ಟು, ಜಾತೀಯತೆಯ ತುಂಡು ತುಂಡು ಬೇಲಿಗಳೆಲ್ಲವೂ ಸಂಪೂರ್ಣ ಕತ್ತರಿಸಿ ಹೋಗಿ, ಭಾರತೀಯರೆಲ್ಲರ ಮನ-ಮನೆಗಳೂ ಹತ್ತಿರ ಹತ್ತಿರವಾಗುವ ಕಾಲಶೀಘ್ರವೇ, ಬರಲೆಂದು ನಾನು ಹಾರೈಸುತ್ತೇನೆ. ಈ ಬಗ್ಗೆ ನಿನ್ನ ಅಭಿಪ್ರಾಯ ತೀವ್ರ ಬರಲಿ—ಎಂದು ಅದರ ದಾರಿಯನ್ನೇ ಕಾಯುತ್ತಿರುವ—

ನಿನ್ನ

ನೀಲಾ.

"ವಿಚಿತ್ರ ಸಂಯೋಗ"

೧

ಕಣ್ಮುಚ್ಚುವುದರೊಳಗಾಗಿ ಮಗಳ ಮದುವೆಯನ್ನು ಕಣ್ದಣಿಯೆ ನೋಡ ಬೇಕೆಂದಿದ್ದ ಸುಶೀಲಕ್ಕ, ತನ್ನ ಹಟಕ್ಕಾಗಿ ತಾನೇ ಪಶ್ಚಾತ್ತಾಪಡುವ ಕಾಲವೂ ಬಂದಿತು.

ಸುಶೀಲಕ್ಕನ ಪಶ್ಚಾತ್ತಾಪದ ಮಾತೆತ್ತಿದಾಗ ಐದು ವರ್ಷಗಳ ಹಿಂದಿನ ಘಟನೆ ನೆನಪಿಗೆ ಬರುತ್ತದೆ.

ಅವಳಿಗೆ ಒಬ್ಬಳೇ ಮಗಳು; ತುಷಿತಾ. ಆಕೆ ಮ್ಯಾಟ್ರಿಕ್ ಪಾಸಾದಾಗ ಕಾಲೇಜು ಸೇರಲು ತುಂಬಾ ಹಟಹಿಡಿದಳು. ಅದಕ್ಕೆ ತಾಯಿಯ ಒತ್ತಾಸೆಯಿದ್ದರೂ ತಂದೆ ಗಿರೀಶರಾಯರ ನಕಾರಾತ್ಮಕ ನುಡಿಯು ಅವಳ ಹಟವನ್ನು ಕೈಗೂಡಿಸಲಿಲ್ಲ. ಅವಳು ತನ್ನ ತಂದೆಯ ಮನೋಗತವನ್ನು ನೋಡಿ ಹತಾಶಳಾದಳು. ಎಷ್ಟಾದರೂ ಆ ವರೆಗೆ ಯಾವ ಯೋಚನೆಯೂ ಇಲ್ಲದೆ ಶಾಲೆಯಲ್ಲಿ ಸ್ವಚ್ಛಂದತೆಯಿಂದ ಇದ್ದವಳು; ಈಗ ಈ ನಿರ್ಬಂಧ ವನ್ನು ಹೇಗೆ ತಾನೇ ಸಹಿಸಿಯಾಳು. ತನ್ನ ಮನೆ ತನಗೀಗ ಒಗ್ಗದಾಯಿತು. ಓದಿನ ಯೋಚನೆ ಹೀಗೆ ಅಡಿಮೇಲಾದೊಡನೆ ಅವಳ ಮನಸ್ಸು ನೌಕರಿಯ ಕಡೆಗೆ ಹರಿಯಿತು. ನೌಕರಿಯೊಂದನ್ನು ಹಿಡಿದರೆ ಹಾಯಾಗಿ ಸ್ವತಂತ್ರ ಜೀವನ ನಡೆಸಬಹುದೆಂದು ಅನಿಸಿತಾಕೆಗೆ. ಹಾಗೆಯೇ ಪತ್ರಿಕೆಗಳಲ್ಲಿ ಬರುವ ಕೆಲಸದ ಜಾಹೀರಾತುಗಳನ್ನು ನೋಡಿ ಅನೇಕ ಕಡೆಗಳಿಗೆ ಅರ್ಜಿ ಹಾಕಿದಳು. ಕೊನೆಗೆ ಅವಳ ಸ್ವತಂತ್ರ ಪ್ರವೃತ್ತಿಗೆ ಪ್ರೋತ್ಸಾಹದ ಪತೀಕವೋ ಎಂಬಂತೆ ಗುಮಾಸ್ತೆಯ ಕೆಲಸಕ್ಕೆ ಕರೆ ಬಂತು— ಮಡಿಕೇರಿಯ ರೆವಿನ್ಯೂ ಆಫೀಸಿನಿಂದ. ಹೇಗೂ ತಂದೆತಾಯಿಗಳ ಪ್ರತಿಬಂಧದಿಂದ ತಪ್ಪಿ ಸ್ವಾತಂತ್ರ್ಯದ ಉಸಿರೆಳೆಯಲು ಅವಕಾಶ ಸಿಕ್ಕಿತಲ್ಲ! —ಎಂದು ಚಿಗರಿಯಂತೆ ಕುಣಿದಾಡಿದಳು, ಆ ಕರೆ ಬಂದ ದಿನ, ಆಕೆ—

ತುಷಿತಾ ಕುಣಿದಾಡಿದ್ದೇ ಸರಿ! ಆದರೆ ಗಿರೀಶರಾಯರು ಮಾತ್ರ ಈ ಸಲವೂ ಅವಳು ನೌಕರಿಗೆ ಸೇರುವುದನ್ನು ವಿರೋಧಿಸಿದರು. "ಹೆಣ್ಮಕ್ಕಳನ್ನು ಶಾಲೆಗೆ ಕಳಿಸುವುದು ಓದಿ ಕೀರ್ತಿವಂತರಾಗುವುದಕ್ಕೂ ಅಲ್ಲ; ತಮ್ಮ

ಗೃಹಕೃತ್ಯಗಳನ್ನು ಸರಿಯಾಗಿ ನಡಿಸಿಕೊಂಡು ಹೋಗಲು ಅವರನ್ನು ಸಮರ್ಥರನ್ನಾಗಿ ಮಾಡುವುದಕ್ಕೆ ಮಾತ್ರ. ಅಂತೆಯೇ, ಈಗ, ನಮ್ಮ ಸುಷಿತಾ ಕೂಡ ಆಫೀಸಿಗೆ ಹೋಗಿ, ಹಲವಾರು ಪುರುಷರ ನಡುವೆ ಕುಳಿತು, ಬರವಣಿಗೆ ಕೆಲಸದಿಂದ ಸರಕಾರಕ್ಕೆ ಸಹಾಯಮಾಡುವುದೂ ಬೇಡ" —ಎಂದು ಅವರು ಒಂದೇ ಉಸಿರಿಗೆ ಗರ್ಜಿಸಿದರು. ಅದಕ್ಕೆ ಸುಶೀಲಕ್ಕ, "ಅವಳನ್ನು ನಾವು ಕಾಲೇಜಿಗಂತು ಕಳಿಸಲಿಲ್ಲ; ಈಗ ಇದೊಂದು ಸಿಕ್ಕಿದ ಕೆಲಸಮಾಡಿ ತುಸು ಅನುಭವ, ವ್ಯವಹಾರ ಜ್ಞಾನ ಸಂಪಾದಿಸಿದರೆ ನಮ್ಮ ಮಾನ ಮರ್ಯಾದೆ ಏನು ಕಡಿಮೆಯಾದೀತು? ನನ್ನ ಕಣ್ಮುಂದೆ ಹುಟ್ಟಿ ಬೆಳೆದ ಎಷ್ಟೋ ಹುಡುಗಿಯರು ಚಿಕ್ಕ ದೊಡ್ಡ ನೌಕರಿಗಳನ್ನು ಸಂಪಾದಿಸಿ ಮೆರೆಯುತ್ತಿರುವಾಗ ನಮ್ಮ ಹುಡುಗಿ ಒಲೆಯ ಮಸಿ-ಬೂದಿಯ ರಾಶಿಯಲ್ಲೇ ಹೊರಳಿಕೊಂಡಿರಬೇಕೇ?" ಎಂದು ಮರುಸವಾಲು ಹಾಕಿದಳು.

"ಹೌದು! ಆದರೆ ಅದರಲ್ಲಿನ ಒಳ್ಳೆದು ಕೆಟ್ಟದು ನಿನಗೇನು ಗೊತ್ತೇ? ನೀನು ನೋಡಿದ ಹಾಗೇ ಡಾಕ್ಟರಿಕೆ ಕಲಿಯಲು ಮೈಸೂರಿಗೆ ಹೋದ ಆ ರಾಂಭಟ್ಟರ ಮಗಳು ವಿಮಲಾ.........ನ ಹಿಂದೆ ಓಡಿ ಹೋಗಲಿಲ್ಲವೇ? ಆ ಸುಬ್ಬಣ್ಣನ ಮಗಳು, ಮಾಸ್ತರಿಕೆ ಮಾಡುತ್ತಿದ್ದವಳು ಹೇಳದೆ ಕೇಳದೆ ಸಿನೆಮಾಕ್ಕೆ ಸೇರಲಿಲ್ಲವೆ?..........ಆಫೀಸಿನಲ್ಲಿ ಕೆಲಸಮಾಡುತ್ತಾ ಇದ್ದ ವೆಂಕಾಚಾರಿಯ ಮಗಳು ಮದುವೆಗೆ ಮುಂಚೆ ಮಗು ಕಂಡಿಲ್ಲವೇ? ನಿನ್ನ ಮಗಳೂ ಹಾಗೆಯೇ ಆಗಬೇಕೆನ್ನುತ್ತೀಯಾ ಏನು?" —ಎಂದು ರಾಯರು ಹಾರಾಡಿದರು.

"ಸಾಕು, ಬಿಡಿ! ಎಲ್ಲೋ ಒಂದಿಬ್ಬರು ಹುಡುಗಿಯರು ತಪ್ಪುದಾರಿ ಹಿಡಿದ ಮಾತ್ರಕ್ಕೆ ಎಲ್ಲರೂ ಹಾಗೆಯೇ ಆಗುತ್ತಾರೆಂದು ಅಭಿಪ್ರಾಯವೇ ನಿಮ್ಮದು? ಗಂಡಸರು ಮಾಡೋ ತಪ್ಪುಗಳಿಗೆ ಲೆಕ್ಕವೇ ಇಲ್ಲ — ಆ ಮಾತು ಬಿಡಿ; ನೀವೇನೇ ಹೇಳಿದರೂ ನಮ್ಮ ಸುಷಿತಾ ಹಾಗೆಂದಿಗೂ ಆಗಲಾರಳು. ಅಲ್ಲ, ಹಾಗೆ ಆಗುವುದಕ್ಕೆ ಅವಳ ರಕ್ತವಾದರೂ ಎಂಥದು—ಯೋಚಿಸಿದಿರಾ?" ತಿರುಗಿ ಸುಶೀಲಕ್ಕ ಗಂಡನ ಆಕ್ಷೇಪಕ್ಕೆ ಪ್ರತಿವಾದ ಹೂಡಿದಳು.

ಹೀಗೆ ಕೆಲಹೊತ್ತು ಆ ವಿಚಾರವಾಗಿ ಗಂಡ-ಹೆಂಡಿರಿಬ್ಬರೊಳಗೆ ಬಲು ಬಿರುಸಾಗಿಯೆ ವಾಗ್ವಾದ ನಡೆಯಿತು. ಮನುಷ್ಯಜೀವನದ ಸೂಕ್ಷ್ಮತೆಯನ್ನು ದೂರದೃಷ್ಟಿಯಿಂದರಿತು ಮಗಳು ನೌಕರಿಮಾಡುವುದು ಬೇಡವೆಂದು ಪತಿ

ಹೇಳಿದರೆ, ಅನುಕರಣೆಯಲ್ಲೇ ಶ್ರೇಯಸ್ಸನ್ನು ಕಂಡ ಸತಿ ಮಾಡಿಯೇ ತೀರ ಬೇಕೆಂದು ಹಟಹಿಡಿದಳು. ಕೊನೆಗೆ ಗಿರೀಶರಾಯರು ಸೋತುಹೋದರು, ಸುಶೀಲಕ್ಕ ನೌಕರಿ ಸೇರಲು ಮಗಳಿಗೆ ಅಪ್ಪಣೆಕೊಟ್ಟಳು. —ಇದು ನಡೆದುದು ಐದು ವರ್ಷಗಳ ಹಿಂದೆ.

ತುಷಿತಾ ಮಡಿಕೇರಿಗೆ ಹೋದ ಕೆಲಸಮಯದಲ್ಲೇ ಎಲ್ಲೂ ಇಲ್ಲದ ವಾತರೋಗ ಹಿಡಿಯಿತು, ಸುಶೀಲಕ್ಕನಿಗೆ. ರೋಗ ಪ್ರಬಲಿಸಿ ಜೀವ ಉಳಿಯುವುದೇ ಪ್ರಯಾಸವಾಯಿತು. ಕೇವಲ ಇಂಜೆಕ್ಷನ್‌ಗಳು ತಾತ್ಕಾಲಿಕವಾಗಿ ರೋಗವನ್ನು ಶಮನಗೊಳಿಸಿದರೂ ತನ್ನ ಪ್ರಭಾವ ಕಡಿಮೆಯಾದೊಡನೆ ರೋಗವನ್ನು ಪೂರ್ವಸ್ಥಿತಿಗೇ ತಂದಿಡುವುದು ಅಪರೂಪವೇನಲ್ಲ. ಅದರಂತೇ ಸುಶೀಲಕ್ಕನ ಕಾಯಿಲೆ ಒಮ್ಮೆಗೆ ಶಾಂತವಾದರೂ ಆ ಮೇಲೆ ಆಗಾಗ ಕಾಣಿಸಿಕೊಳ್ಳತೊಡಗಿತು. ಪರಿಸ್ಥಿತಿ ವಿಕೋಪಕ್ಕೆ ಬಂತೆಂದರೆ ಆಕೆಗೆ ಜೀವದ ಮೇಲಿನ ಭೀತಿ ಹೆಚ್ಚುತ್ತಿತ್ತು. ಹಾಗೆಂದು ಸಾಯಲು ಆಕೆ ಅಂಜುತ್ತಿರಲಿಲ್ಲ; ಮಗಳ ಮದುವೆಯನ್ನು ನೋಡಬೇಕೆಂಬ ಹಂಬಲ ಅವಳಿಗೆ ಹುಚ್ಚು ಹಿಡಿಸಿದಂತಿತ್ತು. ಆದರೆ ನೌಕರಿಗೆ ಸೇರಿದ ಮಗಳ ಮದುವೆಯ ಭವಿಷ್ಯವೇನು? ಇದು ತಿಳಿಯದೆ ಒಮ್ಮೊಮ್ಮೆ ಅವಳ ಕಳವಳ ಮಿತಿ ಮೀರುತ್ತಿತ್ತು.

ಇದೀಗ ತುಷಿತಾ ಗುಮಾಸ್ತೆಯಾಗಿ ಆರನೇ ವರ್ಷ ಆರಂಭವಾಗಿತ್ತು. ತನಗೆ ಕಾಯಿಲೆ ಹಿಡಿದಂದಿನಿಂದ, ನಾಲ್ಕು ವರ್ಷಗಳಿಂದ. "ನೀನು ಮದುವೆಯಾಗಬೇಕು—ಬೇಕು" ಎಂದು ಸುಶೀಲಕ್ಕ ಅವಳನ್ನು ಕೇಳುತ್ತಾ ಬಂದಿದ್ದಳು. ಆದರೆ 'ಮದುವೆ' ಶಬ್ದ ಕೇಳಿದಾಕ್ಷಣಕ್ಕೆ ಅವಳ ಮನಸ್ಸು ಅದಕ್ಕೆ ವಿಮುಖವಾಗುತ್ತಿತ್ತು. ಆದರೂ ತಾಯಿಯ ಒತ್ತಾಯಕ್ಕಾಗಿ ಪ್ರತಿಸಲವೂ ರಜೆಯಲ್ಲಿ ಬಂದಾಗ "ಹೂಂ" ಗುಟ್ಟಿ ತನ್ನ ಸಮ್ಮತಿಯನ್ನು ಸೂಚಿಸಿ ಹೋಗುತ್ತಿದ್ದಳು; ಹೆಂಡತಿಯ ಕಾಟಕ್ಕಾಗಿ ಗಿರೀಶರಾಯರು ವರಾನ್ವೇಷಣೆಗೆ ತೊಡಗುತ್ತಿದ್ದರು. ಆದರೆ ವರನ ಶೋಧ ನಡಿಸಿ, ಮಗಳ ಅನುಮತಿಗಾಗಿ ಬರೆದಾಗಲೆಲ್ಲಾ "ಅವನೇ? ಅವನಾದರೆ ನನಗೆ ಬೇಡ" ಎಂದು ಹೇಳಿ ಆಕೆ ತಪ್ಪಿಸಿಕೊಳ್ಳುತ್ತಿದ್ದಳು. ಈ ರೀತಿಯಲ್ಲಿ ಎಷ್ಟೋ ಮಂದಿ ವರರು ಅವಳ ದೃಷ್ಟಿಯಲ್ಲಿ ಅಯೋಗ್ಯರಾಗಿಹೋಗಿದ್ದರು. ಹೀಗೆ ತನ್ನ ಆಸೆ ನಿರಾಸೆಯಾದಾಗಲೆಲ್ಲ ಸುಶೀಲಕ್ಕ ಬಹಳ ಮರುಗುತ್ತಿದ್ದಳು. "ಗಂಡನೊಂದಿಗೆ ಜಗಳ ಮಾಡಿ ಅವಳಿಗೆ ಸ್ವಾತಂತ್ರ್ಯಕ್ಕೆ ಎಡೆ ಕಲ್ಪಿಸಿಕೊಟ್ಟುದೇ ತಪ್ಪಾಯಿತು; ಆದ್ದ

A. B. Krishna Raja

A. B. Krishna Raja

ರಿಂದಲೇ ಈಗ ಆಕೆ ತನ್ನ ಇಚ್ಛೆಗೆ ವಿರುದ್ಧವಾಗಿ ವರ್ತಿಸುತ್ತಿದ್ದಾಳೆ"–ಎಂದು ಪಶ್ಚಾತ್ತಾಪ ಪಡುತ್ತಿದ್ದಳು. ಈ ರೀತಿಯಲ್ಲಿರುವ ಅವಳು ದಿನೇ ದಿನೇ ಜಡವಾಗುತ್ತಾ ಬಂದಿದ್ದಳು.

ಆ ದಿನ ಸುಶೀಲಕ್ಕನ ವಾತ ಇನ್ನೂ ಹೆಚ್ಚಿಸಿತು; ಅದರಿಂದಾಗಿ ಯಾವುದೋ ಒಂದು ಹೆದರಿಕೆ, ಒಂದು ಸಂದೇಹ– ಆಕೆಯಲ್ಲಿ ಉಕ್ಕಿಬಂತು. ಆ ಕೂಡಲೆ ಅವಳು ಗಂಡನ ಕೊಠಡಿಗೆ ಹೊರಟಳು.

ತುಷಿತಾ ಕಳೆದ ರಜೆಯಲ್ಲಿ ಮನೆಗೆ ಬಂದಿದ್ದಳು. ಆಗಲೂ ತಾಯಿಯ ಮದುವೆಯ ಪ್ರಸ್ತಾಪಕ್ಕೆ ಹೂಂಗುಟ್ಟಿಯೇ ಹೋಗಿದ್ದಳು. ಅವಳ ನಿರ್ಲಕ್ಷ್ಯ ವರ್ತನದಿಂದ ಉದಾಸೀನಗೊಂಡಿದ್ದ ಗಿರೀಶರಾಯರು ತಮ್ಮ ಮೋಹದ ಮಡದಿಯ ಸಮಾಧಾನಕ್ಕಾಗಿಯೆ ಮನಸ್ಸಿಲ್ಲದ ಮನಸ್ಸಿನಿಂದ ವರನ ಶೋಧಕ್ಕೆ ತೊಡಗಿದ್ದರು. ನಾಲ್ಕು ದಿನಗಳ ಹಿಂದೆ ಮನೆಬಿಟ್ಟು ಎಲ್ಲಿಗೋ ಹೋಗಿದ್ದವರು ಅದೆ ತಾನೇ ತಮ್ಮ ಕೊಠಡಿಯನ್ನು ಸೇರಿದ್ದರು.

ಸುಶೀಲಕ್ಕ ಕೋಣೆಯನ್ನು ಹೊಕ್ಕಾಗ ಅವರು ಬಾಯಲ್ಲೇನೋ ವಟಗುಟ್ಟುತ್ತ, ತೊಡೆಯ ಮೇಲಿದ್ದ ಪಂಚಾಂಗದ ಹಾಳೆಗಳನ್ನು ತಿರುವಿಹಾಕುತ್ತಾ ಇದ್ದರು. ತಮ್ಮ ಕೆಲಸದಲ್ಲಿ ತಮ್ಮನ್ನೇ ಮರೆತಿದ್ದ ಅವರಿಗೆ, ಹೆಂಡತಿ ಬಂದು ನಿಂತದ್ದು ಗೋಚರಿಸಲಿಲ್ಲ. ಸ್ವಲ್ಪ ಹೊತ್ತು ಸುಮ್ಮನೆ ನಿಂತಿದ್ದು ಬಳಿಕ ಸೀರೆಯ ಸೆರಗನ್ನು ಹಣೆಯ ತನಕ ಎಳೆದುಕೊಂಡು, ಮುಖಸಿಂಡರಿಸಿ, ಹುಬ್ಬುಗಂಟಿಕ್ಕಿ ಸುಶೀಲಕ್ಕ ನುಡಿದಳು. "ಯಾವಾಗ ನೋಡಿದರೂ ಇದೇ ಇವರ ಹಾಡು! ನನ್ನ ಕಡೆ ಗಮನವೇ ಇಲ್ಲ! ಹಾಳಾದ ಪುಸ್ತಕ, ಪೇಪರು, ಪಂಚಾಂಗ–ಗೀಚಾಂಗಗಳೇ ಇವರಿಗೆ ಮೆಚ್ಚಿಕೆಯಾಗಿರುವಾಗ ನಾನ್ಯಾಕೆ ಬೇಕು!"

ಕೋಪಪೂರಿತವಾದರೂ ಕಿವಿಗಿಂಪಾದ ಹೆಂಡತಿಯ ಮಾತನ್ನು ಕೇಳಿ ರಾಯರು ಎಚ್ಚರಗೊಂಡರು! ತೊಡೆಯಮೇಲಿದ್ದ ಪಂಚಾಂಗವನ್ನು ಮೇಜಿನ ಮೇಲೆತ್ತಿ ಇಟ್ಟರು; ನಂತರ ಹೆಂಡತಿಯನ್ನು ನೋಡುತ್ತಲೆ, ಕನ್ನಡಕವನ್ನು ನಿಧಾನವಾಗಿ ತೆಗೆದು, ಮಡಿಸಿ, ಅದರ ಪೆಟ್ಟಿಗೆಯೊಳಕ್ಕೆ ಸೇರಿಸಿ ಯಥಾಸ್ಥಾನದಲ್ಲಿಟ್ಟು ಎಂದರು. "ಏನೇ ಸುಶೀಲಾ, ಬಹಳ ಹೊತ್ತಾಯ್ತೇನು ನೀನು ಬಂದು? ನೀನು ಬಂದದ್ದೇ ನನಗೆ ಗೊತ್ತಾಗಲಿಲ್ಲಕಣೆ. ಏನು? ವಯಸ್ಸಾಗುತ್ತಾಗುತ್ತಾ, ಹೆಜ್ಜೆಗಳ ದನಿಕೂಡ ಮೆತ್ತಗಾಗುತ್ತಿರುವಂತೆ ತೋರುತ್ತದಲ್ಲ! ಅಷ್ಟು ಮೆತ್ತಗೆ ಬಂದವಳು ಅಷ್ಟೇ ಮೆತ್ತಗಾಗಿ ಈ ಕುರ್ಚಿಯಲ್ಲಿ

ಕೂಡ್ರಬಾರದಿತ್ತೇ?...... ಇನ್ನಾದರೂ ನಿಂತಿರಬೇಕಾಗಿಲ್ಲ, ಕೂತುಕೋ ಪಕ್ಕದ ಆ ಕುರ್ಚಿಯುಲ್ಲಿ- ಅದೇಕೆ ನನ್ನ ಹೀಗೆ ದುರದುರನೆ ನೋಡುತ್ತೀಯೆ? ಎಲ್ಲಾದರು ಸಿಟ್ಟುಗಿಟ್ಟು ಬಂದಿತೇನು ಮಹಾರಾಣಿಗೆ!"

ಸುಶೀಲಕ್ಕ, "ಸಾಕು ಬಿಡಿ,"—ಎಂದು ಕೂಡ್ರುತ್ತಾ ಕೇಳಿದಳು—"ಹೋದ ಕೆಲಸವೇನಾಯಿತು?"

"ಕೆಲಸವೇನಾಗೋದು, ಚೆನ್ನಾಗೇ ಆಗಿದೆ. ನಮ್ಮ ಮಗಳ ರತಿಯುಂತಹ ರೂಪ, ಅತ್ತೆಯಾದ ನಿನ್ನ ವಾತ್ಸಲ್ಯ, ಮಾವನಾದ ನನ್ನ ಆದರದ ಸ್ನೇಹ- ಇವಿಷ್ಟೂ ಒಟ್ಟೊಟ್ಟಿಗೇ ಸಿಗುವಾಗ ಯಾವ ವರ ತಾನೇ ತುಷ್ಟಿತಾಳೆನ್ನು ಒಪ್ಪಲಾರ?......"

"ಸಾಕು ನಿಲ್ಲಿಸಿಂದ್ರೆ ನಿಮ್ಮ ಉದ್ದ ಪೀಠಿಕೇನ? ಅಲ್ಲಿ ಏನಾಯಿತೆಂದು ತಿಳಿಸಿ. ಏನು, ಹಾಗಾದರೆ ಮದ್ದೂರು ರಾಮರಾಯರ ಮಗ ಕೃಷ್ಣಮೂರ್ತಿ ಮದುವೆಗೆ ಒಪ್ಪಿದನೇನು?"

"ಅವನೇಕೆ ಒಪ್ಪಬೇಕು? ಅವನ ತಂದೆತಾಯಿಗಳು ಒಪ್ಪಿದರೆ ಆಯಿತಲ್ಲ! ನಿನ್ನ ಮಗಳೊಬ್ಬಳು ಹೇಗೊ ಹೇಗೋ ವರ್ತಿಸುತ್ತಾಳೆಂದ ಮಾತ್ರಕ್ಕೆ ಇತರ ಹುಡುಗ ಹುಡುಗಿಯರೂ ಹಾಗೇ ಮಾಡುತ್ತಾರೇನು?"

ರಾಯರ ಮಾತಿನ ವ್ಯಂಗ್ಯಾರ್ಥ ಸುಶೀಲಕ್ಕನಿಗೆ ಹೊಳೆಯದೇ ಹೋಗಲಿಲ್ಲ. ಆದರೂ ಅದನ್ನು ಗಮನಿಸದವಳಂತೆ ಕೇಳಿದಳು. "ಅಂದರೆ ದಿನ ನಿಷ್ಕರ್ಷೆಯಾಯಿತೇ?"

"ಅದನ್ನು ನಿಷ್ಕರ್ಷಿಸಲೆಂದೇ ಪಂಚಾಂಗ ಹಿಡಿದು ಕೂತೆ, ಅಷ್ಟರಲ್ಲೇ ಬಂತು ನಿನ್ನ ಸವಾರಿ........!"

"ಅದೆಲ್ಲ ಜೋಯಿಸರ ಪಾಲಿಗಿರಲಿ; ನಿಮಗೇಕೆ? ನೋಡಿ, ಈಗ ಯಾರೇನೆಂದರೂ ನಮ್ಮ ಹುಡುಗಿ ಏನೆನ್ನುವಳೋ? ಅವಳನ್ನು ಕೇಳಿ, ಅವಳೊಪ್ಪಿದ ಮೇಲಲ್ಲವೇ ಮುಂದಿನ ವಿಚಾರ?"

ರಾಯರ ಮುಖಮುದ್ರೆ ಒಮ್ಮೆಗೇ ಗಂಭೀರವಾಯಿತು. ಅವರೆಂದರು "ನೀವು ತಾಯಿ-ಮಕ್ಕಳ ಅಭಿಪ್ರಾಯದಂತೆ ನಡೆಯುಹೋಗಿ ನಾಲ್ಕು ಜನರ ಮುಂದೆ ಮುಖತೋರಿಸಲಾಗದ ಸ್ಥಿತಿ ಬಂದಿದೆ ನನಗೆ. ಇನ್ನೂ ನಿಮ್ಮಿಬ್ಬರ ಅಭಿಪ್ರಾಯಗಳನ್ನೇ ಕಟ್ಟಿಕೊಂಡು ಸಂಸಾರ ಸಾಗಿಸೋದಕ್ಕೆ ನಾನೇನು ನಿಮ್ಮ ಸೂತ್ರದ ಬೊಂಬೆಯೆಂದು ತಿಳಿದೆಯಾ ನೀನು? ನಿಮ್ಮ "ಬೇಕು-

ಬೇಡ"ಗಳ ಸಮಸ್ಯೆಯು ನಡುವೆ ಹೊಯ್ದಾಡಿ ಹೊಯ್ದಾಡಿ ನನಗೆ ಸಾಕುಸಾಕಾಗಿ ಹೋಗಿದೆ. ನೀನೇ ಇದನ್ನು ಒಪ್ಪಿದರೂ ಸರಿ; ಇಲ್ಲ, ನಿನ್ನ ಮಗಳನ್ನೇ ಒಪ್ಪಿಸಿಕೊಂಡರೂ ಸರಿ—ನನಗಂತು ಯಾವ ಅಡ್ಡಿ ಆತಂಕಗಳೂ ಉಳಿಯುಲಿಲ್ಲ ಮುಂದಕ್ಕೆ. ಹೇಗೂ ಇರಲಿ; ಇದು ನನ್ನ ಕೊನೆಯ ಯತ್ನ."

ಅವರ ದನಿಯ ಬಿರುಸಿಗೆ ಸುಶೀಲಕ್ಕ ನಡುಗಿದಳು; ಶಾಂತವಾಗಿ ಹೇಳಿದಳು—"ಇಂಥಾ ಸಂಗತಿಗಳಲ್ಲಿ ಹೀಗೆಲ್ಲಾ ರೇಗಾಡಿದರೆ ಹೇಗೆ? ಚೆನ್ನಾಗಿ ಯೋಚಿಸಿ ಸಮಾಧಾನದಿಂದ ಕೆಲಸಮಾಡುವುದೇ ಉಚಿತವೆನಿಸದೆ?"

ಆವಳು ಈ ನುಡಿಗಳನ್ನು ಬಹಳ ನಯವಾಗಿ ಆಡಿದ್ದರೂ ರಾಯರ ಬಿರುಸು ತಗ್ಗಲಿಲ್ಲ. ಇದರಿಂದ ಅವಳ ನೊಂದ ಹೃದಯದ ಪಶ್ಚಾತ್ತಾಪ ಕೆರಳಿತು. ಅವಳ ಕಣ್ಣುಗಳು ಹನಿಗೂಡಿದುವು; ಗದ್ಗದ ಸ್ವರದಿಂದ ಹೇಳಿದಳು—"ಇನ್ನು ಏನಾದರೂ ನಿಮ್ಮ ಮಾತಿಗೆ ನಾನು ವಿರೋಧವಾಗಿ ನಡೆಯುಲಾರೆ. ಈ ಸಲ ಜೋರಾಗಿಯೆ ಅವಳಿಗೆ ಬರೆಯಿರಿ. ಒಪ್ಪದಿದ್ದರೆ ನಾನೂ ಅವಳ ಸಂಬಂಧದಿಂದ ಕೈತೊಳೆದುಕೊಳ್ಳುವೆ ನಿಮ್ಮೊಂದಿಗೇ. ಎಲ್ಲಾ ಹೋದ ಮೇಲೆ ಎರಡು ದಿನದ ಬಾಳಿಗಾಗಿ ನನಗೇಕೆ ಅವಳ ಚಿಂತೆ?"

ಮೊದಲೇ ಅವಳು ರೋಗಿ. ಅದರ ಜೊತೆಗೆ ಈ ಕೊರಗು ಬೇರೆ! ಅವಳ ಕಂಠ ಬಿಗಿಯಿತು; ಮುಂದೆ ನುಡಿಯಲಾರದಾದಳು. ಗಂಡನೆದುರಿಗೆ ಕುಳಿತು ಗಟ್ಟಿಯಾಗಿ ಅತ್ತು ಹೆಣ್ತನದ ದೌರ್ಬಲ್ಯವನ್ನು ತೋರಿಸಲು ಅವಳು ಅಂಜಿದಳು. ಆದ್ದರಿಂದ ಒಡನೆ ಉಕ್ಕಿಬಂದ ಕಣ್ಣೀರನ್ನು ಸೆರಗಿನ ತುದಿಯಿಂದ ಒರಸಿಕೊಳ್ಳುತ್ತ, ಆಕೆ ಅಲ್ಲಿಂದೆದ್ದು ಹೊರ ಬಂದಳು.

ರಾಯರು ಅವಳ ಮರುಗನ್ನು ನೋಡಿ ದೀರ್ಘ ನಿಶ್ವಾಸವೊಂದನ್ನು ಬಿಟ್ಟರು; ಮುಂದಿನ ವಿಚಾರದ ಕಡೆ ತಿರುಗಿದರು.

೨

ಮಧ್ಯಾಹ್ನ ತುಷಿತಾ ಊಟಕ್ಕಾಗಿ ತನ್ನ ಕೋಣೆ ಸೇರಿದಾಗ ಕಿಟಕಿಯ ಬಳಿ, ಕೆಳಗೆ ಲಕೋಟೆಯೊಂದು ಬಿದ್ದಿರುವುದನ್ನು ಕಂಡಳು. ಅದನ್ನೆತ್ತಿ ವಿಳಾಸವನ್ನು ಓದಿಕೊಂಡಳು. ಅದರ ಬರಹ ನೋಡುತ್ತಲೇ ಕಾಗದ ಅಣ್ಣನದು ಎಂದು ಸ್ಪಷ್ಟವಾಯಿತು! ಕೂಡಲೆ ಕವರನ್ನು ಸೀಳಿ ಪತ್ರ ಓದಲು ಅವಳಿಗೆ ಮನಸ್ಸಾಗಲಿಲ್ಲ. ಕಾರಣ, ಅದರಲ್ಲಿ ಬರೆದಿರಬಹುದಾದ 'ವಿಷಯದ

ಅರಿವು ಆಕೆಗಿತ್ತು. ಅದನ್ನು ವ್ಯಕ್ತಪಡಿಸಿರಬಹುದಾದ ಧಾಟಿಯನ್ನು ನೆನೆದು ಆಕೆ ತತ್ತರಿಸಿದಳು. ಆಕೆಗೆ ಗೊತ್ತು– ಅದನ್ನೋದಿದ ಮೇಲೆ ಅನ್ನ ರುಚಿಸದೆಂದು! ಓದಲು ಅಷ್ಟೇನು ಅವಸರ?—ಎಂದು ಅದನ್ನು ಮೇಜಿನ ಮೇಲೆ ಇಟ್ಟಳು.

ಒಂದರ್ಧಗಳಿಗೆಯಲ್ಲಿ ಊಟವೂ ಮುಗಿಯಿತು. ಇನ್ನೇನು ಪತ್ರ ಓದುವುದೆ? ಇಲ್ಲ; ಎರಡು ಕ್ಷಣಗಳ ವಿಶ್ರಾಂತಿ ಬೇಕು! ಅವಳು ಹಾಗೇ ಕುರ್ಚಿಯಲ್ಲಿ ಒರಗಿದಳು.

ಎಚ್ಚರವಾದಾಗ ಎದ್ದು ಕೈಗಡಿಯಾರ ನೋಡಿದರೆ ಆಫೀಸಿಗೆ ಹೊರಡಲು ಹತ್ತು ನಿಮಿಷದಷ್ಟೇ ಉಳಿದಿತ್ತು. ಮೇಜಿನ ಸನಿಹಕ್ಕೆ ಬರುತ್ತಲೇ ಪತ್ರದ ನೆನಪಾಯಿತು. ಆದರೆ ಓದಲು ಸಾಕಷ್ಟು ಸಮಯವಿರಲಿಲ್ಲ; ಇದ್ದರೂ ಅಣ್ಣನ ಲೇಖನಿಯ ತೀಕ್ಷ್ಣತೆ ಆಕೆಯನ್ನು ಭಯಗೊಳಿಸಿತು. ಆ ದಿನ ಶನಿವಾರ; ಸಂಜೆಯ ತನಕ ಒತ್ತಡದ ಕೆಲಸಗಳಿದ್ದುವು ಆಫೀಸಿನಲ್ಲಿ. ಅದನ್ನು ಚೆನ್ನಾಗಿ ಪೂರೈಸಬೇಕಾದರೆ ಪತ್ರವನ್ನು ಓದದಿರುವುದೇ ಒಳ್ಳೆಯದೆನಿಸಿತು ಅವಳಿಗೆ. ಮಾರನೆಯ ದಿನ ಭಾನುವಾರ; ರಜ. ಹಾಗೂ ಅಲ್ಲ, ಆಫೀಸಿನಿಂದ ಮರಳಿಬಂದು ಸಂಜೆಗೆ ಓದಿದರೆ ಏನು ಕೇಡು? ಹೀಗೆ ಯೋಚಿಸಿ ಅವಳು ಆಫೀಸಿಗೆ ಹೊರಟಳು.

ಆಫೀಸಿಗೆ ಹೋಗುತ್ತಿದ್ದಾಗ, ಅಲ್ಲಿ ಕೆಲಸಮಾಡುತ್ತಿದ್ದಾಗ, ಮತ್ತು ಹಿಂದಿರುಗುತ್ತಿದ್ದಾಗ ಆದಷ್ಟು ಬೇಗನೆ ಪತ್ರವನ್ನು ಓದಿ ಮುಗಿಸಬೇಕೆಂದು ಕಾತರಿಸಿದ್ದ ತುಷಿತಾ ನಾಲ್ಕು ಗಂಟೆಗೆ ಕೊಠಡಿಯನ್ನು ಸೇರುತ್ತಲೇ ಔದಾಸೀನ್ಯಹೊಂದಿದಳು. ಈಗ ಓದಬೇಕು—ಆಗ ಓದಬೇಕು, ಎಂಬ ಯೋಚನೆಯಲ್ಲೇ ಸಂಜೆ ದಾಟಿತು; ರಾತ್ರಿ ಬಂತು; ಊಟ ಮುಗಿಯಿತು; ಕೊನೆಗೆ ಹಾಸಿಗೆಯನ್ನೇರುವ ಸಮಯವೂ ಸಂದಿತು. ಅಂತು, ಕಡೆಗೂ ಒಮ್ಮೆ ಗಟ್ಟಿಮನಸ್ಸು ಮಾಡಿ ಮೇಜಿನ ಮುಂದೆ ದೀಪಕ್ಕೆ ಎದುರಾಗಿ ಕುಳಿತು ಲಕೋಟೆಯನ್ನು ನಡುಗುವ ಕೈಗಳಿಂದ ಸೀಳಿದಳಾಕೆ.

ಆಗ, ಅವಳ ಹೃದಯ ಡವಡವನೆ ಬಡಿಯತೊಡಗಿತು; ಹಣೆಯಲ್ಲಿ ಮೊಗದಲ್ಲಿ ಬೆವರಿನ ತುಂತುರು ಹನಿಗಳು ಹುಟ್ಟಿಕೊಂಡುವು. ಅವಳು ಪತ್ರವನ್ನು ಹೊರತೆಗೆದು ಮಡಿಕೆ ಬಿಚ್ಚಿದಳು. ಕಣ್ಣುಗಳು ಅಕ್ಷರಗಳನ್ನು ನೋಡುತ್ತ, ಮುಂದೆ ಸರಿದುವು:

ಪುತ್ತೂರು, ದ. ಕ. ಜಿಲ್ಲೆ.

ಮಗಳು ಶುಷಿತಾಗೆ— ದಿನಾಂಕ ೩—೫—೫೪.

ಅಣ್ಣನ ಆಶೀರ್ವಾದಗಳು.

ಮಗು, ನಾನೀಗ ನಿನಗೆ ಬರೆಯುತ್ತಿರುವ ವಿಷಯವು ಹೊಸದೇನೂ ಅಲ್ಲ; ಹಿಂದೆ ಎಷ್ಟೋ ಸಲ ಹೇಳಿದ್ದೇ. ಹಾಗೆಂದು ತಿಳಿದು ನೀನಿದನ್ನು ಉಪೇಕ್ಷಿಸಲಿಕ್ಕೂ ಸಾಕು. ಆದರೆ ನಿನ್ನನ್ನು ಹಡೆದ ತಂದೆಯೆಂಬ ಗೌರವದ ಭಾವನೆ ನನ್ನ ಪ್ರತಿ ನಿನ್ನಲ್ಲಿ ಲೇಶವಾದರೂ ಉಳಿದಿದ್ದಲ್ಲಿ ಹಾಗೆ ಮಾಡಲಾರೆಯೆಂದು ನಂಬಿದ್ದೇನೆ. ಹಾಗಿಲ್ಲದಿದ್ದರೆ ಈ ಪತ್ರವನ್ನು ಮುಂದಕ್ಕೆ ಓದುವ ಪ್ರಯತ್ನವನ್ನು ಮಾಡದೆ ಇಲ್ಲಿಗೇ ನಿಲ್ಲಿಸಿಬಿಡು.

ಶುಷಿತಾ ! ಹೆಣ್ಣುಮಕ್ಕಳು ಆಜೀವಪರ್ಯಂತ ಯಾವುದಾದರೊಂದು ರಕ್ಷಣೆಗೆ ಒಳಪಟ್ಟೇ ಇರಬೇಕಾದುದು ಅತ್ಯಗತ್ಯ. ಅಂಥ ರಕ್ಷಣೆ ತಾಯಿತಂದೆಯರಿಂದಾಗಲಿ, ಬಂಧುಬಳಗದವರಿಂದಾಗಲಿ ಮತ್ತು ಸ್ನೇಹಿತರಿಂದಾಗಲಿ ಸಿಗದು, ಸಿಕ್ಕಿದರೂ ಅದು ಶಾಶ್ವತ ರಕ್ಷೆಯಲ್ಲ. ಅದು ಹಾಗೆ ಸಿಗುವುದು ಒಂದೇ ಒಂದು ವ್ಯಕ್ತಿಯಿಂದ—ಕೈಹಿಡಿದ ಗಂಡನಿಂದ.

ನೀನು ಯೋಚಿಸಬಹುದು–ನನಗೆ ಒಂದು ನೌಕರಿ ಇದೆ; ತಿಂಗಳ ಕೊನೆಯಲ್ಲಿ ಕೈತುಂಬ ಹಣಬರುತ್ತದೆ; ಅನ್ನ–ಬಟ್ಟೆ ಮೊದಲಾದ ಯಾವುದಕ್ಕಾದರೂ ಕೊರತೆಯೇನು ?— ರಕ್ಷಣೆಯಾದರೂಯಾರದೇಕೆ ಬೇಕು?—ಎಂದು.

ಆದರೆ ಅನ್ನ–ಬಟ್ಟೆಗಳ ಅನುಕೂಲತೆಗಳಷ್ಟೇ ಒಂದು ವ್ಯಕ್ತಿಯ ಬದುಕನ್ನು ಪೂರ್ಣಗೊಳಿಸುವ ಸಾಧನಗಳಲ್ಲ; ಅವುಗಳಷ್ಟೇ ಸ್ತ್ರೀಯರ ರಕ್ಷಣಾಕವಚವಲ್ಲ. ಆತ್ಮ ಬಲವಿರುವವರು, ಒಂದು ವೇಳೆ, ಹಾಗೆ, ಏಕಾಂಗಿಗಳಾಗಿರಬಹುದು. ಆದರೆ ನಿನ್ನಂತಹ ಹರೆಯದವರು ಯೌವನದ ಕೆಚ್ಚಿನಿಂದ ತಾವೂ ಸ್ವತಂತ್ರ ಜೀವನ ನಡೆಸಬಲ್ಲೆವೆಂದು ಹೇಳಿದರೆ ಅದಕ್ಕೆ ಆತ್ಮಬಲವೆನ್ನಲಾಗದು. ಅಂಥವರ ದರ್ಪದ ನುಡಿಗಳನ್ನೂ ವ್ಯರ್ಥ ಹಾರಾಟವನ್ನೂ ನೋಡನೋಡುತ್ತಲೆ ನನ್ನ ತಲೆಗೂದಲು ಹಣ್ಣಾಗಿವೆ. ಇನ್ನು ನಿನ್ನೊಬ್ಬಳ ಸ್ವತಂತ್ರ ಜೀವನವನ್ನು ನೋಡಬೇಕೆಂದಿಲ್ಲ.

ಇಷ್ಟೆಲ್ಲಾ ಹೇಳಿದುದು—ನೀನು ವಿವಾಹವಾಗಲು ಒಪ್ಪಬೇಕೆಂಬುದನ್ನು ಮನದಟ್ಟು ಮಾಡುವುದಕ್ಕಾಗಿಯೇ ಎಂದು ತಿಳಿದಿರು. ನೋಡು, ನೀನು ಮದ್ದೂರು ರಾಮರಾಯರ ಹೆಸರನ್ನು ಕೇಳಿರಬಹುದು. ಅವರು

ಭಾರಿ ಜಮೀನ್ದಾರರು. ಅವರಿಗೆ ಕೃಷ್ಣಮೂರ್ತಿ ಅನ್ನುವ ಒಬ್ಬನೇ ಒಬ್ಬ ಮಗ. ಬಿ.ಎ. (ಆನರ್ಸ್) ಪ್ಯಾಸುಮಾಡಿ ಮನೆಯಲ್ಲೇ ಇದ್ದಾನೆ. ಹುಡುಗ ಲಕ್ಷಣವಂತ, ಗುಣವಂತ. ಅಲ್ಲದೆ ನಿನ್ನ ಮೆಚ್ಚಿನ ರಸಿಕನೂ ನಿಜ. ಅವನೊಡನೆ ನಿನ್ನ ಸಂಬಂಧ ಬೆಳೆಸಲು ನಾನು ನಿಶ್ಚಯಿಸಿದ್ದೇನೆ. ಎಲ್ಲ ಮಾತುಕತೆಗಳೂ ಮುಗಿದಿವೆ; ದಿನವೂ ಗೊತ್ತಾಗಿದೆ. ಈ ತಿಂಗಳ ಕೊನೆಗೆ ಲಗ್ನಕ್ಕೆ ಸುಮುಹೂರ್ತವನ್ನು ನಿರ್ಧರಿಸಲಾಗಿದೆ. ಏನು, ಈ ಸಂಬಂಧ ನಿನಗೆ ಒಪ್ಪಿಗೆಯಷ್ಟೆ?

ನಿನ್ನ ಅಮ್ಮನ ಸ್ಥಿತಿ ಈಗೊಂದು ವಾರದಿಂದ ವಿಷಮಕ್ಕಿಟ್ಟಿದೆ. ದಿನವಿಡೀ ಹಾಸಿಗೆಯಲ್ಲೇ ಬಿದ್ದಿರುತ್ತಾಳೆ. ಮಾತೆಲ್ಲಾ ನಿನ್ನ ಮದುವೆಯ ಕುರಿತೇ. ಅವಳ ಈ ದುರವಸ್ಥೆಗೆ ಬಹುಮಟ್ಟಿಗೆ ನೀನೇ ಕಾರಣಳಾಗಿರುತ್ತಿ. ನೀನು ನೌಕರಿಗೆ ರಾಜಿನಾಮೆಯನ್ನಿತ್ತೇ ಬರಬೇಕೆಂದು ಆಕೆ ಹೇಳುತ್ತಾಳೆ. ಆದರೆ ನಾನು ಹಾಗೆ ಅಭಿಪ್ರಾಯಪಡುವುದಿಲ್ಲ. ಈ ಪತ್ರ ತಲಪಿದೊಡನೆ ಎಲ್ಲವನ್ನೂ ನಿರ್ಧರಿಸಿ, ಎರಡು ತಿಂಗಳ ರಜೆ ಪಡೆದು ಇತ್ತ ಬಂದು ಬಿಡು.

ನನ್ನ ಈ ಓಲೆ, ಇದರಲ್ಲಿಯ ನನ್ನ ಸಲಹೆ ಒಂದು ವೇಳೆ ನಿನಗೆ ಪ್ರಿಯವಾಗದಿದ್ದರೆ ನಿನ್ನ ಮನಬಂದಂತೆ ನಡೆಯಲು ನಿರ್ಧರಿಸಿರುವೆಯಾದರೆ ಈ ಪತ್ರವೇ ನಿನ್ನ–ನಮ್ಮ ಸಂಬಂಧದ ಅಂತ್ಯ ಆತ್ಮೀಯ ತಂತಿಯೆಂದು ತಿಳಿ. ನಾನಂತು ನಿನ್ನ ಕಡೆಯಿಂದ ಸಂಪೂರ್ಣವಾಗಿ ಮುಖ ತಿರುಗಿಸಿಕೊಳ್ಳುವೆ; ನಿನ್ನ ಅಮ್ಮನಾದರೋ ನಿನ್ನ ಕಡೆಯಿಂದಲೇ ಏಕೆ? ನನ್ನ ಕಡೆಯಿಂದಲೂ ಕಣ್ಣುಮುಚ್ಚಿಕೊಳ್ಳುವವಳೇ.

ನೀನೆಲ್ಲವನ್ನೂ ಸರಿಯಾಗಿ ಯೋಚಿಸಿ ನಡೆಯುತ್ತಿಯಾಗಿ ಆಶಿಸಿದ್ದೇನೆ. ಬೇಗನೆ ಉತ್ತರ ಬರೆ, ಇಲ್ಲವೆ ಕೂಡಲೆ ಹೊರಟು ಬಾ.

ಇತಿ, ನಿನ್ನ ಹಿತೈಷಿ,

ಗಿರೀಶರಾಯ.

ಪತ್ರ ಓದಿ ಮುಗಿಸಿದ ತುಷಿತಾಗೆ ದಿಕ್ಕೇ ತೋಚದಾಯಿತು — ಪತ್ರ ಕೈಯಿಂದ ತಪ್ಪಿಬಿತ್ತು. ಕುರ್ಚಿಯಿಂದೆದ್ದು ತೂಗುತ್ತಾ ಹೋಗಿ ಅವಳು, ಮಂಚದ ಮೇಲೆ ಒರಗಿದಳು. ಅವಳಿಗೆ ಅರಿವು ಬಂದು ನೋಡಿದಾಗ, ತಲೆಯ ಕಡೆ, ಹಾಸುಗೆ, ನೀರೆರೆದಂತೆ ತೊಯ್ದುಹೋಗಿತ್ತು — ಆಕೆಯ ಕಣ್ಣೀರ ಧಾರೆಯಿಂದ.

ಆಕೆ ಕೆಳಗಿಳಿದು ನೆಲದ ಮೇಲೆ ಬಿದ್ದಿದ್ದ ಕಾಗದವನ್ನು ಎತ್ತಿಕೊಂಡಳು. ತಿರುಗಿ ಅದನ್ನು ಆಮೂಲಾಗ್ರವಾಗಿ ಓದಿಕೊಂಡಳು. ಅದರಿಂದ, ಈ ಸಲ ಅವಳ ಮೇಲೆ ಉಂಟಾದ ಪರಿಣಾಮವೆಂದರೆ– ಅಣ್ಣನ ಮೇಲೆ ಕೋಪ, ತನ್ನ ಮಂಕುತನಕ್ಕಾಗಿ ಪಶ್ಚಾತ್ತಾಪ ಮತ್ತು ತಾಯಿಯ ಸಲುವಾಗಿ ಖೇದ!

ಕೊಣೆಗೆ ಎದುರಿನ ಚರ್ಚ್‌ಗಂಟೆ ಹನ್ನೊಂದು ಒಡಿಯಿತು. ತುಷಿತಾ ಯೋಚನೆಯಲ್ಲಿ ಮಗ್ನಳಾಗಿದ್ದಳು. "ಎಷ್ಟೊಂದು ನಿಷ್ಠುರವಾಗಿ ಬರೆದಿದ್ದಾರೆ ಅಣ್ಣ! ಅಬ್ಬಬ್ಬಾ! ಎಂತಹ ಕಠಿಣ ಹೃದಯ ಅವರದು! ನಾನು ಊಹಿಸಿದ್ದ ಮಾತುಗಳನ್ನೇ ಚಾಚೂ ತಪ್ಪದೆ ಬರೆದಿರುವರಲ್ಲ! ಮಧ್ಯಾಹ್ನ ಓದದಿದ್ದುದೇ ಒಳಿತಾಯಿತು; ಓದಿದ್ದರೆ ನನ್ನ ತಲೆಯೇ ಹಾಳಾಗಿ, ಆಫೀಸಿನ ಕೆಲಸಗಳು ಒಂದಕ್ಕೆ ಒಂದೂವರೆ ಆಗುತ್ತಿತ್ತಲ್ಲವೆ?" ಎಂದು ಗೊಣಗುತ್ತಾ, ತನ್ನಲ್ಲೇ ಮತ್ತೂ ಹೇಳತೊಡಗಿದಳು—

"ಅಣ್ಣ-ಅಮ್ಮ ಹೀಗೇಕೆ 'ಮದುವೆ, ಮದುವೆ' ಅಂತ ನನ್ನ ಬೆನ್ನು ಹತ್ತಿದ್ದಾರೋ ಕಾಣೆ. ಇದೊಂದು ಸಹಿಸಲಾರದ ಕಾಟ! ಆಯಿತು; ಮದುವೆ ನಿಶ್ಚಿತವಾಯಿತಂತಪ್ಪ. ಅದನ್ನು ಒಂದೆರಡು ಒಳ್ಳೆಯ ಮಾತಿನಲ್ಲಿ ತಿಳಿಸಬಾರದಿತ್ತೇ? ಅದು ಬಿಟ್ಟು ಅಂಬು ಅಂಬಿನಂಥಾ ಮಾತುಗಳನ್ನೇ ಕಾಗದದಲ್ಲಿ ತುಂಬಿ ಕಳಿಸಿದ್ದಾರಲ್ಲ? ಏನು, ಹಾಗೆ ಬರೆಯದಿದ್ದರೆ ನಾನು ಹೋಗಲಾರೆನೆಂದೇ?"

ಅವಳ ಬುದ್ಧಿ ತಿರುಗಿತು; ಅವಳು ಹೀಗೂ ತರ್ಕಿಸತೊಡಗಿದಳು— "ಹೌದು; ಈ ಮೊದಲು ಇದಕ್ಕಿಂತ ಜೋರಾದ ಪತ್ರಗಳನ್ನೇ ಬರೆದಿರಲಿಲ್ಲವೇ? ಮನೆಗೆ ಹೋದಾಗಲೆಲ್ಲಾ ಸಾರಿ ಸಾರಿ ಹೇಳಲಿಲ್ಲವೇ? ಆದರೂ ಮಣಿದಿದ್ದೇನೆಯೋ ನಾನು? —ಅನ್ನುವಾಗ, ಈಗ, ಹೀಗೆ ಬರೆದುದರಲ್ಲಿ ಅವರ ತಪ್ಪೇನಿದೆ? ಅವರ ಸಹನೆಗೂ ಒಂದು ಮೇರೆಯಿದೆಯಲ್ಲವೆ? ನಾನಾದರೂ ಹೀಗೇಕೆ ಮಂಕುಬಡಿದವಳಂತೆ ಕುಳಿತ್ತಿದ್ದೇನೆ? ಇನ್ನೂ ಜೀವನದ ಯಾವುದೊಂದೂ ನಿಶ್ಚಿತ ಮಾರ್ಗವನ್ನು ನಿರ್ಧರಿಸಿಲ್ಲ; ಅವರೇ ನಿರ್ಧರಿಸಿದರು; ನಿರ್ಧರಿಸಿ ಬರೆದರು. ಆದರೂ ಅವರ ಬಾಯಿಯಿಂದ 'ಮದುವೆ' ಶಬ್ದ ಕೇಳುವಾಗಲೆಲ್ಲ ನನ್ನ ಮನಸ್ಸೇಕೆ ಹೀಗೆ ಕಳವಳಿಸುತ್ತಿದೆ? —ಅಸಹ್ಯ ವೇದನೆಗೊಳ್ಳುತ್ತಿದೆ? ಅವರೆಷ್ಟೊ ಬಗೆಯಿಂದ ಪೀಡಿಸಿದರೂ ನನ್ನ ಮನಸ್ಸೊಪ್ಪದಲ್ಲ! ಕಾರಣವಿದೆಯೇ ಇದಕ್ಕೆ?"

ಆಕೆಗೆ ಹಿಂದಿನ ಘಟನೆಗಳ ನೆನಪಾಯಿತು—"ನಾನು ಕೆಲಸಕ್ಕೆ ಸೇರಿದ ಕೆಲ ದಿನಗಳಲ್ಲೇ ಅಮ್ಮ ಹಾಸಿಗೆ ಹಿಡಿದಳು, ವರುಷ ಕಳೆಯುತ್ತಲೆ ನನ್ನ ವಿವಾಹದ ಕುರಿತು ಒತ್ತಾಯ ಆವಳದು. ಆದರೆ ಮುಂದಿನ ಒಂದು ವರ್ಷ ವಿವಾಹವೆಂಬುದು ನನಗೆ ಪೂರ್ಣವಾಗಿ ಬೇಡವಾಗಿತ್ತು. ಕಾರಣ, ಆಗ ನಾನು ಪ್ರೀತಿಯ ಮೂರ್ತಿಯಾಗಿದ್ದೆ. ನನ್ನ ಪ್ರೀತಿಭಾವವು ಏಕರೂಪವಾಗಿತ್ತು. ಅದು ಚಂಚಲವಾಗಿತ್ತು; ಆದರೆ ಮಗುವಿನಂತಿತ್ತು. ಅಂತೇ ಅಮ್ಮನ ದೈನ್ಯದ ಬೇಡಿಕೆ, ಅವಳಿಗೆ ನೆರವಾಗಿ ವಾದಿಸುತ್ತಿದ್ದ ಅಣ್ಣನ ಹಿತೋಕ್ತಿ— ಅರ್ಥವಿಲ್ಲದವುಗಳಾಗಿ ತೋರುತ್ತಿದ್ದುವು. ಆದ್ದರಿಂದ, ಅವರ ಪ್ರಶ್ನೆಗಳಿಗೆ ನಕಾರವೇ ನನ್ನ ಉತ್ತರವಾಗಿರುತ್ತಿತ್ತು.

"ಆದರೆ ಅದರ ಮುಂದಿನ ವರ್ಷ—ಅಂದರೆ ನಾನು ನೌಕರಿ ಹಿಡಿದ ಅನಂತರ, ಆ ಮೂರನೇ ವರ್ಷದ ಮೊದಲಭಾಗದಲ್ಲಿ ನನ್ನ ಪ್ರೀತಿಧಾರೆ ಕವಲೊಡೆಯಿತು. ಅದರ ಒಂದು ಕವಲು ಪ್ರೇಮದ - ಪ್ರಣಯದ ರೂಪು ಧಾರಣಮಾಡಿತು. ಆಗಲೇ ನನಗೆ 'ಮದುವೆ' ಎಂಬುದರ ಅರ್ಥ ಹೊಳೆಯಿತು. ಬಾಳಿನಲ್ಲಿ ಅದರ ಸಹಜವಾದ ಆವಶ್ಯಕತೆಯು ಅರಿವಾಯಿತು; ಮದುವೆ ಮನುಷ್ಯನಿಗೆ ಬೇಕಾದ ಅತ್ಯಗತ್ಯವಾದೊಂದು ವಿಧಿ ಎಂದು ತೋರ ಹತ್ತಿತು. ಆದರೂ ನನ್ನ ಬಗೆಯಂತಲ್ಲದೆ ತಂದೆ ತಾಯಿಗಳ ಇಷ್ಟದ ಪ್ರಕಾರ ನಡೆಯಲು ನಾನು ತಯಾರಿರಲಿಲ್ಲ. ಇದಕ್ಕೇನು ಕಾರಣ? ಅದೊಂದು ಅಪೂರ್ವ, ಸೋಜಿಗದ ಘಟನೆ.

"ಆ ವರ್ಷ, ಯುಗಾದಿಯ ಹಿಂದಿನ ದಿನ ನಾನು ಎರಡು ದಿನಕ್ಕಾಗಿ ಊರಿಗೆ ಹೋಗಲಾಶಿಸಿ ಬಸ್‌ನಿಲ್ದಾಣಕ್ಕೆ ಹೋದೆ. ಹೋಗುವಾಗ ವಿಳಂಬವಾಗಿತ್ತು. ಆದ್ದರಿಂದ, ಅಷ್ಟರಲ್ಲೇ ಬಸ್ಸಿನಲ್ಲಿ ಪ್ರಯಾಣಿಕರು ತುಂಬಿಕೊಂಡು, ಕೊನೆಗೆ ಪರಿಚಿತನಾದ ಡ್ರೈವರನ ಕೃಪೆಯಿಂದಾಗಿ ಗಂಡಸರ ನಡುವೆ ಕುಳಿತುಕೊಳ್ಳಲು ಎಡೆಸಿಕ್ಕಿತು. ಬಸ್ಸಿನೊಳಗೆ ಗದ್ದಲ ವಿಪರೀತ; ಕುಳಿತಲ್ಲಿಂದ ಅಲುಗಾಡಲೂ ಅವಕಾಶವಿಲ್ಲ. ನನ್ನ ಹತ್ತಿರ ಗಂಟುಮೂಟೆಗಳೇನೂ ಇರಲಿಲ್ಲ; ಎರಡು ದಿನಗಳ ಹಿಂದೆಯಷ್ಟೇ ಸಂಬಳ ಸಿಕ್ಕಿತ್ತಾಗಿ ನೂರು ರೂಪಾಯಿಗಳುಳ್ಳ ಒಂದು 'ಪರ್ಸ್' ಮಾತ್ರ ಕೈಯಲ್ಲಿತ್ತು; ಆದ್ದರಿಂದ, ದಾರಿಯಲ್ಲಿ, ಸುಲಭವಾಗಿಯೆ ಗಂಡಸರ ಮಧ್ಯದಿಂದ ಮೆಲ್ಲಮೆಲ್ಲನೆ ಜಾರಿಕೊಂಡು ಸೀಟಿನ ಕೊನೆ ಸೇರಿ ಹೊರಗೆ ತಲೆ ಹಾಕಿದೆ.........

"ಹಾ! ಹೊರಗೆ ಅದೆಂಥ ರಮ್ಯ ದೃಶ್ಯ! ಸಹ್ಯಾದ್ರಿಯ ಸೆರಗಿನಲ್ಲಿ ನಿಂತು ಗುಡ್ಡಗಳ ರಾಣಿಯಾಗಿ ಕಂಗೊಳಿಸುವ ಗಿರಿರಾಣಿ ಕೊಡಗಿನ ಮುಖ್ಯ ಕೇಂದ್ರವನ್ನು ಬಿಟ್ಟು ಪಶ್ಚಿಮಕ್ಕೆ ಸಾಗಿತ್ತು, ಬಸ್. ಕಾರ್ಗತ್ತಲೆಯ ನಡುವಣ ಬೆಳಕಿನ ರೇಖೆಯಂತೆ ಗುಡ್ಡಗಳ ಮಧ್ಯದಿಂದ ಡಾಮರು ಬಳಿದ ಆ ರಸ್ತೆ ಸೂರ್ಯನ ಬಿಸಿಲಿಗೆ ಹೊಳೆಯುತ್ತ, ಅಂಕುಡೊಂಕಾಗಿ ಹರಿದಿತ್ತು. ಬಸ್ ಮುಂದಕ್ಕೆ ಚಲಿಸಿದಂತೆಲ್ಲ ಪಕ್ಕದ ನಿಸರ್ಗತೆರೆ ಹಿಂದುಹಿಂದಕ್ಕೆ ಸರಿದು ತನ್ನ ವೈವಿಧ್ಯತೆಯನ್ನು ಪ್ರದರ್ಶಿಸುತ್ತಿತ್ತು. ಗುಡ್ಡಗಳ ಗೋಡೆ ದಾಟಿದರೆ ನಡುನಡುವೆ ಬಯಲು, ಗದ್ದೆಗಳು ಬರುತ್ತಿದ್ದುವು; ದೂರದಲ್ಲಿ ಸಾಲಾಗಿ ಹಬ್ಬಿನಿಂತ ಗುಡ್ಡಗಳು ನೀಲ ಬಣ್ಣದ ಬೆಣ್ಣೆಯ ಮುದ್ದೆಗಳಂತೆ ಮತ್ತು ಹತ್ತಿರದ ಬೆಟ್ಟಗಳು ಧ್ಯಾನಸ್ಥಯೋಗಿಗಳಂತೆ ಭಾಸವಾಗುತ್ತಿದ್ದುವು. ಅವುಗಳ ಶಿಖರಗಳನ್ನು ಸುತ್ತುವರಿದು ಗಗನಕ್ಕೇರುವ ಬೆಳ್ಮುಗಿಲ ತೆಳು ಪದರುಗಳು, ಅವು ಬಿಡುತ್ತಿರುವ ಸೌಮ್ಯ ತಪೋ ಜ್ವಾಲೆಯಂತೆ ತೋರುತ್ತಿದ್ದುವು.........

"ಹೀಗೆ ಬಹಳಹೊತ್ತು ನೈಸರ್ಗಿಕ ಸೌಂದರ್ಯಾನುಭವದಲ್ಲಿ ತಲ್ಲೀನಳಾಗಿದ್ದು, ಎಚ್ಚರಗೊಂಡಾಗ, ನಾನು ಕುಳಿತಿದ್ದ ಬೆಂಚಿಗೆ ಎದುರಿನ ಬೆಂಚಿಯಲ್ಲಿ, ಆ ಕೊನೆಯಿಂದ ಒರಟಾದ ದನಿಯೊಂದು ಕೇಳಿ ಬಂತು, 'ಅಲ್ಲೊ, ಮೂರ್ತಿ! ಕಲಾವಿದರು ನಿಸರ್ಗವನ್ನು ಆಸಕ್ತಿಯಿಂದ ಈಕ್ಷಿಸುವರೆಂದು ನಾನು ಕೇಳಿ ಬಲ್ಲೆ. ಈ ವಸ್ತು ಕಲಾವಿದರ ಉಪಾಸನೆಗೆ ತಕ್ಕಂತಿದೆಯೇ ಹೊರತು ಕಲಾಮಹಿಮೆಯ ಯಾವ ಲಕ್ಷಣಗಳೂ ಕಂಡು ಬರುತ್ತಿಲ್ಲ. ಆದರೂ ಈ ತನ್ಮಯತೆಯ ನಿಸರ್ಗನಿರೀಕ್ಷೆಯೇಕೋ ನಾನರಿಯೆ"— ಆ ಮಾತು ಇಂಗ್ಲೀಷಿನಲ್ಲಿ.

"ಅದಕ್ಕೆ ಮತ್ತೊಂದು ದನಿಯಿಂದ ಉತ್ತರವೂ ಕೇಳಿಬಂತು; 'ಕಲಾವಿದರ ಉಪಾಸನೆಗೆ ತಕ್ಕವರಾಗಿ ತೋರುವವರೂ ಕೂಡ ಕಲಾವಿದರೆನಿಸಿಕೊಳ್ಳಲು ಸಾಧ್ಯವಿದೆ, ರಾಜ. ನೀನು ಹೇಳುವಹಾಗೆ, ಸಾಮಾನ್ಯವಾಗಿ, ಕಲಾವಿದರೆಲ್ಲರು ತಮ್ಮ ಕಲಾಶಕ್ತಿಯನ್ನು ಸದಾ ಹೊರಪಡಿಸಿಕೊಂಡೇ ಇರುವುದಿಲ್ಲ. ಹಾಗೇ ಕಲಾವಿದರೇ ಪ್ರಕೃತಿಭಕ್ತರಾಗಿರಬೇಕೆಂದೂ ಇಲ್ಲ. ನಿಸರ್ಗ ಸೌಂದರ್ಯ ಎಲ್ಲರ ಅನುಭವಕ್ಕೂ ತೆರೆದಿಟ್ಟ ವಸ್ತು. ಸಾಮಾನ್ಯರು ಆ ತಮ್ಮ ಆನಂದಾನುಭವವನ್ನು ಅಂತೆಯೇ ಗುಪ್ತವಾಗಿಟ್ಟುಕೊಳ್ಳುವರಾದರೆ ಕಲಾವಿದರು ತಮಗೊಪ್ಪಿದ ಕೃತಿಯಲ್ಲಿ ಅದನ್ನು ಪ್ರಕಟಿಸುವರು. ಇದೇ ಇಬ್ಬರು

ನಿಸರ್ಗೋಪಾಸಕರಿಗಿರುವ ವ್ಯತ್ಯಾಸ. ಈ ದೃಷ್ಟಿಯಿಂದ ನೋಡಿದರೆ ಈಕೆ ನಿನ್ನ ಟೀಕೆಗೆ ಗುರಿಯಾಗುವವಳಲ್ಲ' ಎಂದು. ಈ ಧ್ವನಿ, ಸೌವ್ಯ ಹಾಗೂ ಮಧುರವಾಗಿತ್ತು. ಭಾಷೆ ಅದೇ ಇಂಗ್ಲಿಷು.

"ಈ ಧ್ವನಿ ಬಂದು ನನ್ನ ಹೃದಯವನ್ನೇ ಸ್ಪರ್ಶಿಸಿತು. ದೇಹದ ಯಾವುದೇ ಭಾಗಕ್ಕೆ ಆಕಸ್ಮಿಕ ನೋವಾದರೆ ಆ ಭಾಗಕ್ಕೆ ಕೈಯು ತಾನಾಗಿ ಹೋಗುವಂತೆ ಅಧೋಮುಖವಾಗಿದ್ದ ನನ್ನ ದೃಷ್ಟಿ ಆ ಕಡೆಗೆ ಹೋಯಿತು. ಆ ಮಧುರ ಧ್ವನಿ ನಿಲ್ಲುವುದಕ್ಕೂ, ನನ್ನ ಕಣ್ಣು ಆ ಕಡೆ ಹೊರಳುವುದಕ್ಕೂ 'ಕಾಕತಾಳಿಯ'ವಾಗಿ ಮಧುರ ವಚನದ ಆತನನ್ನು ಗುರುತಿಸಿದೆನಲ್ಲದೆ, ಆತನ ಜತೆಗಾರನನ್ನೂ ಕಂಡುಕೊಂಡು, ಅವರಿಬ್ಬರೂ ಬೇರೆಡೆಗೆ ನೋಡುತ್ತಿದ್ದಂತೇ ನಾನು ನನ್ನ ದಿಷ್ಟಿಯನ್ನು ಮರಳಿಸಿಕೊಂಡೆ—

"ಆ ಎರಡು ದನಗಳು!—ಆ ಇಬ್ಬರು ವ್ಯಕ್ತಿಗಳು!—ಏನು ಅಂತರ!—

"ಒರಟು ದನಿ ಹೊರಡಿಸಿದವ ಒರಟನಾಗಿಯೇ ತೋರಿದ. ಆ ವ್ಯಕ್ತಿ ಕುಳ್ಳ; ಶೀರ ಬಡಕಲು ಆಸಾಮಿ. ಅವನ ಕಣ್ಣುಗಳು ಅವನ ಗೆಳೆಯನನ್ನು ನೋಡುತ್ತಾ ತುಂಟನಗು ನಗುತ್ತಿದ್ದುವು.

"ಆ ಮಧುರ ದನಿ ಹೊರಡಿಸಿದವನು 'ಸುಂದರ' ಎಂದರೆ ಸಾಕು; ಜಗತ್ತಿನ ಸುಂದರ ಪುರುಷರ ಸಾಲಿನಲ್ಲಿ ಅವನಿಗೊಂದು ಸ್ಥಾನ ತಪ್ಪದೆ ಕಾದಿಡಲೇ ಬೇಕು. ಅವನ ಮುಖಕ್ಕೆ ವಿಶಿಷ್ಟವಾದ ಕಳೆಯನ್ನು ಕೊಟ್ಟಿದ್ದುದು—ಅವನ ವಿಶಾಲವಾದ, ಧವಳವರ್ಣದ ಲಲಾಟದಲ್ಲಿ ಇಳಿಬಿದ್ದು ಸುರುಳಿ ಸುತ್ತಿಕೊಂಡಿದ್ದ ಆ ಒಂದೆಳೆ ಕರಿಯಕೂದಲು. ಮುಂದಿನ ಹಾದಿಯನ್ನು ನೋಡುತ್ತಿದ್ದ ಅವನ ಆ ಎರಡು ಕಣ್ಣುಗಳು– ನಿಜಕ್ಕೂ ಎರಡು ನಕ್ಷತ್ರಗಳು.

"ಅವನ ಮಾತು ನಿಂತಾಗ ಒರಟನೆಂದ—'ಪಕ್ಷವಹಿಸಿ ಮಾತನಾಡುತ್ತಿದ್ದಿಯಲ್ಲೋ?'

"ಇದೇನು ರಾಜ! ಹೋದಲ್ಲೆಲ್ಲ ನೀನು ನನ್ನ ಮೇಲೆ ಅಪವಾದ ಹೊರಿಸುವುದಕ್ಕೇ ಸಿದ್ಧವಾಗಿರುವಂತೆ ತೋರುತ್ತದೆಯಲ್ಲ? ನಿನ್ನದು, ಇದೊಂದು ಕೆಟ್ಟ ಚಾಳಿಯಾಗಿ ಹೋಗಿದೆ. ಇದನ್ನು ನೀನು ಬಿಟ್ಟುಬಿಡಬೇಕು!"

"'ಆಗಲಿ, ನೀನಂದಂತೆ ಮಾಡೋಣ! ಆದರೆ ನೀನೂ ಕೂಡ ಸುಂದರ ಲಲನೆಯರನ್ನು ಕಂಡಾಗಲೆಲ್ಲಾ ಅವರನ್ನು ಎವೆಯಿಕ್ಕದೆ ನೋಡುವ ಈ ಕೆಟ್ಟ ಚಟವನ್ನೂ ನಿಲ್ಲಿಸಿ ಬಿಡಬೇಕು!'

"'ರಾಜ! ಹಾಗೆಂದರೇನಯ್ಯ?'

"'ಮೂರ್ತಿ! ನಾನಿದನ್ನು ವಿನೋದವಾಗಿಯೆ ಹೇಳುತಿದ್ದೇನಾದರೂ ನೀನಿದನ್ನು ಅದೇ ಅರ್ಥದಲ್ಲಿ ತೆಗೆದುಕೊಳ್ಳಕೂಡದು. ಮಿತ್ರ ಯಾರು? ಪಾಪದಿಂದ ಯಾರು ತಿರುಗಿಸುತ್ತಾರೋ ಅವರು. ಹಾಗೆಂದು ಆರ್ಯೋಕ್ತಿ. ಅಂತೆ, ಅವಿವಾಹಿತನಾದ ನೀನು ಪ್ರೇಮದ ಕಡೆಗೆ ಕಿವಿಕೊಡುವುದು ಪಾಪ ವಲ್ಲ. ಆದರೆ ಇನ್ನೂ ಅಧ್ಯಯನಾವಸ್ಥೆಯಲ್ಲಿರುವ ನಿನ್ನಂಥವರಿಗೆ ಈ ಪ್ರಸಂಗ ಅಪ್ರಾಸಂಗಿಕವಾದುದು. ಹಾಗೆಂದೇ ಅದು ಪಾಪ; ಅದರಿಂದ ನಿನ್ನನ್ನು ತಿರುಗಿಸುವ ಕರ್ತವ್ಯ ನನ್ನದು'.

"'ಅಯ್ಯ! ನಿನ್ನ ವ್ಯಾಖ್ಯಾನ ಸಾಕುಮಾಡೊ! ಇದು ಸಾರ್ವಜನಿಕ ಬಸ್ಸು. ಅಲ್ಲದೆ ನಮ್ಮಿಬ್ಬರಿಗೇ ಇಲ್ಲಿ ಇಂಗ್ಲಿಷ್ ತಿಳಿದಿರಬೇಕೆಂದೇನೂ ಶಾಸ್ತ್ರ ಬರೆದಿಟ್ಟಿಲ್ಲ. ನಾವು ಯಾರನ್ನು ನಿರ್ದೇಶಿಸಿ ಈ ಮಾತನ್ನಾಡತೊಡಗಿದೆವೋ ಅವರಿಗೂ ನಮ್ಮ ಮಾತಿನ ಅರ್ಥವಾಗಬಾರದೆಂದುಂಟೆ? ನೀನು ಶುದ್ಧ ಅವಿವೇಕಿ! ಎಲ್ಲಿರುತ್ತಿದ್ದೇವೆಂಬ ಅರಿವೂ ಇಲ್ಲದೆ ಧ್ವನಿವರ್ಧಕ ಯಂತ್ರದಂತೆ ನುಡಿಯುತ್ತಿರುವೆ!'

"ಈಗ ಅವನ ಧ್ವನಿಯಲ್ಲಿ ಸ್ವಲ್ಪ ಕಾವಿತ್ತು; ಸ್ವಲ್ಪ ನೋವಿತ್ತು. ನಾನು ನನಗರಿಯದಂತೇ ಆ ಕಡೆ ನೋಡಿದೆ—

"'ಬಹಳ ಸಂತೋಷ!' ಎಂದು, ರಾಜ ಪತ್ರಿಕೆ ಬಿಡಿಸಿ ಓದುತ್ತಿದ್ದ. ಮೂರ್ತಿ ತಾನೂ ತನ್ನ ಕೈಯಲ್ಲಿದ್ದ ಪತ್ರಿಕೆಯನ್ನು ಬಿಚ್ಚುತ್ತಿದ್ದ. ಬಿಚ್ಚುತ್ತ; ಸುತ್ತಲೂ ಒಂದು ನೋಟ ಹಾಯಿಸಿ ಅವನೆಡೆಗೆ ನೋಡುತ್ತಿದ್ದ ನನ್ನ ದೃಷ್ಟಿಯನ್ನು ಸಂಧಿಸಿದ! — ಅದೆಂಥ ನೋಟ!

" —ನನ್ನ ದೇಹ ಮನಸ್ಸುಗಳೆರಡನ್ನೂ ಅದು ಏಕಕಾಲಕ್ಕೇ ತನ್ನೆಡೆಗೆ ಆಕರ್ಷಿಸಿಬಿಟ್ಟಿತು! ನಾನದಕ್ಕೆ ಸಂಪೂರ್ಣ ಸೋತುಹೋದೆ!

"ಆ ಸೋಲನ್ನು ಮರೆಸಲು ಒಂದು ನೆವ ಹೂಡಿ, 'ಪರ್ಸ್'ನ ಮೇಲೆ ಕೈಯಾಡಿಸುವಂತೆ ಮುಖ ಬಗ್ಗಿಸಿದೆ. ಆದರೆ ಹಾಗೆ ನೋಡಿದಾಗ ಕೈಯಲ್ಲಿ ಪರ್ಸ್ ಇರಲಿಲ್ಲ! ನಾಚಿಕೆ–ಭೀತಿಗಳಿಂದ ನನ್ನ ಬುದ್ಧಿ ಅಸ್ಥಿರವಾಯಿತು. ಸುತ್ತುಮುತ್ತು ಹುಡುಕಿ ನೋಡಿದೆ; ಅದು ಸಿಗಲಿಲ್ಲ. ಹತ್ತಿರ ಕುಳಿತವರೆಲ್ಲರ ಮುಖ ನೋಡಿದೆ. ಅವರಿಗೇನು ಬಂತು? ಎಲ್ಲರೂ ನಿಶ್ಚಿಂತರು."

"ಅಷ್ಟರಲ್ಲಿ ಬಸ್ಸು ನಿಂತಿತು. ಕಂಡಕ್ಟರ ಕೂಗಿದ—'ಸುಳ್ಯ ಬಂತು; ಇಳಿಯಬೇಕಾದವರು ಇಳಿಯಿರಿ.'

"ಆಗ ನನ್ನ ಪಕ್ಕದಲ್ಲಿ ಕುಳಿತವರು ಒಬ್ಬಿಬ್ಬರು ಎದ್ದುನಿಂತರು. ನಾನು ನಿರ್ವಾಹವಿಲ್ಲದೆ 'ನನ್ನ ಪರ್ಸ್ ಕಾಣುವುದಿಲ್ಲ!' ಎಂದೆ; ಹಾಗೇ ಮೂರ್ತಿಯತ್ತ ನೋಡಿದೆ. ಅವನೂ ನನ್ನನ್ನೇ ನೋಡುತ್ತಿದ್ದವನು ನಾನು ಹಾಗೆ ಕೂಗಿದುದನ್ನು ಕೇಳಿ, 'ಏನು?' ಎಂದು ಕೇಳಿದ. ನಾನು ಆ ಕೂಡಲೇ 'ನನ್ನ ಪರ್ಸ್ ಕಳೆದುಹೋಗಿದೆ' ಎಂದೆ. ಅವನು ತಿರುಗಿ ಅದೇ ಪ್ರಶ್ನೆಯನ್ನು ಹಾಕಿದ. ನಾನು–"ನನ್ನ ಪರ್ಸ್ ಕಳೆದುಹೋಗಿದೆ; ಸ್ವಲ್ಪ ಸಹಾಯ ನೀಡಿ" ಎಂದೆ ಇನ್ನೂ ಕಳವಳದ ದನಿಯಿಂದ.

"ಅಷ್ಟರಲ್ಲಿ ರಾಜ ಪತ್ರಿಕೆಯಿಂದ ಮುಖವೆತ್ತಿ 'ಏನು, ಏನಂತೆ?'— ಎಂದು ಗೆಳೆಯನನ್ನು ಕೇಳಿದ.

"ಮೂರ್ತಿ, ನನ್ನ ಬಗ್ಗೆ ಸಹಾನುಭೂತಿ ಪ್ರಕಟಿಸುತ್ತಾ, 'ನೋಡಪ್ಪ! ಇವರ ಪರ್ಸ್ ಕಳವಾಯಿತಂತೆ, ಪಾಪ' ಎಂದು ಹೇಳಿ, ಒಡನೆ ಬಸ್ಸಿನಿಂದ ಹೊರಕ್ಕಿಳಿದು, ಇಳಿಯುತ್ತಿದ್ದವರನ್ನೆಲ್ಲ ತಡೆದು ನಿಲ್ಲಿಸಿದ. ಅಷ್ಟರಲ್ಲಿ ರಾಜ ಓಡಿಹೋಗಿ ಪಕ್ಕದ ಪೋಲೀಸ್ ಠಾಣೆಯಿಂದ ಇಬ್ಬರು ಪೊಲೀಸರನ್ನು ಕರೆದು ತಂದ. ಅವರು ಒಬ್ಬೊಬ್ಬರನ್ನಾಗಿ ಕೆಳಗಿಳಿಸಿ ಎಲ್ಲರ ಗಂಟು ಮತ್ತು ಜೇಬುಗಳನ್ನು ಶೋಧಿಸಿದರು. ಅರ್ಧ ಮಂದಿಯ ಪರಿಶೋಧನೆಯಾದ ಬಳಿಕ ನನ್ನೆದುರಿಗೆ ಕುಳಿತಿದ್ದ ಮನುಷ್ಯನೊಬ್ಬನಲ್ಲಿ ಆ ಪರ್ಸ್ ಕಂಡುಬಂತು. ಪೋಲೀಸರು ಪರ್ಸನ್ನು ರಾಜನ ಕೈಯಲ್ಲಿತ್ತು ಕಳ್ಳನನ್ನು ಠಾಣೆಗೆ ದೊಬ್ಬಿಕೊಂಡು ಹೋದರು. ರಾಜ ನಗುತ್ತ, ಅದನ್ನು ಮೂರ್ತಿಗೆ ಕೊಟ್ಟ. ಇಷ್ಟರಲ್ಲಿ ನಾನೂ ಹೊರಕ್ಕೆ ಬಂದು ರಸ್ತೆಯ ಒಂದು ಪಕ್ಕದಲ್ಲಿ ನಿಂತಿದ್ದೆ. ಮೂರ್ತಿ ನನ್ನಬಳಿಗೆ ಬಂದು ಕೇಳಿದ 'ಇದೇ ಹೌದೆ?– ನಿಮ್ಮ ಪರ್ಸ್?– 'ಅದೆಷ್ಟು ವಿನಯ!

" 'ಹೌದು' —ನಾನೆಂದೆ.

"ಆಗ ಆತನದನ್ನು ನನ್ನ ಕೈಗಿತ್ತು, 'ಎಲ್ಲಾ ಇದೆಯೆ ಎಂದು ನೋಡಿಕೊಳ್ಳಿ' ಎಂದ.

"ಅವನು ಅದನ್ನು ಕೊಟ್ಟಾಗ ಅವನ ಕೈ ಬೇಕೆಂದೇ ನನ್ನ ಕೈಗೆ ತಾಗಿತು. ಆ ಸ್ಪರ್ಶದಿಂದ ನನ್ನ ಶರೀರಾದ್ಯಂತ ವಿದ್ಯುತ್ ಸಂಚಾರವಾದಂತಾಯಿತು. ತಬ್ಬಿಬ್ಬಾದ ಪ್ರಕೃತಿಯನ್ನು ಸುಧಾರಿಸಿಕೊಂಡು ನಿಧಾನವಾಗಿ ಪರ್ಸನ್ನು ತೆರೆದು ನೋಡಿದೆ; ಅದರಲ್ಲಿದ್ದ ಒಂದೇ ಒಂದು ನೂರು ರೂಪಾಯಿ ನೋಟು ಭದ್ರವಾಗಿತ್ತು. ನಾನು ಸಂತೋಷದಿಂದ 'ಎಲ್ಲಾ

ಇದೆ' ಎಂದು ಹೇಳಿ, ಮುಂಬರಿದು, 'ನಿಮ್ಮಿಂದ ದೊಡ್ಡ ಉಪಕಾರವಾಯಿತು. ಇದಕ್ಕಾಗಿ ತುಂಬಾ ವಂದನೆಗಳು' ಎಂದು ಕೃತಜ್ಞತೆ ಸೂಚಿಸಲು ಬಾಯಿ ತೆರೆಯುವಷ್ಟರಲ್ಲೆ ಡ್ರೈವರನು 'ಹೊತ್ತಾಯಿತು' ಎಂದು ಕೂಗಿದ...ಕೂಡಲೆ ಪಕ್ಕದಲ್ಲಿ ನಿಂತಿದ್ದ ರಾಜ, ಅವನನ್ನು ಎಳೆದುಕೊಂಡು ಬಸ್ ಹತ್ತಿಬಿಟ್ಟ. ರಾಜನ ವರ್ತನೆಯನ್ನು ಕಂಡು ನನಗೆ ವಿಪರೀತ ಸಿಟ್ಟು ಬಂತು. ಆದರೆ ಮಾಡುವದೇನು ? ಮರಳಿ ಮೊದಲಿನ ಸ್ಥಳಕ್ಕೆ ಹೋಗಿ ಕುಳಿತು ಅವನಿಗೆ ವಂದನೆಯನ್ನರ್ಪಿಸುವುದೆಂದರೆ, ಹೆಂಗಸರು ಎರಡು ಮೂರು ಮಂದಿ ಅಲ್ಲಿ ಇಳಿದ ಕಾರಣ, ಹೆಂಗಸರ ಸೀಟು ಬಿಡುವಾಗಿರಲು ನಾನು ಅಲ್ಲಿ ಹೋಗಿ ಕುಳಿತುಕೊಳ್ಳುವಂತೆ ಕಂಡೆಕ್ಟರ್ ಸೂಚನೆಕೊಟ್ಟ. ನಾನು ಕುಗ್ಗಿದ ಮನದಿಂದ ಅಲ್ಲಿ ಹೋಗಿ ಕುಳಿತೆ. ಕುಳಿತನಂತರ ಮತ್ತೆ ಉಪಕಾರ ಸ್ಮರಿಸಲು ಅವಕಾಶದೊರೆಯಲಿಲ್ಲ. ಪುತ್ತೂರಿನಲ್ಲಿ ಬಸ್ ನಿಂತಿತು; ನಾನಲ್ಲಿ ಇಳಿದೆ. ಭಾರವಾದ ಹೆಜ್ಜೆಗಳನ್ನು ನಿಧಾನವಾಗಿಡುತ್ತಾ ಮನೆಯಕಡೆಗೆ ಹೊರಳಿದೆ. ನಾಲ್ಕು ಮಾರು ಮುಂದೆ ಹೋಗಿ ತಿರುಗಿ ನೋಡಿದೆ. ಅಷ್ಟರಲ್ಲಿ ಬಸ್ ಹೊರಟುಹೋಯಿತು ಮಂಗಳೂರಿಗೆ. ಆಗಲೇ ನನ್ನ ಹೃದಯದಲ್ಲಿ ಆ ಸುಂದರ 'ಮೂರ್ತಿ'ಯ ಚಿತ್ರವನ್ನು ಅಚ್ಚಳಿಯದಂತೆ ಬಿಡಿಸಿದ್ದ ಆ ಬಸ್ಸು ನನ್ನ ಮನಸ್ಸನ್ನೂ ತನ್ನೊಂದಿಗೇ ಸೆಳೆದುಕೊಂಡುಹೋಯಿತು.

"........ನನಗೆ ವಿವಾಹವು ಪ್ರಿಯವಾದುದು ಈ ಘಟನೆಯ ಬಳಿಕವೇ. ಆದರೆ ಅಣ್ಣ ಗೊತ್ತುಮಾಡುವ ವರರು ಮಾತ್ರ ನನಗೆ ಬೇಡವಾದರು. ಆದ್ದರಿಂದ ನನ್ನ ಲಗ್ನದ ಕುರಿತಾದ ಚರ್ಚೆ ಬಂದಾಗಲೆಲ್ಲ ನಾನು ಕೇವಲ ಹೂಂಗುಟ್ಟುತ್ತಾ ಬಂದು ಅವರ ನಿರ್ಬಂಧ ಜಾಲದಿಂದ ಪಾರಾಗುತ್ತಿದ್ದೆ—ಉಪಾಯದಿಂದ. ಅವನ ಪುನರ್ದರ್ಶನಕ್ಕಾಗಿ, ಅವನ ಪರಿಚಯಕ್ಕಾಗಿ ಎಡೆಬಿಡದೆ ಯತ್ನಿಸಿದೆ. ಆದರೆ ಎಲ್ಲಾ ವ್ಯರ್ಥ—ಹೀಗೇ ಆ ವರ್ಷ ಕಳೆದುಹೋಯಿತು.

"ಅದೊಂದು ದಿನ; ನಾಲ್ಕನೇ ವರ್ಷದ ಮಧ್ಯಭಾಗ. ನಾನು ಪೋಸ್ಟಾಫೀಸಿಗೆ ಹೋಗಿದ್ದೆ. ಅಲ್ಲಿ, ಅಂದು, ಜನರ ಒತ್ತಾಟ ಎಂದಿನಂತಿರಲಿಲ್ಲ. ಈ ದಿನ ಬೇಗನೇ ನನ್ನ ಕೆಲಸ ತೀರುವುದೆಂಬ ಸಂತೋಷದಿಂದ ಪೋಸ್ಟಾಫಿಸಿನ ಕಿಟಿಕಿಯನ್ನು ಸಮೀಪಿಸಿದೆ. ಅಷ್ಟರಲ್ಲಿ, ಅಲ್ಲಿ ಮನುಷ್ಯನೊಬ್ಬ ತನ್ನ ಕೆಲಸ ಮುಗಿದು ಈಚೆಗೆ ತಿರುಗಿದ. ಅವನ ಮುಖ ಕಾಣುತ್ತಲೆ ನಾನು ಸ್ತಬ್ಧಳಾದೆ! —ಅವನೇ ಮೂರ್ತಿ! ಅವನೂ ನನ್ನನ್ನು ನೋಡಿ ಕಣ್ಣರಳಿ

ಸಿದ! ಅಷ್ಟರಲ್ಲಿ ಬೇರಾರೂ ಇಲ್ಲದ್ದರಿಂದ ಪೋಸ್ಟ್‌ಮಾಸ್ಟರನು ನನ್ನನ್ನು ನಿರ್ದೇಶಿಸಿ ಏನುಬೇಕೆಂದು ಕೇಳುವಂತೆ ಕಣ್ಸನ್ನೆಮಾಡಿದ. "ನಾನು ಎರಡು ಕವರು ತೆಗೆದುಕೊಂಡು ಈಚೆಗೆ ಬಂದಾಗ ಮೂರ್ತಿ ನನಗಾಗಿ ಕಾದು ನಿಂತಿದ್ದ. ನಾನು ಉಬ್ಬಿದ ಹೃದಯದಿಂದ 'ನೀವು!' ಎಂದು ನುಡಿಯು ತ್ತಿದ್ದಂತೇ ಹಿಂದಿನಿಂದ ಯಾರೋ 'ಮೂರ್ತಿ!' ಎಂದು ಕೂಗಿದರು. ಮೂರ್ತಿ ಆ ಕಡೆ ನೋಡಿದ. ನಾನೂ ನೋಡಿದೆ. ರಾಜ!—ನಮ್ಮ ಕಡೆ ಚುರುಕಾಗಿ ನಡೆದುಬರುತ್ತಿದ್ದ.

"ಅವನನ್ನು ನೋಡುತ್ತಲೆ ನನ್ನ ಮನಸ್ಸು ಬೇಸರಗೊಂಡಿತು. ಒಂದೂ ವರೆ ವರ್ಷದ ಕೆಳಗೆ ಬಸ್ಸಿನಲ್ಲಿ ಅವನು ನನ್ನ ಕುರಿತಾಗಿಯಾಡಿದ ಆ ಒರಟು ಟೀಕೆ ಮರಳಿ ನನ್ನ ಕಿವಿಗೆ ಬಿದ್ದಂತಾಯಿತು. ಬೇಸರದೊಡನೆ ಸಿಟ್ಟೂ ಬಂದು ನಾನಲ್ಲಿ ನಿಲ್ಲಲಾರದೇ ಹೋದೆ; ಮೂರ್ತಿಯ ಕಡೆಗೆ ತಿರುಗಿ, 'ಬರುತ್ತೇನೆ' ಎಂದು ಹೇಳಿ ಅಲ್ಲಿಂದ ಬಿರುಸಾಗಿ ಹೊರಟು ಬಂದು ಬಿಟ್ಟೆ.

"ಈ ಸಲ ಅವನಲ್ಲಿ ನನ್ನ ಹಂಬಲವನ್ನು ಹೇಳಿಕೊಂಡು ಅವನ ಪರಿ ಚಯ ತಿಳಿಯಲಾಶಿಸಿದ್ದೆ, ಅದಾಗಲಿಲ್ಲ. ಆದರೆ ಆ ಒಂದು ಕ್ಷಣದ ದರ್ಶ ನದಿಂದ ನನ್ನ ಚಿತ್ತಭಿತ್ತಿಯಲ್ಲಿ ಸೂಕ್ಷ್ಮವಾಗಿದ್ದ ಅವನ ಆ ಸ್ಮೃತಿಮಂದಿರ ಈಗ ಸ್ಥಿರವಾಗಿ ಕಂಗೊಳಿಸುವಂತಾಯಿತು. ಅವನನ್ನು ತಿರುಗಿ ಕಾಣ ಬಹುದೆಂದುಕೊಂಡು ಒಂದಲ್ಲ ಒಂದು ನೆವಮಾಡಿಕೊಂಡು ಅನೇಕ ದಿನ ಗಳ ವರೆಗೆ ನಾನು ಪೋಸ್ಟಾಫೀಸಿಗೆ ಹೋಗಿ ಬರಲಾರಂಭಿಸಿದೆ. ಆದರೆ ಅವನಲ್ಲಿ ಮತ್ತೆ ಗೋಚರಿಸಲಿಲ್ಲ. ಅಲ್ಲಿಂದಾಚೆ ದಿನದ ಮೇಲೆ ದಿನಗಳು ರುಳಿ, ತಿಂಗಳ ಮೇಲೆ ತಿಂಗಳಾಗಿ ಎಷ್ಟೋ ಸಮಯ ಸಂದಿತು; ಅವ ನೆಲ್ಲಿಯೂ ಕಂಡುಬರಲಿಲ್ಲ.

"ಈಚೆಗೆ, ನಾಲ್ಕು ತಿಂಗಳ ಹಿಂದೆ, ನಾನು ಆಫೀಸಿಗೆ ಹೋಗುತ್ತಿದ್ದೆ; ಬಸ್‌ಸ್ಟ್ಯಾಂಡಿನ ಪಕ್ಕದ ರಸ್ತೆಗಾಗಿ ಹಾಯ್ದುಹೋಗುತ್ತಿದ್ದಾಗ ಮೂರ್ತಿ ಅವಸರದಿಂದ ಮೈಸೂರು ಟ್ರಾನ್ಸ್‌ಪೋರ್ಟಿನ ಬಸ್ಸಿಗೇರಿದುದನ್ನು ಕಂಡೆ. ಬಸ್ಸಿನೊಳಗಿಂದಲೇ ಅವನನ್ನು ಮಾತಾಡಿಸುತ್ತೇನೆ, ಸಾಧ್ಯವಾದರೆ ಇಳಿ ಸಿಯೇ ಬಿಡುತ್ತೇನೆ ಎಂದುಕೊಂಡು ನಾನು ರಸ್ತೆಯನ್ನು ಬಿಟ್ಟು ಬಸ್ ಸ್ಟ್ಯಾಂಡಿನತ್ತ ಎರಡು ಹೆಜ್ಜೆಗಳನ್ನಿಟ್ಟೆ, ಅಷ್ಟರಲ್ಲೇ ಬಸ್ ಹೊರಟುಬಿಟ್ಟಿತು. ನಾನು ಹತಾಶಳಾಗಿ ಹಿಂತಿರುಗಿ ರಸ್ತೆಯ ಬದಿಯಲ್ಲಿ ನಿಧಾನವಾಗಿ ನಡೆಯು

ತೊಡಗಿದೆ. ಬಸ್ ನನ್ನ ಪಕ್ಕದಿಂದ ಹಾಯ್ದಾಗ ಅದರಲ್ಲಿ ನಾನವನನ್ನು ಕಾತರತೆಯಿಂದೀಕ್ಷಿಸಿದೆ. ಸೀಟಿನ ಕೊನೆಯಲ್ಲಿ ಕುಳಿತ್ತಿದ್ದ ಮೂರ್ತಿ, ನನ್ನನ್ನು ಬಗ್ಗಿನೋಡಿದಂತಾಯಿತು; ಮತ್ತು ಚಿಕ್ಕದೊಂದು ಕಾಗದದ ಚೂರು ಆ ಕೊನೆಯಿಂದ ಕೆಳಕ್ಕೆ ಬಿತ್ತು. ನಾನದನ್ನು ಕಕ್ಕುಲತೆಯಿಂದ ಎತ್ತಿ ನೋಡಲಾಗಿ ಅದರಲ್ಲಿ ಹೀಗಿತ್ತು:—

"'ನಿನ್ನ ಹೆಸರು, ಪರಿಚಯ ಇನ್ನೂ ನನಗೆ ತಿಳಿಯದು. ಬಸ್ಸಿಗೆ ಹತ್ತಿ ಕೂತಾಗಲೇ ನಾನು ನಿನ್ನನ್ನು ಕಂಡೆ. ತುರ್ತು ಪ್ರಸಂಗದ ಕಾರಣ ತಡೆಯಲಾರದವನಾಗಿದ್ದೇನೆ. ನಿನ್ನ ಪರಿಚಯವನ್ನು ಸಾದ್ಯಂತ ತಿಳಿದು ಕೊಂಡು ನನ್ನ ಅಂತರಂಗದ ಬಯಕೆಯನ್ನು ನಿನ್ನಲ್ಲಿ ಹೇಳಿಕೊಳ್ಳುವ ತೀವ್ರ ಹಂಬಲವಿದೆ ನನಗೆ. ಇಂದಿಗೆ ಸರಿಯಾಗಿ ಒಂದು ವಾರದಲ್ಲಿ, ಇದೇ ಹೊತ್ತಿಗೆ ನೀನಿಲ್ಲಿಗೆ ಬರುವಿಯಾ? ಆ ಕ್ಷಣಕ್ಕಾಗಿ ಕಾತರಿಸುವ—

ನಿನ್ನ ವಿಶ್ವಾಸಿ,
ಮೂರ್ತಿ.'

"ಆ ಕಾಗದದಂತೆ ನಾನು ಆ ನಿಶ್ಚಿತ ದಿನದಂದು ರಜೆಪಡೆದು ಗೊತ್ತಾದ ವೇಳೆಗೆ ಬಸ್‌ಸ್ಟ್ಯಾಂಡಿಗೆ ಹೋದೆ. ಆದರೆ ದಿನವಿಡೀ ಕಾದು ನಿಂತರೂ ಅವನು ಬರಲೇ ಇಲ್ಲ! ಪ್ರತಿಕೂಲ ಪರಿಸ್ಥಿತಿಯಿಂದ ದಿನಮುಂದೂಡಿ ದರೂ ಇರಬಹುದೆಂದು ಮರುದಿನವೂ ಹೋಗಿ ಅದೇ ಹೊತ್ತಿಗೆ ಅಲ್ಲಿ ನಿರೀಕ್ಷೆ ಮಾಡಿದೆ; ಹೃದಯದ ಕರೆಗೆ ಓಗೊಟ್ಟು ಅಲ್ಲಿಂದಾಚೆ ಪ್ರತಿದಿನವೂ ಬಸ್ ಸ್ಟ್ಯಾಂಡಿನತ್ತ ಒಂದು ಕುತೂಹಲದ ದೃಷ್ಟಿಯನ್ನು ಹಾಯಿಸುತ್ತಾ ಬಂದೆ— ಆದರೂ ನನ್ನಾಸೆ ವ್ಯರ್ಥವಾಯಿತು. ನಂಬಿಕೆಯ ನುಡಿಯಿತ್ತು ಮೋಸ ಮಾಡಿದನಲ್ಲ, ಎಂದು ಅವನ ಮೇಲೆ ಅತಿಯಾದ ಕೋಪ ಬಂತು. ಆದರೆ ಮಾಡುವುದೇನು?

"ತಿಂಗಳಾಂತ್ಯದಲ್ಲಿ ಒಂದು ವಾರದ ರಜೆಯಲ್ಲಿ ನಾನು ಮನೆಗೆ ಹೋದೆ. ಮನೆಯಲ್ಲಿದ್ದಷ್ಟು ದಿನವೂ ಅಣ್ಣ–ಅಮ್ಮ ಇಬ್ಬರೂ ವಿವಾಹಕ್ಕಾಗಿ ನನ್ನನ್ನು ಒತ್ತಾಯಿಸಿದರು. ನಾನು ಮೌನವಾಗಿಯೇ ಇದ್ದು ಜಾರಿಕೆಯ ಉತ್ತರ ಕೊಡುತ್ತಾ ಬಂದೆ. ಒಂದು ದಿನ ಅಣ್ಣ (ತಂದೆ) ಕೇಳಿದರು—'ನಿನ್ನೋರಿ ಗೆಯ ಹುಡುಗಿಯರಿಗೆಲ್ಲಾ ಮದುವೆಯಾಗಿ ಒಂದೊಂದು ಎರಡೆರಡು ಮಕ್ಕ ಳಾದುವು. ಹೀಗಿರುತ್ತಾ ನೀನು ಮಾತ್ರ ಮದುವೆಯಾಗದೆ ನಮ್ಮ ಆಶಾ

ಭಂಗಮಾಡುತ್ತಿರುವುದಲ್ಲದೆ ನಮ್ಮ ಮರ್ಯಾದೆಗೆ ಕೂಡ ಕಳಂಕ
ತಂದೆ. ಇದಕ್ಕೆ ಕಾರಣವೇನು? ನೀನು ಯಾರನ್ನಾದರೂ ಪ್ರೀತಿಸಿರುವ
ಯೇನು? ಹಾಗಿದ್ದರೆ ಹೇಳು ಗುಟ್ಟಿನಲ್ಲಿಡಬೇಡ. ಕೊನೆಗೆ ಅಂಥವ
ರೊಂದಿಗಾದರೂ ನಿನ್ನನ್ನು ಕೊಟ್ಟು ನನ್ನ ಮಾನ ಉಳಿಸಿಕೊಳ್ಳುತ್ತೇನೆ.'

"ಅಣ್ಣನ ಈ ರೋಷಪೂರಿತವಾದ ಮಾತಿಗೆ ವಿರೋಧವನ್ನು ವ್ಯಕ್ತ
ಪಡಿಸುತ್ತಾ ಅಮ್ಮನೆಂದಳು: 'ನೀವೇಕೆ ಹೀಗಾಡುತ್ತೀರೀಂದ್ರೆ. ಅವಳ
ಹಾಗೆಲ್ಲ ಮನಸ್ಸು ಬಂದವರನ್ನು ಬಯಸುವವಳೆಂದಾಗಿದ್ದರೆ ಅವಳನ್ನು
ನಾನು ನೌಕರಿಗೆ ಕಳಿಸುತ್ತಲೇ ಇರಲಿಲ್ಲ. ಇಲ್ಲ, ಅವಳೆಂದಿಗೂ ಹಾ
ಮಾಡಿರಲಾರಳು; ಅಲ್ಲೇನೇ ತುಷಿ? ತಂದೆತಾಯಿಯರ ಎದುರಿಗೇ
ಸಂಕೋಚ? ಇದ್ದುದನ್ನು ಇದ್ದಹಾಗೆ ಹೇಳಿಬಿಡಬಾರದೇಕಮ್ಮ, ಮಗು?'

"ಅಣ್ಣನ ಆ ಮಾತು, ಅಮ್ಮನ ಈ ಮಾತು-ಇವುಗಳ ಇರುಕಿನಲ್ಲಿ
ಸಿಲುಕಿಕೊಂಡು ಒಂದು ಗಳಿಗೆ ಪೆಚಾಡಿದೆ ನಾನು. ಕೊನೆಗೆ ಅಮ್ಮ
ಗೌರವ ಕಾಯಲು 'ಇಲ್ಲಣ್ಣಾ; ನಾನು ಯಾರನ್ನೂ ಪ್ರೀತಿಮಾಡಿಲ್ಲ' ಎಂದು
ತಡೆತಡೆದು ಕಷ್ಟದಿಂದ ಹೇಳಿ ಆತ್ಮವಂಚನೆ ಮಾಡಿಕೊಂಡೆ.

"ಕೂಡಲೆ ಅಮ್ಮ, 'ನೋಡಿದಿರಾ ಮತ್ತೆ?' ಎಂದು ಹೆಮ್ಮೆಯಿಂ
ಅಣ್ಣನನ್ನು ಉದ್ದೇಶಿಸಿ ಅಂದು, ನನ್ನ ಮುಂದಲೆಯನ್ನು ತೀಡುತ್ತಾ ಕೇ
ದಳು 'ಅಂದರೆ ಈ ವರ್ಷ ನೀನು ನಮ್ಮನ್ನು ನಿರಾಶೆಗೊಳಿಸುವುದಿಲ್ಲ ತಾನೆ
ಮಗು?'

"ಮುಂದೆ ಏನಾದರೂ ಉಪಾಯಮಾಡಿ ತಪ್ಪಿಸಿಕೊಂಡರಾಯಿತೆಂದು
ಕೊಂಡು ನಾನು 'ಹುಂ' ಎಂದುಬಿಟ್ಟೆ. ಅಣ್ಣನಿಗೆ ಮಾತ್ರ ನನ್ನ 'ಹುಂ'ನ
ವಿಶ್ವಾಸತೋರಿತೋ ಇಲ್ಲವೋ! ಆದುದರಿಂದಲೇ 'ನೀವು ತಾಯಿಮಕ್ಕಳ
ಏನಾದರೂ ಮಾಡಿಕೊಳ್ಳಿ' ಎಂದು ಕರ್ಕಶವಾಗಿ ಹೇಳಿ ಹೊರಟು ಹೋ
ಬಿಟ್ಟರು.

"ನಾನಂದು, ಹಾಗೆ, ಅಣ್ಣನಮುಂದೆ ಹಾಗೂ ಅಮ್ಮನ ಮುಂದೆ–
ಆತ್ಮವಂಚನೆ ಮಾಡಿಕೊಂಡುದರಿಂದಲೇ ಇಂದು ಅವರಿಂದ ಇಂಥ ಪ
ಬಂದಿತು! ಈ ಪತ್ರವನ್ನು ನಾನೀಗ ಒಂದೋ ಪೂರ್ಣವಾಗಿ ಅಲ್ಲಗಳೆ
ಬೇಕು, ಇಲ್ಲವೆ ಅದರಂತೆ ನಡೆದು ಅದರಿಂದ ಬರುವ ಸುಖದುಃಖಗಳನ್ನ
ಅನುಭವಿಸಬೇಕು. ಇವೆರಡರಲ್ಲಿ ಯಾವುದು ವಿಹಿತ? ಒಂದುವೇಳೆ ಅಣ್ಣ

ಪತ್ರವನ್ನು ಮನ್ನಿಸಹೋದರೆ ನಾನು ನನ್ನ ಹೃದಯದಲ್ಲಿ ಇನ್ನೊಂದು ಎರಡನೇ ವ್ಯಕ್ತಿಗೆ ಸ್ಥಾನ ಕೊಡಬೇಕಾಗುವುದು. ಮೂರ್ತಿ ಒಂದುವೇಳೆ ಈ ಇಡಿಯ ಜನ್ಮದಲ್ಲೇ ನನಗೆ ಸಿಗದೇಹೋಗಬಹುದಾದರೂ ಅವನೇ ನನ್ನ ಆರಾಧ್ಯ ದೇವತೆ. ಅವನನ್ನು ಬಿಟ್ಟು ಅನ್ಯರನ್ನು ವರಿಸಬಲ್ಲೆನೇ ನಾನು? ಇಲ್ಲ, ಅದೆಂದಿಗೂ ಆಗದು! ನನಗೆ ಅವನ ಶರೀರ ಬೇಕಿಲ್ಲ; ನನಗೆ ಬೇಕು, ಅವನ ಹೃದಯ! ಅದನ್ನವನು ಕೊಡದೇ ಹೋದರೂ ಅದೆಂದಿಗೂ ನನ್ನದೇ— ನನ್ನದೇ......."

ಇಷ್ಟರಲ್ಲಿ ಅವಳಿಗೆ ತನ್ನ ತಾಯಿಯ ನೆನಪಾಯಿತು! ಅವಳ ಕಾಯಿಲೆಗೆ ತಾನೇ ಕಾರಣಳೆಂಬ ಅಣ್ಣನ ನಿಷ್ಠುರೋಕ್ತಿಯಿಂದ ಅವಳ ಮನಸ್ಸು ಕರಗಿತು. ತಾನು ಈ ವಿವಾಹಕ್ಕೊಪ್ಪದಿದ್ದರೆ ಅವಳು ಆ ವ್ಯಥೆಯಿಂದಲೇ ಸೊರಗಿಕೊರಗಿ ಅವಳ ಅವಸಾನವೇ ಹತ್ತಿರವಾದರೆ?— ಎಂಬ ಯೋಚನೆಯಿಂದ ಅವಳು ನಡುಗಿದಳು— ಅವಳ ಮನಸ್ಸು ತಿರುಗಿತು. ತನ್ನ ಬಾಳಿನ ಶುಭಕಾಂಕ್ಷಿಣಿಯಾದ ಆ ತಾಯಿಯ ವ್ಯಥೆಯನ್ನು ತಣಿಸದವಳು, ತಾಯಿಯ ಆ ಋಣವನ್ನು ತೀರಿಸಲೊಲ್ಲದವಳು ಮಗಳಲ್ಲ ಎಂಬುದು ಆಕೆಗೆ ಖಚಿತವಾಯಿತು. ಆದುದರಿಂದಲೇ ಅಣ್ಣನ ಓಲೆಗೆ ತಲೆಬಾಗುವೆನೆಂದೂ, ಎರಡು ತಿಂಗಳ ರಜೆ ಪಡೆದು ಕೂಡಲೇ ಊರಿಗೆ ತೆರಳಿ ತಾಯಿಯ ವ್ಯಸನವನ್ನು ಪರಿಹರಿಸುವೆನೆಂದೂ ಆಕೆ ನಿರ್ಧರಿಸಿದಳು.

ಇಷ್ಟೆಲ್ಲ ವಿಚಾರಗಳು ಉಂಟಾಗಿ ಆ ಗೊಂದಲ ಮುಗಿಯುವಷ್ಟರಲ್ಲಿ ದೀಪದ ಎಣ್ಣೆ ಆರಿ, ಅದು ನೊಂದಿಹೋಗಿತ್ತು. ಅವಳು ಎದ್ದುಹೋಗಿ ಹಾಸಿಗೆಯಲ್ಲೊರಗಿದಳು.

೩

ಇಂದು ಮದ್ದೂರು ರಾಮರಾಯರ ಮನೆಯಲ್ಲಿ ಮದುವೆಯ ಸಂಭ್ರಮ! ಜಮೀನ್ದಾರರ ವಿಶಾಲವಾದ ಮನೆಯ ಒಳಹೊರಗೆಲ್ಲಾ ಮದುವೆಯ ಸಡಗರವೇ ಸಡಗರ! ವಾದ್ಯವೈಭವಗಳ ಗದ್ದಲವೇ ಗದ್ದಲ! ಸುಸಜ್ಜಿತವಾದ ನಡುಮನೆಯಲ್ಲಿ, ಸಿಂಗರಿಸಲ್ಪಟ್ಟ ಉನ್ನತವಾದ ಹಸೆಯಮೇಲೆ ಆಸೀನರಾಗಿದ್ದರು ವಧೂವರರು— ತುಷಿತಾ ಕೃಷ್ಣಮೂರ್ತಿಯರು. ಅವರನ್ನು ನೋಡಿ ನೆರೆದವರೆಲ್ಲರೂ ಮೆಲ್ಲಮೆಲ್ಲಗೆ ಆಡಿಕೊಳ್ಳುತ್ತಿದ್ದರು. ಎಂಥ ಅನುರೂಪ ದಂಪತಿಗಳು!

ವಧೂವರರಿಗೆ ಆರತಿ ಅಕ್ಷತೆಯಾದ ಮೇಲೆ ಜನರೆಲ್ಲ ಒಂಟಿಯಾಗಿ ಗುಂಪಾಗಿ ಮದುವಣಿಗರನ್ನು ಸಮೀಪಿಸಿ ಉಡುಗೊರೆ ಮಾಡುವವರು ಹಾಗೆ ಮಾಡಿ, ಅವನ್ನು ಕೊಡದವರು ಹಾಗೆ ಅವರನ್ನು ಅಭಿನಂದಿಸಿ, ಯಾ ಹರಸಿ ತಮ್ಮ ಪಾಲಿನ ಆತಿಥ್ಯವನ್ನು ಕೈಕೊಂಡು ಹೊರಟುಹೋಗ ತೊಡಗಿದರು.

ತುಷಿತಾ ಕೃಷ್ಣಮೂರ್ತಿಯರ ಸುತ್ತಲೂ ಆನಂದವಾರಿಧಿ ಉಕ್ಕಿ ಹರಿಯುತ್ತಿದ್ದಿತು. ಆದರೆ ಅವರು ಮಾತ್ರ ತಮ್ಮ ತಲೆಗಳ ಮೇಲೆ ಭಾರವಾದ ಹೊರೆಹೊತ್ತಂತೆ ಮ್ಲಾನವದನರಾಗಿ ಮುಖ ತಗ್ಗಿಸಿ ಕುಳಿತ್ತಿದ್ದರು. ಅವರ ಮುಖಗಳು ಸುಂದರವಾಗಿದ್ದುದೇನೋ ನಿಜವೆ; ಆದರೆ ಅವುಗಳಲ್ಲಿ ಕಳೆಯಿರ ಲಿಲ್ಲ. ಅವರು ತಮ್ಮ ಹತ್ತಿರ ಬಂದವರನ್ನು ಪರಸ್ಪರ ಪರಿಚಯಮಾಡಿಸಿ ಕೊಳ್ಳುವುದಂತು ಒತ್ತಟ್ಟಿಗಿರಲಿ, ಒಬ್ಬರನ್ನೊಬ್ಬರು ನೋಡಿಯೆ ಇರಲಿಲ್ಲ ಈ ವರೆಗೆ. ವಧೂವರರು ಮೊದಲಬಾರಿಗೆ ಕೊಂಚ ನಾಚಿಕೆಪಟ್ಟುಕೊಳ್ಳುವು ದೇನೊ ಸಹಜವೆ. ಆದರೆ ಎಂಥ ಅಜ್ಞರಲ್ಲಿಯೂ ನಾಚಿಕೆಗೊಂದು ಮೇರೆ ಯುಂಟು. ತುಷಿತಾ ಕೃಷ್ಣಮೂರ್ತಿಯರಿಬ್ಬರೂ ವಿದ್ಯಾವಂತರು; ಅಪರಿಚಿ ತರೇ ಆಗಿದ್ದರೂ ತಮ್ಮಲ್ಲಿ ಬಹುಬೇಗನೆ ಸಲಿಗೆಯಿಂದ ನಡೆದುಕೊಳ್ಳಲು ತಕ್ಕ ಮನೋಭಾವವುಳ್ಳವರು; ಆ ಶಿಷ್ಟಾಚಾರವನ್ನು ಬಲ್ಲವರು. ಹಾಗಿದ್ದರೂ ಅವರ ಈ ಜಡತ್ವಕ್ಕೆ ಕಾರಣವೇನಿರಬಹುದು? ಇಬ್ಬರ ಹೃದಯಗಳಲ್ಲೂ ವ್ಯಕ್ತ—ಅವ್ಯಕ್ತವಾದ ಒಂದೊಂದು ಚಿಂತೆಯು ಮನೆಮಾಡಿಕೊಂಡಂತಿತ್ತು. ಕೃಷ್ಣಮೂರ್ತಿ, ತನಗೆ ಪರಿಚಯವಿದ್ದವರು ಬರುವಾಗಲೆಲ್ಲಾ ಬಾರದ ನಗೆ ಯನ್ನು ಮೋರೆಯ ಮೇಲೆ ಬಲವಂತದಿಂದ ಎಳೆದುತಂದು ಅವರನ್ನು ಸ್ವಾಗ ತಿಸುತ್ತಿದ್ದ. ತುಷಿತಾ ಅಷ್ಟಕ್ಕೂ ಹೋಗದೆ ಬರೇ ನೋಟದಿಂದಲೇ ಕೃತಜ್ಞತೆ ಯನ್ನು ಸಲ್ಲಿಸಿ ಸುಮ್ಮನಾಗುತ್ತಿದ್ದಳು. ಇದರಿಂದ ಅತಿಥಿಗಳಿಗೆಲ್ಲಾ ಅವರ ಈ ಬಗೆಯನ್ನು ನೋಡಿ ಏನೋ ಒಂದುತೆರನ ಸೋಜಿಗ.

ಮಗಳನ್ನು ಅಳಿಯನೊಂದಿಗೆ ನೋಡುತ್ತಿದ್ದ ಸುಶೀಲಕ್ಕ ಮತ್ತು ಗಿರೀಶರಾಯರು, "ಮದುವೆಯು ಪ್ರಥಮ ಘಟ್ಟ, ಆದ್ದರಿಂದ ತುಷಿತಾ ನಾಚಿಕೆಯಿಂದ ಹಾಗೆ ಕುಳಿತ್ತಿದ್ದಾಳೆ" ಎಂದು ಭಾವಿಸುತ್ತಿದ್ದರು. ಮಗ ನನ್ನು ಸೊಸೆಯೊಂದಿಗೆ ನೋಡುತ್ತಿದ್ದ ರಾಮರಾಯ ದಂಪತಿಗಳು, "ನಾವು ಕಿಟ್ಟನ ಇಚ್ಛಾದಿಚ್ಛೆಯ ಕುರಿತು ಒಂದು ಮಾತನ್ನೂ ಕೇಳದೇನೇ ಬೀಗರಿಗೆ ಮಾತುಕೊಟ್ಟುಬಿಟ್ಟೆವು; ಬಹುಶಃ ಈ ಸಂಬಂಧ ಅವನ ಮನಸ್ಸಿಗೆ ಬಂದಿರ ಲಿಕ್ಕಿಲ್ಲವೇನೋ? ಆದ್ದರಿಂದಲೇ ಹೀಗೆ ಉದಾಸೀನನಾಗಿದ್ದಾನೇನೋ?

ಹಾಗಲ್ಲದಿದ್ದರೆ ಅವನ ಮುಖದಲ್ಲಿ ನರ್ತಿಸುತ್ತಿದ್ದ ಆ ನಸು ನಗೆ ಎಲ್ಲಿ ಹೋಯಿತು?" ಎಂದು ಮನದೊಳಗೇ ಸಂದೇಹಿಸುತ್ತಿದ್ದರು.

ಜನಸಂದಣಿ ಕಡಿಮೆಯಾಗಲು ವಧೂವರರನ್ನು ಅಲ್ಲಿಂದೆಬ್ಬಿಸಿ ಊಟ-ತಿಂಡಿಯ ವ್ಯವಸ್ಥೆಮಾಡಬೇಕೆಂದು ಹಿರಿಯರು ಸೂಚಿಸಿದರು. ತುಷಿತಾ ಕೃಷ್ಣಮೂರ್ತಿಯರಿಗೂ ಈ ಸೂಚನೆ ಮೆಚ್ಚಿಗೆಯಾದಂತೆ ತೋರಿ ಅವರ ಮೋರೆಗಳು ಗೆಲವಾದುವು. ಅಷ್ಟರಲ್ಲೇ ಯುವಕನೊಬ್ಬನು ನಸುನಗುತ್ತಾ ಒಮ್ಮಿಂದೊಮ್ಮೆಲೆ ಅವರನ್ನು ಸಮೀಪಿಸಿ, "ಮಿತ್ರರೇ! ನಿಮ್ಮಿಬ್ಬರ ಸುಮಿಲನಕ್ಕೆ ನನ್ನ ಕೌತುಕದ ಅಭಿನಂದನೆ!" ಎಂದೆಂದು ಅವರನ್ನು ಅಭಿನಂದಿಸಿ ಕಣ್ಮರೆಯಾದ.

ಆ ವ್ಯಕ್ತಿಯನ್ನು ನೋಡಿದಾಕ್ಷಣಕ್ಕೇ ಪತಿ-ಪತ್ನಿಯರಲ್ಲಿ ಮಿಂಚು ಹರಿದಂತಾಯಿತು. ಅವನು ಹಾಗೆ ಅಭಿನಂದಿಸಿ ಹೊರಟುಹೋದಾಗಲಂತು ಅವರು ಬಹು ವಿಸ್ಮಿತರಾದರು. ಆ ವರೆಗೆ ಒಬ್ಬರನ್ನೊಬ್ಬರು ನೋಡಿರದ ಅವರು, ಒಡನೆ ಪರಸ್ಪರ ಮುಖವೆತ್ತಿನೋಡಿಕೊಂಡರು. ನೋಡಿ, ತಂತಮ್ಮ ನಯನಗಳನ್ನು ಒರಗಿಸಿಕೊಂಡರು-ತಾನೇನೂ ಸ್ವಪ್ನ ಕಾಣುತ್ತಿಲ್ಲವಷ್ಟೇ ಎಂದು ಆಶ್ಚರ್ಯಚಕಿತನಾದ ಕೃಷ್ಣಮೂರ್ತಿ, ಕನಸಿನಿಂದೆಚ್ಚೆತ್ತವನಂತೆ ತುಷಿತಾಳ ಎರಡೂ ಕೈಗಳನ್ನು ತನ್ನದರಲ್ಲಿ ತೆಗೆದುಕೊಂಡು, "ನೀನು!—ನೀನು?—ಅವಳೇ?" ಎಂದು ಪ್ರಶ್ನಿಸಿದ. ಹರ್ಷೋನ್ಮತ್ತಳಾದ ತುಷಿತಾ ಮಾರ್ದನಿಯಿತ್ತಳು: "ಹೌದು, ನಾನೇ!—ಅವಳು! ನೀವು ಅಂದು ನನಗಾಗಿ ಶ್ರಮಪಟ್ಟಿರಿ. ಇದಕ್ಕಾಗಿ ನಿಮಗೆ ನನ್ನ ಹೃತ್ಪೂರ್ವಕ ವಂದನೆಗಳು!"

ಕೃಷ್ಣಮೂರ್ತಿ ಅವಳ ಕೈಗಳನ್ನು ಇನ್ನಷ್ಟು ಒತ್ತಿ ಹಿಡಿದುಕೊಂಡು ಹೇಳಿದ--ತುಷಿತಾ! ಬಹುಕಾಲದಿಂದ ನನ್ನ ಹೃದಯಮಂದಿರದ ದೇವತೆಯಾದ ನಿನ್ನನ್ನು ನಿನ್ನ ಮಾತಾಪಿತೃಗಳು ನನಗೆ ಕಾಣಿಕೆಯಾಗಿ ಕೊಟ್ಟಿರುವಾಗ, ಎಂದೋ ಸಲ್ಲಬೇಕಾಗಿದ್ದ ನಿನ್ನ ಈ ವಂದನೆಗಳನ್ನು, ನಮ್ಮಲ್ಲಿ ಜಾಗೃತಿಯುದಿಸುವಂತೆಮಾಡಿಹೋದ ರಾಜಾರಾಯನಿಗೆ ನೀನು ಕೊಟ್ಟಿದ್ದರೆ ಉಚಿತವಿತ್ತು! ಅದಿರಲಿ, ತುಷಿತಾ! ಈಗ ನಮ್ಮ ಈ ಅನಿರೀಕ್ಷಿತ ಸಮಾಗಮವನ್ನು ಏನೆಂದು ಕರೆಯೋಣ?"

ತುಷಿತಾ ನಸುನಗುತ್ತಾ ಅಂದಳು-"ಮೂರ್ತಿ, ಇದಕ್ಕೇ ಹೇಳೋದು ವಿಚಿತ್ರಸಂಯೋಗ—ಎಂದು!"

ಹಿಂದನ ಹೊಲ

ಗೆಳೆಯ ಬಂದ!

"ಭಾಯೀ!......"

"......"

"ಭಾಯೀ– ಹಿಂದು!......"

"......"

"ಹೋ ಮೇರೇಭಾಯಿ– ಹಿಂದು!...."

ಗ್ರೀಷ್ಮಋತು. ಜ್ಯೇಷ್ಠಮಾಸದ ಆರಂಭ. ಪ್ರಖರ ಬೇಸಗೆ ಕಳೆದು ಮುಂಗಾರುಕಾಲಿಟ್ಟ ಸಂಧಿಕಾಲ. ಮುಸೂನುಗಾಳಿಗಳ ಸಾಂತ್ವನ ತೀಡನಕ್ಕೆ ವಸುಧೆಯು ತನ್ನ ದೇಹದ ತಾಪವನ್ನು ಮೆಲ್ಲ-ಮೆಲ್ಲನೆ ಕಳೆಯಲಾರಂಭಿಸಿ ದ್ದಳು. ಒಂದು ವಾರದಿಂದ ತುಂತುರುಮಳೆ ಎಡೆಬಿಟ್ಟು-ಬಿಟ್ಟು ಜಿನುಗುತ್ತಿ ದ್ದಿತ್ತು. ದಿನದಿಂದ ದಿನಕ್ಕೆ ಹದಗೊಳ್ಳುತ್ತಾ, ವ್ಯವಸಾಯಕ್ಕೆ ಸಿದ್ಧವಾ ನಿಂತಿತ್ತು, ಭೂಮಿ.

ಆ ದಿನವೇನೋ ಸೂರ್ಯನು ಮುಗಿಲುಗಳೆಡೆಯಿಂದ ಕ್ಷೀಣ ಬೆ ಕನ್ನು ಚೆಲ್ಲಿದ್ದ ಪ್ರಕೃತಿಯ ಮೇಲೆ. ಹಿಂದ ತನ್ನ ಮುರುಕು ಗುಡಿಸಲಿನ್ ನಿದ್ರಾಸಕ್ತನಾಗಿದ್ದ.

ನೇಸರು ನೆತ್ತಿಗೇರಿತು. ತೂತುಬಿದ್ದ ತಾರಸಿಯ ಮೂಲಕ ಮಂ ಪ್ರಕಾಶವು ತೂರಿಬಂದು ಅವನ ಮುಖದಮೇಲೆ ಬಿತ್ತು.

ಆ ಪ್ರಕಾಶದಲ್ಲಿ ಅದಾವ ದಿವ್ಯಶಕ್ತಿ ಅಡಗಿತ್ತೋ! ಪ್ರಾಯಶಃ ಅವ ಪೂರ್ವಿಕರ ದಿವ್ಯ ಚೈತನ್ಯವು ಅದರಲ್ಲಿ ತೀಕ್ಷ್ಣವಾಗಿ ತುಂಬಿದ್ದಿರಬೇಕ ಆ ಚೇತನ್ಯವು ಅವನ ಕಂಗಳ ಕನೀನಿಕೆಯ ಮೂಲಕ ಹೃದಯದಲ್ಲಿಳಿದ ಅಲ್ಲಿಂದ ಧಮನಿಯ ಮುಖಾಂತರ ಪ್ರತಿ ರಕ್ತನಾಳದಲ್ಲೂ ಹರಿದು, ಇಡಿ ದೇಹದಲ್ಲೆಲ್ಲಾ ವ್ಯಾಪಿಸಿರಬೇಕು. ಅಂತಲೇ ಅವನು ಎಚ್ಚರಗೊಂಡ......

ಎಚ್ಚರಗೊಂಡವ– ಮಲಗಿದ್ದಲ್ಲಿಂದಲೇ ಹೊರಳಿ, ಕಣ್ಣೊಜ್ಜುತ್ತಾ ಗು ಸಲ ದ್ವಾರದಿಂದ ಹೊರಕ್ಕೆ ದೃಷ್ಟಿ ಹಾಯಿಸಿದ.

ಹೊಂಬಿಸಿಲು ಅವನ ಚಿತ್ತವನ್ನಾಕರ್ಷಿಸಿತೇನೋ! ಅಂತೇ ಅವನು ಎದ್ದು ಕುಳಿತ. ದೇಹವನ್ನೊಮ್ಮೆ ಬಲವಾಗಿ ಮುರಿದುಕೊಂಡೆದ್ದು ನಿಂತ. ನಂತರ ಗುಡಿಯಿಂದ ಹೊರಕ್ಕೆ ಹೆಜ್ಜೆಯಿಟ್ಟು—ಹೊಲಕ್ಕೆ ನಡೆದ.

ಅವನ ಹೊಲದ ಮಧ್ಯೆ ನಿಂತಿತ್ತು, ಆ ಗೋಳಿಮರ. ಅದು ತನ್ನ ದೇಹಸ್ವರೂಪದಿಂದ ತಾನು ನಿಂತಿದ್ದ ಹೊಲದ ಪ್ರಾಚೀನತೆಯನ್ನು ಹೇಳುವಂತಿತ್ತು......

ಅದರ ತಾಯಿಕಾಂಡ ಮುಗಿಲಿನ ಕಡೆಗೆ ನೀಡಿತ್ತು. ಟೊಂಗೆಯೊಂದು ಉತ್ತರದಿಸೆಗೆ ಚಾಚಿತ್ತು. ಮೇಲಕ್ಕೆ ನಿಂತಿದ್ದ ಕಾಂಡದಲ್ಲಿ ಕೊಂಬೆರೆಂಬೆಗಳಿರಲಿಲ್ಲ; ಎಲೆಗಳಿರಲಿಲ್ಲ; ಬೋಳಾಗಿದ್ದು, ತಾನು ನಿಂತಿದ್ದ ಭೂಮಿಯ ನಿರಾಸಕ್ತಿಯ ಭಾವವನ್ನು ಸೂಚಿಸುವಂತಿತ್ತು. ಅಡ್ಡಕ್ಕೆ ನೀಡಿದ ತುಂಡು ರೆಂಬೆಯು ತನ್ನ ಅಲ್ಪ ಪತ್ರನಿಕರದಿಂದ ನೆರಳ ಜಾಳಿಗೆಯನ್ನು ಮರದಬುಡಕ್ಕೆ ಬೀಳಿಸಿತ್ತು—ದೇವಿ ತನ್ನ ಭಕ್ತನ ತಲೆಯಮೇಲಿಡುವ ವರ ಹಸ್ತದಂತೆ. ಆ ನೆರಳು—ಬುಡಕ್ಕೆ ತಾಗಿ ಕೂತಿದ್ದ ಕರಿಯಬಂಡೆಯ ಮೇಲೆ ಬಿಳಿಯ ಚುಕ್ಕೆಗಳನ್ನು ಹಾಕಿತ್ತು. ಕಲ್ಲು ತನ್ನಲ್ಲಿನ ನೀರಿನ ಪಸೆಯನ್ನು ಕಿರಣಗಳ ಮುಖಾಂತರ ಆಕಾಶಕ್ಕೇರಿಸುತ್ತಿತ್ತು.

ಗುಡಿಸಲಿನಿಂದ ಹೊರಬಿದ್ದ ಹಿಂದ—ಮಂದಗತಿಯಿಂದ ಸಾಗಿಹೋಗಿ ಆ ಬಂಡೆಯ ಮೇಲೆ ಮಂಡಿಸಿದ.

ದಿವಾಕರನು ಮುಗಿಲಿನ ಒಂದು ತೆಳು ಪದರಿನೊಳಗಿಂದ ಇನ್ನೊಂದರೊಳಕ್ಕೆ ನುಸುಳಿದ. ಆಗಲೊಮ್ಮೆ ಇಡಿಯ ಪ್ರಕೃತಿ ಬೆಳ್ಳಂಬೆಳಗಿತು. ಬಿಸಿಲಿನ ಆವೊಂದು ಹೊಳಪು— ಹಿಂದನ ಹೊಲದ ಸೂಕ್ಷ್ಮ-ಪರಿಚಯವನ್ನು ಮಿನುಗಿಸಿತು......

ಹಿಂದನ ಅಜ್ಜನ ಕಾಲದಲ್ಲಿ ಹೊಲ ಈಗಿದ್ದಷ್ಟೇ ಇರಲಿಲ್ಲ. ಅದು ಬಲುದೊಡ್ಡದಿತ್ತು— ಈಗಿರುವುದರ ನಾಲ್ಕರಷ್ಟು ವಿಸ್ತಾರವಾಗಿತ್ತು. ಹೊಲದ ನಾಲ್ಕೂ ಬದಿಗಳಲ್ಲಿ ಮುಗಿಲಿಗೆ ಮುಟ್ಟುವಂತೆ ಮಣ್ಣಿನ ಗೋಡೆಗಳನ್ನು ಕಟ್ಟಿಸಿದ್ದ—ಅವನ ಅಜ್ಜ. ಹಗಲೆಲ್ಲಾ ಆ ಬೇಲಿಗೋಡೆಗಳ ಮೇಲೆ ಪೈರಿಗೆ ಕಾವಲಾಗಿ ಸುತ್ತಲೂ ಗಸ್ತು ತಿರುಗುತ್ತಿದ್ದ. ರಾತ್ರಿ, ಆ ಗೋಳಿಮರದ ಒಂದು ಟೊಂಗೆಗೆ ದೊಡ್ಡದೊಂದು ಲಾಂದ್ರವನ್ನೂ, ಇನ್ನೊಂದು ಟೊಂಗೆಗೆ ಒಂದು ಖಾಲಿ ಟಿನ್ನನ್ನೂ ನೇತಾಡಿಸಿ, ತಾನು ಒಂದು ಬಡಿಗೆ ಸಹಿತ ಮರವನ್ನೇರಿ ಕುಳಿತುಕೊಳ್ಳುತ್ತಿದ್ದ. ಕುಳಿತೂ ಕುಳಿತು ಅವನು ತನಗರಿವಿಲ್ಲ

ದೆಯೇ ನಿದ್ದೆಹೋಗಿಬಿಡುತ್ತಿದ್ದ. ಎಚ್ಚರವಾದಾಗಲೆಲ್ಲಾ ಬಡಿಗೆಯಿಂದ ಟಿನ್ನಿಗೆ ಜೋರಾಗಿ ಬಡಿಯುತ್ತಿದ್ದ. ಹೀಗೆ ಹಗಲು ರಾತ್ರಿ ಎಚ್ಚರಿಕೆಯಿಂದ ಕಾವಲು ಕೊಡುತ್ತಿದ್ದುದರಿಂದ ಯಾರೂ ಅವನ ಹೊಲದೊಳಕ್ಕೆ ಹಣಿಕಿ ಕೂಡ ನೋಡುತ್ತಿರಲಿಲ್ಲ. ಪೈರು ಕೊಯ್ಲಿಗೆ ಬಂದಾಗ ಹೊಂಬಣ್ಣದಿಂದ ಮಿರುಗುತ್ತಿದ್ದ ಕಾಳುಗಳನ್ನು ನೋಡಿ ವನ್ಯಮೃಗಪಕ್ಷಿಗಳು ದೂರದಿಂದಲೇ ಆಸೆಯ ನಿಡಿದುಸಿರು ಬಿಡುತ್ತಿದ್ದುವು. ಪೈರಿನ ಸುಮಗಂಧವು ಗಾಳಿಯಲ್ಲಿ ತೇಂಕಾಡುತ್ತ, ಗೋಡೆಗಳನ್ನು ದಾಟಿಹೋಗಿ, ಹೊರಜನರ ಮೂಗುಗಳನ್ನು ಹೊಕ್ಕು, ಅವರ ಎದೆಗಳಲ್ಲಿ ಆಶಾಜ್ವಾಲೆಯನ್ನು ಹೊತ್ತಿಸುತ್ತಿತ್ತು. ಆದರೆ ಯಾರಿಗೂ ಹೊಲದೊಳಕ್ಕೆ ಕಾಲಿಡಲು ಧೈರ್ಯವಿರಲಿಲ್ಲ—ಪ್ರವೇಶದ್ವಾರ ವಿರಲಿಲ್ಲ. ಸುಗ್ಗಿಯ ವೇಳೆ ಅಜ್ಜನೇ ಗೋಡೆಗಳ ಮೇಲೇರಿ ನಿಂತು ಅವರಿಗೆ ಸಾಕೆಂಬಷ್ಟು ಕಾಳುಗಳನ್ನು ಚೆಲ್ಲಿಕೊಟ್ಟು ಅವರ ಹಂಬಲವನ್ನು ತೀರಿಸುತ್ತಿದ್ದ—ಉದಾರಿಯೆಂದು ಎಲ್ಲರಿಂದ ಹೊಗಳಿಸಿಕೊಳ್ಳುತ್ತಿದ್ದ.

ಅವನ ಅನಂತರ ಅವನ ಮಗ—ಹಿಂದನ ತಂದೆ—ಹೊಲಕ್ಕೆ ಮಾಲಿಕನಾದ. ಅವನು ರೋಗಿ. ಆದ್ದರಿಂದ ಇಡಿಯ ಹೊಲದ ವ್ಯವಸಾಯವನ್ನು ಮಾಡಲಾರದೆ ಹೋದ. ಕಾಲಕ್ರಮೇಣ ಮಣ್ಣಿನ ಗೋಡೆಗಳೆಲ್ಲ ಒಂದೊಂದಾಗಿ ಜರಿದು ಬೀಳತೊಡಗಿದುವು. ಪಶ್ಚಿಮೋತ್ತರ-ವಾಯುವ್ಯ ದಿಕ್ಕುಗಳ ಗೋಡೆಗಳು ಮಾತ್ರ ನಿರ್ಬಲವಾಗಿ ನಿಂತಿದ್ದುವು. ಮುಕ್ಕಾಲು ಪಾಲು ಹೊಲ ಬೀಳುಬಿದ್ದಿತು. ಬಂಜರುಬಿದ್ದ ಭೂಮಿಯಲ್ಲಿ ಬೆಳೆದುನಿಂತ ಕಾಡು ಪೊದೆಗಳು ಹೊಲದ ಉಳಿದ ಭಾಗಗಳಿಗೆ ಬೇಲಿಯಾದುವು.

ತಂದೆಯ ಬಳಿಕ ಹಿಂದ ಹೊಲಕ್ಕೆ ಯಜಮಾನನಾದ. ಈತ ಬರೀ ಆಲಸಿ; ಯಾವಾಗಲೂ ನಿದ್ದೆಹೊಡೆಯುತ್ತಾ ಮಲಗಿರುತ್ತಿದ್ದ. ಅಜ್ಜ ಕಟ್ಟಿದ ಚೌಪಾಳಿಗೆ ಮನೆ, ಶಕ್ತ ಹಿತರಕ್ಷಕರಿಲ್ಲದೆ ಸುತ್ತಲೂ ಕುಸಿದುಬಿದ್ದು ನಡುವಣ ಭಾಗನಷ್ಟೇ ಉಳಿದಿತ್ತು. ಅದೂ ಕೂಡ ಜೀರ್ಣಾವಸ್ಥೆಯನ್ನು ಹೊಂದಿ ಗುಡಿಸಲು ನಾಮಕ್ಕೇ ಅನ್ವರ್ಥವಾಗಿತ್ತು. ತಂದೆ ನೆಟ್ಟ ಪೈರನ್ನೂ ಆತ ಕೊಯ್ಯಲಿಲ್ಲ. ವಾಯುವ್ಯದ ಜರ್ಜರಿತ ಗೋಡೆಯೂ ಜರಿದು ಬಿದ್ದು ಅಲ್ಲಿ ದೊಡ್ಡ ಕಂಡಿಯು ಏರ್ಪಟ್ಟಿತು. ಅದನ್ನು ಮುಚ್ಚುವ ಹವ್ಯಾಸಕ್ಕೂ ಆತ ಹೋಗಲಿಲ್ಲ. ಕಾಡು ಪ್ರಾಣಿಗಳು ಒಳನುಗ್ಗಿದುವು; ಅವುಗಳ ಜೊತೆಗೆ ಬಂಜರು ಭೂಮಿಯ ಕಾಡಿನಲ್ಲಿದ್ದ ಪಕ್ಷಿಗಳೂ ಕೂಡಿಕೊಂಡುವು; ಹೀಗೆ ಎರಡು ಪಡೆಗಳೂ ಸೇರಿ ಪೈರನ್ನು ನಾಶಮಾಡಿದುವು.

.........ಹಿಂದ—ಬಂಡೆಯ ಮೇಲೆ ಕುಳಿತವ—ಹೊಲವನ್ನು ದಿಟ್ಟಿಸಿದ. ಅಪ್ಪ ನೆಟ್ಟ ಪೈರಿನ ಕಾಂಡಗಳು ಅಲ್ಲಲ್ಲಿ ತುಂಡು ತುಂಡಾಗಿ ಬಿದ್ದಿದ್ದುವು. ಅವನು ಆಲಸ್ಯಾಧಿಕ್ಯತೆಯಿಂದ ಆ ವರ್ಷದ ಬಿತ್ತನೆಗೂ ಕೂಡ ಕಾಳು ಸಂಗ್ರಹಮಾಡಿರಲಿಲ್ಲ. ಪ್ರಾಣಿಗಳು ತಿನ್ನುವಾಗ ಉದುರಿದ ಬೀಜಗಳು ನೀರಿನ ಪಸೆಯಿಂದ ತಮ್ಮ ಸಹಜ ಬಣ್ಣಾಕಾರಗಳನ್ನು ಕಳೆದುಕೊಂಡು ಹೊಲದಲ್ಲಿ ಅಲ್ಲಲ್ಲಿ ಬಿದ್ದಿದ್ದುವು; ಇನ್ನು ಒಂದು ಮಳೆ ಜೋರಾಗಿ ಬಿದ್ದರೆ ಮೊಳಕೆಬಿಡುವ ಸ್ಥಿತಿಯಲ್ಲಿದ್ದುವು.

ಅವನ್ನು ನೋಡನೋಡುತ್ತ, ತಾನೂ ತನ್ನ ಅಪ್ಪ-ಅಜ್ಜರಂತೆ ವ್ಯವಸಾಯ ಮಾಡಬೇಕೆಂಬ ವಿವೇಕ ಬುದ್ಧಿ ಹಿಂದನ ಮಸ್ತಿಷ್ಕದಲ್ಲಿ ಅಂಕುರಿಸಿತು. ಅದಕ್ಕಾಗಿ ಭವಿಷ್ಯದಂಕುರಗಳನ್ನು ಹೊಟ್ಟೆಗಳಲ್ಲಿ ಹುದುಗಿಸಿಟ್ಟುಕೊಂಡು ಉಬ್ಬಿ ಬಿದ್ದಿದ್ದ ಅದೇ ಕಾಳುಗಳನ್ನು ಆರಿಸಿ ತೆಗೆಯಬೇಕೆಂದು ಆತ ಯೋಚಿಸಿದ.

ಹೀಗೆ ಯೋಚಿಸಿ, ಅವನು ಕುಳಿತಲ್ಲಿಂದ ಎದ್ದ. ಗುಡಿಸಲಿಗೆ ಹೋಗಿ ಪುಟ್ಟದೊಂದು ಕುಕ್ಕೆಯನ್ನು ತಂದ ಬಳಿಕ ಕುಳಿತುಕೊಂಡೇ ಆಚೀಚೆ ಚಲಿಸುತ್ತಾ ಮಣ್ಣಿನಲ್ಲಿ ಹುದುಗಿಕೊಂಡಿದ್ದ ಬೀಜಗಳನ್ನು ಹೆಕ್ಕಿ ಹೆಕ್ಕಿ ಅದಕ್ಕೆ ಹಾಕತೊಡಗಿದ..........ಅದರಲ್ಲೇ ತನ್ಮಯನಾಗಿ ಹೋದ.

ನೇಸರು, ಮುಗಿಲುಗಳೊಳಗೇ ಮೆಲ್ಲ ಮೆಲ್ಲನೆ ಪಶ್ಚಿಮಾಕಾಶದಲ್ಲಿ ಸಾಗಿಹೋಗಿ ಯಾವುದೋ ಒಂದು ಬಿಂದುವನ್ನು ತಲಪಿ ತನ್ನ ಕಿರಣಗಳನ್ನು ಇನ್ನಷ್ಟು ತೀಕ್ಷ್ಣಗೊಳಿಸಿತು. ಆಗಲೇ ಕೂಗೊಂದು ಕೇಳಿಬಂತು—

"ಭಾಯೀ!.........."

ಈ ಕೂಗು ಹಿಂದನಿಗೆ ಕನಸಿನಲ್ಲಿ ಕೇಳಿಸಿದಂತಾಯಿತು.

ತಿರುಗಿ ಎರಡನೆಯ ಕೂಗು—

"ಭಾಯಿ—ಹಿಂದು!"

ಹಿಂದ ಕನಸಿನ ಸಾಮ್ರಾಜ್ಯದಿಂದ ಎಚ್ಚೆತ್ತ.

ಮೂರನೆಯ ಕೂಗು ಸ್ಪಷ್ಟವಾಗಿ ಕೇಳಿಸಿತು—

"ಹೋ ಮೇರೇ ಭಾಯೀ—ಹಿಂದು!!!........"

ಹಿಂದ ಕುಕ್ಕೆಯನ್ನು ನೆಲದ ಮೇಲೆಯಿಟ್ಟು ಎದ್ದುನಿಂತ. ಆಗ—

"ಜರಾ ಇಧರ್ ದೇಖೋ, ತೋ ಭಾಯೀ,' ಅಂತ ಆ ಕೂಗಿನ ವಾಣಿ ಅಂದಿತು.

ಹಿಂದ ವಾಯುವ್ಯಕ್ಕೆ ಮುಖಮಾಡಿದ. ಆಕಾಶಪಥದಲ್ಲಿ ಪತನಶೀಲ ರವಿಯ ತೀಕ್ಷ್ಣ ಕಿರಣಗಳು ಚಕ್ಷುಗಳನ್ನು ಚುಚ್ಚುತ್ತಿದ್ದುವು. ಆದ್ದರಿಂದ ಅಂಗೈಯಿಂದ ಕಂಗಳಿಗೆ ಮರೆಮಾಡಿಕೊಂಡು ಅವನು ಆ ದಿಸೆಯನ್ನು ದಿಟ್ಟಿಸಿದ.......

ಹೊಲದ ಆ ಭಾಗದ ಗೋಡೆ ಬಿದ್ದುಂಟಾಗಿದ್ದ ಕಂಡಿಯಲ್ಲಿ–ಹೊಲದ ಅಂಚಿನಲ್ಲಿ– ನೆರಳಿನಂತಹ ಮನುಷ್ಯಾಕೃತಿಯೊಂದು ಬಿಸಿಲಿಗೆ ಹೊಳೆಯುತ್ತಾ ನಿಂತಿದ್ದಂತೆ ತೋರಿತು.

ಹಿಂದ ವಿಸ್ಮಯ–ಕಾತರಗಳಿಂದ ಕೂಡಿದವನಾಗಿ ಆ ಆಕೃತಿ ಇದ್ದೆಡೆಗೆ ಹೋದ; ಮತ್ತು ಕೇಳಿದ:

"ಯಾರು ನೀನು ?"

"ನಿನ್ನ ದೋಸ್ತ್ !"— ಆ ಕರಿಯ ವ್ಯಕ್ತಿ ಎದೆಯ ತನಕ ನೀಡಿಳಿದಿದ್ದ ತನ್ನ ಗಡ್ಡವನ್ನು ಬಲದ ಕೈಯಿಯಿಂದ ನೀವುತ್ತಾ ನಸುನಗೆಯ ಮುಖಮುದ್ರೆಯಿಂದ ನುಡಿಯಿತು.

"ಎಲ್ಲಿಂದ ಬಂದೆ ?"

"ಮಧ್ಯಪ್ರಾಚ್ಯದಿಂದ"— ಆಗಂತುಕನ ಧೀರೋದಾತ್ತ ಮೊಗದಲ್ಲಿ ಕೆಂಗಣ್ಣುಗಳು ಮಿಂಚಿನಂತೆ ಹೊಳೆದುವು.

"ಹೆಸರೇನು ?"

"ಮುಸ್ಲಿಂ!"— ಅವನ ಹರಲಾಗಿದ್ದ ಎದೆ ಇನ್ನಷ್ಟು ಬಡಾಯಿಸಿತು.

"ಯಾತಕ್ಕೆ ಬಂದೆ ?"

"ನನಗೆ ವ್ಯವಸಾಯಕ್ಕೆ ಭೂಮಿಯ ಕೊರತೆ ತಲೆದೋರಿತು. ಅಲ್ಪ ಭೂಮಿಯಿಂದ ತೃಪ್ತಿ ಉಂಟಾಗಲಿಲ್ಲ. ನಿನ್ನ ಹೊಲದಲ್ಲಿ ವಿಶಾಲವಾದ ಎಡೆಯಿದೆ ಎಂದು ತಿಳಿದು ಇಲ್ಲಿಗೆ ಬಂದೆ........"

"ಆ್ಞಂ ?"

"........ಅಗೋ! ನಿನ್ನ ಸಾಗುಹೊಲಕ್ಕೆ ಒತ್ತಿನಲ್ಲಿರುವ ಆ ಬಂಜರು ಭೂಮಿಯಲ್ಲಿ ನನಗೆ–ಕೃಷಿಗೆ ಎಡೆಕೊಡುವೆಯಾ ?"— ವ್ಯಕ್ತಿಯ ನುಡಿಯಲ್ಲಿ ದೈನ್ಯವಿರಲಿಲ್ಲ. ಮಿತ್ರತ್ವದ ಸಲಿಗೆ ನಿರರ್ಗಳವಾಗಿ ಹರಿಯುತ್ತಿತ್ತು.

"ಏನು? ನನ್ನ ಹಡಿಲಿನಲ್ಲಿ ನಿನಗೆ ಎಡೆಯೆ?—ಪರಕೀಯನಿಗೆ?"—ಜಡತೆಯ ಬೂದಿಯೊಳಗಿನ ಚೇತನತೆಯನ್ನು ತುಸು ಕೆದಕಿಕೊಂಡು ಕೇಳಿದ, ಹಿಂದ.

"ಹಿಂದ! ನಾನು ನಿನಗೆ ಮಿತ್ರನಾಗಿ ಬಂದಿದ್ದೇನೆ. ಮಿತ್ರರಾದವರಿಗೆ ತನ್ನ ಮನೆಯಲ್ಲಿ ಎಡೆಕೊಡದಷ್ಟು ನಿರ್ದಯಿಯೇ ನೀನು?"

"ಏನು? ನನ್ನ ಬಂಜರುಭೂಮಿಯನ್ನು ಬಳಸಿಕೊಳ್ಳುವುದೂ ಅಲ್ಲದೆ, ನನ್ನ ಮನೆಯಲ್ಲಿ ಬೇರೆ ಇರುತ್ತೇನೆಂದು ಹೇಳುತ್ತಿದೀಯ?"

"ಇಲ್ಲಪ್ಪಾ, ಇಲ್ಲ. ನಿನ್ನ ಮನೆಯೊಳಕ್ಕೆ ನಾನು ಕಾಲೂ ಕೂಡ ಊರುವುದಿಲ್ಲ. ಇಗೋ!— ಇಲ್ಲಿ ನೋಡು!— ನನ್ನ ತಲೆಯ ಮೇಲೆ ಡೇರೆಯ ಹೊರೆಯಿದೆ. ನೀನು ನನಗೆ ಹೊಲವನ್ನಷ್ಟೇ ಕೊಡು; ನಾನು ಅದರ ತುದಿಯಲ್ಲಿ ಡೇರೆ ಹೊಡೆದುಕೊಂಡು ವಾಸಿಸುವೆ. ನೀನು ನಿನ್ನ ಮನೆಯೊಳಗೆ ನಿರಾತಂಕವಾಗಿರು."

"ವ್ಯವಸಾಯಕ್ಕೆ ಹತ್ಯಾರುಗಳು?"

"ಅವು ಕೂಡ ನಿನ್ನದು ಬೇಡಪ್ಪ! ನಾನು ಅವುಗಳನ್ನೂ ಒಯ್ದು ತಂದಿದ್ದೇನೆ," ಎಂದು ಆತ, ತನ್ನ ಎಡದ ಭುಜದಿಂದ ಬೆನ್ನಿನ ಮೇಲೆ ಬಿದ್ದುಕೊಂಡಿದ್ದ ದೊಡ್ಡ ಗಂಟನ್ನು ನಿರ್ದೇಶಿಸಿದ.

"ಹಾಗಾದರೆ...ಬೀಜ?"

"ಅದರ ಚಿಂತೆಯೂ ನಿನಗೆ ಬೇಡ. ನಿನ್ನಿಂದ ನಾನೆಂದೂ ಬೀಜದ ಕಾಳುಗಳನ್ನು ಎರವಲು ಕೇಳುವುದಿಲ್ಲ. ನನಗೆ ಬೇಕಾದ ಕಾಳುಗಳನ್ನು ನಾನೇ ಒಯ್ದು ತಂದಿದ್ದೇನೆ"—ಎಂದು ಆತ ಎಡಗೈಯ ಮಣಿಕಟ್ಟಿನಲ್ಲಿ ನೇತಾಡುತ್ತಿದ್ದ ಚಿಕ್ಕ ಚೀಲವೊಂದನ್ನು ಬಾಯಗಲಿಸಿ ತೋರಿಸಿದ, ಹಿಂದನಿಗೆ.

ಹಿಂದನ ವಿವೇಚನಬುದ್ಧಿ ಆಲಸ್ಯದ ಪ್ರಭಾವಕ್ಕೆ ಕರಗಿಹೋಗಿತ್ತು. ಎಂತಲೇ ಅವನು ಮುಸ್ಲಿಮನ ಚೀಲವನ್ನು ಬಗ್ಗಿನೋಡಿ, ನಿಶ್ಚಿಂತೆಯಿಂದ ಸಮ್ಮತಿಯ ಕರೆಯನ್ನಿತ್ತ— "ಹೂಂ ಬಾ!" ಎಂದು.

—ಗೆಳೆಯ ಬಂದ!

ಎಲ್ಲಾ ಎರಡೆರಡು!

ಮುಸ್ಲಿಮನು ಹಿಂದನ ಆವರಣವನ್ನು ಹೊಕ್ಕ......

ಉತ್ತರ ಪಶ್ಚಿಮಕ್ಕೆ ಹಬ್ಬಿದ್ದ ಹಿಂದನ ಸಾಗುವಳಿಯ ಭೂಮಿಯನ್ನು ಹಾದು, ಆತ ಪೂರ್ವೋತ್ತರದ ಬೀಳುಜಾಗವನ್ನು ಸೇರಿದ......

ಹಿಂದನ ಗುಡಿಗೆ ನೇರವಾಗಿ, ಹಡಿಲಿನ ತುದಿಭಾಗದ ಮಧ್ಯದಲ್ಲಿ ಮೂವತ್ತು ಚದರಡಿ ವಿಸ್ತೀರ್ಣಕ್ಕೆ ಜಾಗವನ್ನು ಕಾಡು ಕಡಿದು, ನೆಲವನ್ನು ಗುದ್ದಲಿಯಿಂದ ಕೆರೆದು ಚೊಕ್ಕಮಾಡಿದ ನಂತರ ಇಪ್ಪತ್ತು ಚದರಡಿ ವಿಸ್ತೀರ್ಣಕ್ಕೆ ತನ್ನ ಡೇರೆಯನ್ನು ಬಿಗಿದು ನಿಲ್ಲಿಸಿದ. ಸುತ್ತಲಿನ ಹತ್ತು ಚದರಡಿಯಷ್ಟು ಜಾಗವು ಅವನ ಡೇರೆಗೆ ಅಂಗಳವಾಯಿತು. ತನ್ನ ಸಾಮಾನುಗಳನ್ನೆಲ್ಲಾ ಡೇರೆಯೊಳಗೆ ಓರಣವಾಗಿಟ್ಟ ಬಳಿಕ ಒಂದು ತೆಳು ಹಲಗೆಯನ್ನು ಡೇರೆಯ ದ್ವಾರದ ಮೇಲ್ಭಾಗದಲ್ಲಿ ತೂಗಾಡಿಸಿದ. ಅನಂತರ ಅದರ ಮೇಲೆ ಬರೆದನಾತ—"ಮುಸ್ಲಿಂಜೀಯಾ"—ಎಂದು.

ಮರುದಿನ ಡೇರೆಯ ಮುಂಭಾಗದಲ್ಲಿ ಚಿಕ್ಕದೊಂದು ನೀರಿನ ಹೊಂಡವನ್ನು ನಿರ್ಮಿಸಿದ. ಅದಕ್ಕೆ ಹೆಸರುಬಿತ್ತು —"ಮುಸ್ಲಿಂ ಪಾನಿ"— ಎಂದು.

ಅದರ ಮರುದಿನದಿಂದಲೇ ಹೊಲದ ಕೆಲಸಕ್ಕೆ ಪ್ರಾರಂಭಿಸಿದ......

ಹಿಂದನ ಪ್ರಸ್ತುತಹೊಲದ ವಿಸ್ತೀರ್ಣಕ್ಕೆ ಸರಿಯಾಗಿ ಬೀಳು ಜಾಗವನ್ನು ಕಾಡು ಕಡಿದು, ಬೆಂಕಿಯಿಂದ ಸುಟ್ಟು, ಗುದ್ದಲಿಯಿಂದ ಎಡೆಬಿಡದೆ ಅಗೆದು ಬಿತ್ತನೆಗೆ ಹೊಲವನ್ನು ಹಸನುಮಾಡಿದ; ಸುತ್ತಲೂ ಗಟ್ಟಿಯಾದ ಏರಿಯನ್ನು ಹಾಕಿದ; ನಡುನಡುವೆ ಕಾಲುವೆಗಳನ್ನು ಹಾಕಿ ಅವುಗಳಲ್ಲಿ ಬಾವಿಯಿಂದ ನೀರು ಹಾಯಿಸಿದ. ನೀರು ನಿಂತು ಸೂರ್ಯನ ಕಿರಣಗಳಿಗೆ ಸರಸಿನೋಪಾದಿಯಲ್ಲಿ ಹೊಳೆ ಹೊಳೆಯುತ್ತಿದ್ದ ಹೊಲವನ್ನು ನೋಡಿ ಆನಂದಾಧಿಕ್ಯದಿಂದ, "ಮುಸ್ಲಿಂ ಖೇತ್! ಮುಸ್ಲಿಂ ಖೇತ್!" ಎಂದುಕೊಂಡು ಕುಣಿದುಬಿಟ್ಟನಾತ.

ಮುಂದೆ, 'ಮುಸ್ಲಿಂ ಖೇತ್'ನಲ್ಲಿ ಬಿತ್ತನೆಯ ಕೆಲಸ ನಡೆಯಿತು. ಬಿತ್ತಿದ ಬೀಜಗಳೆಲ್ಲ ಮೊಳೆತು ಸಸಿಯಾಗಿ, ಗಿಡವಾಗಿ ಬೆಳೆದು, ಹೂಬಿಟ್ಟು, ಫಲಿಸಿ ಹೊಂಬಣ್ಣದ ಕಾಳುಗಳನ್ನು ತೊಟ್ಟು ಮೆರೆದಾಗ ಆತ ಅದನ್ನು ಕರೆದುಕೊಂಡ— "ಮುಸ್ಲಿಂ ಅನಾಜ್"—ಎಂದು.

ಮುಸ್ಲಿಮನ ಕೆಲಸಗಳನ್ನು ನೋಡಿ ಹಿಂದನಲ್ಲಿಯೂ ಚಟುವಟಿಕೆ ಮೂಡಿತು.

ಅವನೂ ತನ್ನ ಗುಡಿಸಲಿನ ರಿಪೇರಿಗೆ ತೊಡಗಿದ.......

ರಿಪೇರಿ ಕೆಲಸ ಮುಗಿದು, ಮುರುಕು ಗುಡಿಸಲು ಹೊಸತನಕ್ಕೆ ಬಂತು. ಹಿಂದ ತನ್ನಾ ಗುಡಿಸಲಿಗೆ ಹೆಸರಿಟ್ಟ— "ಹಿಂದೂಘರ್".

ಬಳಿಕ ತನ್ನ ಹಳೆಯ ಬಾವಿಯನ್ನು ದುರಸ್ತಿಗೊಳಿಸಿ ಅದರಲ್ಲಿ ಹೊಸ ಜಲವನ್ನು ಕಾಣಿಸಿದ. ಆ ಜಲಾಶಯಕ್ಕೆ ನಾಮಕರಣವಾಯಿತು—"ಹಿಂದೂಪಾನಿ".

ತನ್ನ ಹೊಲವನ್ನು ಕರೆದುಕೊಂಡನಾತ—"ಹಿಂದೂಖೇತ್"

"ಹಿಂದೂ ಖೇತ"ನ್ನು ಅಗೆದು, ಹದಗೊಳಿಸಿ, ಹಿಂದ ತಾನು ಆರಿಸಿಟ್ಟಿದ್ದ ಬೀಜಗಳನ್ನು ಅದರಲ್ಲಿ ಬಿತ್ತಿದ. ಬೆಳೆಬೆಳೆದು ಪೈರು ಹಣಾದಾಗೆ ಅದು ಕರೆಯಲ್ಪಟ್ಟಿತು—"ಹಿಂದೂ ಅನಾಜ್".

ಹೀಗೆ ಅಕ್ಕ-ಪಕ್ಕಗಳಲ್ಲಿ ಹಿಂದೂ ಮುಸ್ಲಿಮರ ನಿವಾಸ, ಜಲಾಶಯ, ಮತ್ತು ಹೊಲಗಳು ಎರಡೆರಡಾಗಿ ತಯಾರಾದುವು. ಇಬ್ಬರ ಹೊಲಗಳೂ ಸಸ್ಯಶ್ಯಾಮಲಗೊಂಡು ಮೈತುಂಬಿ ನಿಂತು, ಎರಡು ವಿಭಿನ್ನ ಪರಿಮಳಗಳನ್ನು ಸುತ್ತಲೆಲ್ಲಾ ಹರಡಿದುವು.

ಒಂದಾದ ಮನ

ಮುಸ್ಲಿಮನು ಹಿಂದನ ಭೂಮಿಯಲ್ಲಿ ತಳವೂರಿ ಹಲವು ವರ್ಷಗಳು ಸಂದುವು. ಇಬ್ಬರೂ ತಂತಮ್ಮ ಹೊಲವನ್ನು ಕ್ರಮಕ್ರಮವಾಗಿ ದಕ್ಷಿಣಕ್ಕೆ ವಿಸ್ತರಿಸುತ್ತಾ ಹೋಗಿ ಕೊನೆಮುಟ್ಟಿಸಿದರು: ಹಿಂದನ ಅಜ್ಜನ ಹೊಲ ಹೀಗೆ ಪೂರ್ಣ ವ್ಯವಸಾಯಗೊಂಡಿತು.

ಹಿಂದ ಮತ್ತು ಮುಸ್ಲಿಮರು ಪರಸ್ಪರ ಮಾತಾಡುತ್ತಿರಲಿಲ್ಲ. ಒಬ್ಬರಿಗೊಬ್ಬರ ಹೊಲಕ್ಕೆ ಕಾಲಿಡುತ್ತಿರಲಿಲ್ಲ. ಒಬ್ಬರಿನ್ನೊಬ್ಬರ ನೀರನ್ನು ಮುಟ್ಟುತ್ತಿರಲಿಲ್ಲ. ಹಿಂದ ದೇವರನ್ನು ಪ್ರಾರ್ಥಿಸುವಾಗ ಮುಸ್ಲಿಂ ಕಣ್ಣುಮುಚ್ಚಿಕೊಳ್ಳುತ್ತಿದ್ದ. ಮುಸ್ಲಿಮನು ನಮಾಜುಮಾಡುವಾಗ ಹಿಂದ ಕಿವಿಮುಚ್ಚಿಕೊಳ್ಳುತ್ತಿದ್ದ. ಇಬ್ಬರೂ ತಂತಮ್ಮ ಹೊಲಗಳಲ್ಲಿ ಮೌನವಾಗಿ ದುಡಿಯುತ್ತಿದ್ದರು; ಬಿಡಾರಗಳಲ್ಲಿ ಏಕಾಂಗಿಗಳಾಗಿ ವಿಶ್ರಮಿಸುತ್ತಿದ್ದರು. ಒಬ್ಬರ ಹಬ್ಬ ಹುಣ್ಣಿಮೆಗಳು ಇನ್ನೊಬ್ಬರಿಗೆ ಮಾನ್ಯವಿರಲಿಲ್ಲ.

ಆದರೆ ಹೀಗೆಯೇ ಎಷ್ಟು ಸಮಯ ಸಾಗೀತು?

ಇಬ್ಬರೂ ಹೊಲಗಳಲ್ಲಿ ಒಬ್ಬೊಬ್ಬರೇ ದುಡಿದೂದುಡಿದು ಸೋತು ಹೋಗಿದ್ದರು. ಅವರ ರಟ್ಟೆಶಕ್ತಿಗುಂದುತ್ತಾ ಬಂದಿತ್ತು.

ಆದ್ದರಿಂದ ಅವರ ದೇಹಗಳು ಪರಸ್ಪರ ಒಡನಾಟವನ್ನು ಬಯಸಿದವು; ಮನೆಗಳು ವಾರ್ತಾಲಾಪಕ್ಕೆ ಕಾತುರಗೊಂಡುವು; ಹೃದಯಗಳು ಹತ್ತಿರ ಹತ್ತಿರವಾಗಲು ಹಾರೈಸಿದುವು.

ಆದರೆ ಬಿಗುಮಾನವೊಂದು ಮಿಲನದ ನಡುವೆ ತಡೆಯಾಗಿ ನಿಂತಿತ್ತು.

ಕೊನೆಗೆ ಮುಸ್ಲಿಮನೇ ಒಂದು ದಿನ ಅಭಿಮಾನವನ್ನಳಿದು ಧೈರ್ಯ ದಿಂದ ಹಿಂದನ ಗುಡಿಸಲೊಳಕ್ಕೆ ಕಾಲಿಟ್ಟ; ವಿನಯದಿಂದ ಅವನ ಬದಿಯಲ್ಲಿ ಕುಳಿತು, ಕಕ್ಕುಲತೆಯಿಂದ ತನ್ನ ಮನದಭಿಲಾಷೆಯನ್ನು ಬಿತ್ತರಿಸಿಕೊಂಡ.........

ಹಿಂದನೂ ಒಂಟಿ ಜೀವನದಿಂದ ವಿರಸಗೊಂಡಿದ್ದ.........

ಅವನ ಕಣ್ಣೋಟವು ಮುಸ್ಲಿಮನ ಮಿತ್ರತ್ವವನ್ನು ಸ್ವಾಗತಿಸಿತು; ಬಾಹುಗಳು ಕೊರಳನ್ನು ಸುತ್ತುವರಿದುವು; ಹೃದಯವು ಹೃದಯವನ್ನು ಸ್ಪರ್ಶಿಸಿತು: ಮನಗಳು ಜೊತೆಸೇರಿ ನುಡಿದುವು—

"ನಾವು ಒಂದಾದೆವು !"

ಮಿಶ್ರಫಲ

ಅಂದಿನಿಂದ—ಇಬ್ಬರ ಹೊಲಗಳ ನಡುವೆ ಉದ್ದಕ್ಕೂ ಬಿದ್ದಿದ್ದ ಏರಿಯು ತೆಗೆಯಲ್ಪಟ್ಟಿತು; ಎರಡೂ ಒಟ್ಟುಸೇರಿ ವಿಶಾಲವಾದ ಒಂದೇ ಹೊಲವಾಯಿತು. ಇಬ್ಬರೂ ಕೂಡಿ ಒಟ್ಟೊಟ್ಟಿಗೆ ಕೆಲಸಮಾಡತೊಡಗಿದರು. ಇಬ್ಬರ ಬೆಳೆಯ ಬಿತ್ತಗಳು ಮಿಶ್ರವಾದುವು. ಮಿಶ್ರಬೀಜಗಳಿಂದ ಹುಟ್ಟಿದ ಪೈರಿನಿಂದ ಹೊಲವು ವರ್ಷವರ್ಷವೂ ಕಂಗೊಳಿಸತೊಡಗಿತು..........

ಮತ್ತೆ ಈಗ "ಹಿಂದೂ ಪಾನಿ" "ಮುಸ್ಲಿಂ ಪಾನಿ" ಎಂಬ ಭೇದವು ಉಳಿಯಲಿಲ್ಲ. ಒಬ್ಬನ ಹೊಲ ಇನ್ನೊಬ್ಬನಿಗೆ ತನ್ನದಾಯಿತು. ಎರಡೂ ಬಾವಿಗಳಿಂದ ಹೊಲಕ್ಕೆ ನೀರು ಹಾಯಿಸಲ್ಪಡತೊಡಗಿತು. ಒಬ್ಬನ ಬಿಡಾರಕ್ಕೆ ಇನ್ನೊಬ್ಬನು ಪ್ರವೇಶಿಸಲು ಆತಂಕ ಉಳಿಯಲಿಲ್ಲ. ಒಬ್ಬನ ಹಬ್ಬವು ಇನ್ನೊಬ್ಬನಿಗೆ ಆದರಣೀಯ—ಆಚರಣೀಯವಾಯಿತು. ವೇದಾ ವ್ಯಕ್ತ ಮತ್ತು ಖುದಾರ ಮೂಲವು ಒಂದೇ ಎಂಬುದು ಇಬ್ಬರಿಗೂ ಹೊಳೆಯಿತು. ಇಬ್ಬರೂ ಬೆಳಗ್ಗೆ ಎದ್ದೊಡನೆ ತಂತಮ್ಮ ಬಿಡಾರಗಳಿಂದ ಹೊರಹೊರಟು ಹೋಗಿ ಹೊಲದ ಮೂಲಭಾಗದ ಮಧ್ಯಭಾಗದಲ್ಲಿ ಒಂದುಗೂಡಿ ಪರಸ್ಪರ ಆಲಿಂಗಿಸಿಕೊಳ್ಳುತ್ತಿದ್ದರು. ಅವರ ಹೃದಯ-ಮಿಲನವನ್ನು ನೋಡಿ ಸಂತಸದ ಉಸಿರ್ಗರೆಯುವಂತೆ ಮಿಶ್ರ ಕಾಳುಗಳಿಂದೇರ್ಪಟ್ಟ ಪೈರು-ಅಪೂರ್ವ ಸುವಾಸನೆಯನ್ನು ಬೀರುತ್ತಿತ್ತು.

ರಕ್ಷಕ ಬಂದ !

ಇಂದಿಗೆ—ಹಿಂಡ ಮತ್ತು ಮುಸ್ಲಿಮರ ಮಿಲನದ ಅನಂತರ ತಿರುಗಿ ಹಲವಾರು ವರುಷಗಳು ಸಂದಿವೆ; ಅನೇಕ ವರ್ಷಗಳ ನಂತರ ತಿರುಗಿ ವರ್ಷ ಋತು ಮೊದಲಾಗಿದೆ.........

ಆದರೆ ನಿಸರ್ಗದಲ್ಲೆತ್ತಲೂ ಮಳೆ ಬೀಳುವ ಲಕ್ಷಣವೇ ಕಾಣುತ್ತಿಲ್ಲ. ಬಾವಿಯ ನೀರಿನಿಂದ ಹದಗೊಂಡ ಭೂಮಿಯಲ್ಲಿ ಬಿತ್ತಲ್ಪಟ್ಟ ಬೀಜಗಳು ಮೊಳೆತು ಎಳೆಯ ಸಸಿಗಳಾಗಿವೆ. ಅವುಗಳ ಬುಡದಲ್ಲಿ ನೀರಿನ ಪಸೆಯೇ ಇಲ್ಲ. ಬಾವಿಗಳಲ್ಲೂ ನೀರು ಬತ್ತಿಹೋಗಿದೆ............

ಹಿಂದ—ಮುಸ್ಲಿಮರು ಹೊಲದ ನಟ್ಟನಡುವೆ ನಿಂತು ಒಮ್ಮೆ ಮುಗಿಲು ಗಳೆಡೆಗೂ ಮತ್ತೊಮ್ಮೆ ಭೂಮಿಯ ಕಡೆಗೂ ದೃಷ್ಟಿಹಾಯಿಸುತ್ತಿದ್ದಾರೆ....... ಗಗನದಲ್ಲೆತ್ತಲೂ ತುಣುಕು ಮೋಡ ಕೂಡ ಕಂಡು ಬರುತ್ತಿಲ್ಲ; ಸೂರ್ಯನು ತಾನೇ ತಾನಾಗಿ ಹೊಳೆಯುತ್ತಿದ್ದಾನೆ. ಅವನ ಉರಿಯ ಬೇಗೆಗೆ ಕಾದು ಸಸಿಗಳ ಮೊಗಗಳು ಕೆಂಪಡರಿವೆ.........ಅವರ ಕಣ್ಣುಗಳೂ ಮಳೆರಾಯನ ಪ್ರತೀಕ್ಷೆಮಾಡಿ ಮಾಡಿ ಬಸವಳಿದು ಹೋಗಿವೆ..........

ಇಬ್ಬರೂ ನಿರಾಶೆಯ ಮನಗಳಿಂದ ಹತಮತಿಗಳಾಗಿ ಪರಸ್ಪರ ಮೊಗ ಗಳನ್ನು ನೋಡಿಕೊಂಡರು. ಆಗಲೇ ಪಶ್ಚಿಮದ ಗೋಡೆಯಾಚೆ ಯಾರೋ ಅವರನ್ನು ಕೂಗುತ್ತಿದ್ದುದು ಕೇಳಿಸಿತು—

"ಸ್ಲೇವ್ಸ್ ! ಸ್ಲೇವ್ಸ್ !"

ಇಬ್ಬರಿಗೂ ಆ ಕರೆನುಡಿಯ ಅರ್ಥವಾಗಲಿಲ್ಲ. ಆದರೂ ಆ ಕಡೆಗೆ ತವಕದಿಂದೋಡಿದರು; ಗೋಡೆಯ ಮೇಲೇರಿ ನಿಂತು ಕೆಳಕ್ಕೆ ಹಣಿಕಿ ನೋಡಿದರು..........

ಬಿಳೀ ಮೈಬಣ್ಣದ ಮನುಷ್ಯನೊಬ್ಬನು ಗೋಡೆಯ ಬುಡದಲ್ಲಿ ನಿಂತು ಮೇಲಕ್ಕೆ ದಿಟ್ಟಿಸುತ್ತಿದ್ದ. ಅವನ ಕೈಯಲ್ಲಿ ಹೆಗ್ಗಾತ್ರದ ಯಂತ್ರವೊಂದು ಹಿಡಿಯಲ್ಪಟ್ಟಿತ್ತು.

ಅವನನ್ನು ನೋಡಿದಾಕ್ಷಣಕ್ಕೆ ಹಿಂಡ ಹೆದರಿಹೋದ. ಮುಸ್ಲಿಂ ಧೈರ್ಯದಿಂದ ಕೇಳಿದ—

"ಯಾರು ನೀನು ?"

"ನಿಮ್ಮ ರಕ್ಷಕ !"

"ಎಲ್ಲಿಂದ ಬಂದೆ ?"

"ಪಶ್ಚಿಮದಿಂದ"

"ಹೆಸರೇನು?"

"ಆಂಗ್ಲೇಯ!"

"ಏಕೆ ಬಂದೆ?"

"ಅದೇ—ನಿಮ್ಮ ರಕ್ಷಣೆಗೆ—ನಿಮ್ಮ ಹೊಲದ ರಕ್ಷಣೆಗೆ.........."

"ಆಂ?"—ಹಿಂದ ಅಚ್ಚರಿಯ ಸ್ವರ ಹೊರಡಿಸಿದ.

"..........ನಿಮ್ಮ ಹೊಲದ ರಕ್ಷಣೆಗೆ ಬಂದೆ!.........."ಆಂಗ್ಲೇಯ ಪುನಹ ಉದ್ಗರಿಸಿದ.

"ಹ್ಞಂ!?—ನಮ್ಮ ಹೊಲದ ರಕ್ಷಣೆಗೆ ಬಂದೆಯಾ? ನಮ್ಮ ಹೊಲ ವನ್ನು ರಕ್ಷಿಸಬಲ್ಲೆಯಾ, ನೀನು?"—ನಿರಾಶೆಯ ಮೊಗದಲ್ಲಿ ಆಶಾಕಿರಣ ವನ್ನು ಮಿನುಗಿಸಿಕೊಂಡು ಕೇಳಿದ, ಹಿಂದ.

"ಹೌದು; ಮಾಡಬಲ್ಲೆ. ಇಗೋ! ಇಲ್ಲಿ ನೋಡು!—ಈ ಯಂತ್ರ ವನ್ನು! ಇದರಿಂದ ಎಷ್ಟು ಆಳಕ್ಕೆ ಬೇಕಾದರೂ ಬಾವಿತೋಡಿ ಗಗನದೆತ್ತ ರಕ್ಕೆ ನೀರು ಹಾಯಿಸ ಬರುವುದು. ಇದರಿಂದ.........'

"ಬೀಜಗಳೆಲ್ಲ ಬಿತ್ತಿಮುಗಿದುವು. ಮೊಳೆತ ಸಸಿಗಳೆಲ್ಲಾ ಬಿಸಿಲಿಗ ಕರಟಿಹೋಗಿವೆ. ಇನ್ನು ನಿನ್ನ ನೀರಿನಿಂದಾಗತಕ್ಕದ್ದೇನು?"—ಅವನ ಮಾತನ್ನು ಕಡಿದು ಮುಸ್ಲಿಮನು ವ್ಯಂಗ್ಯದ ದನಿಯಲ್ಲಿ ಪ್ರಶ್ನಿಸಿದ.

"ಹ್ಞೋ! ಸಸಿಗಳೆಲ್ಲಾ ಬಾಡಿಹೋದುವೇ?—ಪರವಾಯಿಲ್ಲ! ಅವು ಗಳನ್ನು ಕಿತ್ತು ಅತ್ತ ಬಿಸಾಡುವುದು. ನನ್ನೊಡನೆ ಬೀಜವನ್ನು ಒಯ್ದು ತಂದಿ ದ್ದೇನೆ. ಅದನ್ನೇ ನಿಮ್ಮ ಹೊಲದಲ್ಲೂ ಬಿತ್ತುವುದು"—ಆಂಗ್ಲೇಯನಂದ.

"ಹ್ಞಾಂ? ನೀನು ಬೀಜಗಳನ್ನೂ ಕರುಣಿಸುವೆಯಾ?"—ಹಿಂದ ಹಿಗ್ಗಿನಿಂದ ಕೇಳಿದ.

"ಅಗತ್ಯವಾಗಿ!.........ಈಗ ನೀವು ನನ್ನನ್ನು ಮೇಲೆಳೆದು ಒಳಕ್ಕೆ ಸೇರಿಸಿಕೊಳ್ಳಿ.........ಆ ಮೇಲೆ ಮುಂದಿನ ಮಾತು."

"ನೀನು ಖಂಡಿತವಾಗಿಯೂ ನಮ್ಮ ಹೊಲವನ್ನು ರಕ್ಷಿಸುತ್ತೀಯಾ?"—ಹಿಂದ—ಮುಸ್ಲಿಮರು ಒಟ್ಟಿಗೆ ಕೇಳಿದರು.

"ನಿಸ್ಸಂದೇಹವಾಗಿಯೂ"

"ಹಾಗಾದರೆ ಒಳಕ್ಕೆ ಬಾ!"—ಎನ್ನುತ್ತಾ, ಹಿಂದು-ಮುಸ್ಲಿಮರು ಕೈಕೊಟ್ಟು ಆಂಗ್ಲೇಯನನ್ನು ಮೇಲೆಳೆದು ಕೊಂಡರು—ರಕ್ಷಕ ಬಂದ!

ರೂಢಿಗೊಂಡಿತು

ವರ್ಷ ಋತು ಕಳೆದುಹೋದರೆ ಬಿತ್ತಿದ ಬೀಜಗಳು ಮೊಳೆತರೂ ಸಸಿಗಳು ಹುಲುಸಾಗಿ ಬೆಳೆಯಲಾರವು; ಉತ್ತಮ ಫಲಸಿಗದು. ಆದ್ದರಿಂದಹಿಂದ—ಮುಸ್ಲಿಂ—ಆಂಗ್ಲೇಯರು ಎಡೆಬಿಡದೆ ಹೊಲದ ಕೆಲಸದಲ್ಲಿ ತೊಡಗಿದರು.........

ಹೊಲದಿಂದ ಬಾಡಿಹೋದ ಸಸಿಗಳು ಕೀಳಲ್ಪಟ್ಟುವು; ಭೂಮಿ ತಿರುಗಿ ಅಗೆಯಲ್ಪಟ್ಟಿತು; ಕೆಲವೇ ದಿನಗಳಲ್ಲಿ ಬಿತ್ತನೆಗೆ ಸಿದ್ಧವಾಯಿತು. ಒಂದು ದಿನ ಮುಂಜಾವಿಂದಲೇ ಬಿತ್ತನೆಯ ಕೆಲಸ ತೊಡಗಿ ಸಂಜೆಯ ಹೊತ್ತಿಗೆ ಮುಕ್ತಾಯವಾಯಿತು. ಮೂವರೂ ಕೂಡಿ ದಿನಾಂತ್ಯದ ವಿಶ್ರಾಂತಿಗೆಂದು ಬಿಡಾರಗಳತ್ತ ಹೆಜ್ಜೆಯಿಡತೊಡಗಿದಾಗಲೇ ಆಂಗ್ಲೇಯ ತಡೆದು ನಿಂತು ಹೇಳಿದ—"ನಾವೆಂಥಾ ಮುಟ್ಟಾಳರು! ಮೊದಲು ನೀರಿನ ಬಾವಿಯನ್ನು ತೋಡಿಟ್ಟುಕೊಳ್ಳಲೇ ಇಲ್ಲವಲ್ಲಾ! ನೊದಲೇ ಮಣ್ಣು ಕಾದು ಹೋಗಿದೆ ಅದಕ್ಕೆ ಈಗಿನಿಂದಲೇ ನೀರು ಹಾಯಿಸದಿದ್ದರೆ ಬೀಜಗಳ ಭ್ರೂಣಗಳು ಒಂದಿರುಳಿಗೇ ಕರಟಿಹೋಗುವುದು ದಿಟ!"

ಹಿಂದ-ಮುಸ್ಲಿಮರು ದಿನವಿಡೀ ಅವನ ಮೇಲ್ವಿಚಾರಣೆಯಲ್ಲಿ ದುಡಿದೂ ದುಡಿದೂ ಬಸವಳಿದು ಹೋಗಿದ್ದರು. ಎಂದೊಮ್ಮೆ ನೆಲಹಿಡಿದು ಕಣ್ಣು ಮುಚ್ಚುವೆವೋ ಎಂದು ಕಾತರಿಸಿದ್ದರು ಅವರು. ಆದ್ದರಿಂದ ಆಂಗ್ಲೇಯನ ನುಡಿಕೇಳಿ ಬೆಚ್ಚಿಬಿದ್ದು ನಿಂತರು; ಮತ್ತು ಒಬ್ಬರನ್ನೊಬ್ಬರು ಪ್ರಶ್ನಾರ್ಥಕ ದೃಷ್ಟಿಯಿಂದ ನೋಡಿಕೊಂಡರು.

ಅವರ ಮನೋಭಾವವನ್ನರಿತುಕೊಂಡ ಆಂಗ್ಲೇಯ ಹೇಳಿದ—

"ಹಾಗಾದರೆ ನೀವಿಬ್ಬರೂ ಹೋಗಿ ಮಲಗಿ ವಿಶ್ರಮಿಸಿರಿ. ನಾನೊಬ್ಬನೇ ರಾತ್ರಿಯೆಲ್ಲಾ ಯಂತ್ರ ತಿರುಗಿಸಿ ಬಾವಿತೋಡಿ ಹೊಲಕ್ಕೆ ನೀರು ಹಾಯಿಸುವೆ. ಆದಷ್ಟು ಬೇಗನೆ ಬೀಜಗಳಿಗೆ ಪಸೆಸಿಕ್ಕಿದರೆ ಒಳಿತು. ಇಲ್ಲದಿದ್ದರೆ ಪೈರಿನ ಬೆಳವಣಿಗೆ ಕುಂಠಿತವಾಗುವ ಸಂಭವವಿದೆ."

ಅವನ ಸಲಹೆಗೆ ವಿಧೇಯತೆಯಿಂದ ತಲೆ ಆಲ್ಲಾಡಿಸಿದರು—ಹಿಂದ-ಮುಸ್ಲಿಮರು. ವಿಶ್ರಾಂತಿಗೆ ಎಡೆ ಸಿಕ್ಕಿತಲ್ಲಾ ಎಂದು ನಿಟ್ಟುಸಿರುಬಿಟ್ಟ

ವರು. ಬಳಿಕ ಇಬ್ಬರೂ ತಮ್ಮ ಗುಡಿಸಲು ಮತ್ತು ಡೇರೆಗಳನ್ನು ಸೇರಿ ಸುಖದಿಂದ ನಿದ್ದೆಹೋದರು. ಅವರಿಬ್ಬರ ನಿವಾಸಗಳ ನಡುವೆ—ಹೊಲದ ಮೇಲ್ಭಾಗದಲ್ಲಿ ಆಂಗ್ಲೆಯನು ತನ್ನ ಭಾರೀಯಂತ್ರವನ್ನು ಗರಗರನೆ ತಿರುಗಿ ಸುತ್ತಾ ಬಾವಿನೋಡಲು ಮೊದಲಿಟ್ಟ.........

ಭಾಗವಾಯಿತು

ಬೆಳಗಾಯಿತು. ಗುಡಿಸಲ ಗೋಡೆಯ ಕಿರುಕಂಡಿಯಿಂದ ಬಾಲ ರವಿಯ ಕೆಂಗಿರಣಗಳು ಒಳನುಗ್ಗಿ ಬಂದು ಮಲಗಿದ್ದ ಹಿಂದನ ಮುಖದ ಮೇಲೆ ನರ್ತಿಸತೊಡಗಿದುವು..........

ಹಿಂದ ಪೂರ್ವದಿಸೆಗೆ ಮೊಗವಾಡಿ ಹೊರಳಿ ಕಣ್ಣುಜ್ಜುತ್ತಾ ಎದ್ದ, ಎಂದಿನಂತೆ ಮುಸ್ಲಿಮನನ್ನು ಆಲಿಂಗಿಸಲು ಗುಡಿಸಲ ಬಾಗಿಲನ್ನು ತೆರೆದು ಹೊರಕ್ಕೆ ಕಾಲಿಟ್ಟ........

ಹೊರಕ್ಕೆ ಕಾಲಿಟ್ಟ ಹಿಂದ—ಇಟ್ಟಿದ್ದ ಹೆಜ್ಜೆಯನ್ನು ಆಚೀಚೆ ತೆಗೆ ಯದೆ ನಿಂತಲ್ಲೇ ನಿಂತುಬಿಟ್ಟ, ಶಿಲಾಪ್ರತಿಮೆಯಂತೆ. ಹೊರಗಣ ನಯನ ಭೀಕರ ದೃಶ್ಯವನ್ನು ಎವೆಯಿಕ್ಕದೆ ಈಕ್ಷಿಸತೊಡಗಿದ........

ವಿಶಾಲವಾದ ಹೊಲವು ನೀರು ತುಂಬಿ ಸಾಗರದಂತೆ ತೋರುತ್ತಿತ್ತು.

ಹಿಂದ ಮೊಣಕಾಲುದ್ದದ ನೀರಿನಲ್ಲಿ ತಡವರಿಸುತ್ತಾ ಬಾವಿತೋಡಲಿದ್ದೆ ಡೆಗೆ ಸಾಗಿದ........ಆ ಸ್ಥಳದಲ್ಲಿ ಗಗನದೆತ್ತರಕ್ಕೆ ನೀರು ಚಿಮ್ಮುತ್ತಿರುವುದು ಕಂಡುಬಂತು, ಶಿವನ ಜಟಾಜೂಟದಿಂದ ಹೊರಹೊಮ್ಮುವ ಜಾಹ್ನವಿಯಂತೆ.

ಅದನ್ನು ನೋಡುತ್ತಲೇ ಅವನು ತಬ್ಬಿಬ್ಬಾದ. ಉಚ್ಚ ಸ್ವರದಿಂದ ಕೂಗಿದ—

ರಕ್ಷಕ! ರಕ್ಷಕ!

ಯಾವ ಕಡೆಯಿಂದಲೂ ರಕ್ಷಕನ ದನಿ ಕೇಳಿಬರಲಿಲ್ಲ.

ಹಿಂದ—ಸೊಂಟದೆತ್ತರದ ನೀರಿನಲ್ಲಿ ಕಾಲುಗಳನ್ನು ಎಳೆದೆಳೆದು ಹಾಕುತ್ತಾ ಮುಸ್ಲಿಮನ ಡೇರೆಯತ್ತ ಸಾಗಿದ.

ಹಾಗೆ ಸಾಗಿದಾತನಿಗೆ ಹೆಚ್ಚು ಮುಂದುವರಿಯಲಾಗಲಿಲ್ಲ. ಅವನ ಮತ್ತು ಮುಸ್ಲಿಮನ ಒಂದಾಗಿದ್ದ ಹೊಲದ ನಡುವೆ, ಜಲಾಶಯದಿಂದ ಹೊರ ಬೀಳುತ್ತಿದ್ದ ನೀರು ಭೋರ್ಗರೆಯುತ್ತ ಪ್ರವಾಹವಾಗಿ ಹರಿಯುತ್ತಿತ್ತು.

ಪ್ರವಾಹವು ಆಳೆತ್ತರಕ್ಕೆ ಅಲೆಗಳನ್ನು ಹಾರಿಸುತ್ತ, ಒಂದೇಸವನೆ ದಕ್ಷಿಣಕ್ಕೆ ಹರಿದು, ಅಲ್ಲಿಂದ ಪಶ್ಚಿಮಕ್ಕೆ ತಿರುಗಿಹೋಗಿ ಆ ದಿಸೆಯಲ್ಲಿನ ಗೋಡೆಯ ಮೇಲಿನಿಂದ ಕೆಳಕ್ಕೆ ಧುಮ್ಮಿಕ್ಕುತ್ತಿತ್ತು, ಮಹಾಜಲಪ್ರಪಾತವಾಗಿ.

ಹಿಂದ ಮತ್ತೆ ತಡೆದುನಿಂತ; ಉದ್ವೇಗದಿಂದ ಗಟ್ಟಿಯಾಗಿ ಕೂಗಿದ—

"ಮುಸ್ಲಿಂ! ಮುಸ್ಲಿಂ! ಹೋ ಭಾಯೀ ಮುಸ್ಲಿಂ!"

ಅದೇ ಸಮಯಕ್ಕೆ ಮುಸ್ಲಿಮನೂ ಡೇರೆಯಿಂದ ಹೊರಬಿದ್ದುಬಂದು ಪ್ರವಾಹದ ಆಚೆಯ ದಡದಲ್ಲಿ ನಿಂತ. ಅವನೂ ತಾರಸ್ವರದಿಂದ ಕರೆದ—

"ರಕ್ಷಕ! ಓ ರಕ್ಷಕ!"

ಅವನ ಕರೆಗೂ ಆಂಗ್ಲೇಯ ಪಡಿನುಡಿಯಲಿಲ್ಲ.

ಇಬ್ಬರೂ ಪ್ರವಾಹದ ಇದ್ದಡಗಳಲ್ಲಿ ನಿಂತು ಗೋಳಾಡತೊಡಗಿದರು—

"ಅಯ್ಯೋ! ನಮ್ಮನ್ನು ಕೆಡಿಸಿಹೋದ ಆ ರಕ್ಷಕ! ನಮ್ಮ ಹೊಲವನ್ನು ಇಬ್ಭಾಗಮಾಡಿದ ಆ ದುಷ್ಟ! ನಮ್ಮ ಬಾಳಿನಲ್ಲಿ ಕಹಿಬೆರಸಿದ ಆ ಪಾಷಂಡ! ನಮ್ಮ ಮೈತ್ರಿಯನ್ನು ಒಡೆದುಹಾಕಿದ ಆ ಕುತಂತ್ರಿ!...."

"ಅವರ ರೋಧನ-ಧ್ವನಿ ಏರುತ್ತಲೇ ಇತ್ತು......

ಆಗಲೇ ಒಮ್ಮಿಂದೊಮ್ಮೆಲೇ ಆಂಗ್ಲೇಯ ಬಂದು ಅಲ್ಲಿ ಕಾಣಿಸಿಕೊಂಡ. ಅವನು ಅಳುತ್ತಿದ್ದ ಮುಸ್ಲಿಮನ ಹತ್ತಿರ ಹೋಗಿ ಅವನ ಕಿವಿಯಲ್ಲೇನೋ ಉಸುರಿದ. ಅನಂತರ ಜೇಬಿನಿಂದೊಂದು ರಬ್ಬರಿನ ದೋಣಿಯನ್ನು ತೆಗೆದು, ಬಿಡಿಸಿ, ಅದನ್ನು ಪ್ರವಾಹದಲ್ಲಿ ತೇಲಬಿಟ್ಟ; ಅದರೊಳಗೆ ತಾನು ಕುಳಿತು ಕೊಂಡು ತೇಲುತೇಲುತಾ, ದಕ್ಷಿಣಕ್ಕೆ ಹೋಗಿ, ಅಲ್ಲಿಂದ ಪಶ್ಚಿಮಕ್ಕೆ ತಿರುಗಿ ಗೋಡೆಯ ಮೇಲಿನಿಂದ ಬೀಳುತ್ತಿದ್ದ ಜಲ ಧಾರೆಯೊಂದಿಗೆ ಕಣ್ಮರೆಯಾಗಿ ಹೋದ.

ಮುಸ್ಲಿಂ ಥಟ್ಟನೆ ಅಳುನಿಲ್ಲಿಸಿ ಡೇರೆಯಕಡೆಗೆ ಹೊರಳಿದ.

ಕೂಡಲೆ ಗಾಬರಿಗೊಂಡ ಹಿಂದ ಕೂಗಿ ಹೇಳಿದ, ಅವನ ಬೆನ್ನಿಗೆ— "ಆತ ನಮ್ಮ ಹೊಲವನ್ನು ಬೇರ್ಪಡಿಸಿ ಹೊರಟುಹೋದನಲ್ಲೊ ಮುಸ್ಲಿಂ? ಇವನ್ನು ಒಂದಾಗಿಸುವ ಬಗೆ ಯಾವುದೋ?......ಪೂಲು ಹಾಕೋಣವೇ? ಪೂಲು ಹಾಕಿ ನಮ್ಮ ಹೊಲಗಳನ್ನು ಜೋಡಿಸೋಣವೇ?....."

ಮುಸ್ಲಿಂ ತಿರುಗಿ ಕೂಡ ನೋಡಲಿಲ್ಲ. ನೆಟ್ಟಗೆ ತನ್ನ ಡೇರೆಗೆ ಹೋಗಿ ಅದರ ದ್ವಾರದಲ್ಲಿ ಸ್ವಸ್ಥವಾಗಿ ಕುಳಿತುಕೊಂಡ. ಅವನ ಕಿವಿಯಲ್ಲಿ ಆಂಗ್ಲೇಯನ ನುಡಿ ತಡೆತಡೆದು ಗುಂಜರಿಸುತ್ತಿತ್ತು—"ಹೀಗೆಯೇ ಇರಲಿ, ಹೇಗೆಯೋ ಇರಲಿ! ನಿನ್ನ ಹೊಲ ಅವನ ಹೊಲ ಬೇರೆಬೇರೆಯಾಗಿರಲಿ! ಎರಡೂ ಒಂದಾಗಿದ್ದು ಮಿಶ್ರಫಲವನ್ನು ಬಿಡುವುದು ಬೇಡ; ಅದರಲ್ಲಿ ಸ್ವಾರಸ್ಯವಿಲ್ಲ!"—ಎಂದು.

ಆಂಗ್ಲೇಯನ ಈ ಉಪದೇಶ ಮತ್ತು ಹಿಂದನ ವೈತ್ರಿಯ ಕೂಗು—ಇವುಗಳ ತಾಕಲಾಟದ ಇರುಕಿನಲ್ಲಿ ಸಿಕ್ಕಿಬಿದ್ದು, ಮುಸ್ಲಿಂ ಏನನ್ನೂ ನುಡಿಯಲಾರದೇ ಹೋದ—ಯೋಚನೆಯಲ್ಲೇ ಅಂತರ್ಮುಖಿಯಾದ.

ಹಿಂದ ಮಾತ್ರ ಒಂದೇ ಸವನೆ ಕೂಗಿ ಕೇಳುತ್ತಾ ಹೋದ—

"ಪೂಲು ಹಾಕೋಣವೇ?......ಪೂಲು ಹಾಕೋಣವೇ?"

ಅವನ ಈ ಪ್ರಶ್ನಾವಳಿಗುತ್ತರಿಸುವವರಾರು? ವಿಶಾಲವಾದ ಹೊಲದ ಮೇಲಿನ ನೀಲಾಕಾಶ, ಒಣಹವೆ, ಸುತ್ತಲಿನ ಬೆಟ್ಟ-ಗುಡ್ಡ, ಗಿರಿ-ಕಂದರ, ತರು-ಲತೆಗಳಿಗೆಲ್ಲಾ ಅವನ ಪ್ರಶ್ನೆಗಳು ಸಲಸಲಕ್ಕೂ ತಾಗಿತಾಗಿ ಹಿಂದಕ್ಕೆ ಬರತೊಡಗಿದುವು—

"ಪೂಲು ಹಾಕೋಣವೇ?......ಪೂಲು ಹಾಕೋಣವೇ?"

ಕಾಳಿಯ ಸೀರೆ

"ಏ ಕಾಳಿ!"

"ಉಂ– ಅಯ್ಯ ?"

"ಏನೆ? ಹೊತ್ತಾರೆ ಎದ್ದು ಮೊಗ ಸಿಂಡರಿಸಿಕ್ಕೊಂಡು ಕೂತಿದ್ದೀಯಾ ಹೀಗೆ?"

"ಮತ್ತೇನು ಮಾಡಲಿ, ಅಯ್ಯ. ನಾನು ಎಷ್ಟೊಂದು ಮೈಸವೆದು ದುಡಿದರೂ ಬಾಯಲ್ಲಿ ಒಳ್ಳೇ ಸರಸೋತಿ ಇಲ್ಲ. ಕಟ್ಟಿಗೆ ತಂದರೆ 'ಸೆರಗು ತಂದೆ', ಕಾಡು ಸವರಿದರೆ 'ಸಾಫಾಗಿಲ್ಲ', ತೋಟ ಅಗೆದರೆ 'ಕಾಲಂಗುಲವೂ ಆಳಕ್ಕೆ ಹೋಗಿಲ್ಲ' ಎಂದು ಎಲ್ಲ ಕೆಲಸಕ್ಕೂ ಒಂದೊಂದು ಕುಂದು ಹೇಳುತ್ತಿರುತ್ತಾರೆ ಅವ್ವ. ಕೆಲಸದ ಸಾಮಾನುಗಳನ್ನು ನೋಡಿದರೆ ಒಂದು ಮೊಟಕು ಕತ್ತಿ, ಒಂದು ಮೊಂಡು ಗುದ್ದಲಿ. ಇಂಥಾ ಹತ್ಯಾರುಗಳಿಂದ ಕೆಲಸ ಹೇಗೆ ಸಾಗೀತು? ಅಲ್ಲದೆ ಇಷ್ಟೆಲ್ಲಾ ಮನಸ್ಸಿಗೆ ಹಚ್ಚಿಕೊಂಡು ಕೆಲಸಮಾಡಿದರೂ ಒಂದು ಮೈಗೆ ಸರಿಯಾಗಲ್ಲ ಇನ್ನೊಂದಲ್ಲ......"

"ಹೋ ಹಾಗೊ? ಕಾಳಿ, ಅದೆಲ್ಲ ಹೋಗಲಿ, ಬಿಡು. ಅವ್ವ ಹೇಳೋ ಹಾಗೆ ನಡಕೊಂಡು ಬಿಡು. ನಾನಿವತ್ತು ಹಿಂದಕ್ಕೆ ಬರುವಾಗ ನಿನಗೆ ಒಳ್ಳೇ ನಾಜೋಕಾದ ಮ್ಹಾಲುಗಳನ್ನೇ ತರುತ್ತೇನೆ; ಆಯಿತೇ?"

"ಆ? ಇವತ್ತು ಮತ್ತೆ ಪಟ್ಟಣಕ್ಕೆ ಹೊರಟಿರಾ, ಅಯ್ಯ?......ಹಾಗಾದರೆ ಎಂತಹ ಮ್ಹಾಲು ತರಬೇಕೆಂದು ಗೊತ್ತಿದೆಯಲ್ಲ?"

"ಹುಂ ಗೊತ್ತಿದೆ. ನೀನೀಗ ಕೆಲಸಕ್ಕೆ ಹೋಗು," ಎಂದು ಹೇಳಿ ವೆಂಕಣ್ಣ ಬಸ್ಸಿಗೆ ಹೊರಟುಹೋದ.

"ಆಯಿತು, ಅಯ್ಯ," ಎಂದು ಕಾಳಿ ತುಂಬಾ ಲಗುಬಗೆಯಿಂದ ನುಡಿದು, ತಾನು ಕುಳಿತಿದ್ದ ಜಗುಲಿಯಿಂದೆದ್ದು ಕೊಟ್ಟಿಗೆಯೊಳಕ್ಕೆ ನಡೆದಳು; ಆ ಮೇಲೆ ತಲೆಗೆ ಕಟ್ಟುವ ಹರಕು ಚಿಂದಿ ಮತ್ತು ಸಿಂಬೆಯನ್ನೆತ್ತಿಕೊಂಡು ದಿನದ ತನ್ನ ಮೊದಲ ಕೆಲಸ—ಮನೆಗೆ ಬೇಕಾದ ನೀರು ಹೊರಲು ಅಡುಗೆ ಮನೆಯತ್ತ ಹೊರಳಿದಳು.

ವೆಂಕಣ್ಣ ಕಳೆದ ಒಂಭತ್ತು ವರ್ಷಗಳಿಂದ ಶನಿವಾರಸಂತೆಯ ಮರಿ
ಯಪ್ಪ ಸಾಹುಕಾರರಲ್ಲಿ ಲಾರೀಚಾಲಕವೃತ್ತಿಯನ್ನು ನಡೆಸುತ್ತಾ ಬಂದಿದ್ದ.
ಸಾಹುಕಾರರು ಅವನಿಗೆ ಆಗಾಗ್ಗೆ ರಜೆಕೊಡುತ್ತಿರಲಿಲ್ಲ; ವರ್ಷಕ್ಕೊಮ್ಮೆ
ಹುತ್ತರಿಹಬ್ಬ ಬರುವಂತೆ ಹುತ್ತರಿಗೊಮ್ಮೆ ಒಂದು ತಿಂಗಳಷ್ಟೇ ಕೊಡುತ್ತಿದ್ದರು.
ಇಡಿಯ ವರ್ಷದಲ್ಲಿ ಆ ಒಂದು ತಿಂಗಳ ರಜೆಯೆಂದರೆ ವೆಂಕಣ್ಣನಿಗೆ ಪುಟ್ಟ
ದೊಂದು ರಸಗಟ್ಟಿಯನ್ನು ಸವಿದಂತೆ. ಆದರೆ ಈ ವರ್ಷ ಆ ರಸಗಟ್ಟಿಯಲ್ಲೂ
ಸಾಹುಕಾರರು ಕಹಿಬೆರಸಿದರು: ಅವನು ಹುತ್ತರೀ ರಜೆಯನ್ನು ಅನುಭವಿಸ
ಲಿಕ್ಕೆ ತೊಡಗಿದ್ದಾಗಲೇ ಅವರಿಂದ ಒಸಗೆ ಬಂತು-- "ಅರ್ಜೆಂಟಾಗಿ ಬಂದು
ನನ್ನನ್ನೊಮ್ಮೆ ಕಂಡುಹೋಗು"—ಎಂದು. ಈ ಒಸಗೆ, ನಾಡಿದ್ದು ಹಬ್ಬ
ಎಂದರೆ ಇವತ್ತು ಸಂಜೆ ಅವನ ಕೈಸೇರಿತ್ತು. ಆ ಸಂಜೆಯು ರಾತ್ರಿ ಹ್ಯಾಗೂ
ಕಳೆದು ಮರುದಿನ ಬಂತು. ಅಂದು ಹೋಗದಿದ್ದರೆ ಮತ್ತೆ, ಮುಂದೆ, ಹಬ್ಬದ
ಗಲಾಟೆಯಲ್ಲಿ ಒಂದು ವಾರ ಅತ್ತಿತ್ತ ಅಲುಗಾಡುವಂತಿಲ್ಲ. ಹಾಗೆಂದು ಅಂದೇ
ಹೋಗಲು ಅವನಿಗೆ ಮನಸ್ಸಿಲ್ಲ; ಹೋಗದಿದ್ದರೆ ಖಾಸಗಿ ನೌಕರಿ ಉಳಿಯುವಂ
ತಿಲ್ಲ ಎಂಬ ಭಯ. ಅಂತೂ ಮುಂಗಾಣದೆ ಅನ್ಯ ಮನಸ್ಕನಾಗಿಯೇ ಬೆಳಿಗ್ಗೆ
ಆರೂವರೆ ಗಂಟೆಯ ಬಸ್ಸಿನಲ್ಲಿ ಹೋಗಲು ನಿರ್ಧರಿಸಿ ಅವನು ಪಕ್ಕದ ಬಸ್
ಸ್ಟ್ಯಾಂಡಿಗೆ ಹೋದ. ಅಲ್ಲಿಂದ ಮತ್ತೆ ಬಸ್ ಹತ್ತಿ ಅವನು ಶನಿವಾರಸಂತೆಗೆ
ಹೋಗ ಬೇಕು.

ಕಾಳಿ, ವೆಂಕಣ್ಣನ ಕೆಲಸದ ಹುಡುಗಿ. ಅವಳ ಪೂರ್ಣ ಹೆಸರು
ಕಾಳಮ್ಮ ಎಂದು. ಸುಮಾರು ಹದಿನೇಳು–ಹದಿನೆಂಟು ವರ್ಷಕ್ಕೆ ಮೀರಿರದ,
ಎತ್ತರವಾದ, ಗಟ್ಟಿಮುಟ್ಟಾದ, ಆ ಸುಂದರ ದೇಹ ಆಕೆಯದು. ವೆಂಕಣ್ಣ
ಕೆಲಸಕ್ಕೆ ಸೇರಿದ ನಂತರ ಎರಡು ಮೂರು ವರ್ಷಗಳು ಮನೆಯ ಕಾರ್ಯ
ಕಲಾಪಗಳನ್ನು ಒಬ್ಬಂಟಿಗಳಾಗಿ ಸುಧಾರಿಸಿಕೊಂಡು ಹೋಗಲು ಅವನ
ಹೆಂಡತಿ ರಂಗಮ್ಮ ತುಂಬಾ ಕಷ್ಟಪಡಬೇಕಾಯಿತು. ಆದರೆ ನಾಲ್ಕನೇ
ವರ್ಷದ ಮಧ್ಯಭಾಗದಲ್ಲಿ ಏನೋ ಪುಣ್ಯದಿಂದ ಕಾಳಿ— ಅವನಿಗೆ ಆಳುಮಗ
ಳಾಗಿ ದೊರೆತಿದ್ದಳು. ಅಲ್ಲಿಂದ ಮನೆಯ ಕೆಲಸಗಳಲ್ಲಿ ರಂಗಮ್ಮನಿಗೆ ಕಾಳಿ
ನೆರವಾಗಹತ್ತಿದಳು; ನೆರವಾಗ ಹತ್ತಿದಳೆನ್ನುವುದಕ್ಕಿಂತ ಎಲ್ಲಾ ಕೆಲಸವನ್ನು
ಅವಳೇ ಮಾಡುತ್ತಿದ್ದಳೆನ್ನುವುದು ಉಚಿತ. ಅವಳು ಜಾತಿಯಲ್ಲಿ ಹೊಲತಿ.
ಆದ್ದರಿಂದ ಮನೆಯೊಳಕ್ಕೆ ಅವಳಿಗೆ ಪ್ರವೇಶವಿರಲಿಲ್ಲ. ಹಾಗೆ ಶರೀರದಿಂದ
ಅವಳಿಗೆ ಪ್ರವೇಶಾಧಿಕಾರವಿಲ್ಲದಿದ್ದರೂ ಅವಳು ಕುಟ್ಟುತ್ತಿದ್ದ ಅಕ್ಕಿ, ಬೀಸು

ತ್ತಿದ್ದ ಹಿಟ್ಟು, ಬೆಳೆಸುತ್ತಿದ್ದ ತರಕಾರಿ, ಒಗೆಯುತ್ತಿದ್ದ ಬಟ್ಟೆ, ತಿಕ್ಕುತ್ತಿದ್ದ ಪಾತ್ರೆ, ತರುತ್ತಿದ್ದ ಕಟ್ಟಿಗೆ, ಒಯ್ಯುತ್ತಿದ್ದ ನೀರು, ಮೈತೊಳೆಯಲ್ಪಡುತ್ತಿದ್ದ ಮಕ್ಕಳು—ಇವುಗಳಿಗೆಲ್ಲಾ ಪ್ರವೇಶವಿತ್ತು. ಅವಳು ಬಂದ ಮೊದಲಿನ ವರ್ಷ ಮೈಮೇಲಿದ್ದ ಅರಿವೆಯಲ್ಲೇ ಕಳೆಯಿತು. ಮರುವರ್ಷದಿಂದ ಒಂದೊಂದು ಕಾಂಗುಸೀರೆ, ರವಿಕೆ, ಲಂಗ ಮತ್ತು ತಲೆಗೆ ಚೆಕ್‌ವಸ್ತ್ರ; ಇವುಗಳ ಜೊತೆಗೆ ಹಿತ್ತಾಳೀಸರಿಗೆಯಲ್ಲಿ ಪೋಣಿಸಲ್ಪಟ್ಟಿರುವ ಅರಗಿನ ಮಣಿಮಾಲೆಯೊಂದು ಮತ್ತು ಕೈಗೆ ಎರಡೆರಡು ಜೊತೆ ಗಾಜಿನ ಬಳೆಗಳು ವರ್ಷಕ್ಕೊಮ್ಮೆ ಅವಳಿಗೆ ಸಿಗತೊಡಗಿತ್ತು. ಈ ಒಂದು ಜೊತೆ ಉಡುಗೆಯನ್ನು ವರ್ಷಾಂತ್ಯದ ವರೆಗೆ ಉಳಿಸಿಕೊಳ್ಳಬೇಕಿತ್ತು ಅವಳು. ಎಲ್ಲಾದರು ಸೀರೆ ನಾಮಾವಶೇಷವಾಗಿಬಿಟ್ಟರೆ ಮಾತ್ರ ಯಜಮಾನಿಯದೊಂದು ಹರಕು ಸೀರೆ ಉದಾರವಾಗಿ ಸಿಗುತ್ತಿತ್ತು; ಅಷ್ಟೆ.

ಕಾಳಿಗೆ ತನ್ನ ಈ ಉಡುಗೆತೊಡುಗೆಯ ಮ್ಹಾಲುಗಳು ಬಹು ಶಿಸ್ತಿನಿಂದ ದೊರೆಯುತ್ತಿದ್ದುವು! ಅದು ಹೇಗೆಂದರೆ, ಪ್ರತಿವರ್ಷ ತಾನು ಹುತ್ತರಿ ರಜೆಯಲ್ಲಿ ಬರುವಾಗಲೇ ವೆಂಕಣ್ಣ ಅವನ್ನು ತರುತ್ತಿದ್ದ. ಹೊಸದಾಗಿರುವ ಅವನ್ನು ಹುತ್ತರಿಯ ಹಬ್ಬದುದ್ದಕ್ಕೂ ಉಟ್ಟುಕೊಂಡು ನಲಿದಾಡುವುದರಿಂದಲೇ ಕಾಳಿಗೆ ಇಡಿಯ ವರ್ಷದ ತನ್ನ ದುಡಿಮೆಯ ಆಯಾಸವೆಲ್ಲ ಮರವೆಯಾಗುತ್ತಿತ್ತು. ಆದರೆ ಈ ಸಲ ಅದೇಕೋ ವೆಂಕಣ್ಣ ಬರಿಗೈಯ್ಯಲ್ಲೇ ಮನೆಗೆ ಬಂದಿದ್ದ. ಮನೆಯಲ್ಲಿ ಕಾಳಿಯನ್ನು ಕಾಣುತ್ತಲೆ, "ಓ! ಕಾಳಿ; ಆ–ಈ ಗಡಿಬಿಡಿಯಲ್ಲಿ ನಿನಗೆ ಬೇಕಾದ ಮ್ಹಾಲುಗಳನ್ನು ಕೊಳ್ಳಲು ಮರೆತೇ ಹೋಯಿತು. ಆದರೂ ಪರವಾಯಿಲ್ಲ; ಹಬ್ಬದ ಮುಂಚೆ ಹ್ಯಾಗಾದರೂ ಮಾಡಿ ತಂದೇ ತರುತ್ತೇನೆ," ಎಂದು ಪಶ್ಚಾತ್ತಾಪದ ದನಿಯಲ್ಲಿ ಭರವಸೆಕೊಟ್ಟ. ಕಾಳಿ ತನ್ನ ಅಯ್ಯನ ಭರವಸೆಯ ಮಾತಿನಿಂದ ಸಮಾಧಾನ ವಹಿಸುತ್ತಾ ಹಾಗೂ ಹೀಗೂ ಒಂದು ವಾರ ನೂಕಿದಳು. ಹಬ್ಬ ಹತ್ತಿರ ಬಂತು, ಹತ್ತಿರ ಬಂತು ಎಂದೆನ್ನಿಸಿಕೊಳ್ಳುತ್ತ 'ನಾಳೆ' ಎನ್ನುವಷ್ಟು ಹತ್ತಿರಕ್ಕೇ ಬಂದುಬಿಟ್ಟಿತು. ಆದರೂ ಅಯ್ಯ ತನಗೆ ಹೊಸ ಉಡುಗೆ ತರಲಿಲ್ಲವೆಂದಮೇಲೆ ಅವಳಲ್ಲಿ ಒಮ್ಮೆಲೆ ನಿರಾಶೆ ಮೂಡಿತು; ಬೆಳಿಗ್ಗೆ ಎದ್ದವಳು ಎಂದಿನಂತೆ ಕೆಲಸಕ್ಕೆ ತೊಡಗದೆ ತನ್ನ ಕೊಟ್ಟಿಗೆಯ ಜಗಲೀ ಮೇಲೆ ಕುಳಿತುಕೊಂಡು ಬಿಟ್ಟಳು.

ಈಗ ವೆಂಕಣ್ಣ ಒಮ್ಮಿಂದೊಮ್ಮೆಲೆ ಶನಿವಾರ ಸಂತೆಗೆ ಹೊರಟದ್ದು ಮತ್ತು ಅವಳ ದೂರು ಕೇಳಿದ ನಂತರ "......ಇವತ್ತು ಹಿಂದಕ್ಕೆ ಬರುವಾಗ

ನಿನಗೆ ಒಳ್ಳೇ ನಾಜೋಕಾದ ವಸ್ತ್ರಾಲಂಗಳನ್ನು ತರುತ್ತೇನೆ" ಎಂದುದು ಆವಳಿಗೆ ಅತಿಯಾದ ಆನಂದವನ್ನುಂಟುಮಾಡಿತು. ಅಂತೇ ಗೆಲವಾದ ಬಗೆಯಿಂದ ಅಡುಗೆ ಮನೆಯತ್ತ ಹೊರಳಿದವಳು ಅದರ ದ್ವಾರವನ್ನು ಸಮೀಪಿಸಿ "ಅವ್ವಾ, ಕೊಡ ಇತ್ತ ಕೊಡಿ" ಎಂದು ಕೇಳಿದಳು.

ರಂಗಮ್ಮನ ಬಗೆ ವೆಂಕಣ್ಣನಂತಲ್ಲ; ಅವಳದು ತುಂಬಾ ಸಿಡುಕಿನ ಪ್ರಕೃತಿ. ಕಾಳಿಯೆದುರಿಗೆ ಯಾವಾಗಲೂ ಕಠೋರತೆಯಿಂದಲೇ ವರ್ತಿಸುತ್ತಿದ್ದಳು. ಕೊಟ್ಟಿಗೆಯ ಜಗುಲಿಯ ಮೇಲೆ ಕುಳಿತು ತನ್ನ ವಿಚಾರವಾಗಿ ಕಾಳಿ ತನ್ನ ಗಂಡನಿಗೆ ದೂರು ಕೊಟ್ಟದನ್ನು ಅವಳು ಒಳಗಿರುತ್ತಾ ಕೇಳಿದ್ದಳು. ಮೊದಲೇ ಅವಳ ಮನಸ್ಸು ಬಲು ಹುಳುಕಿನದು. ಈಗಲಂತೂ ಅದು ಹಳಿ ಮೊಸರ ಹಂಡೆಯಂತೆ ಕುದಿಯುತ್ತಿತ್ತು. ಕಾಳಿ ಬಂದು ಕೊಡ ಕೇಳಿದಾಗ ಪುಟ್ಟ ಗುಡಾಣಗಳಂತಿದ್ದ ಎರಡು ಕೊಡಗಳನ್ನೆತ್ತಿಕೊಂಡು ಹೊರಬಂದಳು; ಮತ್ತು ಅರಳು ಎಸೆದರೆ ಸಿಡಿದುಹೋಗಬಹುದಂತಿದ್ದ ಮುಖಮುದ್ರೆಯಿಂದ ದುರದುರನೆ ನೋಡುತ್ತಾ, "ಏನೆ, ಹೊತ್ತು ನೆತ್ತಿಗೇರಿದರೂ ಕೆಲಸದ ಯೋಚನೆಯಿಲ್ಲದೆ ಮಹಾರಾಣಿಯಂತೆ ಕುಳಿತು ಗಂಡಸರಿಗೆ ಅಲ್ಲಸಲ್ಲದ ದೂರು ಕೊಡುತ್ತೀಯೆ? ನಿನಗೆ ತಿಂದಸೊಕ್ಕು ತಲೆಗೇರಿತೇನು? ತಡೆ! ನಿನಗೆ ಮಾಡ್ತೇನೆ!" ಎಂದು, ಎರಡೂ ಕೊಡಗಳಿಂದ ಕಾಳಿಯ ತಲೆಗೆ ಒಂದೊಂದು ಪೆಟ್ಟುಕೊಟ್ಟು, ಅವುಗಳನ್ನು ಢಣಢಣಾರೆಂದು ಜಗುಲಿಯ ಮೇಲೆ ಉರುಳಿಸಿ ಮರಿಸಿಡಿಲು ಆಕಾಶಗರ್ಭವನ್ನು ಹೋಗುವಂತೆ ಒಳನಡೆದಳು.

ಕಾಳಿಗೆ ಅಂಥಾ ಪೆಟ್ಟುಗಳನ್ನು ಅನುಭವಿಸಿ ಸಾಮಾನ್ಯವಾಗಿಹೋಗಿತ್ತು. ಈಗಲಂತು ರಾತ್ರಿಗೆ ಹೊಸ ಉಡುಗೆ ಬರುವ ಸಂತಸದಲ್ಲಿರುತ್ತಾ, ಯಜಮಾನಿಯ ಆ ಆರ್ಭಟೆ ಬೇಸಿಗೆಕಾಲದಲ್ಲಿ ಹನಿಯುವ ತುಂತುರು ಮಳೆಯಷ್ಟೇ ಅವಳಲ್ಲಿ ಪರಿಣಾಮವನ್ನುಂಟುಮಾಡಿತು; ಹಗುರಾದ ಮನಸ್ಸಿನಿಂದಲೇ ಆಕೆ ...ತಗಳನ್ನೆತ್ತಿಕೊಂಡು ಕೊಳದೆಡೆಗೆ ಹೊರಟಳು.

* * * *

ಬಹುಸಮಯದಿಂದ ಆಶಿಸಿದ್ದ ವಸ್ತು ಹತ್ತಿರ ಹತ್ತಿರವಾಗಿದೆ, ಇನ್ನೇನು ಕೈಯೊಳಕ್ಕೆ ಬಂತು—ಎನ್ನುವ ಸ್ಥಿತಿಯಲ್ಲಿರುವಾಗ ಎಂತಹವರೂ ಕೂಡ ವರ್ಣಿಸಲಾಗದ ಸಂತಸದ ಆದಾವುದೋ ಅವಸ್ಥೆಯಲ್ಲಿ ವಿಹರಿಸುತ್ತಾ ತತ್ಕಾಲಕ್ಕೆ ತಮ್ಮ ಅಸ್ತಿತ್ವವನ್ನೇ ಮರೆತುಬಿಡುತ್ತಾರೆ. ಹೆಂಗಸು-ಅದರಲ್ಲೂ

ಹೊಟ್ಟೆ ಬಟ್ಟೆಗಾಗಿ ಸದಾ ದುಡಿಯುತ್ತಲೇ ಇರುವ ಅಶಿಕ್ಷಿತಳಾದ ಮುಗ್ಧೆ, ಜೀವನದ ಈ ತತ್ವಕ್ಕೆ ಸಾಮಾನ್ಯಳಾಗಿರುತ್ತಾಳೆ, ಎಂದ ಬಳಿಕ ಕಾಳಿಯೂ ಇದಕ್ಕೆ ಹೊರತಲ್ಲ. ಹುತ್ತರಿಹಬ್ಬದ ಮ್ಹಾಲುಗಳ ಸವಿ ನೆನಸಿನ ಪ್ರವಾಹ ದಲ್ಲಿ ಆಕೆ ತನ್ನ ಮನಸ್ಸು ಮತ್ತು ದೇಹಗಳನ್ನು ಕಾಗದ ಕುಸುಮದಂತೆ ತೇಲಬಿಟ್ಟು ದಿನವನ್ನು ಪ್ರಾರಂಭಿಸಿದ್ದಳು.

ಮನೆಯಿಂದ ಜಲಾಶಯಕ್ಕಿದ್ದ ದೂರ ಸಾಧಾರಣ ಒಂದು ಫರ್ಲಾಂಗಕ್ಕೆ ಮೀರಿದ್ದು. ದಾರಿ ಸಮತಲವಾಗಿದ್ದರೆ ಈ ದೂರವೇನು ಹೆಚ್ಚಲ್ಲ. ಆದರೆ ಕಾಳಿಯ ಜಲಮಾರ್ಗವೋ ನೆನೆಯುವಾಗಲೇ ಅದರಲ್ಲಿ ನಡೆಯಬೇಕಾದವರ ಹೃದಯದಲ್ಲಿ ಸಹಸ್ರ ಗುಂಡುಸೂಜಿಗಳು ಒಮ್ಮೆಲೆ ಥಾಳಿಯಿಟ್ಟಂತಾಗುತ್ತಿತ್ತು. ಕೊರಕಲಾಗಿದ್ದು ಮನೆಯಿಂದ ಕೊಳದ ತನಕ ಇಳಿಜಾರಾಗಿದ್ದ ಆ ಓಣಿ ಯಂಥಾ ಹಾದಿ, ಮಣ್ಣು ಬಿಟ್ಟು ಮೇಲೆದ್ದು ನಿಂತ ಮುರಕಲ್ಲುಗಳಿಂದ ಆಚ್ಛಾ ದಿತವಾಗಿತ್ತು. ಅದರ ಮೇಲೆ ನಡೆಯುತ್ತಾ ಆಕೆ ಹಲವು ಬಾರಿ ಉರುಳಿ ಬಿದ್ದಿದ್ದಳು. ನಿತ್ಯವೂ ಅದರ ಕುರೂಪಕ್ಕಾಗಿ ಗೊಣಗುಟ್ಟುವುದು ಆಕೆಯ ದೊಂದು ರೂಢಿಯೇ ಆಗಿತ್ತು. ಈ ದಿನವಾದರೋ ಅದರ ಅರಿವಿಲ್ಲದೆಯೇ ನಡೆದುಹೋಗಿ ಕೊಳದಿಂದ ಎರಡು ಮಾರು ಮೇಲ್ಭಾಗದಲ್ಲಿ, ಹಾದಿಯ ಬದಿ ಯಲ್ಲಿ ಆಳೆತ್ತರಕ್ಕೆ ಬೆಳೆದು, ಕೆಂಪು ಚಿಗುರೆಲೆಗಳಿಂದ ಕಳಕಳಿಸುತ್ತಿದ್ದ ಧೂಪದ ಮರವನ್ನು ಸಮೀಪಿಸಿ ಆಕೆ ನಿಂತಳು.

ಅವಳಿಗೆ ತನ್ನ ಹಬ್ಬದ ಮ್ಹಾಲುಗಳಲ್ಲಿ ಸೀರೆಯದೇ ಯೋಚನೆ ಬಲ ವಾಗಿತ್ತು. ಅವಳ ಸೀರೆ ಬೇಕಾದರೆ ಯಾವುದೇ ದೇಶದಲ್ಲಿ ತಯಾರಾಗಿರಲಿ, ಯಾವ ಕಂಪೆನಿಯೇ ಅದನ್ನು ತಯಾರಿಸಿರಲಿ, ಅದರ ಕ್ರಯವೆಷ್ಟೇ ಆಗಿರಲಿ, ಎಳೆ ಹೇಗೇ ಇರಲಿ, ಹೆಚ್ಚು ಕಾಲ ಬಾಳಿಕೆ ಬರಲಿ-ಹೋಗಲಿ, ಬಣ್ಣ ಶಾಶ್ವತ ವಾಗಿ ನಿಲ್ಲಲಿ-ಬಿಡಲಿ ಕೆಂಪು ಬಣ್ಣದ್ದೇ ಆಗಿರಬೇಕು; ರವಿಕೆಯ ಮೈತುಂಬಾ ದೊಡ್ಡ ದೊಡ್ಡ ಹೂಗಳೇ ಇರಬೇಕು. ಅಂದರೇನೇ ಅವಳಿಗೆ ಮೆಚ್ಚು-ಸಂತೋಷ-ತೃಪ್ತಿ! ವರ್ಷಾಂತ್ಯದಲ್ಲಿ ತಾನು ರೂಪ ಬಣ್ಣ ರಹಿತ ಚಿಂದಿ ಸೀರೆಯುಟ್ಟಿರುತ್ತಾ, ಕೆಂಪಗೆ ಚಿಗುರಿರುವ ಆ ಧೂಪದ ಗಿಡವನ್ನು ನೋಡಿ ಅವಳು ಈರ್ಷ್ಯೆಪಡುತ್ತಿದ್ದಳು. ಆಗ ಅದು ಅವಳ ಪಾಲಿಗೆ ಪ್ರಕೃತಿಯ ದೊಂದು ಮೂಕವಸ್ತುವಾಗಿ ಕಾಣುತ್ತಿರಲಿಲ್ಲ; ಕೆಂಪು ಸೀರೆಯುಟ್ಟು ತನ್ನನ್ನು ಅಣಕಿಸುತ್ತ ನಿಂತಿರುವ ತನ್ನೋರಿಗೆಯ ಹುಡುಗಿಯಂತೇ ತೋರುತ್ತಿತ್ತು. ಪ್ರತಿಸಲವೂ ತನಗೆ ಹೊಸ ಕೆಂಪಿನ ಸೀರೆ ಬಂದಾಗ ಅದನ್ನುಟ್ಟುಕೊಂಡು

ಆದರೊಂದಿಗೆ ಮಾತ್ಸರ್ಯಪೂರ್ಣ ಸಂಭಾಷಣೆ ನಡೆಸುತ್ತಿದ್ದಳು. ಆಗಲೆ ಅವಳ ಅಯ್ಯ, ನಾಳೆಜೋಕಾದ ಮ್ವಾಲಗಳನ್ನೇ ತರುತ್ತೇನೆ ಎಂದಾಗ ಆಕೆ, "......ಹಾಗಾದರೆ ಎಂಥಾ ಮಾಲು ತರಬೇಕೆಂದು ಗೊತ್ತಿದೆಯಲ್ಲ?" ಎಂದು ಕೇಳಿದುದರಲ್ಲೇ ಸೂಚಿತವಾಗಿತ್ತು ಅವಳ ಸೀರೆ, ರವಿಕೆಗಳೆಲ್ಲ ಕೆಂಪು ಬಣ್ಣ ದ್ದಾಗಿರಬೇಕೆಂದು. ಅಯ್ಯ ಹಾಗೇ ತರುತ್ತಾನೆಂಬ ನಂಬುಗೆಯೂ ಅವಳಿ ಗಿತ್ತು. ಏಕೆಂದರೆ, ಹೋದ ವರ್ಷ ಅವನು ಮರೆತು ನೀಲಿ ಸೀರೆ ತಂದಾಗ ಅವಳದನ್ನು ಹಿಂದಕ್ಕೆ ಹಾಕಿಸಿ ಕೆಂಪು ಸೀರೆಯನ್ನೇ ಪಡೆದಿದ್ದಳು; ಮತ್ತು ಮುಂದಾದರೂ ಕೆಂಪೇ ತರಬೇಕೆಂದು ನಿರ್ಧರಿಸಿಯೂ ಆಗಿತ್ತು. ಆ ನಂಬಿ ಗೆಯ ಆಧಾರದಿಂದಲೇ ಅವಳೀಗ ಆ ಗಿಡದ ಮೇಲ್ಭಾಗವನ್ನು ನೋಡುತ್ತಾ, ಅಣಕುದನಿಯಲ್ಲಿ, "ಏ ಧೂಪಕ್ಕ! ನಿನಗೇ ಕೆಂಪು ಸೀರೆ ಅಂತ ಭಾವಿಸಿ ದ್ದೀಯಾ? ನೋಡು! ಈ ದಿನ ನನಗೂ ಬರುತ್ತದೆ ಒಂದು ಕೆಂಪು ಸೀರೆ! ಅದನ್ನು ನಾಳೆ ಉಟ್ಟುಕೊಂಡು ಬಂದು ನಿನ್ನ ಮೆರುಗಿನ ಸೀರೆ (ಕೆಂಪು ಎಲೆ ಗಳು) ಹರಿದು ಹೋಗುವಂತೆ (ಉದುರಿ ಹೋಗುವಂತೆ) ನಿನ್ನನ್ನು ಹೀಗೆ ಅಪ್ಪಳಿಸದಿದ್ದರೆ ನಾನಾರು?" ಎನ್ನುತ್ತಾ ಉರುಳುವಂತೆ ಮೇಲೆದ್ದು ನಿಂತಿದ್ದ ಒಂದು ಉರುಟು ಕಲ್ಲಿನ ಮೇಲೆ ಬಲವಾಗಿ ಒದ್ದಳು. ಹಾಗೆ ಒದ್ದ ರಭಸಕ್ಕೆ ಒತ್ತಲಿಂದ ಆ ಕಲ್ಲು ಉರುಳಿ, ಒತ್ತಕೊಟ್ಟ ಕಾಲು ಜಾರಿತಲ್ಲದೆ ಇನ್ನೊಂದು ಕಾಲಿನ ತೋಲವೂ ತಪ್ಪಿದ್ದರಿಂದ ಆಕೆ ಬವಳಿಬಿದ್ದು ಆ ದಾರಿಯ ಉದ್ದಕ್ಕೂ ಉರುಳುತ್ತ ಹೋಗಿ ಕೊಳದ ತಡಿಯಲ್ಲಿ ನಿಂತಳು. ಪುಣ್ಯವಶಾತ್ ಕೊಳಕ್ಕೆ ಬೀಳಲಿಲ್ಲ. ಅಲ್ಲೇ ಕೈಗೆ ಸಿಕ್ಕಿದ ಮರದ ಬೇರೊಂದನ್ನು ಹಿಡಿದು ಆಕೆ ಮೇಲಕ್ಕೆದ್ದು ನಿಂತಳು. ಆಕೆಯ ಮುಖ, ಕೈಕಾಲುಗಳ ಚರ್ಮ ಅಲ್ಲಲ್ಲಿ ದೊರಗು ಕಲ್ಲುಗಳಿಂದ ಗೀರಲ್ಪಟ್ಟು ಆ ಗೀರುಗಳಿಂದ ರಕ್ತದ ತುಂತುರುಗಳು ಹೊರಬರುತ್ತಿದ್ದುವು. ಅದನ್ನೊರಸುತ್ತ "ಥೂ! ಹಾಳು ಮುಂಡೆ! ನಿನಗೆಷ್ಟು ಹೊಟ್ಟೆಗಿಚ್ಚು? ನಿನ್ನ ಅಜ್ಜಿಗಂಡ ಜಜ್ಜಿಹೋಗ!" ಎಂದು ಧೂಪದ ಗಿಡಕ್ಕೆ ಶಾಪ ಹಾಕಿ, ಮತ್ತೆ ದಾರಿಯನ್ನೇರಿ ಹೋಗಿ ಅಲ್ಲಲ್ಲಿ ಚದರಿ ಬಿದ್ದಿದ್ದ ಕೊಡ ಗಳನ್ನೆತ್ತಿಕೊಂಡು ಬಂದು ನೀರು ತುಂಬಿಸಿದಳು.

ನೀರಿನ ಕೊಡಗಳನ್ನು ತಲೆಯಲ್ಲೊಂದು ಸೊಂಟದಲ್ಲೊಂದು ಇಟ್ಟು ಕೊಂಡು ದಾರಿಯೇರ ತೊಡಗಿದಾಗ ಸೀರೆಯ ಕುರಿತಾದ ಇನ್ನೊಂದು ಸಮಸ್ಯೆ ಫಕ್ಕನೆ ಆಕೆಯೆದುರಿಗೆ ಬಂತು. ಇವತ್ತೇನೋ ಸೀರೆಯ ನಿರಿಗೆಗಳು ಮೊಣಕಾಲಿನ ಮೇಲ್ಗಡೆಗೇ ಇವೆ. ಆದರೆ ನಾಳೆ ಹಾಗಲ್ಲ. ಹೊಸ ಸೀ

ಯಾದ್ದರಿಂದ ನಿರಿಗೆಗಳು ಉದ್ದಕ್ಕೆ ನಿಲ್ಲುತ್ತವೆ; ಇಷ್ಟು ಸರಾಗವಾಗಿ ನಡೆಯು ಲಿಕ್ಕಾಗದು. ಅದರ ನಿವಾರಣೆಗೇನು ಉಪಾಯವೆಂಬುದೇ ಆ ಸಮಸ್ಯೆ. ಆದರೆ ಈ ಸಮಸ್ಯೆ ಎದುರಾದುದೇ ತಡ, ಉಪಾಯವೂ ಹೊಳೆದುಬಿಟ್ಟಿತು. "ಅದಕ್ಕೇನಂತೆ! ಹೀಗೆ ಎತ್ತಿ ಕಟ್ಟಿದರಾಯಿತು," ಎಂದುಕೊಂಡು, ಉಟ್ಟಿದ್ದ ಚಿಂದಿಸೀರೆಯ ತುಂಡು ನಿರಿಗೆಗಳನ್ನು ಮಾದರಿಗಾಗಿ ಕಟ್ಟಲು ತಲೆಯ ಮೇಲಿದ್ದ ಕೊಡದಿಂದ ಕೈಬಿಟ್ಟು ಮೋರೆಯನ್ನು ಮುಂಬಾಗಿಸಿದಳು. ಕೂಡಲೆ ಆ ಕೊಡ ದಬಕ್ಕನೆ ನೆಲಕ್ಕುರುಳಿತು. ಪಾಪ! ಭಾವ ಸಮಾಧಿಯಲ್ಲಿ ಲೀನ ವಾಗಿದ್ದವಳಿಗೆ ತಲೆಯಲ್ಲಿ ಕೊಡವಿದ್ದ ನೆನಪೇ ಉಳಿದಿರಲಿಲ್ಲ. ಈಗ ಅದು ಬಿದ್ದ ಸದ್ದು ಕೇಳಿ ಆಕೆಗೆ ಎಚ್ಚರವಾಯಿತು. ಭಯದಿಂದ ತತ್ತರಿಸುತ್ತಾ ಆಕೆ ಸೊಂಟದ ಮೇಲಿದ್ದ ಕೊಡವನ್ನು ಕೆಳಗಿಳಿಸಿ ಬಿದ್ದ ಕೊಡದ ಅವಸ್ಥಾ ವಿಮರ್ಶೆಯನ್ನು ಮಾಡಿದಳು. ಜಲಭರಿತವಾಗಿದ್ದು ಬಿದ್ದುದರಿಂದ ನೆಲಕ್ಕೆ ತಾಗಿದ ಅದರ ಬದಿ ಅಷ್ಟಗಲಕ್ಕೆ ನೆಗ್ಗಿಹೋಗಿತ್ತು. ಅದನ್ನು ನೋಡಿ ಕಾಳಿಯ ಹೃದಯ ಧಸಕ್ಕೆಂದಿತು; ಕೈಯಲ್ಲಿ ಸಪೂರವಾದ ಬೆತ್ತವನ್ನು ಹಿಡಿದು ಜಳಪಿಸುತ್ತಾ, "ಬಾ ರಂಡೆಮಗಳೇ ಬಾ! ನಿನ್ನ ಬೆನ್ನುಮೂಳೆ ಮಡಗಿಯೇನಾ" ಎಂದು ಗರ್ಜಿಸುವ ಒಡತಿ ರಂಗಮ್ಮನ ಉಗ್ರರೂಪ ಅವಳ ಮುಂದೆ ಕುಣಿದಂತಾಯಿತು. ಭಯಭೀತಳಾಗಿ ಕಲ್ಲೊಂದನ್ನು ಎತ್ತಿಕೊಂಡು ಒಳಕ್ಕೆ ನೆಗ್ಗಿದ ಭಾಗವನ್ನು ಹೊರಕ್ಕೆ ಸರಿಪಡಿಸಲು ಕೊಡದ ಒಳಗಡೆಯಿಂದ ಕುಟ್ಟಿದಳು. ಎಷ್ಟಾದರೂ ಅದು ಹಿತ್ತಾಳೆಯಲ್ಲವೇ? ಸ್ಥಿತಿಸ್ಥಾಪಕಗುಣ ಅದಕ್ಕೆಲ್ಲಿಂದ ಬರಬೇಕು! ಜೊತೆಗೆ ಹತ್ತಾರು ಸಲ ರಿಪೇರಿಗೆ ಹೋಗಿ ಹೋಗಿ ಬಂದ ಓಬೀರಾಯನ ಕಾಲದ ಕೊಡವಾಗಿತ್ತು ಅದು. ಆಕೆ ಹಾಗೆ ಕುಟ್ಟಿದಾಗ ಅದರ ನೆಗ್ಗಿದ ಭಾಗದಲ್ಲಿ ಬಲವಾದ ಒಂದು ತೂತು ಬಿತ್ತು.

ಈಗ ಕಾಳಿ ಪೂರಾ ಹುಚ್ಚಿಯಂತಾದಳು. ಅದನ್ನೆತ್ತಿಕೊಂಡು ತಿರುಗಿ ಕೆರೆಗೆ ಓಡಿದಳು. ಅಲ್ಲಿ ಕೆರೆಯ ಏರಿಯಿಂದ ಜಿಗುಟಾದ ಜೇಡಿಮಣ್ಣು ತೆಗೆದು ತೂತಿಗೆ ತುಂಬಿ ನಯವಾಗಿ ಸಾರಿಸಿದಳು. ಆದರೆ ನೀರು ತುಂಬಿದಾಗ ಮಣ್ಣೆಲ್ಲಾ ತೊಳೆದುಹೋಯಿತು. ತಿರುಗಿ ಅದಕ್ಕೆ ಸೊಪ್ಪು ತುರುಕಿದಳಾಕೆ. ಆ ಬಂಧನವನ್ನೂ ತಡೆಯಲಿಲ್ಲ ಜಲಧಾರೆ. ಕಷ್ಟಕ್ಕಿಟ್ಟುಕೊಂಡಿತು ಪಾಪದ ಹುಡುಗಿಗೆ! ತನ್ನ ಬೆಪ್ಪುತನಕ್ಕಾಗಿ ಅವಳು ಸಿಟ್ಟುಗೊಂಡಳು. ಒಡತಿಯ ಉಗ್ರತೆಯನ್ನು ನೆನೆದು ಕಣ್ಣೀರು ಹನಿಸಿದಳು. ಉಪಾಯಗಾಣದೆ ಒಂದು ಒಣಕಡ್ಡಿಯನ್ನು ಮುರಿದು ರಂಧ್ರಕ್ಕೆ ಬಿಗಿಯಾಗಿ ಸಿಕ್ಕಿಸಿ ನೀರು

ತುಂಬಿಕೊಂಡು ಹೊರಟಳು; ದಾರಿ ನಡೆಯುತ್ತಾ ಮಧ್ಯದಲ್ಲಿ ಇಳಿಸಿದ್ದ ಆ
ಇನ್ನೊಂದು ಕೊಡವನ್ನೆತ್ತಿ ಸೊಂಟದಲ್ಲಿರಿಸಿಕೊಂಡು ಬೇಗಬೇಗನೆ ಹೆಜ್ಜೆಯಿ
ಡುತ್ತಾ ಮನೆಯ ಕಡೆ ಸಾಗಿದಳು.

ಹಿತ್ತಿಲ ಅಂಗಳದಲ್ಲಿ ಕಾಲಿಡಲು ರಂಧ್ರಕ್ಕೆ ಸಿಕ್ಕಿಸಿದ್ದ ಕಡ್ಡಿಯೂ
ಬಿದ್ದುಹೋಯಿತು; ಕೊಡ ಧಾರೆಯಾಗಿ ಹೊರಸೂಸುತ್ತಿದ್ದ ನೀರಿನಿಂದ
ತೊಪ್ಪನೆ ತೋಯಿಸಿಕೊಳ್ಳುತ್ತಾ ಅಡುಗೆಮನೆಯ ದ್ವಾರವನ್ನು ಸಮೀಪಿಸಿ
ಕಾಳಿ, "ಅವ್ವಾ, ನೀರು' ಎಂದಳು. ನೀರಿಗೆ ಹೊರಡುವಾಗಲೇ ಹೊತ್ತು
ಮಾಡಿಕೊಂಡು ಹೊರಟಿದ್ದಳು ಕಾಳಿ. ತಿರುಗಿ ಬರುವಾಗ ಅದರ ಇಮ್ಮಡಿ
ಹೊತ್ತುಮೀರಿಸಿದ್ದಳು. ಈ ಜೋಡಿ ತಪ್ಪುಗಳನ್ನು ಹೇಗೆ ತಾನೇ ಸಹಿಸಬ
ಲ್ಲಳು ಸಿಡುಕು ಮೋರೆಯ ರಂಗಮ್ಮ! "ನೀರಿಗೆ ಹೋದೋಳು ಅಲ್ಲೇ ಸತ್ತು
ಹುಟ್ಟಿ ಬಂದೆಯೇನೇ" ಎಂದು ಕರ್ಕಶವಾಗಿ ನುಡಿಯುತ್ತಾ ಬಂದು ಅವಳ
ಸೊಂಟದಿಂದ ಕೊಡ ಇಳಿಸಿಕೊಂಡು ಹೋಗಿ ಒಳಗೆ ಸುರಿದುಬಂದಳು;
ಮತ್ತೆ ಆ ಖಾಲಿ ಕೊಡವನ್ನು ಅತ್ತ ಜಗಲಿಯ ಮೇಲೆಯಿಟ್ಟು ತಲೆಯ ಮೇಲಿ
ದ್ದುದನ್ನು ತೆಗೆಯಹೋದಳು. ಇಷ್ಟರಲ್ಲಿ ಆ ಕೊಡ, ತಾಯಿಮರೆಯಾಗಿ
ರುತ್ತಾ ಇನ್ನೊಬ್ಬರಿಂದ ಪೆಟ್ಟುತಿನ್ನಿಸಿಕೊಂಡ ಮಗು ಆಕೆ ಬರುತ್ತಾ ಕಣ್ಣೀರು
ಸುರಿಸಿ ಚಾಡಿಹೇಳುವಂತೆ ತನ್ನ ತೂತಿನ ಮೂಲಕ ನೀರನ್ನು ಧಾರೆಯಾಗಿ
ಬಿಡುತ್ತಿತ್ತು. ಅದನ್ನು ನೋಡಿದವಳೇ ರಂಗಮ್ಮ ಕೋಲಕಟ್ಟಿದ ಜೌಡಿ
ಯಂತೆ ಕುಣಿದಾಡಿಬಿಟ್ಟಳು. "ಸೊಟ್ಟಮೋರೆಯ ಹೊಲಸುಗಾತಿ!!
ಇದ್ದೊಂದು ಕೊಡವನ್ನೂ ತಿಂದುಮುಗಿಸಿದೆಯಾ? ನಿನ್ನಪ್ಪ ತರ್ತಾನ ಒಂದು
ಹೋದರೆ ಮತ್ತೊಂದು ಹೊಸದ್ದು? ಆಯಿತಲ್ಲ! ಇನ್ನು ಮೋಜಿನಿಂದ
ಒಯ್ಯಾರಿಯಂತೆ ಬಳಕುತ್ತ ಒಂದರಲ್ಲೇ ನೀರು ತರಬಹುದಲ್ಲ ಮಧ್ಯಾಹ್ನದ
ವರೆಗೆ! ಅದಾವಸೊಕ್ಕಿನ ಗಿರ ಹಿಡಿಯಿತೇ ನಿನಗೆ" ಎಂದು ಆಕೆ ಬಾಯಿ
ತುಂಬಾ ಬಯ್ದುದೇ ಅಲ್ಲದೆ ಒಳಗೋಡಿ ಹೋಗಿ ಕಾಳಿ ಊಹಿಸಿಕೊಂಡಿದ್ದ
ಬೆತ್ತದಕೋಲು ತಂದು, ತಲೆಯಲ್ಲಿ ನೀರು ಹೊತ್ತು ನಿಂತಿದ್ದಂತೆ, ಮೊದಲೇ
ಹೆದರಿಕೆಯಿಂದ ನಡುಗುತ್ತಿದ್ದಾಕೆಯನ್ನು ಗುಂಡಿನೇಟಿನಿಂದ ಅರ್ಧಸತ್ತು
ಬಿದ್ದಿರುವ ಪ್ರಾಣಿಯನ್ನು ಥಳಿಸುವಂತೆ ಮೈಮೇಲೆಲ್ಲಾ ಚೆನ್ನಾಗಿ ಥಳಿಸಿದಳು
ಅಷ್ಟಕ್ಕೂ ಸಾಲದೆಂದು ತಲೆಯಿಂದ ಕೊಡವನ್ನೆಳೆದು ಅದರಲ್ಲಿ ಬಾಕಿಯಿದ್ದ
ನೀರನ್ನು ಅವಳ ತಲೆಯಮೇಲೆರೆದು, ಖಾಲಿ ಪಾತ್ರೆಯನ್ನು "ಇಕೋ! ನಿನ
ಮೋರೆಗೆ ಅವುಚಿಕೋ!" ಎಂದು ಹೇಳಿ ಮುಖದ ಮೇಲೆ ಬಿಸುಟು ಉತ

ವದ ಕೊನೆಯ ಘಟ್ಟದಲ್ಲಿ ಮಹಾಕಾಳಿ ಮಂದಿರದೊಳಕ್ಕೆ ಅಂತರ್ಧಾನವಾಗು ವಂತೆ ಮನೆಯೊಳಕ್ಕೆ ನುಗ್ಗಿದಳು.

ಕಾಳಿ, ತನ್ನ ಮುಖದಮೇಲೆ ಬಿದ್ದ ಕೊಡ ಥಣತ್ಕಾರದೊಂದಿಗೆ ಕೆಳಗು ರುಳಲು ಅದನ್ನೆತ್ತಿ ಅತ್ತ ಇಟ್ಟು, ಒಳೆಯದನ್ನೆತ್ತಿಕೊಂಡು ಗಾಳಿ, ಮಳೆಗಳ ಹೊಡೆತಕ್ಕೆ ಸಿಕ್ಕು ತೂನೆದಾಡುವ ಅರೆಬೆಳೆದ ಮರದಂತೆ ಥರಥರ ಕಂಪಿಸುತ್ತಾ ತಿರುಗಿ ಕೆರೆಗೆ ಹೊರಟಳು.

* * * *

ನೀರಿನ ಕೆಲಸ ಮುಗಿಯುವ ಹೊತ್ತಿಗೆ, ತೀಡಲು ಒಂದು ಬುಟ್ಟಿತುಂಬ ಪಾತ್ರೆ ಬಂದು ಹಿತ್ತಲ ಅಂಗಳದಲ್ಲಿ ಬಿದ್ದಿತ್ತು. ಕಾಳಿ, ಪಕ್ಕದ ಬಚ್ಚಲು ಮನೆಯ ಒಲೆಯಿಂದ ಒಂದಷ್ಟು ಬೂದಿ, ಬಚ್ಚಲುಮನೆಯ ಹಿಂಭಾಗದಲ್ಲೇ ಇದ್ದ ಮರದಿಂದ ನಾಲ್ಕಾರು ಕಹಿಹುಳಿ ಮತ್ತು ಅದರ ಮಾಡಿನ ಅಂಚಿನಿಂದ ಒಂದು ಹಿಡಿ ಹುಲ್ಲು—ಇವಿಷ್ಟು ಸಾಮಗ್ರಿಗಳನ್ನು ತಂದು ಮುಸುರೆ ಬಳಿ ಯಲು ಕುಳಿತರೆ ಸೀರೆಯ ಯೋಚನೆ ಅವಳನ್ನು ಸೆಳೆಯಿತು. ಪಾತ್ರೆಗಳನ್ನು ತೀಡುತ್ತಾ ಯೋಚಿಸಿದಳು—"ಅಯ್ಯ ಸೀರೆ ಕೊಂಡುಬಂದರೆ, ಅಲ್ಲಿ ಅಂಗಡಿ ಯವ ಕೊಟ್ಟ ಹಾಗೇ ಎತ್ತಿಕೊಂಡು ಬರುವುದಿಲ್ಲ......ಅಲ್ಲೊಮ್ಮೆ ಬಿಡಿಸಿ ನೋಡಿಯಾರು.......ಅಲ್ಲಿಂದ ಮನೆಗೆ ಬಂದರೆ ಅವ್ವನೊಮ್ಮೆ ಅತ್ತಿತ್ತ ತಿರು ಗಿಸಿಯಾರು......ಆ ಮೇಲೆ ಈ ಭಿಕಾರಿ ಮಕ್ಕಳು ಉಂಟಲ್ಲ...ಅಬ್ಬ!... ಅತ್ತಿಂದಿತ್ತ ಎಳೆದಾಡಿದರೆ ಅದು ನುಲಿತುಹೋಗಿ ಹೇಗಾಗಲಿಕ್ಕಿಲ್ಲ?...ಸೀರೆ ಯುಟ್ಟರೆ ಅದು ಮೈಗೆ ಒಯಿನಾಗಿ ಅಂಟಿಕೊಂಡಿರಬೇಕು...ಹಾಗಾಗಲಿಕ್ಕೆ ಏನು ಮಾಡಬೇಕು...ಓ! ಹೊಳೆಯಿತು ಉಪಾಯ!...ನಾನು ಮಲಗುವಲ್ಲಿ ಕೊಟ್ಟಿಗೆಯೊಳಗೆ ಜೇನುಮಡಿಕೆಗಳನ್ನಿಟ್ಟಿದ್ದ ಅಟ್ಟಳಿಕೆಯಿದೆ....ಅದರ ಹಲಗೆ ಪಸಂದಾಗಿದೆ...ಅದರ ಮೇಲೆ ಸೀರೆಯನ್ನು ಚೆನ್ನಾಗಿ ಮಡಿಸಿ ಇಡೋದು.... ಆ ಮೇಲೆ, ಅದರ ಮೇಲೆ ಬೀಸೋಕಲ್ಲಿನ ಮೇಲಿನ ಹೋಳನ್ನು ಇಟ್ಟುಬಿ ಡೋದು....ಆಗ...." ಇಲ್ಲಿ, "...ಬೀಸೊಕಲ್ಲಿನ ಮೇಲಿನ ಹೋಳನ್ನು ಇಟ್ಟು ಬಿಡೋದು" ಎಂದು ನೆನೆಯುತ್ತಿದ್ದಾಗ ಬೀಸುವಕಲ್ಲಿನ ಭಾರದ ಅನುಭವ ದೊಂದಿಗೆ ಅವಳ ಕೈಪಾತ್ರೆಯನ್ನು ಗಟ್ಟಿಯಾಗಿದ್ದ ನೆಲಕ್ಕೆ ಒತ್ತಿ ತಿಕ್ಕಿತು. ಆಗ, ತಿಕ್ಕಲ್ಪಡುತ್ತಿದ್ದ ಪಾತ್ರೆ, ಉಪ್ಪಿನಕಾಯಿ ಇಡುತ್ತಿದ್ದ ಗ್ಲಾಸಿನ ಬಸಿಯಾ ಗಿದ್ದು, ಅದು 'ಚಣಿಕ್' ಅಂತ ಬಿರುಕುಬಿಟ್ಟಿತು. ಆ ಸದ್ದು ಅಲ್ಲಿಗಾಗಿ ಹಾದುಹೋಗುತ್ತಿದ್ದ ರಂಗಮ್ಮನ ಏಳು ವರ್ಷದ ಹಿರಿಯ ಹುಡುಗಿಗೆ ಕೇಳಿಸಿ,

ಅವಳು ಓಡಿಹೋಗಿ ತಾಯಿಗೆ ದೂರುಕೊಟ್ಟಳು. ಕೂಡಲೆ ರೋಷಗೊಂಡು ರಂಗಮ್ಮ ಅಲ್ಲಿಗೆ ಓಡಿಬಂದಳು. ಅವಳ ರೋಷವೆಂದರೆ ಏನು? ನೆರೆಬಂದ ಪ್ರವಾಹದಂತೆ 'ಭೋರೋ' ಅನ್ನುತ್ತಿತ್ತು. ಬಂದವಳೇ ಕಾಳಿಯ ಕೈಯಿಂದ ಬಸಿಯನ್ನೆಳೆದು ಪರೀಕ್ಷಿಸಿ, ಅದಿನ್ನೇತಕ್ಕೆಂದು ಅಷ್ಟೆತ್ತರದಿಂದ ಕೆಳಕ್ಕೆ ಹಾರಿಸಿ ಚೂರುಮಾಡಿದಳು; ಬಳಿಕ ವಾಚಾಮಗೋಚರವಾಗಿ ಬಾಯಿ ಬಡಿಯುತ್ತಾ ಗುಡ್ಡದ ಮೇಲೆ ಬೆಟ್ಟ ಬಂಡೆಗಳನ್ನುರುಳಿಸುವ ಹಾಗೆ ಕಾಳಿಯ ಬೆನ್ನಿಗೆ ಗುದ್ದುಗಳನ್ನುರುಳಿಸಿ ಹೊರಟುಹೋದಳು. ಅಲ್ಲಿಂದ, ಮುಂದೆ ಕಾಳಿ ಅಳುತ್ತಳುತ್ತಲೇ ಪಾತ್ರೆಗಳನ್ನೆಲ್ಲಾ ತೀಡಿ, ತೊಳೆತೊಳೆದು ಬುಟ್ಟಿಯಲ್ಲಿ ತುಂಬಿಸಿದಳು.

* * * *

ಹೀಗೆ ಪಾತ್ರೆಗಳ ಶುಚಿತ್ವ ಮುಗಿದ ಮೇಲೆ ಕಾಳಿ ಮನೆಯಂಗಳಗಳನ್ನು ಸುತ್ತಲೂ ಗುಡಿಸಿ ಚೊಕ್ಕಮಾಡಿದಳು; ಹಂದಿಗೆ, ನಾಯಿಗೆ ಮತ್ತು ಕೋಳಿಗಳಿಗೆಲ್ಲಾ ಅವುಗಳವುಗಳ ಖಾದ್ಯ ಪದಾರ್ಥಗಳನ್ನು ಬಡಿಸಿದಳು; ಕೊಟ್ಟಿಗೆಯಿಂದ ದನಗಳನ್ನು ಬಿಟ್ಟು ಅವುಗಳನ್ನು ದೂರ-ಮೈದಾನಕ್ಕೆ ಅಟ್ಟಿ ಬಂದಳು; ಕೊಟ್ಟಿಗೆಯಿಂದ ಸೆಗಣಿ ಮತ್ತು ಗಂಜಳವನ್ನು ಅತ್ತ ಗುಂಡಿಗೊಯ್ದು ಹಾಕಿ ಅದರ ನೆಲವನ್ನು ಶುಚಿ ಮಾಡಿ ಒಣ ಹುಲ್ಲನ್ನು ತೆಳ್ಳನೆ ಅದರ ಮೇಲೆಲ್ಲಾ ಹರವಿದಳು. ಇಷ್ಟು ಕೆಲಸಗಳನ್ನು ಯಾವ ಯೋಚನೆಯೂ ಇಲ್ಲದೆ ಮಾಡಿ ಮುಗಿಸಿದ ನಂತರ ಆಕೆ ತನ್ನ ಕೊಟ್ಟಿಗೆಗೆ ಬಂದು ಅದರ ಕಿರುಜಗುಲಿಯ ಮೇಲೆ ಕುಳಿತಳು; ಅಷ್ಟರಲ್ಲಿ ರಂಗಮ್ಮನಿಂದ ಅವಳಿಗೆ ಕಾಫಿಗೆ ಕರೆಬಂತು.

ಅದನ್ನು ಕೇಳಿ ಕಾಳಿಗೆ ಅಚ್ಚರಿಯಾಯಿತು. ಏಕೆಂದರೆ ಈ ದಿನ ಕೊಂಚ ಬೇಗನೆಯೇ ಆ ಕರೆ ಬಂದಿತ್ತು. ಇಲ್ಲದಿದ್ದರೆ, ಅವಳು ಅಷ್ಟೆಲ್ಲಾ ಕೆಲಸ ಮುಗಿಸಿದ ನಂತರವೂ ಹಲ್ಲುಗಳಿಲ್ಲದ ಬಾಚಣಿಗೆಯಿಂದ ತನ್ನ ಕೆದರಿದ ತಲೆಯನ್ನು ಬಾಚಿ ಕಟ್ಟಿದ ಬಳಿಕವೇ ಅವಳಿಗೆ ಬೆಳಗಿನ ಕಾಫಿಗೆ ಕರೆ ಬರುವುದು ರೂಢಿಯಾಗಿತ್ತು. ಇಲ್ಲ; ರಂಗಮ್ಮ ಕಾಳಿಗೆ ಊಟಕ್ಕೆ ಕರೆಕೊಡುವ ತೆರವನ್ನು ಇಷ್ಟಕ್ಕೆ ಹೇಳಿ ಮುಗಿಸಿದರೆ ಆಗಲಿಲ್ಲ; ಕೊಂಚ ವಿಸ್ತೃತ ವಿವರಣೆಯನ್ನೇ ಕೊಡಬೇಕು ಆ ಬಗೆಗೆ. ರಂಗಮ್ಮ ಕಾಳಿಯನ್ನು ಕೆಲಸಮಾಡಿಸಿ ಊಟ ಹಾಕುತ್ತಿದ್ದ ಶೈಲಿಯೇ ಅದೊಂದು ಬಗೆಯದು. ಆ ಶೈಲಿಯೆಂದರೆ, ತೀರಾ ಪರಂಪರಾಗತ ಹಾದಿಯನ್ನೇ ಬಳಸುವ ಕವಿಗಳಂಥದ್ದೂ ಅಲ್ಲ, ಅಥವಾ ತೀರಾ ಹೊಚ್ಚ ಹೊಸ ಹಾದಿಯನ್ನೇ ಬಳಸುವ ಕವಿಗಳಂಥದ್ದೂ ಅಲ್ಲ;

ಹಳೇ-ಹೊಸ ಹಾದಿಗಳೆರಡನ್ನೂ ತಕ್ಕಹಾಗೆ ಎಳೆದು ಕೂಡಿಸಿಕೊಂಡು ಹೋಗುವ ಕವಿಗಳಂಥದ್ದು. ಸಾಮಾನ್ಯವಾಗಿ, ಅವಳ ಚಿತ್ತ ಅಪ್ರಸನ್ನವಾಗಿರುವಂದು ಅವಳಿಗೆ ಆಜ್ಞೆಗಳು ಬರುವುದಕ್ಕೆ ಮುಂಚೆಯೇ ಕಾಳಿ ಎಲ್ಲಾ ಕೆಲಸಗಳನ್ನು ತಾನಾಗಿಯೇ ಮಾಡಿ ಮುಗಿಸಬೇಕಿತ್ತು; ಮತ್ತು ಅವಳ ಊಟದ ಹೊತ್ತುಗಳು ದಾಮಾಶಯದಂತೆ ಏರುತ್ತಾ ಹೋಗುತ್ತಿದ್ದುವು. ಅವಳು ಸುಪ್ರಸನ್ನಳಾಗಿರುವಂದು ಊಟದ ಹೊತ್ತುಗಳು ಅದೇ ಕ್ರಮದಲ್ಲಿ ಇಳಿಯುತ್ತಾ ಬರುತ್ತಿದ್ದುವು; ಅಲ್ಲದೆ ಬೆಳಗಿನ ಊಟಕ್ಕೆ ಕರೆಯುವಾಗ ಅವಳು ಮಾಡಬೇಕಾದ ಕೆಲಸಗಳ ಪಟ್ಟಿಯನ್ನು ಅರ್ಧಕ್ಕೆ 'ಓದು'ತ್ತಿದ್ದಳು—"ಕಾಳಿ, ಕಾಫಿ ಕುಡಿದಾದ ಮೇಲೆ ಎರಡು ಹೊರೆ ಕಟ್ಟಿಗೆ ತಂದುಬಿಡು, ಮತ್ತೆ ಒಂದು ಕುಕ್ಕೆ ಅಕ್ಕಿ ಬೀಸಿ ಕೊಟ್ಟುಬಿಡು, ಆ ಮೇಲೆ ಒಂದೆರಡು ಬಟ್ಟೆ ಒಗೆದು ಹಾಕಿಬಿಡು, ಅನಂತರ ಅಂಗಳಕ್ಕೆ ತೆಳ್ಳಗೆ ಸೆಗಣಿ ಸಾರಿಸಿಬಿಟ್ಟರೆ, ಆಯಿತು"–ಎಂದು. ಸೆಗಣಿಯನ್ನು ಸಾರಿಸಿ ಒಂದಿಷ್ಟು ಜಗುಲಿಮೇಲೆ ಒರಗಿಕೊಂಡಳೆಂದರೆ, "ಕಾಳಿ, ಬಚ್ಚಲಿಗೆ ಬೆಂಕಿಹಾಕಿ ಕಡಾಯಿಗೆ ಅರ್ಧಕ್ಕೆ ನೀರುಹಾಕಿ ಬಿಡಕ್ಕ! ಅದು ಕಾಯೋತನಕ ಮನೆಗೆ ನೀರು ತಂದು ಬಿಟ್ಟರೆ ಮತ್ತೆ ಮಕ್ಕಳ ಮೈ ತೊಳೆದ ನಂತರ ದನಗಳ ಎಚ್ಚರ ತೆಗೆಯುವುದೊಂದೇ ಬಾಕಿಯಿರುತ್ತದೆ" ಎಂದು ಇನ್ನೊಮ್ಮೆ ಹಗುರವಾಗಿ ಹೇಳಿ ಆ ದಿನದ ಅವಳ ಕೆಲಸಗಳ ಪಟ್ಟಿಯನ್ನು ಪೂರ್ತಿಗೊಳಿಸುತ್ತಿದ್ದಳು.

ಸರಿ; ಈಗ ಅವಳ ಮುನಿದ ಪ್ರಕೃತಿಯ ಮೇಲೆ ಮರೆವಿನ ತೆರೆ ಬಿತ್ತೋ, ಅಲ್ಲ ಕಾಳಿಯ ಉದರಭಾಗ್ಯವೋ—ಕಾಫಿಗೆ ತುಸು ಜಾಗ್ರತೆಯಾಗಿ ಕರೆ ಬಂತು! ಕಾಳಿಯೂ ಅಂತೆಯೆ ತನ್ನ 'ಅಚ್ಚರಿಗೊಂಡ ಪ್ರಕೃತಿಗೆ ಸಂತೋಷದ ಮೆರುಗು ಕೊಟ್ಟುಕೊಂಡು ತನ್ನ ಕಾಗೆಯಬಣ್ಣದ ಮಂಬಟ್ಟಲನ್ನೂ ಸನ್ಯಾಸಿಯ ತಲೆಯಂತಹ ಗೆರಟೆಯನ್ನೂ ತೆಗೆದುಕೊಂಡು ಅಡುಗೆ ಕೋಣೆಯ ಬಳಿ ಸಾರಿದಳು. ಅವಳ ಪಾಲಿಗೆ ನಿತ್ಯವೂ ಬರುತ್ತಿದ್ದ ಮೂರು ರೊಟ್ಟಿಗಳು, ಹಲಸಿನ ಬೀಜದ ಚಟ್ನಿ ಮತ್ತು ಗೆರಟೆ ತುಂಬ ನಶ್ಯದ ಬಣ್ಣವನ್ನು ಹೀಯಾಳಿಸುವಂತಹ ಕಾಫಿ ದೊರೆಯಿತು. ಅವುಗಳನ್ನೆತ್ತಿಕೊಂಡು ಹೋಗಿ ಆಕೆ ಕೊಟ್ಟಿಗೆಯ ಜಗಲಿಯ ಮೇಲೆ ಕುಳಿತಳು.

ಸಾಮಾನ್ಯವಾಗಿ ಎಲ್ಲಾ ಮನೆಗಳಲ್ಲಿ ಮಕ್ಕಳಲ್ಲಿ ಸರ್ವಸಾಮಾನ್ಯವಾದೊಂದು ಚಾಳಿ ಕಂಡುಬರುತ್ತದೆ! ಅದೇನೆಂದರೆ ಅವುಗಳು ತಮ್ಮ ಊಟ-ಕಾಫಿ ಮುಗಿದಿದ್ದರೂ ತಂದೆ ತಾಯಿ-ಹೆಚ್ಚಾಗಿ ತಾಯೊಬ್ಬಳೇ ಉಣ್ಣಲು

ಕುಳಿತಾಗ ಅವಳಿಂದೇನಾದರೂ 'ಕೂಸರು' ಸಿಕ್ಕೀತೋ ಎಂಬ ಆಶೆಯಿಂದ ಒಂದು ಬಾಗಿಲ ಮರೆಯಿಂದ ಅವಳಿಗೆ ಕಾಣುವಂತೆ ಆಗಾಗ ಹಣಿಕಿ ನೋಡುವುದು; ಇನ್ನೊಂದು ಮುಖ ಬಾಡಿಸಿಕೊಂಡು ಗೋಡೆಗೆ ಹತ್ತಿರವಾಗಿ ಮೆಲ್ಲ ಮೆಲ್ಲನೆ ಹೆಜ್ಜೆಯಿಡುವುದು; ಮತ್ತೊಂದು ಸುಂಸುಮ್ಮನೆ ಅವಳೆದುರಿಂದ ಅತ್ತಿಂದಿತ್ತ ದಾಟಿ ಹೋಗುವುದು; ಮಗುದೊಂದು "ನಿನಗೆ ಅದು ಹಾಕಲೇನಮ್ಮ, ಇದು ಸುರಿಯಲೇನಮ್ಮ" ಎಂದು ಆಕೆಗೆ ಅನಾವಶ್ಯಕ ಉಪಚಾರ ಮಾಡುತ್ತ ಅಲ್ಲೇ ತೊನೆದಾಡುವುದು! ಮಕ್ಕಳ ಈ ಚಾಳಿ ವೆಂಕಣನ ಮನೆಯ ಹಂದಿ, ಕೋಳಿ ಮತ್ತು ನಾಯಿಗಳಲ್ಲೂ ಪ್ರತಿಬಿಂಬಿತವಾಗಿತ್ತು. ಯಾವಾಗ ಕಾಳಿ ಊಟಕ್ಕೆ ಕುಳಿತಳೆಂದರೆ ಅವುಗಳು ಆಮಂತ್ರಣವಿಲ್ಲದೆಯೇ ಬಂದು ಅವಳ ಸುತ್ತಲೂ ನೆರೆಯುತ್ತಿದ್ದುವು. ಹೇಂಟೆಗಳು ತಾವು ಆಗ ಮೊಟ್ಟೆಯಿಟ್ಟೇವೋ ಈಗ ಮೊಟ್ಟೆಯಿಟ್ಟೆವೋ ಎನ್ನುವಂತೆ ತಮ್ಮ ಕರ್ಕಶ ಸ್ವರದಲ್ಲಿ ತರತರ ಹಾಡುಗಳನ್ನು ಹೊರಹಾಕುತ್ತಿದ್ದುವು; ಹುಂಜಗಳು ತಾವು ಹೆಂಡಿರ ಕಡೆಯಿಂದ ಪ್ರಾತಿನಿಧ್ಯವಹಿಸಿದ ರಾಯಭಾರಿಗಳಂತೆ ತಮ್ಮ ಕತ್ತುಗಳನ್ನು ಮೇಲಕ್ಕೆ-ಕೆಳಕ್ಕೆ, ಅತ್ತ-ಇತ್ತ ಕೊಂಕಿಸುತ್ತ ಅಡ್ಡಾಡುತ್ತಿದ್ದುವು; ಹಂದಿಗಳು ದಮ್ಮು ರೋಗಿಗಳಂತೆ ಗುರುಗುಟ್ಟುತ್ತಿದ್ದುವು; ನಾಯಿಗಳಾದ ಜಿನ್ನ ಮತ್ತು ಜಿಕ್ಕಿ—ಒಮ್ಮೆ ಆ ಕೋಳಿಯ ಮೇಲೆ, ಒಮ್ಮೆ ಈ ಹಂದಿಯ ಮೇಲೆ ಬಿದ್ದು ಅವುಗಳನ್ನು ಅತ್ತಲೊಮ್ಮೆ ಇತ್ತಲೊಮ್ಮೆ ಅಟ್ಟಿ ಬಂದು ಭಾರಿ ಪೌರುಷವನ್ನು ಮೆರೆಸಿದವುಗಳಂತೆ ಕುಳಿತು ಬಾಲ ಅಲ್ಲಾಡಿಸುತ್ತಿದ್ದುವು. ಕಾಳಿ, ಕೋಳಿಗಳಿಗೆ ಏನನ್ನೂ ಹಾಕುತ್ತಿರಲಿಲ್ಲ. ಏಕೆಂದರೆ, ಅವುಗಳು ಸಾರಾಗಿ ಪರಿಣಮಿಸಿದಾಗ ಅವಳಿಗೆ ಸಿಗುತ್ತಿದ್ದುದು ಒಂದೋ ರೆಕ್ಕೆ, ಇಲ್ಲವೆ ಪಕ್ಕೆ, ಯಾ ಪುಕ್ಕ! ಹಂದಿಗಳನ್ನು ನೋಡಿ ಅಸಹ್ಯದಿಂದ ಮೈನಿಮಿರಿಸುತ್ತಿದ್ದಳು. ಏಕೆಂದರೆ ಅವುಗಳ ಮೈ ತೀರಾ ದೊರಗು ಮತ್ತು ಕೊಳಕು! ಜಿಕ್ಕಿಯನ್ನು ಕಂಡಲ್ಲಿಂದ ಅಟ್ಟುತ್ತಿದ್ದಳು. ಕಾರಣವೆಂದರೆ ಅದರ ಮೈಯೆಲ್ಲಾ ಫರಂಗಿ! ಇನ್ನುಳಿದಿರುವುದು ಜಿನ್ನ! ಜಿನ್ನನೆಂದರೆ ಅವಳಿಗೆ ಬಲು ಅಕ್ಕರೆ! ತಾನು ತಿನ್ನುವ ಪದಾರ್ಥದಲ್ಲಿ ಒಂದಿಷ್ಟು ಅದಕ್ಕೆ ಹಾಕದಿದ್ದರೆ ಅವಳಿಗೆ ತಾನೊಬ್ಬಳು ಭಾರಿ ಕೃತಘ್ನಳಂತೆ ಅನಿಸುತ್ತಿತ್ತು. ಕಾರಣ, ಅದು ಯಾವಾಗಲೂ ರಾತ್ರಿಯ ವೇಳೆ ಕದವಿಲ್ಲದ ಅವಳ ಕೊಟ್ಟಿಗೆಯೊಳಗೆ, ಅವಳ ಕಾಲ ಬುಡದಲ್ಲಿ ಮಲಗಿರುತ್ತಾ ಅವಳಿಗೆ ಕಾವಲು ಕೊಡುತ್ತಿತ್ತು! ಈಗಲಾದರೂ ಕುಳಿತವಳೇ ಎರಡು ರೊಟ್ಟಿಗಳನ್ನು ಜಗುಲಿಯ ಮೇಲೆ, ತನ್ನ ಒಂದು ಬದಿ

ಯಲ್ಲಿಟ್ಟು, ಕಾಫಿ ತುಂಬಿದ ಗೆರಟೆಯನ್ನು ಇನ್ನೊಂದು ಬದಿಯಲ್ಲಿಟ್ಟು, ಚಟ್ನೀ ಬಟ್ಟಲನ್ನು ಮಡಿಲಲ್ಲಿಟ್ಟುಕೊಂಡು. ಒಂದು ರೊಟ್ಟಿಯಿಂದ ಚೂರೊಂದು ಮುರಿದು ಮೊದಲು ಜಿನ್ನಗೆ ಹಾಕಿಯೇ ತಾನು ತಿನ್ನತೊಡಗಿದಳು. ಉಳಿದ ವುಗಳು, "ನಮಗೂ ಕೊಡಕ್ಕಾ, ಒಂದೊಂದು ತುಣುಕು," ಎಂದು ಕೇಳು ವಂತೆ ಅವಳನ್ನು ದಿಟ್ಟಿಸುತ್ತಿದ್ದುವು!

ರೊಟ್ಟಿ ತಿನ್ನಲು ಮೊದಲಿಡುತ್ತಾ, ಕಾಳಿಯ ಮನಸ್ಸು ತನ್ನ ಸೀರೆ ಮತ್ತು ನೆರೆಮನೆಯ ಚೀತಿಯನ್ನು ನೆನೆದುಕೊಂಡಿತು. ನೆರೆಮನೆಯ ಚೀತಿ ಯೆಂದರೆ ಅವಳು ನೆರೆಮನೆಯವರ ಮನೆಯ ಆಳಾಗಿರಲಿಲ್ಲ; ಎರಡು ವರುಷ ಗಳ ಹಿಂದೆ ಎಲ್ಲಿಂದಲೋ ಬಂದು ನೆರೆಮನೆಯವರ ಜಾಗದಲ್ಲಿ ಗುಡಿಸಲು ಕಟ್ಟಿ, ಕರೆದವರೆಲ್ಲರ ಕೆಲಸಮಾಡುತ್ತ, ಸ್ವತಂತ್ರಜೀವನ ನಡೆಸುತಿದ್ದ ಪಾಲೆರ ಚುಬ್ಬನ ಹೆಂಡತಿ. ಅವಳಿಗೂ ಇವಳಿಗೂ ಬಹಳ ಸ್ನೇಹ. ಸ್ನೇಹವೆಂದರೆ ಅದು ಬಹುಬೇಗನೆ ಹುಟ್ಟಿಕೊಂಡದ್ದಲ್ಲ. ಮೊದಮೊದಲು ಇಬ್ಬರೂ ದೂರ ದೂರವಾಗಿಯೇ ವರ್ತಿಸುತ್ತಿದ್ದರು. ಆದರೆ ಒಂದು ಸಲ ಇವಳು ಅವಳಲ್ಲಿ, "ಚೀತಿಯಕ್ಕಾ,"—ಇವಳಿಗಿಂತ ಅವಳು ಏಳೆಂಟು ವರ್ಷ ದೊಡ್ಡವಳಂತೆ ಕಾಣುತ್ತಿದ್ದುದರಿಂದ ಇವಳು ಅವಳನ್ನು "ಅಕ್ಕ–ಚೀತಿಯಕ್ಕ" ಎಂತ ಕರೆಯು ತ್ತಿದ್ದಳು—"ನೋಡು, ನಾನು ಅಷ್ಟೆಲ್ಲಾ ಕೆಲ್ಸಮಾಡಿದರೂ ಹೊತ್ತುಹೊತ್ತಿಗೆ ಅವ್ರಾವರು ಬೇಗನೆ ಊಟ ಹಾಕೋದೇ ಇಲ್ಲ. ನನಗೋ ಹೊಟ್ಟೆ ಹಸಿದು ಮರಮರ ಅನ್ನುತ್ತದೆ. ಬೇಗನೆ ಹೊಟ್ಟೆ ಹಸೀದೆ ಇರೋದಕ್ಕೆ ಉಪಾಯ ಹೇಳ್ತೀಯಾ" ಎಂದು ಕೇಳಿದಳು. ಅದಕ್ಕೆ ಅವಳು "ಹುಳೀ–ಕಾರಾ ಸ್ವಲ್ಪ ಕಮ್ಮಿ ತಿನ್ಬೇಕಮ್ಮಾ, ಕಾಳಿ," ಎಂದು ಉಪಶಮನ ಹೇಳಿಕೊಟ್ಟಳು. ಅಲ್ಲಿಂದ ಮೊದಲ್ಗೊಂಡು ಇವಳು ಉಣ್ಣುವಾಗ—ತಿನ್ನುವಾಗಲೆಲ್ಲ ರಂಗಮ್ಮ ತನಗೆ ಉಪ್ಪಿನಕಾಯನ್ನೋ ಅಥವಾ ಸ್ವಲ್ಪ ಹೆಚ್ಚಿಗೆ ಮೆಣಸು 'ಬಿದ್ದಿರು'ವಂತಹ ಸಾರನ್ನೋ ಇಕ್ಕಿದರೆ ಅವನ್ನು ಜಿನ್ನಗೆ ಎತ್ತಿಹಾಕಿ ಅನ್ನ–ರೊಟ್ಟಿಗಳನ್ನು ಸಪ್ಪೆ ಯಾಗಿ ಉಪಯೋಗಿಸಹತ್ತಿದಳು. ಈಗಣ ಡಾಕ್ಟರರ ಅಭಿಪ್ರಾಯವನ್ನು ಸ್ವಾನುಭವದಿಂದ ಕಂಡುಕೊಂಡು, ಚೀತಿ ಈ ಸಲಹೆಯನ್ನು ನೀಡಿದ್ದಳೋ ಏನೊ. ಇವಳಿಗೆ ಆ ಸಲಹೆಯಿಂದ ಸ್ವಲ್ಪಮಟ್ಟಿಗೆ ಉಪಯೋಗವೂ ಕಂಡು ಬಂದಿತು! ಈ ಘಟನೆಯ ನಂತರವೇ ಚೀತಿಯಲ್ಲಿ ಇವಳಿಗೆ ಆದರ ಹುಟ್ಟಿತು– ಇಬ್ಬರಲ್ಲಿ ಸ್ನೇಹವೂ ಹುಟ್ಟಿ ಬೆಳೆಯಿತು! ಆದರೂ ಈ ಸ್ನೇಹದಲ್ಲಿ ಕಹಿಯ ಹೊಗೆಯೂ ಇಲ್ಲದಿರಲಿಲ್ಲ. ಚೀತಿಗೆ ಅವಳ ಗಂಡ ಹೊಸಸೀರೆ ತೆಗೆಯು

ವುದೇ ಇಲ್ಲ; ಅವರಿವರು ಕೊಡುವ ಹಳೇ ಸೀರೆಗಳನ್ನೇ ಉಡಬೇಕು; ತನಗೆ ತನ್ನ ಅಯ್ಯ ಹೊಸಸೀರೆ ಕೊಂಡುಕೊಡುತ್ತಾರೆ— ಎಂದು ಇವಳಿಗೆ ಒಂದು ಹೆಮ್ಮೆ! ಕಾಳಿ ಅಷ್ಟೊಂದು ದುಡಿದರೂ ವರ್ಷವೆಲ್ಲಾ ಒಂದೇ ಒಂದು ಸೀರೆಯಲ್ಲಿ ಕಳೆಯಬೇಕು— ಎಂದು ಅವಳಿಗೊಂದು ತೆರನ ಬಿಗುಮಾನ! ಹೀಗೆ ಇಬ್ಬರಲ್ಲೂ ಪರಸ್ಪರ ಮಾತ್ಸರ್ಯದ ಭಾವನೆಗಳು ನೆಲೆಸಿದ್ದುವು; ಮತ್ತು ಆ ವಿಚಾರದಲ್ಲಿ ಇಬ್ಬರೂ ಪರಸ್ಪರ ಪರಿಚಿತರಾಗಿದ್ದರು. ಆದರೂ ಅವರ ಗೆಳೆತನ ಬಿಗಿಯಾಗಿಯೆ ಹರಿದಿತ್ತು. ಇದಕ್ಕೆ ಒಂದು ಕಾರಣವೂ ಇತ್ತು; ಅದೇನೆಂದರೆ ಸ್ವಭಾವ ಮತ್ತು ಸ್ಥಿತಿಗತಿಗಳಲ್ಲಿ ಅವರಿಬ್ಬರಿಗೆ ತಾಳಿಬೀಳುವ ಹೆಂಗುಸರಾರೂ ಅಲ್ಲಿ ಸುತ್ತಮುತ್ತ ಇರಲಿಲ್ಲ ಅಂದಹಾಗೆ, ಈಗ ಕಾಳಿ, ರೊಟ್ಟಿಯನ್ನು ಪುಟ್ಟಪುಟ್ಟ ಚೂರುಗಳಾಗಿ ಮುರಿಯುತ್ತ, ಒಂದು ಚೂರನ್ನು ಚಟ್ನಿಯಲ್ಲದ್ದಿ ಒಂದನ್ನದ್ದದೆ ಬಾಯಿಯಲ್ಲಿ ತುಂಬುತ್ತ, ಮಳೆಗಾಲ ಹಳ್ಳಿಯ ರಸ್ತೆಯಲ್ಲಿ ಹರಿಯುವ ಎತ್ತಿನ ಗಾಡಿಯಂತೆ ಅದನ್ನು ಚಲಿಸುತ್ತ ಯೋಚಿಸಿದಳು —“ಚೀತಿ ನಿನ್ನೆ ಮಧ್ಯಾಹ್ನ ನೆರೆಮನೆಯವಳ ಮಗಳನ್ನು ಅವರ ಗಂಡನ ಮನೆಗೆ ಬಿಡಲು ಹೋಗಿದ್ದಾಳೆ... ಇವತ್ತು ಸಂಜೆಗೆ ಹಿಂದಿರುಗಬಹುದು.... ಬರುವಾಗ ಅವರು ಕೊಡುವ ಒಂದು ಹಳೇ ಸೀರೆ, ಹರಕು ಜಾಕೀಟು ತಂದಾಳು...ಛಿ!...ಅವಳಿಗೆ ಹಬ್ಬಕ್ಕೆ ಎಲ್ಲಾ ಹಳೇ ಮಾಲುಗಳೇ...ಹಳೇ ಸೀರೆ, ಹಳೇ ಜಾಕೀಟು, ಹಳೇ ವಸ್ತ್ರ— ಎಲ್ಲಾ ಹಳೇದೆ... ನನಗೆ?...ಹೊಸ ಸೀರೆ! — ಕೆಂಪಿನ ಸೀರೆ! — ದೊಡ್ಡದೊಡ್ಡ ಹೂಬಿಡಿಸಿರುವ ರವಕೆ! — ಕೆಂಪು ಚೆಕ್‌ವಸ್ತ್ರ! — ಮಣಿಮಾಲೆ! — ಸಿಲ್ಕು ಬಳೆ! — ಎಲ್ಲಾ ಹೊಸದ್ದೂ ಹೊಸದ್ದೂ!...ನಾಳೆ ಹೊಸಸೀರೇನ ನೀಟಕ್ಕೆ ಉಟ್ಕೊಂಡುಬಿಟ್ರೇಯೆಂದರೆ ಆಕೆ ದೊಡ್ಡದೊಡ್ಡಗೆ ಕಣ್ಬಿಟ್ಕೊಂಡು ರಾಗ ಎಳೀಬೇಕು— ಅಯ್ಯ ಮರೆತು ಬಂದುಬಿಟ್ರು ಅಂದೆ, ಈಗ ತಂದೇಬಿಟ್ರೇನೇ ಕಾಳೀ— ಅಂತ...ಆಕಿಗೆ ಆಕಿಗೆ ಕಲಿಸ್ತೀನಿ..." ಹೀಗೆ ಚಿಂತಿಸುತ್ತಾ, ಒಂದು ರೊಟ್ಟಿ ಮುಗಿದುದರಿಂದ ಎರಡನೆಯದಕ್ಕೆ ಕೈಹಾಕಿದಳು. ಆಕೆ ಕೈಯೇನೊ ಹಾಕಿದ್ದೇ; ಆದರೆ ಕೈಗೆ ಜಗುಲಿಯ ತಳವಲ್ಲದೆ ರೊಟ್ಟಿಯ ಸ್ಪರ್ಶವಾಗಲೇ ಇಲ್ಲ? ಆಕೆ ಗಾಬರಿಯಿಂದ ಕಣ್ಣಿಟ್ಟು ನೋಡಿದರೆ ಅಲ್ಲಿ ನಿಜಕ್ಕೂ ರೊಟ್ಟಿಗಳಿರಲಿಲ್ಲ! “ನನ್ನ ರೊಟ್ಟಿ ಎಲ್ಲಿ ಹೋದುವು?” ಎಂದು ಅತ್ತಿತ್ತ ಕಣ್ಣುಹಾಯಿಸುವುದರಲ್ಲೇ ಕೊಟ್ಟಿಗೆಯ ಹಿಂಭಾಗದಿಂದ ಬಲು ಜೋರಿನ ಗದ್ದಲ ಕೇಳಿಬಂತಾಕೆಗೆ. ಎದ್ದು ಹೋಗಿ ನೋಡಿದಾಗ, ಅಲ್ಲಿ ತನ್ನೆರಡು ರೊಟ್ಟಿಗಳಿಂದ ಸೂಕರ-ಸೊಣಗ-ಕುಕ್ಕುಟ

ಗಳು ಭರಾಟೆಯಿಂದ ಕಂಬಳವಾಡುತಿದ್ದುದನ್ನು ಕಂಡಳು. ಇವಳು ಸೀರೆಯ ಯೋಚನೆಯಲ್ಲಿ ಮುಳುಗಿದ್ದಾಗ ಜಿನ್ನ ಮತ್ತು ಜಿಕ್ಕಿ ಕೂಡಿ ಜಗುಲಿಯ ಮೇಲಿನಿಂದ ರೊಟ್ಟಿಗಳನ್ನು ಮೆಲ್ಲನೆ ಎತ್ತಿಹಾಕಿದ್ದುವು; ಉಳಿದವುಗಳು ಅವುಗಳನ್ನು ಹಿಂಬಾಲಿಸಿ ಹೋಗಿದ್ದುವು. ಬೇರೆದಿನಗಳಲ್ಲಾಗಿದ್ದರೆ ಕಾಳಿ ಅವುಗಳಲ್ಲಿ ಯಾವಾವುದರ ಕತ್ತು-ಬಾಲ ಮುರಿದು ಹಾಕುತ್ತಿದ್ದಳೊ ಏನೊ! ಆದರೆ ಸದ್ಯದ ಪರಿಸ್ಥಿತಿಯಲ್ಲಿ ಸೀರೆಯ ಸವಿಕಲ್ಪನೆಯೇ ಅವಳ ಹೊಟ್ಟೆತುಂಬಿಸಿದ್ದುದರಿಂದ, "ನಿಮ್ಮ ಹೊಟ್ಟೆ ಊದಿ ಬಿರಿದುಹೋಗ!" ಎಂದು ಹಿಡಿಶಾಪಹಾಕಿ ತಿರುಗಿಬಂದಳು; ಮತ್ತೆ ಬಟ್ಟಲಲ್ಲಿ ಉಳಿದಿದ್ದ ಚಟ್ನಿಯನ್ನು ಹಾಗೇ ತಿಂದು ಹಾಕಿ; ಗೆರಟೆತುಂಬಾ ಕಾಫಿಯನ್ನು 'ಗಟಗಟ' ಹೀರಿ ತನ್ನ 'ಬೆಳಗ್ಗಿನ' ಕಾಫಿಯನ್ನು ಮುಕ್ತಾಯಗೊಳಿಸಿದಳು.

* * * *

ಕಾಳಿ ತನ್ನ ಬೆಳಗ್ಗಿನ ಕಾಫಿ ತೆಗೆದುಕೊಳ್ಳುವ ಹೊತ್ತಿಗೆ ಸುಮಾರು ಹನ್ನೊಂದು ಹನ್ನೊಂದೂವರೆ ಗಂಟೆಯೇ ಆಗಿತ್ತು. ನಂತರ ಅವಳು ಮೂರು ನಾಲ್ಕು ಹೊರೆ ಸೌದೆ ತಂದಳು; ಸ್ವಲ್ಪ ಅಕ್ಕಿ ಬೀಸಿದಳು; ತಿರುಗಿ ಮನೆಗೆ ನೀರು ಹೊತ್ತಳು. ಈ ಎಲ್ಲಾ ಕೆಲಸಗಳ ನಡುವೆ ಸೀರೆಯ ಕುರಿತಾದ ಅವಳ ಯೋಜನೆ ನಿರಾತಂಕವಾಗಿ ಸಾಗಿಯೇ ಇತ್ತು. ಕಟ್ಟಿಗೆಯ ಕೆಲಸ ಮಾಡುತ್ತಾ, ಸೂರ್ಯ ಬೇಗಬೇಗನೆ ನಡೆಯುವುದಿಲ್ಲವೆಂದು ಅದೆಷ್ಟೋ ಅವನನ್ನು ಬಯ್ದಿದ್ದಳು. ಕಲ್ಲು ತಿರುಗಿಸುತ್ತಾ ತನ್ನ ಬುದ್ಧಿಗೆ ಹೊಳೆದಂತೆ ಸೀರೆಯ ಕುರಿತಾಗಿ ಛಂದೋಬದ್ಧತೆಯನ್ನು ಧಿಕ್ಕರಿಸುವ ಕವನಗಳನ್ನು ಕಟ್ಟಿ ಹಾಡಿದಳು.

ಮುಸ್ಸಂಜೆಯಾಗುತ್ತ, ಮಕ್ಕಳ ಕೈಕಾಲು ತೊಳೆದು ಒಳಗೆ ಬಿಟ್ಟು ದನಗಳ ವ್ಯವಸ್ಥೆಗೆ ಕೊಟ್ಟಿಗೆಗೆ ಹೋದಳು. ದನಗಳನ್ನೆಲ್ಲ ಆಯಾ ಸ್ಥಳಗಳಲ್ಲಿ ಕಟ್ಟಿಹಾಕಿದ ನಂತರ ಕರಾನೆಯ ಹಸ-ಲಚ್ಚಿಯ ಎದುರಿಗೆ ಗಂಜಿಯಿಟ್ಟಳು. ಲಚ್ಚೀಹಸವೆಂದರೆ ಅವಳಿಗೆ ಬಲು ಮಮತೆ. ಅದರ ಮೈಸವರುತ್ತಾ ಮಾತನಾಡಿಸುವುದರಲ್ಲಿ ಅದೆಷ್ಟು ಹೊತ್ತಾದರೂ ಕೊಟ್ಟಿಗೆಯ ಜಿನುಗು ವಾಸನೆಯ ನಡುವೆ ಕಳೆಯುತ್ತಿದ್ದಳು. ಅವಳ ಇಬ್ಬರು ಗೆಳತಿಯರಲ್ಲಿ ಚೀತಿಯನ್ನು ಬಿಟ್ಟರೆ ಲಚ್ಚಿಯೇ ಎರಡನೆಯವಳು! ಒಬ್ಬಳು ಬಾಯಿಬಿಟ್ಟು ಮಾತಾಡಿದರೆ ಒಬ್ಬಳು ಮೂಕಭಾವದಿಂದ!– ಇಷ್ಟೇ ವ್ಯತ್ಯಾಸ ಅವಳಿಬ್ಬರ ಮೈತ್ರಿಯೊಳಗೆ!

ಸರಿ, ಆಕೆ ಮಡ್ಡಿ ಮೆಲ್ಲುತ್ತಿದ್ದ ಲಚ್ಚಿಯ ಕಿವಿಗಳನ್ನು ನೇವರಿಸಿ, ಮೈತೀಡುತ್ತಾ ಎಂದಳು "ನೋಡೇ ಲಚ್ಚಕ್ಕಾ! ನಾಳೆ ನಾನು ಹೊಸಸೀರೆ ಉಟ್ಟುಕೊಂಡು ಬರ್ತೀನಿ. ಆಗೇನಾದರು ನೀನು ನನ್ನನ್ನು ನೋಡಿ ಒಮ್ಮೆಲೆ ಹೆದರಿಕೋ ಬೇಡ, ತಿಳೀತೆ? ಎಚ್ಚರಿಕೆಗಾಗಿ ಮೊದಲೇ ತಿಳಿಸಿಬಿಟ್ಟಿದೀ ನಿಮ್ಮತ್ತೆ."

ಲಚ್ಚಿಗೆ ಅವಳ ಈ ಎಚ್ಚರಿಕೆಯ ನುಡಿ ಅದೆಷ್ಟರಮಟ್ಟಿಗೆ ಅರ್ಥವಾಗಿರಬಹುದು? ಅದರ ಸಾಕಷ್ಟು ದೊಡ್ಡದಾಗಿ ಬೆಳೆದಿದ್ದ ಕರು, ಮೊಲೆಯುಂಡು ಮುಗಿಸಿ ಆಗಲೇ ತನ್ನ ತಾಯ ಮುಖದಸನಿಯದಲ್ಲಿ ಬಂದು ನಿಂತಿತ್ತು. ಅದು, ತಾನೂ ತಾಯಿಗೆ ಸರಿಸಮಾನವಾಗಿ ಗಂಜಿ ತಿನ್ನಲು ಕಲಿತ್ತಿತ್ತು. ಮುಖವೆತ್ತಿದರೆ ಅದೆಲ್ಲಿ ಕರು ತನ್ನ ಗಂಜಿಗೆ ಮುಸುಡಿ ಊರಿಬಿಟ್ಟೀತೋ ಎಂದು ಅಂಜಿಕೆ, ಆ ತಾಯಿ ದನಕ್ಕೆ! ಆದ್ದರಿಂದ ಒಮ್ಮೆ ಗಂಜಿಗೆ ಬಾಯಿಕ್ಕಿದ ಆ ಹೊಟ್ಟೇಡುಮ್ಮಿ ಹಸು, ಅದನ್ನು ಪೂರ್ಣವಾಗಿ ಕುಡಿದುದೂ ಅಲ್ಲದೆ, ಪಾತ್ರೆಯ ಕರೆಬರೆಗಳಲ್ಲಿ ಅಂಟಿಕೊಂಡಿದ್ದ ತೌಡಿನ ಕಣಗಳನ್ನು ಕೂಡ ನೆಕ್ಕಿ ಆದ ಮೇಲೇನೆ ತನ್ನ ಮೊಗವನ್ನು ಮೇಲಕ್ಕೆತ್ತಿತು. ಅದು ಹಾಗೆ ಕುಡಿಯುತ್ತಿದ್ದಾಗ ಕಾಳಿ ಹೇಳಿದ ಮಾತು ಅದಕ್ಕೆ "ಕುಡಿ, ಲಚ್ಚಕ್ಕಾ, ಬೇಗ ಕುಡಿ! ನಿನ್ನ ಕರು ಎಲ್ಲಾದರು ಕುಡಿದುಬಿಟ್ಟೀತು, ಬೇಗ ಹೀರು!" ಎಂದು ಪ್ರೋತ್ಸಾಹಿಸಿ ನುಡಿದ ಹಾಗೆ ಕೇಳಿಸಿತ್ತು!

ಮುಸುಡು ಮೇಲಕ್ಕೆತ್ತಿದ ಬಳಿಕ ಅದು ಕಾಳಿಯನ್ನು ನೋಡಿತು. ಅದರ ನೋಟದಲ್ಲಿ ಈ ಭಾವ ಅಡಗಿತ್ತು—ಏನು? ಇನ್ನೂ ಉಂಟೇ, ಅಲ್ಲಾ ಮುಗಿಯಿತೇ?—ಎಂದು!

ಈಗ ಕಾಳಿಗಾದರೂ ಅದರ ಆ ನೋಟದ ಅರ್ಥವಾಗಿರಬಹುದೆ?— ಆಕೆ ಭಾವಿಸಿದಳು—ಲಚ್ಚಿ ತನ್ನ ಮಾತನ್ನು ಧ್ಯಾನಪೂರ್ವಕವಾಗಿ ಕೇಳಿತು; ಈಗ ತಿರುಗಿ ಮತ್ತೇನೋ ಕೇಳಬಯಸುತ್ತಿದೆ—ಎಂದು! ಅಂತೇ ಅವಳು ಮತ್ತೊಮ್ಮೆ ಎಚ್ಚರಿಸಿದಳು!— "ಲಚ್ಚೇ ಕೇಳಿಸಿತಲ್ಲವೇ ನಾನು ಹೇಳಿದ್ದು? ಎಲ್ಲಾದರೂ ಮರೆತುಬಿಟ್ಟೀಗಿಟ್ಟೀ ನೋಡು ಮತ್ತೇ..." ಹೀಗೆಂದು ಹೇಳಿ ಅವಳು ಕರುವನ್ನು ಬೇರೊಂದೆಡೆ ಕಟ್ಟಿಹಾಕಿ, ಗಂಜಿಯ ತೊಟ್ಟಿಯನ್ನೆತ್ತಿಕೊಂಡು ಹೋಗಿ ಅಡುಗೆಮನೆಯ ಜಗುಲಿಯ ಮೇಲಿಟ್ಟು ತನ್ನ ಕೊಟ್ಟಿಗೆಗೆ ಹೊರಟಳು.

ಸಂಧ್ಯೆ ಕತ್ತಲುಗಟ್ಟಿದ್ದಳು; ಹತ್ತಿರದ ಮನುಷ್ಯರೂ ಅಸ್ಪಷ್ಟವಾಗಿಯೆ ಕಾಣುವ ಹೊತ್ತು. ಕಾಳಿ ಅಂಗಳಕ್ಕಾಗಿ ತನ್ನ ಕೊಟ್ಟಿಗೆಗೆ ಹಾದುಹೋ

ಗುತ್ತಾ ಮನೆಯ ಚಾವಡಿಯಿಂದ ಯಾರೋ ಅವಳನ್ನು "ಕಾಳಿ, ಇಲ್ಲಿ ಬಾ" ಎಂದು ಕರೆದರು. ಅವಳಿಗೆ ಆ ಧ್ವನಿ ಚಿರಪರಿಚಿತವಾದುದು—ಅದೇ ಅವಳ ಅಯ್ಯನ ಧ್ವನಿ! ಅದನ್ನು ಕೇಳುತ್ತಲೇ ಕಾಣದ ಸ್ವರ್ಗ ಅವಳ ಅಂಗೈಯೊಳಕ್ಕೇ ಬಂತು! ಲಗುಬಗೆಯಿಂದ ಚಾವಡಿಯ ಮೆಟ್ಟಲನ್ನೇರಿ ಅದರ ಕಂಬಕ್ಕೆ ಒರಗಿ ನಿಂತು, "ಯಾರು, ಅಯ್ಯ?" ಎಂದಳು.

"ಹೌದು ಕಾಳಿ; ನಾನೇ" ಎಂದುತ್ತರಕೊಟ್ಟ, ಆಗಷ್ಟೇ-ಚಾವಡಿಯನ್ನು ಹೊಕ್ಕು ಬಟ್ಟೆ ಕಳಚುತ್ತಿದ್ದ ವೆಂಕಣ್ಣ. ಹೀಗೆ ಹೇಳಿ ಅವನು "ಲೇ ಒಂದು ದೀಪ ತಾರೇ" ಎಂದು ಕೂಗಿದ.

ಅವನ ಹಿರಿಯ ಹುಡುಗಿ ಒಂದು ಕೈದೀಪ ತಂದಿಟ್ಟಳು. ಅದರ ಮಂದ ಪ್ರಕಾಶದಲ್ಲಿ, ಚಾವಡಿಯಲ್ಲಿ ಇನ್ನೊಂದು ವ್ಯಕ್ತಿ ಗೋಚರಿಸಿದ; ಕೂಲಿಯೊಬ್ಬ ತನ್ನ ಮುಂಗಡೆ ಗೋಣಿಚೀಲದ ಗಂಟಿಟ್ಟುಕೊಂಡು ಗೋಡೆಗೆ ಒರಗಿ ಕೂತು ಕಣ್ಣುಗಳನ್ನು ಮಿಕಿಮಿಕಿ ಮಿಟುಕಿಸುತ್ತಿದ್ದ! ವೆಂಕಣ್ಣ, "ನಿನಗೆ ಒಪ್ಪಿದ ಮ್ಹಾಲುಗಳನ್ನೇ ತಂದಿದ್ದೇನೆ, ಕಾಳಿ" ಎಂದು, ಕುರ್ಚಿಯಲ್ಲಿ ಕುಳಿತು ಬೂಟುಗಳನ್ನು ಕಳಚುತ್ತ ಆ ಆಳಿಗೆ ಆಜ್ಞೆಮಾಡಿದ, "ಲೇ ಆ ಚೀಲವನ್ನು ಬಿಚ್ಚಿ ಸಾಮಾನುಗಳನ್ನು ಹೊರತೆಗೆಯೊ." ಎಂದು. ಕೂಡಲೆ ಆಕೆ ಚೀಲದ ಬಾಯನ್ನು ಸಡಿಲಿಸಿ ಕಾಳಿಯ ಹುತ್ತರೀಹಬ್ಬದ ಮ್ಹಾಲುಗಳನ್ನು ಹೊರತೆಗೆದ—ಎರಡು ಮೊಸಳೆಮಾರ್ಕಿನ ಗುದ್ದಲಿಗಳು ಮತ್ತು ಮೂರು ಉಕ್ಕಿನ ಕತ್ತಿಗಳು! "ಹೇಗಿವೆ ಕಾಳಿ, ಮ್ಹಾಲುಗಳು? ಕೈಯಲ್ಲಿ ಹಣವೇ ಇರಲಿಲ್ಲ. ಆದರೂ ನಿನ್ನ ಪುಕಾರುಕೇಳಿ ಭಾರಿ ಕ್ರಯಕ್ಕೆ ಸಾಲಮಾಡಿಯೇ ತಂದೆ. ತುಂಬಾ ಜೋಪಾನದಿಂದ ಇಟ್ಟುಕೊಳ್ಳಬೇಕು, ನೋಡು. ಆಸಲು ಕ್ರಯವಲ್ಲದೆ ಬಸ್‌ಸ್ಟ್ಯಾಂಡಿನಿಂದ ಇಲ್ಲಿವರೆಗೆ ಹೊತ್ತುಕೊಂಡು ಬರಲು ಈತನಿಗೆ ಒಂದು ರೂಪಾಯಿ ಕೂಲಿ, ಅದರ ಮೇಲೆ ರಾತ್ರಿಯ ಊಟ, ಬೆಳಗಿನ ಕಾಫಿ ಎಲ್ಲಾ ಕೊಡಬೇಕು. ಇಷ್ಟೆಲ್ಲಾ ಖರ್ಚುಮಾಡಿಸಿದ್ದಕ್ಕೆ ಎಷ್ಟು ವರ್ಷ ಬಾಳಿಕೆ ಬರಿಸ್ತೀಯೋ ನೋಡುತ್ತೇನೆ" ಎಂದು ಹೇಳಿ, ವೆಂಕಣ್ಣ ಉತ್ತರಕ್ಕಾಗಿ ಕಾಳಿಯ ಮೊಗವನ್ನು ದಿಟ್ಟಿಸಿದನು.

ಕಾಳಿ ಇದಕ್ಕೆ ಉತ್ತರಕೊಡಬೇಕೆಂದು! ಅವಳ ಸುತ್ತಲೂ ಹಬ್ಬಿದ್ದ ಹಗಲುಗನಸಿನ ಸಾಮ್ರಾಜ್ಯವು ಮೆಲ್ಲಮೆಲ್ಲನೆ ಕರಗುತ್ತ, ಅವಳು ಸಂಪೂರ್ಣ ಎಚ್ಚರಗೊಂಡಳು. ಆಗ ಅವಳು, ಆ ಕೂಲಿಯ ಮೈಯನ್ನು ನೋಡಿ ತನ್ನ

ಮೈಯನ್ನು ನೋಡಿಕೊಂಡಳು; ಆತನ ಮೈಮೇಲಿನ ಬಟ್ಟೆಯನ್ನು ನೋಡಿ ತನ್ನ ಮೈಮೇಲಿನ ಬಟ್ಟೆಯನ್ನು ನೋಡಿಕೊಂಡಳು. ಆದುದರಿಂದ, ಆತನಿಗಿಂತ ತಾನು ಸುಖಿ, ಎಂಬ ಅರಿವು ಅವಳಿಗಾಯಿತೋ ಏನೋ, ತನ್ನ ಅಯ್ಯನ ಪ್ರಶ್ನೆಗೆ ಉತ್ತರವಾಗಿ ತುಟಿಗಳಂಚಿನಲ್ಲಿ ಕಿರುನಗೆಯೊಂದನ್ನು ಮಿಂಚಿಸಿ, ಅವಳು ಚಾವಡಿಯ ಪಾವಟಿಗೆಗಳನ್ನು ಮೆಲ್ಲಮೆಲ್ಲನೆ ಇಳಿಯತೊಡಗಿದಳು.

"ಮನುಷ್ಯನೆಂದಮೇಲೆ ಅವನು ಎಂತಹವನೇ ಇರಲಿ, ಏಳುವ ಸ್ಥಿತಿಯಲ್ಲಾಗಲಿ, ಬೀಳುವ ಸ್ಥಿತಿಯಲ್ಲಾಗಲಿ ತನ್ನ ಜನ್ಮದ ಮೇಲ್ಮೆಯನ್ನು ತುಸುವಾದರೂ ಪ್ರಕಟಿಸುತ್ತಾನೆ" ಎಂದು ನಮ್ಮ ತಾತ ಹೇಳಿದ ಮಾತನ್ನು ಇಲ್ಲಿ ಹೇಗೆ ತಾನೇ ಜ್ಞಾಪಿಸಿಕೊಳ್ಳದಿರಲಾದೀತು?

ವರನ ಫೋಟೋಗ್ರಾಫ್

ಸಂಜೆ ಸುಮಾರು ನಾಲ್ಕು ಗಂಟೆಯಿರಬಹುದು. ಬ್ಯಾಂಡುಗಳ ಧ್ವನಿ ನಿಂತಿತು.

ನೆರೆದಿದ್ದ ಅತಿಥಿವೃಂದದಲ್ಲಿ ಗುಲ್ಲೆದ್ದಿತು.

ಈ ಗುಲ್ಲು ಮತ್ತಾವುದಕ್ಕೂ ಅಲ್ಲ, ತಂತಮ್ಮ ಮನೆಗಳಿಗೆ ಹೊರಡುವ ಅವಸರದಲ್ಲಿ. ಎಲ್ಲರೂ ನಾರಾಯಣ ಶೆಟ್ಟರಲ್ಲಿ ಹೇಳಿಯೊ ಬೇರೆ ಬೇರೆ ದಾರಿ ಹಿಡಿದು ಹೊರಟುಹೋದರು.

ಕೆಲವೇ ಸಮಯದಲ್ಲಿ ಗಲಗಲವೆನ್ನುತ್ತಿದ್ದ ಶೆಟ್ಟರ ಶೋಭಾಯಮಾನವಾದ ಬಂಗಲೆ ಭಣ ಭಣ ಎನ್ನತೊಡಗಿತು; ಅತ್ತಿಂದಿತ್ತ ಓಡಾಡುತ್ತಿದ್ದ ಇಬ್ಬರು ಮೂವರು ಸೇವಕರ ಕೇಕಾರವವಷ್ಟೇ ಕೇಳಿಬರುತ್ತಿತ್ತು—ಖಾಲಿ ಬಿಂದಿಗೆಯ ಬಾಯಿಗೆ ಮುಖವಿಟ್ಟು ಕೂಗಿದರೇರ್ಪಡುವ ದನಿಯಂತೆ.

ಬಂಗಲೆಯ ಪ್ರಶಸ್ತಕವಾಗಿದ್ದ ಹಾಲಿನ ಮಧ್ಯಭಾಗದಲ್ಲಿ, ಒಂದು ಉರುಟು ಮೇಜಿಯನ್ನು ಬಳಸಿ ನಿಂತಿದ್ದುವು ಕೆಲವು ಕುರ್ಚಿಗಳು. ಅವುಗಳಲ್ಲೊಂದರಲ್ಲಿ ನಾರಾಯಣ ಶೆಟ್ಟರ ಗಾಢಮಿತ್ರ ಹುಚ್ಚು ಗಣೇಶ ಕೂತಿದ್ದ.

ಶೆಟ್ಟರು ಏನೇನೋ ವಟಗಟ್ಟುತ್ತ, ಹಾಲಿನ ಆ ತುದಿಯಿಂದ ಈ ತುದಿಗೆ ಸ್ವಲ್ಪ ಬಿರುಸಾಗಿಯೇ ಶತಪಥ ಹಾಕುತ್ತಿದ್ದರು. ಅವರ ಸೌಮ್ಯಮುಖದಲ್ಲೂ ಕೂಡ ಈ ಹೊತ್ತು ಹುಬ್ಬು ಗಂಟಿಕ್ಕಿತ್ತು; ಅದಾವುದೋ ಒಂದು ಅವಮಾನಾಸ್ಪದವಾದ ಕೋಪ ತಾಂಡವವಾಡುತ್ತಿತ್ತು. ವಟಗುಟ್ಟುವಿಕೆಗೆ ಸರಿಯಾಗಿ ಕೈಗಳಲ್ಲಿ ಅದೇನೇನೋ ಸಂಜ್ಞೆಗಳನ್ನು ಮಾಡುತ್ತ ತಮ್ಮನ್ನು ತಾವೇ ಸಂತೈಸಿಕೊಳ್ಳುತ್ತಿರುವಂತೆ ತೋರುತ್ತಿದ್ದರು.

ಅವರ ಈ ಚರ್ಯೆಯನ್ನು ಅವಾಕ್ಕಾಗಿ ನೋಡುತ್ತಿದ್ದ ಹುಚ್ಚುಗಣೇಶ.

ಒಮ್ಮಿಂದೊಮ್ಮೆಲೆ ಶೆಟ್ಟರು ತಮ್ಮ ಎಡೆಯಾಡುವಿಕೆಯನ್ನು ನಿಲ್ಲಿಸಿ, ಬಂದು, ಕುರ್ಚಿಯೊಂದರಲ್ಲಿ ಕುಸಿದರು. ಮತ್ತು ಸ್ನೇಹಿತನನ್ನು ಕುರಿತು ಹೇಳಿದರು:

"ನೋಡು, ಗಣಿ! ಈ ಹುಡುಗಿಯಿಂದಾಗಿ ಇಷ್ಟು ಸಮಯಕ್ಕೆ ಈ ದಿನ ನನ್ನ ಮರ್ಯಾದೆಗೆ ಮಣ್ಣುಬಡಿಯಿತು."

ಅಲ್ಲ; ವಿನತಾಕುಮಾರಿಗೆ ಅದೇನು ಹಿಡಿಯಿತಂತಾ? ಚೆಲೋ ಮತಿ ವಂತೆಯಾಗಿದ್ದಳಂತಲ್ಲ, ಆಕೆ?" — ವ್ಯಸನದ ಮುದ್ರೆಯೊತ್ತಿ ಗಣೇಶನೆಂದ.

"ಅದೇನೋ ಅವಳ ಮತಿಕೆಟ್ಟಿರಬೇಕು. ಅಂತಲೇ ತಂದೆಯ ಗೌರವಕ್ಕೆ ಎಲ್ಲಿಲ್ಲದ ಕಳಂಕ ಹಚ್ಚಿದ್ದಾಳೆ, ಹತ್ತುಜನರ ಮುಂದೆ. ಇಲ್ಲವಿದ್ದರೆ...."

"ಇಲ್ಲದಿದ್ದರೆ ಇಂಥಾ ಕೂಟದಲ್ಲಿ ಬಹಿರಂಗವಾಗಿ..."

"ಕೋಮಟಿ ನುಂಗಣ್ಣ, ಬಂದವರ ದುಡ್ಡು ಸುಲಿಯುವವ, ದುಂದು ವೆಚ್ಚ ಮಾಡುವವ ಎಂದೆಲ್ಲ ಸ್ವಂತ ಮಗಳಾದವಳು ಹೇಳಿಯಾಳೇ?....ನೋಡಪ್ಪಾ, ಗಣಿ; ಅವಳು ಹೀಗೆಲ್ಲಾ ಅನ್ನೋದಕ್ಕೆ ನಾನೆಂದಾದರೂ ಕಂಟ್ರೋಲ್ ದರ ವಿಾರಿ ಜವಳಿಯಾಗಲಿ, ಜೀನಸಾಗಲಿ ಮಾರಿದ್ದೇನೊ? ಇಲ್ಲ, ಹಾಗೆ ಮಾರುವುದಕ್ಕಾದರೂ ಆಸ್ಪದವಿದೆಯೇನಣ್ಣಾ? ಅಥವಾ ಇದ್ದರೂ ಅದು ನ್ಯಾಯವೇನು? ನಾನಂಥ ಯಾವ ಅನ್ಯಾಯಕ್ಕೂ ಹೋಗಿಲ್ಲ. ನಾನಾರ್ಜಿಸಿದುದೆಲ್ಲವೂ ಧರ್ಮದ್ದು, ನ್ಯಾಯದ್ದು ಎಂತ ಆತ್ಮಸಾಕ್ಷಿಯಾಗಿ ನುಡಿಯುತ್ತಿದ್ದೇನೆ. ಏನು? ನನ್ನ ಆತ್ಮವನ್ನು ನಾನರಿಯೆನೆ?"

"ನೀನೆಂಥಾ ಮನುಷ್ಯನಿದ್ದೀ ಎಂಬುದು ನನಗೆ ಗೊತ್ತಿಲ್ಲವೇನಪ್ಪ, ನಾಣ? ಆದರೂ ನನಗೆನಿಸುತ್ತದೆ......"

"ಏನು?"

"ಮುಖ್ಯತಃ ನೀನೇ ಈ ಅವಾಂತರವನ್ನು ಬರಮಾಡಿಸಿಕೊಂಡೆ ಅಂತ:......"

"ಅದು ಹೇಗೆ?"

"ಅದು ಹೇಗಾಂತ ಕೇಳ್ತೀಯಾ? ನೋಡು, ನಿನಗಿರುವುದು ಒಬ್ಬಳೇ ಮಗಳಾಗಲಿ, ಅರ್ಧವೇ ಆಗಿರಲಿ; ಬೇಕಾದರೆ ಆಕೆ ಬಿ. ಎ. ಪರೀಕ್ಷೆಯಲ್ಲಿ ಪ್ರಥಮ ಶ್ರೇಣಿಯಲ್ಲೇ ಉತ್ತೀರ್ಣಳಾಗಿರಲಿ, ಬಿಡಲಿ — ಅದರ ಸಂತೋಷಾರ್ಥವಾಗಿ ನೀನೀ ಚಹಾಕೂಟವನ್ನು ಏರ್ಪಡಿಸಬಾರದಿತ್ತು. ಏರ್ಪಡಿಸಿದ್ದರೂ ಅವಳ ಇಚ್ಛೆಗೆ ವಿರುದ್ಧವಾಗಿ ಮುಂದೆ ಓದುವಂತೆ ಆಕೆಯನ್ನು ಬಲವಂತಪಡಿಸಬಾರದಿತ್ತು. ಬಲವಂತಪಡಿಸಿದ್ದರೂ, ಅದು ಅಂತರ್ಯದಲ್ಲಲ್ಲದೆ ಹೀಗೆ ಬಹಿರಂಗದಲ್ಲಾಗಬಾರದಿತ್ತು. ನೀನು ಇದೊಂದನ್ನು ಗಮನಿಸದೆ ದುಡುಕಿದ್ದರಿಂದಲೇ ಅವಳು ರೊಚ್ಚಿಗೆದ್ದು ಬಾಯಿಗೆ ಬಂದಂತೆಲ್ಲಾ ನುಡಿದು ಬಿಟ್ಟು ಹೋದಳು."

"ಹಾಗಾದರೆ, ನಾನು ದುಡುಕಿದೆ ಅಂತ ಹೇಳ್ತಿದ್ದೀಯಾ ನೀನು? ದುಡುಕಿಯೂ ಇಲ್ಲ, ಏನೂ ಇಲ್ಲ. ತಿಳಿದೇ ಮಾಡಿದ್ದೇನೆ. ಎಷ್ಟೋ ಸಲ ಹೇಳಿ ನೋಡಿದೆ: ಓದು, ಮಗು, ಓದು. ಓದಿ, ನನಗೆ ಕೀರ್ತಿ ತಾ. ನಾನು ಸಂಪಾದಿಸಿದ ಹಣಕ್ಕೊಂದು ರೂಪ ಕೊಡು ಅಂತ ಕೇಳಲಿಲ್ಲಾಕೆ. ಕೊನೆಗೆ ನಾಲ್ಕು ಜನರ ಮುಂದೆ ಹೇಳಿದರೆ ದಾಕ್ಷಿಣ್ಯಕ್ಕಾದರೂ ಒಪ್ಪಿಯಾಳೆಂದು ಭಾವಿಸಿ ಹಾಗೆ ಅಂದೆನಷ್ಟೆ. ಆದರೆ ಅವಳು ಇಂಥಾ ಶಬ್ದಗಳನ್ನೆಲ್ಲ ಉಚ್ಚರಿಸಿಯಾಳೆಂದು ನಾನು ಕನಸಿನಲ್ಲಿಯೂ ನೆನಸಿರಲಿಲ್ಲ......."

"ಮುಂದಿನ ಅಧ್ಯಯನದಲ್ಲಿ ಆಕೆಗೇ ಇಚ್ಛೆ ಇಲ್ಲದಿದ್ದ ಮೇಲೆ ನೀನು ನಿರ್ಬಂಧಪಡಿಸಿದೆಯಾದರೂ ಯಾಕೆ? ಖತಿಗೊಂಡ ಮನುಷ್ಯ ವಿಚಾರಶೂನ್ಯನಾಗುತ್ತಾನೆ. ವಿನತಾಳಾದರೂ ನಿನ್ನ ನಿರ್ಬಂಧದಿಂದ ಶಿಠಗೊಂಡಿರಬೇಕು. ಇಲ್ಲದಿದ್ದರೆ ಅವಳೆಂದೂ ಹಾಗೆ ಸಿಡಿದೇಳುತ್ತಿರಲಿಲ್ಲ. ಅದಿರಲಿ; ಅಧ್ಯಯನ ನಿಲ್ಲಿಸಿ ಮುಂದೆ ಏನು ಮಾಡುತ್ತಾಳಂತೆ, ಆಕೆ?"

"..........." ಶೆಟ್ಟರು ಕಿಟಿಕಿಯಿಂದಾಚೆ, ದೂರದ ಕ್ಷಿತಿಜವನ್ನು ದಿಟ್ಟಿಸುತ್ತಿದ್ದರು.

ಶಹರದ ಹೆಸರಾಂತ ಮಾರವಾಡಿಗಳೂ ಜಿನಸು ವ್ಯಾಪಾರಿಗಳೂ ಆದ ನಾರಾಯಣ ಶೆಟ್ಟರು, ತಮ್ಮ ಹಣದಬಲದಿಂದ ಬೇಕಾದರೆ ಆಧುನಿಕ ಕಾಲದ ಹರಿಶ್ಚಂದ್ರನೊಬ್ಬನ ಸತ್ಯವನ್ನು ನಿರಾತಂಕವಾಗಿ ಕಾಯುವಷ್ಟು ಶಕ್ತರಾಗಿದ್ದರು. ಇದರ ಜೊತೆಗೆ ವಿದ್ಯಾಪಕ್ಷಪಾತಿಗಳು ಬೇರೆ ಆಗಿದ್ದರು. ಅಂಥವರು ತಮ್ಮ ಮಗಳು ಹೆಚ್ಚು ಓದಬೇಕೆಂದು ಆಶಿಸಿದುದರಲ್ಲಿ ಆಶ್ಚರ್ಯವೇನೂ ಇಲ್ಲ. ಮಗಳು ಎಂ. ಎ. ಪ್ಯಾಸುಮಾಡಿ, ಅದರ ಮೇಲೆ ಎಲ್. ಎಲ್. ಬಿ. ಆಗಬೇಕೆಂದು ಅವರ ಬಯಕೆಯಾಗಿತ್ತು.

ಆದರೆ, ಆಗಷ್ಟೇ ಬಿ. ಎ ಯನ್ನು ಉತ್ತಮರೀತಿಯಲ್ಲಿ ಮುಗಿಸಿದ್ದ ವಿನತಾಕುಮಾರಿ ಮಾತ್ರ ಮುಂದಿನ ವ್ಯಾಸಂಗದಲ್ಲಿ ಲೇಶವಾದರೂ ಆಸಕ್ತಿ ತೋರಿಸುತ್ತಿರಲಿಲ್ಲ. ಅನುಕರಣೆಯಿಂದಲೋ, ಅಥವಾ ಇನ್ನಾವುದೋ ದೃಷ್ಟಿಯಿಂದಲೋ ರಾಜಕೀಯದಲ್ಲಿ, ಸಮಾಜಸೇವೆಯ ಕೆಲಸಗಳಲ್ಲಿ ತೊಡಗಲು ಮನಸ್ಸು ಮಾಡಿದ್ದಳು. ಅವಳ ಈ ಅಭಿಪ್ರಾಯವನ್ನು ಕೇಳಿ ಶೆಟ್ಟರಿಗೆ ತುಂಬಾ ಕಸಿವಿಸಿಯಾಯಿತು. ಅವರಿಗೆ, ಅವಳು ಮುಂದೆಬೇಕಾದರೆ ಓದದೆ ಸುಮ್ಮನೆ ಮನೆಯಲ್ಲಿ ಕುಳಿತಿದ್ದರೂ ಪರವಾಯಿದ್ದಿಲ್ಲ; ಆದರೆ 'ರಾಜಕೀಯ' ಎಂಬ ಶಬ್ದ ಕೇಳಿದೊಡನೆ ಅವರ ಮೈ ನಡುಗಿತು. ರಾಜಕೀಯದ ಬಲೆ

ಯಿಂದ ದೂರವಿರಲು ಅವಳ ಮನಸ್ಸನ್ನು ಹೇಗಾದರೂ ಮಾಡಿ ಓದಿನ ಕಡೆಗೆ ತಿರುಗಿಸಲು ಅವರು ಶತಪ್ರಯತ್ನ ಮಾಡಿದ್ದರು. ಆದರೆ ಅದರ ಫಲ ಹೀಗೆ ಕೊನೆಗೊಳ್ಳಲು, ಬೇರಿನ್ನಾವದಾರಿಯಿದೆ—ಎಂದು ಅವರು ಚಿಂತೆಗೀಡಾಗಿದ್ದರು.

ಹುಚ್ಚು ಗಣೇಶ!

ಈ ಹೆಸರನ್ನು ಕೇಳಿ ಯಾರೇ ಆಗಲಿ, ನಗಬಹುದು. 'ಗಣೇಶ'ದ ಮೇಲೊಂದು ಆ 'ಹುಚ್ಚು' ಎಂಬ ನಾಮವಿಶೇಷಣ ಯಾಕೆಂದು ಸೋಜಿಗ ಪಡಬಹುದು.

ಈ ಹೆಸರಿನ ಕತೆಯೊಂದು ವಿಚಿತ್ರ!—ಆದರೂ ಸಾಮಾನ್ಯವಾದುದು!

ನಾರಾಯಣ ಶೆಟ್ಟರು ಮತ್ತು ಗಣೇಶರಾಯರು (ಆ ಮೇಲೆ, ಇತ್ತೀಚೆಗೆ ಅವರು 'ಶು'-ರಿಂದ 'ನು'-ಗೆ ಬಂದರು,) ಬಾಲ್ಯ ಸ್ನೇಹಿತರು; ಸಹಪಾಠಿಗಳು. ಹೈಸ್ಕೂಲ್ ಶಿಕ್ಷಣ ಮುಗಿದನಂತರ ಶೆಟ್ಟರು ತಮ್ಮ ತಂದೆಯ ಬಯಕೆಯಂತೆ ಆನುವಂಶಿಕ ವೃತ್ತಿಯಲ್ಲಿ ತೊಡಗಿ ಉತ್ಕರ್ಷಹೊಂದಿದರು.

ಗಣೇಶರಾಯರು ಕಾಲೇಜು ಪ್ರವೇಶಮಾಡಿದರು. ಅವರು ಎಳೆಯರಿದ್ದಾಗಲೇ ಕತೆ, ಕವನ, ಲೇಖನ ಮುಂತಾದುವುಗಳನ್ನು ಬರೆಯುತ್ತಿದ್ದು, ಎಂ. ಎ. ಪದವೀಧರರಾಗಿ ಕಾಲೇಜದಿಂದ ಹೊರಬಿದ್ದಾಗ ಪ್ರಸಿದ್ಧ ಕವಿ ಮತ್ತು ಲೇಖಕರೆಂದು ಪತ್ರಿಕಾಪ್ರಪಂಚದಲ್ಲಿ ಖ್ಯಾತಿಗೊಂಡರು.

ಆದರೆ ಅವರ ಈ ಖ್ಯಾತಿ ಮಣ್ಣುಪಾಲಾಗುವ ಘಟನೆಯೊಂದು ಘಟಿಸಿತು.

ಕಾಲೇಜದಲ್ಲಿದ್ದಾಗ ಸಹಪಾಠಿ ತರುಣಿಯೋರ್ವಳ ಕೂಡೆ ಅವರ ಪ್ರಣಯ ಬೆಳೆದಿತ್ತು. ಇವರು ಕಾಲೇಜು ಬಿಟ್ಟನಂತರ ಕೆಲಸಮಯದಲ್ಲೇ ಆ ತರುಣಿ, ತನ್ನ ತಂದೆ-ತಾಯಿಗಳ ಒತ್ತಾಯಕ್ಕೆ ಕಟ್ಟುಬಿದ್ದು ಬೇರೊಬ್ಬನನ್ನು ವರಿಸಬೇಕಾಯಿತು. ಆಕೆಯ ಪ್ರಣಯಕ್ಕಾಗಿ ತಮ್ಮ ಹೃದಯವನ್ನೇ ಅರ್ಪಿಸಿದ್ದ ಇವರು ಭ್ರಾಂತರಾದರು.

ಕ್ರಮೇಣ ಈ ಪ್ರಣಯದ ಹುಚ್ಚು ಬೆಳೆಯುತ್ತಾ ಹೋಗಿ ಅವರು ಪೂರಾ ಹುಚ್ಚರೇ ಆಗಿಹೋದರು. ತಮ್ಮ ಪ್ರೇಯಸಿ ತಮ್ಮನ್ನು ಮರೆತವಳಂತೆ ಇನ್ನೊಬ್ಬನೊಡನೆ ಸುಖದಿಂದಿದ್ದರೂ ತಾವು ಮಾತ್ರ ಲಗ್ನವಾಗದೇನೇ ಉಳಿದರು. ಲಗ್ನವಾಗಿದ್ದರೆ ವಿನತೆಯ ಓರಿಗೆಯ ಮಕ್ಕಳಿರಬೇಕಿತ್ತು, ಅವರಿಗೆ.

ಹುಚ್ಚರೆಂದರೆ ಅವರು ಯಾವಾಗಲೂ ಹುಚ್ಚರೇ ಆಗಿರುತ್ತಿರಲಿಲ್ಲ; ಕೆಲವೊಮ್ಮೆ ದಿನಗಟ್ಟಲೆ ಅವರ ಬುದ್ಧಿ ನೆಟ್ಟಗಿರುತ್ತಿತ್ತು. ಆವಾಗಲೆಲ್ಲಾ ಅವರು ಬರೆಯುತ್ತಿದ್ದ ಕವನ ಮತ್ತು ಲೇಖನಗಳು ಪ್ರಭಾವಪೂರ್ಣವಾಗಿರುತ್ತಿದ್ದುವಾದರೂ ಮತಿಭ್ರಂಶವಾದಾಗ ಅವುಗಳೆಲ್ಲ ಬೆಂಕಿಗೆ ಆಹುತಿಯಾಗುತ್ತಿದ್ದುವು. ಪೂರ್ವಸ್ಥಿತಿಗೆ ಬಂದಾಗ ತಮ್ಮ ಕೃತಿನಾಶಕ್ಕಾಗಿ ತುಂಬಾ ಮರುಗುವರು. ಕೆಲವೇಳೆ ಬರೆದಾಕ್ಷಣ ಅದನ್ನು ಪೆಟ್ಟಿಗೆಯಲ್ಲಿಟ್ಟು, ಬೀಗಜಡಿದು, ಬೀಗದಕೈಗಳನ್ನು ಅಡಗಿಸಿಡುತ್ತಿದ್ದರು. ಅನ್ಯರು ಅಡಗಿಸಿಟ್ಟರೆ ಅದೊಂದು ತೆರ. ಇದು–ತಾನೇ ಅಡಗಿಸಿಟ್ಟರೆ, ಹುಚ್ಚುತನ ಬಂದಾಗ ಸ್ಪಷ್ಟವಾಗಿ ಗೋಚರಿಸುವುದಲ್ಲವೇ ? ಅಂತು ಏನು ಮಾಡಿದರೂ ಅವರ ಸಾಹಿತ್ಯಕೃತಿಗಳು ಗ್ರಂಥರೂಪವನ್ನು ತಾಳಲೇ ಇಲ್ಲ.

ಸುಸ್ಥಿತಿಯಲ್ಲಿರುತ್ತಿದ್ದಾಗಲೂ ಅವರಾಡುತ್ತಿದ್ದ ಮಾತುಗಳನ್ನು ಜನ ಗಾಳಿಯಲ್ಲಿ ತೂರಿಬಿಡುತ್ತಿದ್ದರು. ಯಾರಿಗೂ ಅವರಲ್ಲಿ ವಿಶ್ವಾಸವಿಲ್ಲ, ಗೌರವವಿಲ್ಲ. ಎಂಥಾ ಸಾಮಾನ್ಯ ವ್ಯಕ್ತಿಯ ದೃಷ್ಟಿಯಲ್ಲೂ ಈ ಹತಭಾಗ್ಯ ವಿದ್ಯಾವಂತ ಲಘುಪದಾರ್ಥವಾಗಿಯೇ ಉಳಿದಿದ್ದ. ಎಲ್ಲರೂ ಅವರನ್ನು ಕ್ರಮವಾಗಿ ಗಣೇಶ, ಹುಚ್ಚುಗಣೇಶ–ಕಡೆಗೆ ಹುಚ್ಚನೆಂದೇ ಕರೆಯತೊಡಗಿದರು.

ಅವರ ವ್ಯಕ್ತಿತ್ವವನ್ನು ಸರಿಯಾಗಿ ಅರಿತುಕೊಂಡು, ಅವರ ವಿಚಾರಶೀಲಾತ್ಮಕ ಮಾತುಗಳಲ್ಲಿ ನಂಬಿಗೆಯಿಡುತ್ತಿದ್ದವರೆಂದರೆ ನಾರಾಯಣ ಶೆಟ್ಟರೊಬ್ಬರು ಮಾತ್ರ. ಅವರಿಬ್ಬರು ಅತಿಯಾದ ಸಲುಗೆಯಿಂದ ಒಬ್ಬರನ್ನೊಬ್ಬರು 'ನಾಣಿ' ಮತ್ತು 'ಗಣಿ' ಎಂದು ಕರೆದುಕೊಳ್ಳುತ್ತಿದ್ದರು. ಬುದ್ಧಿ ನೆಟ್ಟಗಿರುವಾಗ ಅವರು ತಮ್ಮ ಹೆಚ್ಚಿನ ವೇಳೆಯನ್ನು ಶೆಟ್ಟರೊಂದಿಗೇ ಕಳೆಯುತ್ತಿದ್ದರು.

ಈಗ ನಾವೂ ಸಾಮಾಜಿಕರೊಡನೆ ಸೇರಿಕೊಂಡು ಗಣೇಶರಾಯರನ್ನು 'ಹುಚ್ಚುಗಣೇಶ' ಎಂದೇ ಕರೆಯೋಣ.

ಶೆಟ್ಟರು ತನ್ನ ಪ್ರಶ್ನೆಯ ಕಡೆಗೆ ಗಮನವೀಯದ್ದನ್ನು ನೋಡಿ, ಅವನು ಅವರನ್ನು ಗಾಢವಾಗಿ ಅಲುಗಾಡಿಸಿ, ಮೊದಲಿನಂತೆಯೇ ಪ್ರಶ್ನಿಸಿದ.

ಯೋಚನಾಸುಳಿಯಲ್ಲಿ ತಮ್ಮನ್ನು ತಾವೇ ಮರೆತಿದ್ದ ಶೆಟ್ಟರು ಕನಸಿನಿಂದೆಚ್ಚೆತ್ತವರಂತೆ ದೂರದಲ್ಲೆಲ್ಲೋ ನೆಟ್ಟಿದ್ದ ದಿಟ್ಟಿಯನ್ನು ಅವನ ಮೇಲೆ ಹರಿಯಿಸಿ, "ಅಂ ?" ಎಂದರು.

ಗಣೇಶ ತಿರುಗಿ ಅದೇ ಪ್ರಶ್ನೆಯನ್ನು ಹಾಕಿದ.

Mr Venkatraj Bhat

ಶೆಟ್ಟರು ಸಿಡಿದು ಹೇಳಿದರು—"ಮುಂದೆ ಮಾಡುವದೇನು! 'ಪೊಲಿಟಿಕ್ಸ್-ಪೊಲಿಟಿಕ್ಸ್' ಅಂತ ಹೇಳುತ್ತಾ ಹಾರಾಡುತ್ತಿದ್ದಾಳೆ. ಅದೇನು ಅರ್ಥಗೆಟ್ಟ ರಾಜಶಾಸ್ತ್ರವೊ, ತಲೆಗೆಡಿಸುವ ಚುಚ್ಚುಶಾಸ್ತ್ರವೊ-ದಿನವಿಡೀ ಓದುತ್ತಾ ಕೂತಿರುತ್ತಾಳೆ ರೀಡಿಂಗ್ ರೂಮಿನಲ್ಲಿ. ಅವಳ ರಾಜಶಾಸ್ತ್ರದ, ತುಂಬಾ ನನಗೆ ಕೇಳಿಬರುತ್ತಿರುವುದೆಂದರೆ 'ಕಮ್ಯುನಿಸಂ' ಮತ್ತು 'ಕಾಮ್ರೇಡ್ಸ್' ಎಂಬ ಶಬ್ದಗಳು."

"ಹ್ಞಂ! ಏನಂದಿ?"

"ಕೇಳಿಸಲಿಲ್ಲವೇ? ಅದೇ, ಪೊಲಿಟಿಕ್ಸಿನಲ್ಲಿ ಭಾಗವಹಿಸುತ್ತಾಳಂತೆ. ಪ್ರಚಂಡ ಕಾಮ್ರೇಡ್ ಆಗಿ ಶೋಷಕವರ್ಗವನ್ನು ಹುಡಿಗಟ್ಟುತ್ತಾಳಂತೆ."

"ಹ್ಹೋ! ಈಗ ಅಧ್ಯಯನ ಬಿಟ್ಟು ರಾಜಕೀಯರಂಗಕ್ಕಿಳಿಯುತ್ತಿದ್ದಾಳೆ, ಧೀರೆ? ಅದರಲ್ಲೂ ಕಮ್ಯುನಿಸಂ ರಂಗಕ್ಕೆ!.... ಹಾಗಾದರೆ.... ಹೋಯ್ತು ಕಣೋ ಹೋಯ್ತು!......"

"ಏನೋ ಹೋದದ್ದು?"

"ನಿನ್ನ ಮಗಳು—ನಿನ್ನ ಅಂಕೆ ತಪ್ಪಿ—ಹೋದಳು—ಅಂತ!"

"ಅಂದರೆ?"

"ಅಂದರೆ, ಈಗಾಗಲೇ, ನಾಲ್ಕು ಮಂದಿಯ ಮುಂದೆ ನಿನಗೆ ಎದುರು ನುಡಿದವಳು, ಹತ್ತೂರು ಸುತ್ತಿ, ಅವಳಂಥಾ ಹತ್ತು ಮಂದಿಯೊಡನೆ ಕಲೆತ ನಂತರ ಉಂಟೇ ನಿನ್ನನ್ನು ಲೆಕ್ಕಿಸುವುದು? ಮತ್ತೆ "ನಾನುಂಟೋ ಮೂರು ಲೋಕವುಂಟು' ಎಂದಾಳು. ಅಲ್ಲದೆ ಈ ಹುರುಳಿಲ್ಲದ ರಾಜಕೀಯ ಸಾಗರವನ್ನಾದರೂ ಆಕೆ ಚೆನ್ನಾಗಿ ಈಸಿ ದಡಸೇರಿಯಾಳೆಂದು ಭಾವಿಸಿದ್ದೀಯಾ ನೀನು? ಇದು ಕೇವಲ ಅವಳ ಅಂಧಾನುಕರಣೆಯಾಗೇ ತೋರುತ್ತದೆ ನನಗೆ."

ಶೆಟ್ಟರು ಗಟ್ಟಿಯಾಗಿ ನಕ್ಕರು; ಮತ್ತು ಹೇಳಿದರು.

"ಅದಕ್ಕೇ—ಅವಳನ್ನು ರಾಜಕೀಯದ ಮೋಹಜಾಲದಿಂದ ದೂರ ಸಾಗಿಸಬೇಕೆಂದೇ ನಾನು ಇಷ್ಟೊಂದು ಹೆಣಗಾಡಿದೆ ಎಂಬುದು ಈಗಲಾದರೂ ನಿನ್ನ ತಲೆಗೆ ಹೊಳೆಯಿತೇನು? ಅವಳು ಎಂದು 'ರಾಜಕೀಯ' ಅಂದಳೋ ಅಂದೇ ಅವಳು ನೇರ ಹಾದಿ ಬಿಡುತ್ತಿದ್ದಾಳೆಂದು ನನಗೆನಿಸಿತ್ತು."

"ನೀರಹಾದಿ ಬಿಟ್ಟದ್ದೇ ಅಲ್ಲ; ನಿನ್ನ ತಲೆಯಮೇಲೆ ಇನ್ನಷ್ಟು ಭಾರ ಬಿದ್ದದೆ ಎಂದು ಹೇಳು! ನಮ್ಮ ಈ ಒರಟು ಸಮಾಜದ ಸ್ವಭಾವ ನಿನಗೆ ಗೊತ್ತೇ ಇದೆಯಲ್ಲ! ಅದರ ದೊರಗುನಾಲಗೆಗೆ ನಯವಾದ ಕಾಲವೇ ಇಲ್ಲ. ಪ್ರಾಯಶಃ ಈಗ ವಿನತಾ ತಾನಿಳಿಯುವ ರಂಗದಲ್ಲಿ ಕೃತಕೃತ್ಯಳಾದರೆ ಹೇಗೂ ಸಮಾಜದ ಅಂಜಿಕೆ ಇರದೆಂದು ತಿಳಿ. ಆದರಿದು ಅವಿಶ್ವಾಸದ ಮಾತು. ಯಾವುದೇ ವಿಚಾರವಾಗಲಿ, ಶಾಶ್ವತವಾಗಿ ಪರಿಣಮಿಸಬೇಕಾದರೆ ಅದು ಮನುಷ್ಯನ ಅಂತರಾಳದಿಂದ ಆವಿರ್ಭವಿಸಿರಬೇಕು. ಅದಿಲ್ಲದೆ ಬರೇ ಪುಸ್ತಕ ಪಠನೆಯಿಂದ ದೊರೆಯುವ ತಾತ್ಪೂರ್ವಿಕ ಸ್ಫೂರ್ತಿಯಿಂದ ಏನೊಂದೂ ಆಗಲಾರದು. ಪುಸ್ತಕವಾಚನ ಕೇವಲ ವ್ಯಕ್ತಿಯಲ್ಲಿರುವ ಸಹಜ ಗುಣಶಕ್ತಿಗಳಿಗೆ ಪೋಷಕವಾದುದಷ್ಟೆ. ವಿನಿತಾಳಾದರೂ ಈಗ ಅಂತಹದ್ದೇ ಒಂದು ತಾತ್ಕಾಲಿಕ ಸ್ಫೂರ್ತಿಯಿಂದ ಪ್ರೇರಿತಳಾಗಿ, ಪೊಲಿಟಿಕ್ಸನ್ನೊಂದು ಮಕ್ಕಳಾಟಿಕೆಯಂತೆ ಭಾವಿಸಿ ಒಮ್ಮೆಲೆ ದುಡುಕಿದ್ದಾಳೆ. ಆದರೆ ಈ ಆಟದ ಸವಿಯನುಭವವಾಗುತ್ತಲೇ ನೂರಾರು ಜನರ ಸಂಶಯ ಕಟ್ಟಿಕೊಂಡು ಹಿಂದಿರುಗುತ್ತಾಳೆ. ಮುಂದಿನ ಅವಳ ಜೀವನ ದುರಂತಕ್ಕೀಡಾಗಬಹುದು. ಆದ್ದರಿಂದಲೇ ಅವಳ ಈ ಕಾರುಭಾರ ನನಗೆ ಹಿಡಿಸಲಿಲ್ಲ.

"ಅದಕ್ಕೇ ಮಹಾರಾಯಾ, ನಾನೂ ಹೇಳುತ್ತಿರುವುದು – ಅವಳನ್ನು ಈ ವಿಚಾರದಿಂದ ಹಿಂದಕ್ಕೆಳೆಯಲು ನೀನೊಂದು ಉಪಾಯ ಸೂಚಿಸು ಎಂದು!"

"ಉಪಾಯವೆ?"—ಎಂದು ಹೇಳಿ ಗಣೇಶ ತುಸುಹೊತ್ತು ಯೋಚಿಸಿದವನಂತೆ ನಟಿಸಿದ; ಮತ್ತೆ, "ಉಪಾಯವೇನೊ ಇದೆ. ಆದರೆ ಅದನ್ನು ಆಕೆ ಒಪ್ಪಿಯಾಳೆಂದು ಹೇಗೆ ಹೇಳಬಹುದು? ವ್ಯಾಸಂಗವನ್ನೇ ಒಲ್ಲದವಳು ಅದನ್ನು ಒಪ್ಪಿಯಾಳೇ?"—ಎಂದನು ಶಂಕಿತ ದನಿಯಲ್ಲಿ.

"ಅದೇನು ಉಪಾಯವಪ್ಪಾ, ನಿಂದು?" ಉತ್ಸುಕತೆ ತೋರಿಸಿದರು ಶೆಟ್ಟರು.

"ಕೊನೆಗೆ ನೀನಾದರೂ ಒಪ್ಪುತ್ತೀಯೋ ಏನೋ?"

"ನನ್ನ ವಿಚಾರ ಬಿಡಯ್ಯ. ನಿನ್ನ ಸಲಹೆ ಏನಿದ್ದರೂ ಅದಕ್ಕೆ ನನ್ನ ಸಮ್ಮತಿ ಕಟ್ಟಿಟ್ಟದ್ದು. ಅಂತೇ ವಿನತಾಳನ್ನು ಅದಕ್ಕೆ ಒಡಂಬಡಿಸುವುದು ನನಗೇ ಬಿಟ್ಟದ್ದು. ನೀನು ನಿನ್ನ ಕೆಲಸ ತೀರಿಸಿಬಿಡು!"

"ನನ್ನ ಕೆಲಸವೇ—ಅಂದರೆ ನನ್ನ ಸಲಹೆ—ಮದುವೆ! ಅವಳನ್ನು ಬಂಧಿಸಿಡಲು ಮದುವೆಯೊಂದೇ ಮದ್ದು!"—ಗಣೇಶ ಫಕ್ಕನೆ ಹೇಳಿದ.

"ಮದುವೆಯೆ? ಉಹುಂ! ಆಕೆ ಇದಕ್ಕೆ ಸಮ್ಮತಿಸಿಯಾಳೆಂದು ನಾನು ಊಹಿಸುವುದೂ ಕೂಡ ಇಲ್ಲ. ಆದರೂ ಯತ್ನಿಸಿ ನೋಡುತ್ತೇನೆ. ಆಕೆಯ ಅನುಮತಿಯ ಮಾತು ಒತ್ತಟ್ಟಿಗಿರಲಿ, ಸದ್ಯ; ವರನ ಶೋಧ?"

ಅದರ ಚಿಂತೆ ನಿನಗೇಕೆ? ಎರಡೇ ದಿನಗಳಲ್ಲಿ ನಿಮ್ಮಿಬ್ಬರ ಒಪ್ಪಿಗೆ ಸಿಕ್ಕಿತೆಂದರೆ, ಮತ್ತೆ, ಒಂದೇ ಒಂದು ವಾರದಲ್ಲಿ ನಿನಗೆ ಅಳಿಯದೇವನೊಬ್ಬ ದೊರೆತನೆಂದು ತಿಳಿ!"

"ಅಂದರೆ, ಯೋಗ್ಯ ವರನನ್ನು ಪತ್ತೆಹಚ್ಚುವುದು ಅಷ್ಟೊಂದು ಸುಲಭವೆ?"

"ಸುಲಭಗಿಲಭದ ಪ್ರಶ್ನೆಯೇ ಇಲ್ಲಿ ಬೇಡ. ವರನನ್ನು ನಾನಾಗಲೇ ಪತ್ತೆಹಚ್ಚಿಟ್ಟು ಬಿಟ್ಟಿದ್ದೇನೆ! ಹುಡುಗ ನನ್ನಷ್ಟೇ ವಿದ್ಯಾವಂತ. ಮಾತ್ರ ವಲ್ಲದೆ ಉಚ್ಚಪದವಿಯಲ್ಲಿದ್ದಾನೆ.

"ನಿಮ್ಮಿಬ್ಬರೊಳಗೆ ಮಾತುಕತೆ ನಡೆಯಿತೆ?" ಅಚ್ಚರಿಯಿಂದ ಕೇಳಿದರು ಶೆಟ್ಟರು.

"ಹುಚ್ಚನಾದ ನನ್ನನ್ನು ಆತ ಮಾತನಾಡಿಸಿರಬಹುದೇ? ಅಂತಲ್ಲವೇ ವಿಸ್ಮಯ ನಿನಗೆ? ನೋಡು ಈ ಸಮಾಜದಲ್ಲಿ ನೀನೊಬ್ಬ ನನಗೆ ಸಹಾನುಭೂತಿ ತೋರಿಸುತ್ತಿರುವಂತೆ ಆ ಹೊಸ ತರುಣನೊಬ್ಬ ನನ್ನಲ್ಲಿ ಆಸಕ್ತಿಯಿಟ್ಟಿದ್ದಾನೆ......ಹುಂ—ಅದಂತಿರಲಿ ಸದ್ಯಕ್ಕೆ. ಇನ್ನೂ ಹೊತ್ತು ಬಿದ್ದಿಲ್ಲ; ನೀನು ಬಯಸುವೆಯಾದರೆ ಈಗಲೇ ನಾವಿಬ್ಬರೂ ಆತನಲ್ಲಿಗೆ ಹೋಗಿ, ಆತನನ್ನು ಮಾತನಾಡಿಸಿ ಬರಬಹುದು. ಆಗಬಹುದಲ್ಲವೇ?"

ಶೆಟ್ಟರಿಗೆ ಗೆಳೆಯನ ಉತ್ಸಾಹಭರಿತನುಡಿಯಲ್ಲಿ ಏನೋ ಒಂದು ಆಸೆ-ಭರವಸೆ ಮೂಡಿತು.

"ಹುಂ" ಎಂದು ಹೇಳಿ, ಹೊರಡಲೆದ್ದರು.

೨

ಮರುದಿನ ಸುಪ್ರಭಾತ!

ನಾರಾಯಣ ಶೆಟ್ಟರ ಬಂಗಲೆಯ ಉಪ್ಪರಿಗೆಯಲ್ಲಿನ ರೀಡಿಂಗ್ ರೂಮ್

ಆ ರೂಮಿನ ಒಂದು ಕಡೆ ನಾನಾ ಹೊತ್ತಿಗೆಗಳಿಂದ ತುಂಬಿದ ಎರಡು ಮೂರು ಕಪಾಟುಗಳು ನಿಂತಿದ್ದುವು. ಮಧ್ಯದಲ್ಲಿ ವಿಶಾಲವಾದೊಂದು ಉದ್ದನೆಯ ಮೇಜು. ಅದರ ಮೇಲೆಲ್ಲಾ ಅನೇಕ ದೈನಿಕ ಪತ್ರಿಕೆಗಳೂ, ವಾರಪತ್ರಿಕೆಗಳೂ ಹರವಿಬಿದ್ದಿದ್ದುವು. ಒಂದೆರಡು ಸೋಫಾಗಳು ಮತ್ತು ನಾಲ್ಕೆಂಟು ಕುರ್ಚಿಗಳು ಮೇಜಿಯನ್ನು ಬಳಸಿ ನಿಂತಿದ್ದುವು.

ಆಳವಾದ ಬೆತ್ತದ ಕುರ್ಚಿಯೊಂದರಲ್ಲಿ ವಿನತಾಕುಮಾರಿ ಕೂತಿದ್ದಳು. ಸ್ವಾಭಾವಿಕವಾಗಿಯೇ ಸುಂದರಿಯಾದ ಆಕೆ, ಆ ದಿನ ಬಿಳಿಯ ಪತ್ತಲವನ್ನು ಬೇರೆ ಉಟ್ಟಿದ್ದಳಾಗಿ ಅವಳ ಚೆಲುವು ಇನ್ನಷ್ಟು ಹೆಚ್ಚಿತ್ತು; ಕರಿಯ ಹೂದಾನಿಯಲ್ಲಿಟ್ಟ ಬಿಳೀ ರೋಜಾಗಳ ಗೊಂಚಲಂತೆ ಕಾಣುತ್ತಿದ್ದಳು. ಕುರ್ಚಿಯಲ್ಲಿ ಹುದುಗಿಕೊಂಡಿದ್ದ ಆ ಚಿಕ್ಕ ದೇಹದ ತಲೆಯುಷ್ಟೇ ಮೇಲಕ್ಕೆದ್ದು ತೋರುತ್ತಿತ್ತು; ರೂಮಿನೊಳಕ್ಕೆ ಭರದಿಂದ ತೂರಿಬರುತ್ತಿದ್ದ ಪ್ರಭಾತ ಕಾಲೀನ ತಂಗಾಳಿಯ ಹೊಡೆತಕ್ಕೆ ಮೇಲೆದ್ದು ತೂರಾಡುತ್ತಿದ್ದ ಅದರ ಮೇಲಿನ ಕೂದಲೆಳೆಗಳು ಹೂವಿಗೆ ಮುತ್ತಿಗೆಯಿಟ್ಟ ಅಳಿನಿಕರದಂತೆ ಭಾಸವಾಗುತ್ತಿದ್ದುವು.

ಆಕೆಯ ಮುಂಗಡೆ, ಮೇಜಿನ ಮೇಲೆ ದಪ್ಪನ್ನ ಇಂಗ್ರೇಜಿ ಹೊತ್ತಿಗೆಯೊಂದು ತೆರೆದು ಬಿದ್ದಿತ್ತು. ಅವಳ ಕಣ್ಣುಗಳೇನೊ ಪುಟದ ಮೇಲೆ ನೆಟ್ಟಿತ್ತಾದರೂ ಮನಸ್ಸು ನಿನ್ನೆ ಸಂಜೆಯ ಪ್ರಕರಣವನ್ನು ನೆನೆದು ಮರುಗುತ್ತಿತ್ತು. ಹುಟ್ಟಿದಂದಿನಿಂದಲೇ ತಾಯಿಯ ಅಕ್ಕರೆಯನ್ನೂ ತಂದೆಯ ವಾತ್ಸಲ್ಯವನ್ನೂ ಒಟ್ಟೊಟ್ಟಿಗೇ ಕೊಟ್ಟು ಬೆಳೆಸಿದ್ದನಾಕೆಯನ್ನು ಅವಳ ಪಪ್ಪ. ಅವಳು ಅವನೆದುರಿಗೆ ಆಗಾಗ್ಗೆ ತುಂಬಾ ಹಟಮಾರಿಯಾಗಿ ವರ್ತಿಸುತ್ತಿದ್ದರೂ ಎಂದೂ ಕಠೋರತೆಯಿಂದ ನಡೆದುದಿಲ್ಲ. ಆದರೆ ನಿನ್ನೆ ಸಂಜೆ ಅವನ ಬಯಕೆಯನ್ನು ವಿರೋಧಿಸಿ, ಅವನ ಗಣ್ಯಸ್ನೇಹಿತರೆದುರಿಗೆ ತಾನಂಥಾ ಕೆಲವು ಕಟುನುಡಿಗಳನ್ನಾಡಿ ಹಾಲ್‌ನಿಂದ ಹೊರಬಿದ್ದು ಬಂದುದರಿಂದ ಅವನ ಮನಸ್ಸಿಗೆ ಅತಿಯಾದ ನೊವುಂಟಾಗಿರಬೇಕೆಂದು ಅವಳು ಅರಿತ್ತಿದ್ದಳು. ಅವಳನ್ನು ಬಿಟ್ಟು ಒಮ್ಮೆಯೂ ಅನ್ನಕ್ಕೆ ಕೈಯಿಕ್ಕದಾತ, ನಿನ್ನೆರಾತ್ರಿ ಅವಳನ್ನು ಊಟಕ್ಕೆ ಕರೆಯದೇ ಹೋದುದು ಮತ್ತು ಬೆಳಿಗ್ಗೆ ಇಷ್ಟು ಹೊತ್ತಾದರೂ ನೋಡಲು ಬಾರದೆ ಹೋದುದು ಆ ಬಗೆಗೆ ಸಾಕ್ಷಿಯನ್ನೊರೆಯುತ್ತಿತ್ತಾಕೆಗೆ.

ಯೋಚಿಸುತ್ತಾ ಹೋದಂತೆ ಅವಳಿಗೆ ತನ್ನ ತಪ್ಪು ಅಗಾಧವೆನಿಸಿ, ಪಶ್ಚಾತ್ತಾಪದಿಂದ ಚಿತ್ತ ಕುದಿಯತೊಡಗಿತು. ಪುಸ್ತಕವನ್ನು ಸಿರುಕಿಸಲಾಗದೆ ಅದನ್ನು 'ಡಬ್' ಎಂದು ಮುಚ್ಚಿ ಎದ್ದುನಿಂತಳು. ಕುರ್ಚಿಯನ್ನು ಆಚೆ

ಸರಿಸಿ ಈಚೆ ಬಂದಳು ಆ ಮೇಲೆ ಬಂಗ್ಲೆಯ ಹಿಂಭಾಗದ ಕಿಟಕಿಯೊಂದರ ಸನಿಹಕ್ಕೆ ಹೋಗಿ ನಿಂತಳು.

ಹೊರಗಡೆ ಉದ್ಯಾನದಲ್ಲಿ ಬಣ್ಣಬಣ್ಣದ, ನಾನಾ ತೆರದ ಹೂಗಳು ಮನ ಮೋಹಕವಾಗಿ ಅರಳಿದ್ದುವು. ಅವುಗಳ ಮೇಲೆ ನೇಸರಿನ ಎಳೆ ಕಿರಣಗಳು ತೆಳುವಾಗಿ ಹರಡಿದ್ದು, ಅವು, ಅದೊಂದು ಹೊಂಬಣ್ಣದಿಂದ ಶೋಭಿಸು ತ್ತಿದ್ದುವು. ಗಿಡಗಳ ಎಲೆಗಳ ಮತ್ತು ಕುಸುಮದಳಗಳ ತುದಿಗಳಲ್ಲಿ ನಿಂತು ನೇತಾಡುತ್ತಿದ್ದ ಮಂಜಿನ ಹನಿಗಳು ಸೂರ್ಯರಶ್ಮಿಗೆ ಬೆಳ್ಳಿಯ ಉಂಡೆಗಳಂತೆ ಮಿರುಗುತ್ತಿದ್ದುವು. ಜೇನುನೊಣಗಳಾಗಲೇ ಮಕರಂದದ ವ್ಯಾಪಾರಕ್ಕೆ ತೊಡಗಿದ್ದುವು. ಅವುಗಳ ಝುಂಕಾರವವು ಸುವಾಸಿತ ತಂಗಾಳಿಯೊಂದಿಗೆ ಮಿಳಿತವಾಗಿ ಬಂದು, "ಪಿತೃದ್ರೋಹಿ! ಪ್ರಿತೃದ್ರೋಹಿ!" ಎಂದು ತನ್ನನ್ನು ಅಣಕಿಸುವಂತೆ ಭಾಸವಾಯಿತು, ವಿನತಾಳಿಗೆ. ಅಲ್ಲಿ ನಿಲ್ಲಲಾಗದೆ ಆಕೆ ಮುಂಭಾಗದ ಗವಾಕ್ಷಕ್ಕೆ ಸರಿದಳು.

ಆ ದಿನ ಪರಿಷೆ. ದೂರದ ಮಾರುಕಟ್ಟೆ, ಚಿಕ್ಕದೊಂದು ಅಂಕಣ ದಂತೆ ತೋರುತ್ತಿತ್ತು. ರಸ್ತೆ, ಜನರ ಓಡಾಟದಿಂದ ಕಿಕ್ಕಿರಿದು ಹೋಗಿತ್ತು. ವಾಹನಗಳು ತಡೆಯಿಲ್ಲದೆ ಅತ್ತಿಂದಿತ್ತ ಧಾವಿಸುತ್ತಿದ್ದುವು. ಅವುಗಳ ಕರ್ಕಶನಾದವು ಜನರ ಗದ್ದಲದೊಡನೆ ಬೆರೆತುಬಂದು, "ಪಿತೃದ್ರೋಹಿ! ಪಿತೃ ದ್ರೋಹಿ!" ಎಂದು ತನ್ನನ್ನು ಹೀಯಾಳಿಸುತ್ತಿರುವಂತೆಯೆ ಅನಿಸಿತು, ಆಕೆಗೆ; ಅಲ್ಲಿಯೂ ನಿಂತಿರಲಾರದೆ ಇತ್ತ ಸರಿದಳು.

ಈ ರೀತಿ ಮಾನಸಿಕ ವ್ಯಥೆಗೆ ಸಿಲುಕಿ ಏನೊಂದೂ ಮಾಡಲು ತೋಚದೆ, ಆಕೆ, "ಏನು ಮಾಡಲಿ, ಏನು ಮಾಡಲಿ? ಪಪ್ಪನನ್ನು ಹೇಗೆ ಸಮಾಧಾನ ಪಡಿಸಲಿ?" ಎನ್ನುತ್ತಾ ರೂಮಿನ ಒಂದು ತುದಿಯಿಂದ ಇನ್ನೊಂದು ತುದಿಗೆ ಎಡೆಯಾಡತೊಡಗಿದಳು.

ಒಮ್ಮೆಲೆ ಸವಿನೆನಪುವೊಂದು ಆಕೆಗೆ ಮರುಕಳಿಸಿತು. ಆ ಕೂಡಲೆ ಪ್ರಫುಲ್ಲಿತ ಮುಖದೊಡನೆ ತಂದೆಯ 'ಶೆಲ್ಫ್'ನ ಕಡೆಗೆ ಧಾವಿಸಿದಳು. ಅದ ರೊಳಗಿಂದ ಭಗದ್ಗೀತೆಯನ್ನು ತೆಗೆದು, ಅದರ ಹಾಳೆಗಳನ್ನು ಆಚೀಚೆ ತಿರುವಿ ಹಾಕಿ ಒಂದು ಚಿಕ್ಕ ಫೋಟೋವನ್ನು ಎತ್ತಿಕೊಂಡಳು. ನಂತರ ಪುಸ್ತಕ ವನ್ನು ಅಲ್ಲೇ ಇಟ್ಟು, 'ಶೆಲ್ಫ್'ನ ಬಾಗಿಲಿಕ್ಕಿ ಈಚೆ ಬಂದು, ಮೊದಲು ಕೂಡಿದ್ದ ಕುರ್ಚಿಯಲ್ಲೇ ಕುಳಿತು, ಆ ಫೋಟೋವನ್ನು ಕಣ್ತುಂಬ ನೋಡಿ ನೋಡಿ ಹಿಗ್ಗಿದಳು.

ಆ ಫೋಟೋ ಒಬ್ಬ ಯುವಕನದಾಗಿತ್ತು.

ಸಂತೋಷ ಭರದಲ್ಲಿ ವಿನತಾ ಅದಕ್ಕೆ ಮುತ್ತಿಟ್ಟಳು.

ಅನಂತರ, ಅದನ್ನು ಕೈಯಲ್ಲಿ ಹಿಡಿದುಕೊಂಡೇ ತನ್ನ ಮಲಗುವ ಕೋಣೆಗೆ ಹೋಗಿ, ಮೇಜಿನ ಡ್ರಾವರಿನಿಂದೊಂದು ಶೀಟ್ ಟಿಶುಪೇಪರನ್ನೂ ಕತ್ತರಿಯನ್ನೂ ಎತ್ತಿಕೊಂಡು ಹಿಂದಿರುಗಿದಳು.

ತಿರುಗಿ ಕುರ್ಚಿಯಲ್ಲಿ ಕೂಡಿ, ಆ ಪೇಪರಿನಿಂದ ಅಂದವಾದೊಂದು ಲಕೋಟೆಯನ್ನು ತಯಾರಿಸಿದಳು.

ಆ ಫೋಟೋವನ್ನು ಅದರೊಳಗೆ ಹಾಕಿ 'ಸರಿಯಾಗಿ ಹೊಂದಿಕೆಯಾಗುತ್ತದೆ," ಎಂದುಕೊಂಡು ಹೊರತೆಗೆದಳು.

ಬಳಿಕ ಅದನ್ನು ಮೇಜಿನ ಮೇಲಿಟ್ಟು ಮೇಲಿಂದ ಮೇಲೆ ದಿಟ್ಟಿಸುತ್ತಿರಲು, ಅವಳಿಗರಿಯದಂತೇ ಅವಳ ಬಾಯಿಯಿಂದ ಹೊರಬಿತ್ತು, ಉದ್ಗಾರ— "ಎಂಥಾ ವಿಶಾಲವಾದ ಮತ್ತು ಅಂದವಾದ ಕಣ್ಣುಗಳು! ಇಡಿಯ ದೇಹದ ಸ್ಥಿರತೆ ಹುಬ್ಬುಗಳಲ್ಲಿ ಎದ್ದು ಕಾಣುತ್ತಿದೆಯಲ್ಲ! ಮೂಗು ಎಷ್ಟೊಂದು ಮಾಟದ್ದಾಗಿದೆ? ಮುಖದಲ್ಲಿ ಸೌಂದರ್ಯದೊಡನೆ ಮಿಳಿತವಾಗಿರುವ ಅದೆಂಥಾ ಗಾಂಭೀರ್ಯ! ಉಬ್ಬಿದ ಭುಜಗಳು; ಹರವಾದ ಎದೆ! ನಿಂತ ಆ ಠೀವಿಯೋ?—ಆಹಾ! ಎನ್ನಬೇಕು! ಹಾ! ಎಂಥಾ ಭವ್ಯಾಕೃತಿ!"

ಅಷ್ಟರಲ್ಲಿ ಯಾರೋ ಮಹಡಿಯ ನಿಚ್ಚಣಿಗೆಯನ್ನೇರಿ ಬರುವ ಸದ್ದು ಕೇಳಿಸಿತು. ಅದು ಪಪ್ಪನೇ ಇರಬೇಕೆಂದು ಭಾವಿಸಿ, ಆಕೆ ಬೇಗಬೇಗನೆ ಫೋಟೋವನ್ನು ಲಕೋಟೆಯೊಳ ಸೇರಿಸಿ ಅದನ್ನು ಮುಂದೆ ಮುಚ್ಚಿ ಬಿದ್ದಿದ್ದ ಪುಸ್ತಕದ ಒಂದು ಕೊನೆಯಲ್ಲಿಟ್ಟು, ಓದುತ್ತಾ ಕುಳ್ಳಿರುವವಳಂತೆ ನಟಿಸಿದಳು.

ನಾರಾಯಣ ಶೆಟ್ಟರು ಕೋಣೆಯೊಳಕ್ಕೆ ಬಂದವರೇ "ವಿನತಾ, ನಿನಗೆ ಸುಪ್ರಭಾತವಮ್ಮಾ," ಎನ್ನುತ್ತಾ ಅವಳ ಬದಿಯಲ್ಲೇ ಕುರ್ಚಿಯೊಂದನ್ನು ಸೆಳೆದುಕೊಂಡು ಕುಳಿತು, "ಅದೇನು ಇಷ್ಟು ಹೊತ್ತಾರೆ ಓದುತ್ತಿರುವುದು, ಮಗು?" ಎಂದು ಕೇಳಿದರು.

ತಂದೆಯ ಅಷ್ಟೊಂದು ಸರಳವರ್ತನೆಯನ್ನು ಕಂಡು ವಿನತಾಳ ಅಳ್ಳೆದೆ ಇನ್ನಷ್ಟು ಕುಗ್ಗಿಹೋಯಿತು. ಆದರೂ ಸಾವರಿಸಿಕೊಂಡು, ತಾನೇನೇನೂ ತಪ್ಪೆಸಗಿರದವಳೆಂಬ ಬಗೆಯಿಂದ, ಸ್ವರದಲ್ಲಿ ಆದಷ್ಟು ನಯತಂದು ಕೊಂಡು ಎಂದಳು—"ಮಾರ್ಕ್ಸವಾದ, ಪಪ್ಪಾ,"—ಎಂದು.

ಮಾರ್ಕ್ಸ್‌ವಾದ!

ತನ್ನ ಅಖಂಡ ದುಡಿತದೆದುರು—ಭಂಡವಾಳದೆದುರು ಅತ್ಯುಗ್ರವಾದ ಬಂಡಾಯವೆಬ್ಬಿಸುವ ವಾದ!

ಅದನ್ನು ಕೇಳಿದಾಕ್ಷಣಕ್ಕೇ ಶೆಟ್ಟರ ಹೃದಯದಲ್ಲಿ ಭಯಂಕರ ಉತ್ಪಾತ ವೆದ್ದಿತು! ಆದರವನ್ನು ಪ್ರಕಟಿಸುವ ಸಮಯ ಅದಾಗಿರಲಿಲ್ಲ; ತಾವು ಮಾಡ ಬೇಕಾದ ಕಾರ್ಯ ಮುಖ್ಯದ್ದಿತ್ತು. ಆದ್ದರಿಂದ ಹೃದಯದ ಉರಿಯನ್ನು ಬಲವಂತದಿಂದ ಹತ್ತಿಕ್ಕಿ, ನೇರವಾಗಿ ವಿಷಯ ಪ್ರಕರಣಕ್ಕೇ ಮೊದಲಿಟ್ಟರು; ಕೇಳಿದರು:

"ಹಾಗಾದರೆ ನೀನು ವ್ಯಾಸಂಗ ಮುಂದುವರಿಸುವುದಿಲ್ಲವೆಂಬುದು ಖಂಡಿತವಾಯಿತಲ್ಲವೇ, ವಿನತಾ?"

"ಹೂಂ ಪಪ್ಪ."

"ಅಂದರೆ ಇನ್ನು ಮುಂದೆ ನೀನು ರಾಜಕೀಯ ಮನುಷ್ಯಳು! ಅದರಲ್ಲೂ ಕಮ್ಯುನಿಸ್ಟಳು! ಸಮತೆಯ ಚಾಟಿಕೋಲು ಹಿಡಿದು ನನ್ನನ್ನು ಗದರಿಸ ಬರುವವಳು, ಅಲ್ಲವೇನಮ್ಮಾ?"

ವಿನತಾ ಕಿರುನಗೆ ಬೀರಿದಳು. ಶೆಟ್ಟರು ಮತ್ತೆ ಹೇಳಿದರು.

"ಮಗು, ನನ್ನ ಐಶ್ವರ್ಯವೆಲ್ಲವೂ ಎಂದಿದ್ದರೂ, ಯಾವುದಕ್ಕೂ ನಿನಗೇ ಮೀಸಲು. ಅದನ್ನು ಬೇಕಾದರೆ ಇಂದೇ ನಿನಗೆ ಪೂರ್ಣವಾಗಿ ಕೊಟ್ಟು ಬಿಡುತ್ತೇನೆ; ಅದನ್ನು ನೀನು ಏನು ಬೇಕಾದರೂ ಮಾಡಿಕೊಳ್ಳಬಹುದು. ಆದರೆ ನೀನು ನನ್ನ ಒಂದೇ ಒಂದು ಇಚ್ಛೆಯನ್ನು ಕೊನೆಗಾಣಿಸಬೇಕು."

"ಅದೇನು ಇಚ್ಛೆಯಪ್ಪ?"

"ನೋಡು ವಿನತಾ, ನೀನು ಅನುಭವವಿಲ್ಲದವಳು. ಸಮಾಜ ಸುಧಾರಣೆಯ ಕೆಲಸಗಳೆಂದರೆ ಸಾಮಾನ್ಯವಲ್ಲ. ಆ ಕಾರ್ಯದಲ್ಲಿ ತೊಡಗಿರುತ್ತಾ ನೀನು ಒಂದೇ ಸ್ಥಳದಲ್ಲಿದ್ದು ಕೆಲಸ ಮಾಡ ಬರುವುದಿಲ್ಲ. ಅನೇಕ ಸ್ಥಳಗಳಿಗೆ ಹೋಗಬೇಕಾಗುವುದು; ಅನೇಕ ಜನರೊಂದಿಗೆ ಬೆರೆಯಬೇಕಾಗುವುದು. ಆವಾಗಲೆಲ್ಲಾ ನಾನು ನಿನ್ನ ಬಗೆಗೆ ತುಂಬಾ ಕಳವಳದಿಂದಿರ ಬೇಕಾಗುವುದು. ಆದ್ದರಿಂದ......ನಿನ್ನ ವಿಚಾರವಾಗಿ ನಿಶ್ಚಿಂತೆಯಿಂದಿರಲು ......ನೀನು ಮದುವೆಯಾಗಬೇಕು......"

ವಿನತಾ ಗಟ್ಟಿಯಾಗಿ ನಕ್ಕಳು; ಮತ್ತು, "ಇದೇ ನಿನ್ನ ಇಚ್ಛೆಯೇನಪ್ಪ?" ಎಂದು ಕೇಳಿದಳು.

"ಹೌದು ಮಗು."

"ನಾನಿದಕ್ಕೆ ಒಪ್ಪಿದರೆ, ನಾನು ಕೈಕೊಳ್ಳಲಿರುವ ಕಾರ್ಯಕ್ಕೆ ಯಾವ ಅಡ್ಡಿಯೂ ಇರದೇನು?"

"ಇಲ್ಲ."

"ನಾನು ಮದುವೆಯಾಗುವ 'ಆ' ವ್ಯಕ್ತಿಯದು ಕೂಡ?"

"ಇಲ್ಲವೇ ಇಲ್ಲ."

"ಹೇಗೆ ಹೇಳುತ್ತೀ?"

"ನೀನು ವರಿಸಬೇಕಾದವನು ಅಂಥಿಂಥವನೇನು ಅಲ್ಲಮ್ಮ. ನೀನು ಓದುತ್ತಿದ್ದ ಸೆಂಟ್ರಲ್‌ಕಾಲೇಜಿನ ಈಗ ಒಬ್ಬ ಹೊಸ ಇಂಗ್ಲಿಷ್ ಪ್ರಾಧ್ಯಾಪಕ ಬಂದಿದ್ದಾನೆ, ಶ್ರೀಧರ ಎನ್ನುವವ. ಅವನ ವಿಚಾರ ಗಣೇಶನೇ ನನಗೆಲ್ಲ ವನ್ನೂ ತಿಳಿಸಿ ನಿನ್ನೆ ರಾತ್ರಿ ನನ್ನನ್ನು ಅವನಲ್ಲಿಗೆ ಕರೆದೊಯ್ದಿದ್ದ. ವಿವಾಹಕ್ಕೆ ಆತ ಒಪ್ಪಿದ. ನಿನ್ನ ಕಾರ್ಯಕ್ಕೆ ಯಾವ ವಿಘ್ನವನ್ನೂ ಒಡ್ಡುವುದಿಲ್ಲವೆಂದು ಆತ ಖಂಡಿತವಾಗಿ ಹೇಳಿದ. ಅನಂತರ ನಾವು ಊಟವನ್ನು ಅಲ್ಲೇ ಮುಗಿಸಿ ಹಿಂದಿರುಗಿದೆವು."

ವಿನತಾಗೆ ಎಲ್ಲಾ ಹೊಳೆಯಿತು. ರಾತ್ರಿ, ಪಪ್ಪ ತನ್ನನ್ನು ಯಾಕೆ ಊಟಕ್ಕೆ ಕರೆಯಲಿಲ್ಲ; ತಪ್ಪಿತಸ್ಥಳಾದ ತನ್ನೊಡನೆ ಅದೇಕೆ ಅವರು ಅಷ್ಟೊಂದು ನಯವಾಗಿ ನಡಕೊಳ್ಳುತ್ತಿದ್ದಾರೆ—ಎಂಬುದಕ್ಕೆ ಕಾರಣ ತಿಳಿಯಿತು. ತಿಳಿದು, ಸಾಮಾನ್ಯವಾಗಿ ಸಿಡುಕಿನ ಸ್ವಭಾವದವಳಾದ ಆಕೆಗೆ ಮೆಲ್ಲ ಮೆಲ್ಲನೆ ಕೋಪ ಉದಿಸಿತು. ಹುಚ್ಚು ಗಣೇಶನನ್ನು ಅವಳು ಮೆಚ್ಚುತ್ತಿರಲೇ ಇಲ್ಲ. ಅವನ ಹೆಸರೆತ್ತುವುದಕ್ಕೂ ಅವಳು ಅಸಹ್ಯ ಪಟ್ಟುಕೊಳ್ಳುತ್ತಿದ್ದಳು. ಹಾಗಿರುವಲ್ಲಿ, ಈಗ, ಅವನೇ ತನ್ನ ವಿವಾಹಕ್ಕಾಗಿ ಪಪ್ಪನನ್ನು ಪ್ರೇರಿಸಿದ್ದನ್ನು ಕೇಳಿ ಆಕೆಗೆ ಸಹಿಸದಾಯಿತು; ಅವನನ್ನು ಸಿಕ್ಕಿದಲ್ಲಿ ಹರಿದು ತಿನ್ನುವಷ್ಟು ಅವಳ ಅಂತರಂಗ ಉರಿಯತೊಡಗಿತು. ಹೇಗೂ, ಹಿರಿಯರಿಬ್ಬರು ಹೀಗೆ ತನ್ನ ಮದುವೆಯ ಏರ್ಪಾಡಿನಲ್ಲಿ ತೊಡಗಿದುದು ತೀರಾ ತಾಳಲಸಾಧ್ಯವಾಗಿ ಅವಳ ಅಂತಃಕೋಪ ಪ್ರಬಲಿಸಿತು. ಆದರೂ, ಅದನ್ನು ಶಾಂತಮುದ್ರೆಯಿಂದ ಪಕ್ಕದಲ್ಲಿ ಕುಳಿತು, ತನ್ನ ಅಭಿಪ್ರಾಯವನ್ನು ತವಕದಿಂದ ನಿರೀಕ್ಷಿಸುತ್ತಿದ್ದ ತಂದೆಯ ಎದುರಿಗೆ

ಪ್ರಕಟಿಸಲು ಹಿಂಜರಿದಳು; ಮದುವೆಯ ಕುರಿತು ವಿಚಾರಿಸಿದಳು; ರಾಜಕೀಯ ಮತ್ತು ವಿವಾಹ—ಎರಡನ್ನೂ ಒಟ್ಟೊಟ್ಟಿಗೆ ತೆಗೆದುಕೊಂಡು ವಿವೇಕಿಸಿದಾಗ, ವಿವಾಹ ತನ್ನ ಮುನ್ನಡೆಗೆ ಅಪಾಯಕಾರಿಯಾಗಿಯೇ ಕಂಡುಬಂತಾಕೆಗೆ. ಕೇವಲ ವಿವಾಹವೊಂದನ್ನೇ ತೆಗೆದುಕೊಂಡಾಗ ಅದು ಪ್ರಿಯವೆನಿಸಿತಾದರೂ ಕಾಲೇಜದ ಲೆಕ್ಚರ ಶ್ರೀಧರ ವರನಾಗುವುದು ಮಾತ್ರ ಅವಳನ್ನು ಸಂಕಟಕ್ಕೆ ಗುರಿಮಾಡಿಸಿತು. ತಾನು ಲಗ್ನಕ್ಕೇನೋ ಸಮ್ಮತಿಸಬಹುದು; ಆದರದು ಆ ಫೋಟೋದ ಯುವಕನೊಡನಾದರೆ ಸೈ, ತಾನದಕ್ಕೆ ಯಾವತ್ತೂ ಸಿದ್ಧಳು—ಎಂಬ ನಿಶ್ಚಿತಕ್ಕೆ ಬಂದಳು. ಆ ನಿಶ್ಚಿತವನ್ನು ಆಗಲೇ ತಂದೆಗೆ ತಿಳಿಸಲು ಅವಳಿಗೆ ಸಂಕೋಚವೆನಿಸಿತು. ಹೇಗೆ ಕೆಲಸಮಯದ ಅವಧಿಯನ್ನು ಕೇಳಿಕೊಂಡು ಮುಂದೆಂದಾದರೂ ಅದನ್ನು ತಿಳಿಸಬಹುದು, ಸದ್ಯಕ್ಕೆ ಉಪಾಯದಿಂದ ಪಾರಾಗುವುದೇ ಒಳಿತೆಂದುಕೊಂಡು ಆಕೆ ಹೇಳಿದಳು:

"ಪಪ್ಪ, ನನ್ನನ್ನು ಕ್ಷಮಿಸಿಬಿಡು! ಈ ಬಗ್ಗೆ ಇಷ್ಟು ತೀವ್ರ ನಾನು ಯಾವ ಅಭಿಪ್ರಾಯವನ್ನು ಸೂಚಿಸಲಾರೆ. ತಕ್ಕಷ್ಟು ಯೋಚಿಸಿ ಆ ಮೇಲೆ ಹೇಳುತ್ತೇನೆ........"

ಈ ಉತ್ತರದಿಂದ ಶೆಟ್ಟರು ತತ್ತರಿಸಿಹೋದರು; ಕೇಳಿದರು:

"ಎಲ್ಲಾ ಸಮಸ್ಯೆ ಬಗೆಹರಿದು, ವಿಷಯ ನಿರ್ಧಾರವಾದ ಮೇಲೆ ಯೋಚಿಸುವುದೇನು ಉಳಿಯಿತು, ವಿನತಾ? ನಿನ್ನ ವರ್ತನೆ ತೀರ ವಿಚಿತ್ರವಾಗಿದೆಯಲ್ಲ?"

'ಸಮಸ್ಯೆ ಬಗೆಹರಿದು ವಿಷಯ ನಿರ್ಧಾರವಾದ ಮೇಲೆ'— ಈ ಮಾತು ಕೇಳಿದಾಕ್ಷಣ ವಿನತಾಳ ತಣಿದಿದ್ದ ಕೋಪ ಮತ್ತೆ ಹೊತ್ತಿಕೊಂಡಿತು! ಸಿಡುಕಿನಿಂದುಸುರಿದಳು— "ವಿಷಯವೇನು ನಿರ್ಧಾರವಾಗಿಲ್ಲ, ಪಪ್ಪ! ಹಾಗೆ ನೀವುನೀವೇ ಯೋಚಿಸಿ ನಿರ್ಧರಿಸುವುದಕ್ಕೆ ಇದೇನು ಅಂಥಿಂಥ ವಿಷಯವಲ್ಲ! ಇದು, ನನ್ನ ಇಡಿಯ ಜೀವನಕ್ಕೆ ಸಂಬಂಧಿಸಿದ ಮಾತು; ಇದರ ಕುರಿತು ದೀರ್ಘ ಯೋಚನೆ ನಡೆಸಿ ಉತ್ತರ ಹೇಳಬೇಕಾದುದು ನನ್ನ ಕರ್ತವ್ಯ!"

ಶೆಟ್ಟರ ಸಂಕಲ್ಪಬುನಾದಿ ಸಂಪೂರ್ಣ ಅಲ್ಲಾಡಿಹೋಯಿತು! ಮಗಳ ಹಟವಾದಿತನದಿಂದ ಪರಿಚಿತರಾದ ಅವರು, ಮುಂದೆ, ವಾದಸರಣಿಯನ್ನು ದೀರ್ಘ ಲಂಬಿಸಲು ಇಚ್ಛಿಸಲಿಲ್ಲ; ಪ್ರಕೃತದ ಕೆಲಸವನ್ನು ಚುಟುಕಿನಲ್ಲೇ ಕೊನೆಗೊಳಿಸಬಯಸಿ, ಹೇಳಿದರು:

"ಮಗು! ನೀನೆಂದು ಹಟದ ಹೆಜ್ಜೆಯಿಡತೊಡಗಿದೆ ಎಂದರೆ ನಿನ್ನೆದುರಿನಿಂದ ಆ ಕೂಡಲೇ ನಾನು ಸರಿದುಹೋಗಬಯಸುತ್ತೇನೆ. ಈಗಲಾದರೂ ಅಷ್ಟೆ: ಈ ವಿಷಯದಲ್ಲಿ ಮುಂದೆ ಮಾತುಬೆಳೆಸಲಿಚ್ಛಿಸುವುದಿಲ್ಲ. ಆದರೂ ಒಂದು ಮಾತು ಕೇಳಿಬಿಡುತ್ತೇನೆ: ಅದೇನೆಂದರೆ, ನೀನು ನಿನ್ನ ಅಭಿಪ್ರಾಯವನ್ನು ಎಂದು ಸೂಚಿಸುವೆ?"

ವಿನತಾ ಕ್ಷಣಕಾಲ ಯೋಚಿಸಿ ಅಂದಳು—"ಹೆಚ್ಚು ಸಮಯವಿಲ್ಲ, ಪಪ್ಪ; ಎರಡೇ ಎರಡು ದಿನಗಳ ಅವಕಾಶ ಸಾಕು."

ಶೆಟ್ಟರು "ಸರಿ" ಎಂದು ಹೇಳಿ, "ಗಂಟೆ ಎಷ್ಟಾಯಿತು?" ಎಂದು ಕೇಳಿದರು.

ವಿನತಾ ಎದ್ದು ಹೋಗಿ ಅಲ್ಲೇ ಇದ್ದ ಅಲ್ಮ್ಯಾರ ಒಂದರ ಮೇಲ್ಭಾಗದಲ್ಲಿಟ್ಟಿದ್ದ ಗಡಿಯಾರ ನೋಡಿ ಎಂದಳು—"ಒಂಭತ್ತು."

"ಓ! ಅಷ್ಟಾಗಿ ಹೋಯಿತೇ – ಕೆಳಗೆ ನಡಿ–ಕಾಫಿಯ ಹೊತ್ತು ಮಿೀರಿ ಹೋಯಿತು, ಎಂದು ಹೇಳುತ್ತಾ ಶೆಟ್ಟರು ಕುರ್ಚಿಯಿಂದೆದ್ದರು.

೩

ಮತ್ತೆ ಮೂರನೆಯ ದಿನ ಬೆಳಿಗ್ಗೆ:

"ವಿನತಾ! ವಿನತಾ! ಇಗೋ ಬಂದೇಬಿಟ್ಟೆ! ನಾನು ನಿನಗೆ ಕೊಟ್ಟ ಗಡುವು ತೀರಿತು," ಎಂದೆನ್ನುತ್ತಾ ನಾರಾಯಣ ಶೆಟ್ಟರು ರೀಡಿಂಗ್‌ರೂಮನ್ನು ಹೊಕ್ಕರು.

ವಿನತಾಕುಮಾರಿ!—

ಆಕೆ, ಅದೇ ಮುನ್ನಾದಿನ ಕುಳಿತ್ತಿದ್ದ ಬೆತ್ತದ ಕುರ್ಚಿಯಲ್ಲೇ ಕುಳಿತು 'ದಿ ಹಿಂದು' ಪತ್ರಿಕೆಯ ಹಾಳೆಯೊಂದನ್ನು ಮುಖಕ್ಕೆ ತುಸು ಓರೆಯಾಗಿ ಹಿಡಿದು ನೋಡುತ್ತಿದ್ದಳು; ತಂದೆಯ ಧ್ವನಿ ಕೇಳುತ್ತಾ ಪತ್ರಿಕೆಯನ್ನು ಮೇಜಿನ ಮೇಲೆ ಚೆಲ್ಲಿ ಸರಿಯಾಗಿ ಕುಳಿತುಕೊಂಡಳು.

ಇಷ್ಟರಲ್ಲಿ ಶೆಟ್ಟರು ಆಕೆಗೆ ಎದುರಿನ ಸೋಫಾದಲ್ಲಿ ಕುಳಿತುಕೊಳ್ಳುತ್ತಾ ಕೇಳಿದರು—"ನಾನು ಹೇಳಿದ್ದು ನಿನಗೆ ಕೇಳಿಸಲಿಲ್ಲವೆ, ಮಗು?"— ಎಂದು

ಆಕೆ ಬೆಚ್ಚಿಬಿದ್ದವಳಂತೆ ಹಿಂದಕ್ಕೆ ಕೇಳಿದಳು—"ಏನಪ್ಪಾ?"

"ಅದೇ, ನಾನು ನಿನಗಿತ್ತ ಗಡುವು ಮುಗಿಯಿತು; ವಿವಾಹದ ಬಗ್ಗೆ ನಿನ್ನ ಅಭಿಪ್ರಾಯವನ್ನು ತಿಳಿಸು ಅಂತ?......." ಅವರ ಮುಖದಲ್ಲಿ ಕುತೂಹಲ ನರ್ತಿಸುತ್ತಿತ್ತು.

ವಿನತಾಳ ಮುಖ ಕಪ್ಪಿಟ್ಟಿತು. ಗಂಟಲನ್ನು ತುಸು ಕೆರೆದುಕೊಂಡು ಆಕೆ ಎಂದಳು—"ಪಪ್ಪ....ನಾನು ಮದುವೆಗೇನೋ ಒಪ್ಪಬಹುದು.... ಆದರೆ....ನೋಡು—ಆ ಶ್ರೀಧರನನ್ನು ಮಾತ್ರ ಒಲ್ಲೆ.."

"ಮತ್ತೇ..?" ಶೆಟ್ಟರ ಉತ್ಸಾಹ ಅರ್ಧಕ್ಕೆ ಇಳಿಯಿತು!

"ಅದು.....ನೋಡು," ಎಂದು, ಫೋಟೋದ ವಿಚಾರವನ್ನೆ ಎತ್ತದೆ, "ಅವನನ್ನು ನೀನು ತಿಳಿದಿರಬಹುದು—ನಾನು ಲಗ್ನವಾಗುವುದಾದ ಅವನನ್ನಲ್ಲದೆ ಮತ್ತಾರನ್ನೂ ಅಲ್ಲ." ಎಂದಾಕೆ ಒಮ್ಮೆಲೆ ಹೇಳಿದಳು.

ಹೋದ ಉತ್ಸಾಹವನ್ನು ಎಳೆದುಕೊಂಡು ಕೇಳಿದರು, ಶೆಟ್ಟರು:

"ಯಾರನ್ನು?"

ಅವಳ ಮೋರೆಯ ಮೇಲೆ ಅವರಿಸಿದ್ದ ಕಂದು ಛಾಯೆಯು ಮರೆಯಾಗುತ್ತಾ, ಆ ಎಡೆಯನ್ನು ನಾಚಿಕೆಯು ತುಸುತುಸುವಾಗಿ ಬೆಳಗಿಸಿತು; ಹೇಳಿದಳು—"ಅವನನ್ನು ನಾನು ಪ್ರತ್ಯಕ್ಷ ಕಂಡಿಲ್ಲ, ಪಪ್ಪ. ಫೋಟೋದಲ್ಲಷ್ಟೇ ನೋಡುತ್ತಿದ್ದೇನೆ...."

ಶೆಟ್ಟರಿಗೂ ತಾವು ಏನೋ ಒಂದು ಹೊಸ ಅನುಭವಕ್ಕೆ ಜಿಗಿದಂತಾಯ್ತು. ಕಿರುನಗೆ ಸೂಸುತ್ತ ಕೊಂಚ ಹಾಸ್ಯದ ದನಿಯಲ್ಲೆ ಕೇಳಿದರು—

"ಅಯ್ಯೊ! ಇದೆಂಥಾ ಪ್ರಸಂಗವೇ, ಮಗು! ಪ್ರತ್ಯಕ್ಷ ಕಂಡಿಲ್ಲ; ಫೋಟೋದಲ್ಲಷ್ಟೇ ಇದ್ದಾನೆ; ಆದರೂ ಮೆಚ್ಚುತ್ತೀಯಾ? ಕಾಣದವನ ಫೋಟೋ ಅದು ಹೇಗೆ ಬಂತಮ್ಮಾ, ನಿನಗೆ?"

ವಿನತಾಗೆ ಹಾಸ್ಯ ಒಗ್ಗಿದ್ದೇ ಅಲ್ಲ. ತಂದೆಯ ಮಾತಿನಲ್ಲಿ ಅಡಗಿದ್ದ ಅಣಕವನ್ನು ಕಂಡು ಆಕೆಯ ಹುಬ್ಬುಗಂಟಿಕ್ಕಿತ್ತು. ಅಂತೇ ಸಂಪೂರ್ಣ ನಾಚಿಕೆಯುಳಿದು ಹೇಳಿದಳು—

"ಪಪ್ಪ! ಅದು ನನಗೆ ಹೇಗೇನೆ ಬಂದಿರಲಿ, ಅದರ ವಿಚಾರವೇನು ನಿನಗೆ ಬೇಕಿಲ್ಲ! ಅವನೊಂದಿಗೆ ನನ್ನ ವಿವಾಹ ನಡೆಸುತ್ತೀಯಾ, ಅಷ್ಟೇ ಹೇಳು."

ಮಗಳ ಮಾತಿನಲ್ಲಿ ಎಳೆತನದ ಮೊಂಡು ಹಟವನ್ನು ಕಂಡುಕೊಂಡರು, ಶೆಟ್ಟರು. ಅದಕ್ಕೆ ಒಳಗೊಳಗೇ ನಗುತ್ತ, ಸರಳವಾಗಿ, "ಯಾವುದಕ್ಕೂ ನಾನು ಆ ಫೋಟೋವನ್ನೇ ನೋಡಲಿಲ್ಲವಲ್ಲೇ, ಏನು ? ಎಲ್ಲಿ ? ಅದನ್ನೊಮ್ಮೆ ಇತ್ತ ತಾ, ನಾನು ನೋಡಿಕೊಳ್ಳುತ್ತೇನೆ; ಆ ಮೇಲೆ ಎಲ್ಲಾ ನಿಶ್ಚಯಿಸುವ," ಎಂದರು.

"ನೋಡು, ಮತ್ತೆ–ಆಮೇಲೇನಾದರು--ಅಡ್ಡ ಮಾತಾಡಿದರೆ"— ಎಂದೆನ್ನುತ್ತಾ ಆಕೆ ಎದ್ದು ಹೋಗಿ ಒಂದು ಅಲ್ಮೈರದೊಳಗಿಂದ ಆ ದೊಡ್ಡ ಇಂಗ್ಲಿಷ್ ಹೊತ್ತಗೆಯನ್ನು ಎತ್ತಿಕೊಂಡು ಬಂದು ಕುಳಿತಳು. ನಂತರ ಅದರೊಳಗಿಂದ ಟಿಶು ಪೇಪರಿನ ಆ ಲಕೋಟೆಯನ್ನು ತೆಗೆದು, ಅದನ್ನು ಪಪ್ಪನ ಕೈಗಿತ್ತಳು; ಮುಂದಿನ ಅವರ ಕೆಲಸವನ್ನು ಉತ್ಸುಕತೆಯಿಂದ ನಿರೀಕ್ಷಿಸತೊಡಗಿದಳು.

ಶೆಟ್ಟರು ಎಲ್ಲಿಲ್ಲದ ಕಾತರತೆಯಿಂದ ಅದರೊಳಗಿಂದ ಫೋಟೋವನ್ನು ಹೊರತೆಗೆದು, ಅದನ್ನು ಬೆಳಕಿನ ಕಡೆಗೆ ಒಡ್ಡಿ ನೋಡಿದರು.

ನೋಡಿದ್ದೇ ತಡ, ಸಾಗರ ಮಥನದ ಕಾಲದಲ್ಲಿದ್ದ ಕೋಲಾಹಲವು ತ್ರೈಲೋಕವನ್ನೆಲ್ಲಾ ಆವರಿಸಿದಂತೆ ಉಕ್ಕಿಬಂದ ನಗು ಅವರ ಶರೀರಾದ್ಯಂತ ವ್ಯಾಪಿಸಿಕೊಂಡಿತು. ಊದಿ ಊದಿ ಮುದಿಹಿಡಿದ ಬೆಲೂನು ಕಡೆಗೊಮ್ಮೆ ದೊಡ್ಡದಾಗಿ ಉಬ್ಬಿ ಬಿರಿಯುವಂತೆ ಅದು ಅವರ ಬಾಯಿಂದ ಒಮ್ಮೆಲೆ ಹೊರಹೊಮ್ಮಿ, ಆ ಮೇಲೆ ಅಲೆಯಲೆಯಾಗಿ ಕೋಣೆಯೆಲ್ಲ ತುಂಬಿಕೊಂಡಿತು— ಹ್ಹ-ಹ್ಹ-ಹ್ಹ-ಹ್ಹ......! ಎಂದು.

ಒತ್ತಿ-ಒತ್ತಿ ಬರುತ್ತಿದ್ದ ನಗೆಯ ದೆಸೆಯಿಂದಾಗಿ ಅವರು ನಿರರ್ಗಳವಾಗಿ ನುಡಿಯಲಾರದೇ ಹೋದರು. ಕಡೆಗೆ ಹೇಗೂ ನಗೆಯ ಮಧ್ಯೆ-ಮಧ್ಯೆ ಅಕ್ಷರಗಳನ್ನು ಜೋಡಿಸಿ, "ಭೇಷ್! ಭಾರಿ ಒಳ್ಳೆಯ ವರನನ್ನೇ ಆರಿಸಿದಿ! ನನ್ನ ಕೆಲಸ ಬಹಳ ಹಗುರವಾಯಿತು." ಎಂದು ಹೇಳಿ, ತಿರುಗಿ ಬಿದ್ದೂಬಿದ್ದು ನಗತೊಡಗಿದರು— ಹ್ಹ-ಹ್ಹ-ಹ್ಹ-ಹ್ಹ......!

ವಿನತಾಗೆ ತಡೆಯದಾಯಿತು. ಮುಂದಕ್ಕೆ ಬಾಗಿ ಅವರ ಕೈಯಿಂದ ಫೋಟೋವನ್ನು ಕಸಿದುಕೊಳ್ಳಲು ಅವಳು ರಭಸದಿಂದ ಎದ್ದಳು; ಮತ್ತು, "ಸಾಕು ಮಾಡು ಪಪ್ಪ, ನಿನ್ನ ಹಾಳು ನಗೆಯನ್ನು! ನನ್ನ ಫೋಟೋವನ್ನು ಇತ್ತ......" ಎಂದೆನ್ನುತ್ತಾ ಮುಂದಕ್ಕೆ ಬಾಗುವಷ್ಟರಲ್ಲೇ ಹಿಂದಿನಿಂದ ದನಿ ಕೇಳಿಸಿತು—

"ಏನಿದು ತಂದೆ ಮಕ್ಕಳಿಬ್ಬರು ನಗೆಯ ಪ್ರವಾಹದಲ್ಲಿ ಕೊಚ್ಚಿ ಹೋಗುತ್ತಿದ್ದೀರಿ? ನನಗೂ ನಿಮ್ಮ ಸಂತೋಷದಲ್ಲಿ ಒಂದಿಷ್ಟು ಪಾಲು ಕೊಡಿರಪ್ಪಾ!" ಎಂದು.

ವಿನತಾ ಹಿಂದಿರುಗಿ ನೋಡಿದಳು; ಹುಚ್ಚು ಗಣೇಶ ಕೋಣೆಯನ್ನು ಹೋಗುತ್ತಿದ್ದ. ಆ ಕ್ಷಣಕ್ಕೆ—ಒಂದೇ ನೆಗೆತಕ್ಕೆ ಹಾರಿ ಅವನ ಗಂಟಲು ಹಿಸುಕಬೇಕೆನ್ನಿಸಿತು, ಆಕೆಗೆ. ಆದರೆ ಸಿಟ್ಟಿನ ಹೆಚ್ಚಳದಲ್ಲಿ ಕಾಲುಗಳೇಳಲಿಲ್ಲ; ಏನೂ ಮಾಡಲಾಗದೆ ಚಿತ್ರದ ಪ್ರತಿಮೆಯಂತೆ ನಿಂತುಬಿಟ್ಟಳಾಕೆ.

ಗಣೇಶ ಬಂದವನು ಶೆಟ್ಟರ ಬಳಿಸಾರಿ, ಅವರ ಹೆಗಲ ಮೇಲೆ ಕೈಯಿಟ್ಟು, "ಏನಯ್ಯ, ಉಕ್ಕೇರಿ ಹರಿಯುತ್ತಿದೆ ನಿನ್ನ ನಗೆಗಡಲು? ಏನಪ್ಪಾ, ಅಂಥಾ ವಿಶೇಷ?"—ಎಂದು ಕೇಳಿದ; ಮತ್ತು ಅದಕ್ಕೆ, ಇನ್ನೂ ನಗುತ್ತಲೇ ಇದ್ದ ಶೆಟ್ಟರ ಕಡೆಯಿಂದ ತೀವ್ರ ಉತ್ತರ ಬಾರದಿರಲು ವಿನತಾಳನ್ನೀಕ್ಷಿಸಿ ಅವಳ ಉಗ್ರರೂಪ ನೋಡಿ ಬೆಚ್ಚಿಬಿದ್ದು ಕುಳಿತ.

ಆಗಲೇ, ನಕ್ಕು ನಕ್ಕು ಸೋತು ಹೋಗಿ, ನಿರ್ಬಲಹೊಂದಿದ ಎದೆಯನ್ನು ಒತ್ತಿಹಿಡಿದು ಶೆಟ್ಟರು ಅಂದರು—

"ನೋಡೋ ಗಣಿ! ನಮ್ಮ ವಿನು ಚೆಲೋ ಮತಿವಂತೆ ಕಣಣ್ಣ. ತನ್ನ ಗಂಡನನ್ನು ತಾನೇ ಆರಿಸಿಕೊಂಡಿದ್ದಾಳೆ. ಆದರವನನ್ನು ಫೋಟೋದಲ್ಲಷ್ಟೇ ಕಂಡಿದ್ದಾಳೆ. ಈಗ ನಾವಿಬ್ಬರೂ ಕೂಡಿ ಇವಳ ಮದುವೆಯನ್ನು ಅವನೊಡನೆ ಮಾಡಬೇಕು. ಇದಕ್ಕೆ ಮುಖ್ಯವಾಗಿ ನಿನ್ನ ಒಪ್ಪಿಗೆಯೊಂದು ಬರಬೇಕು," ಎಂದು.

ಅದಕ್ಕೆ ಅವನು, "ನನ್ನ ಒಪ್ಪಿಗೆಯೆ? ಓ! ಅದೇನು ಬಹು ಸುಲಭದ ವಸ್ತು. ವಿನು ಮೆಚ್ಚಿದ ವರ ಯಾರಾದರೇನು? ನಾವು ಸಂತೋಷದಿಂದ ಅವಳ ವಿವಾಹ ನಡೆಸುವ. ಅದಕ್ಕೆ ನೀನೇಕೆ ನಗಬೇಕು, ಅವಳೇಕೆ ಸಿಟ್ಟುಗೊಳ್ಳಬೇಕು?" ಎಂದು, ವಿನತಾಳನ್ನು ಕುರಿತು, "ಎಲ್ಲಿ ಮಗು, ಆ ಫೋಟೋ? ಇತ್ತಕೊಡು. ನೋಡುವಾ" ಎಂದ.

ಕೂಡಲೆ ಶೆಟ್ಟರು ತಮ್ಮ ತೊಡೆಯ ಮೇಲೆ ಅಂಗೈಯಿಂದ ಆತಿಟ್ಟುಕೊಂಡಿದ್ದ ಫೋಟೋವನ್ನು ಮೇಲೆ ತೆಗೆದು, "ಇಗೊ, ಇಲ್ಲಿದೆ ಅದು," ಎಂದು ಹೇಳಿ ಅದನ್ನು ಅವನಿಗೆ ಕೊಟ್ಟರು.

ವಿನತಾ ಇನ್ನೂ ನಿಂತೇ ಇದ್ದಳು.

ಗಣೇಶ ಫೋಟೋವನ್ನು ಕೇಳಿಕೊಂಡವನೇ ಅದನ್ನು ಒಂದು ಕೈಯಲ್ಲಿ ಹಿಡಿದುಕೊಂಡು ಇನ್ನೊಂದು ಕೈಯಿಂದ ಜೇಬಿನಿಂದ ಕನ್ನಡಕ ತೆಗೆದು ಧರಿಸ ತೊಡಗಿದ.

ಶೆಟ್ಟರು ಅವನನ್ನು ನಗುಮುಖದಿಂದ ನಿರುಕಿಸುತ್ತಿದ್ದರು.

ಅರೆಕ್ಷಣ!—

ಫೋಟೋವನ್ನು ನೋಡುತ್ತಾ ಗಣೇಶನ ಮುಖದಿಂದ ಇನ್ನೊಂದು ನಗೆಯ ಲಹರಿ ಹೊರಟಿತು—"ಹ್ಹಿ-ಹ್ಹಿ-ಹ್ಹಿ-ಹ್ಹೀ.....ಇವನನ್ನು ವರಿಸುತ್ತಾಳಾ, ನಾಣಿ, ವಿನತಾಕುಮಾರಿ? ಈ ಹುಚ್ಚ ಭಾಗ್ಯವಂತನೇ ಸರಿಯಪ್ಪಾ ....ಹ್ಹಿ-ಹ್ಹಿ-ಹ್ಹಿ-ಹ್ಹೀ-.......!"

ಈಗ ಹಿರಿಯರಿಬ್ಬರೂ ಒಟ್ಟಿಗೆ ಸೇರಿ ನಗತೊಡಗಿದರು—

ಹ್ಹ-ಹ್ಹ-ಹ್ಹ-ಹ್ಹ- ಹ್ಹಿ-ಹ್ಹಿ-ಹ್ಹಿ-ಹ್ಹೀ....!

ಇನ್ನು ಆಕೆಗೆ ಸಹಿಸಲಿಲ್ಲ. ಮೇಜಿನ ಮೇಲಿದ್ದ ಮಾರ್ಕ್ಸ್‌ವಾದದ ಹೊತ್ತಿಗೆಯನ್ನು ಎತ್ತಿ ರಭಸದಿಂದ ಎದುರಿನ ಗೋಡೆಗೆ ಎಸೆದು, "ನಾನ್ಸೆನ್ಸ್! ಓಲ್ಡ್ ಬ್ರೂಟ್ಸ್!" ಎಂದು ಒದರಿ ರೂಮಿನಿಂದ ಹೊರಬೀಳಲನುವಾದಳು.

ಒಡನೆ ಶೆಟ್ಟರು ಚೇತರಿಸಿಕೊಂಡು, "ಮಗು, ನಾನಿನ್ನು ನಗುವುದಿಲ್ಲವಮ್ಮ. ನೀನು ಖಂಡಿತಾ ಹೋಗಕೂಡದು. ಹೋದರೆ ನನ್ನಾಣೆ ಇದೆ," ಎಂದು ದೈನ್ಯದಿಂದ ಕೇಳಿಕೊಂಡರು.

"ಆಗುವುದೆಲ್ಲ ಆಗಿಹೋಗಲಿ, ನೋಡಿಯೇಬಿಡುತ್ತೇನೆ" ಎಂದುಕೊಂಡು ವಿನತಾ ಕುರ್ಚಿಯಲ್ಲಿ ಕುಸಿದಳು; ಮತ್ತು ಇನ್ನೂ ನಗುತ್ತಲೇ ಇದ್ದ ಗಣೇಶನನ್ನು ನೋಡಿ ಆಕ್ರೋಶದಿಂದ "ಇವನಿಗೇನು ಮಾರಿ ಬಡಿಯಿತು? ಇವನ ತಲೆ ಬಹುಶಃ ಕಲಕಿಹೋಗಿರಬೇಕು! ಇರುವ ಪ್ರಣಯ ಹುಚ್ಚಿನೊಂದಿಗೆ ಈಗ ಈ ನಗೆಯ ಹುಚ್ಚನ್ನು ಬೇರೆ ಸೇರಿಸಿಕೊಳ್ಳುತ್ತಿದ್ದಾನೆಂತ ಕಾಣುತ್ತದೆ; ಫೂಲ್!" ಎಂದುಬಿಟ್ಟಳು.

ಅವಳ ಈ ನುಡಿ ಗಣೇಶನ ಎದೆಯಲ್ಲಿ ಬಾಣದಂತೆ ಎರಗಿ ಅವನ ಆವೇಶವನ್ನು ಒಮ್ಮೆಲೆ ಇಳಿಸಿಬಿಟ್ಟಿತು. ದೀರ್ಘವಾದ ನಿಟ್ಟುಸಿರೊಂದನ್ನು ಬಿಟ್ಟು ಆತ ಹೇಳಿದ—"ಮಗು, ಇದರಲ್ಲಿ ನಿನ್ನ ತಪ್ಪು ಎಳ್ಳಷ್ಟೂ ಇಲ್ಲ. ಈ

ಹುಚ್ಚ ತಾರುಣ್ಯದಲ್ಲಿ ಇದ್ದುದೇ ಹೀಗೆ. ಇವನ ರೂಪವನ್ನು ನೋಡಿ ನಿನ್ನಂಥಾ ಎಷ್ಟೋ ಮಂದಿ ಯುವತಿಯರು ಮೋಹಿಸಿ ಬಂದಿದ್ದಾರೆ. ಆದರೆ, ಈತ ಮಾತ್ರ ಬೇರೊಬ್ಬನ ಹಿಂದೆ ಓಡಿಹೋದ ಷಂಡಿಯ ಚಿಂತೆಯಲ್ಲಿ ಕೊರಗಿ ರುತ್ತಾ ತನ್ನ ಇಡಿಯ ಜೀವನವನ್ನೇ ವ್ಯರ್ಥವನ್ನಾಗಿಸಿಕೊಂಡ.......ಈಗ ನಿನ್ನಂಥವರಿಂದ ಕೇಳಬಾರದ ಮಾತುಗಳನ್ನೆಲ್ಲಾ ಅನ್ನಿಸಿಕೊಳ್ಳಬೇಕಾಗಿದೆ, ನೋಡು."

ಅವನ ಮಾತು ಕೇಳಿ ಆಕೆಯ ಆವೇಶವೂ ಇಳಿಯಿತು.

"ಚಿಕ್ಕಪ್ಪ, ನನ್ನನ್ನು ಕ್ಷಮಿಸು! ಕೋಪದ ಭರದಲ್ಲಿ ಏನೋ ಅಂದು ಬಿಟ್ಟೆ. ಅದನ್ನು ನೀನು ಹಚ್ಚಿಕೊಳ್ಳಬೇಡ....ಅದೇನು ಚಿಕ್ಕಪ್ಪ; ನೀನು ಹೇಳುತ್ತಿರೋದು? ನನಗೆ ಅರ್ಥವೇ ಆಗುತ್ತಿಲ್ಲವಲ್ಲ?" ಶಾಂತಸ್ವರದಿಂದ ಕೇಳಿದಳು.

"ಈ ಫೋಟೋ ನಿನಗೆಲ್ಲಿಂದ ಸಿಕ್ಕಿತು, ಮಗಳೆ?"—ಆತ ಕೇಳಿದ.

"ಪಪ್ಪನ ಗೀತೆಯಿಂದ" ಆಕೆ ನುಡಿದಳು.

ಅವನ ಕಣ್ಣುಗಳಲ್ಲಿ ಹನಿಗಳು ಮಿನುಗಿದುವು. ಶೆಟ್ಟರನ್ನು ಸ್ನೇಹ ಪೂರ್ಣ ದೃಷ್ಟಿಯಿಂದೊಮ್ಮೆ ನೋಡಿ,—"ನೀನು ಮೋಸಹೋದೆ, ವಿನತಾ! ಇದು, ಈ ಹುಚ್ಚನ, ಯೌವನದಲ್ಲಿದ್ದಾಗ ತೆಗೆದ ಫೋಟೋಗ್ರಾಫ್!" ಎಂದು, ತನ್ನ ಎದೆಗೆ ಬಡಿದು ತೋರಿಸಿದನಾತ.

ಸ್ವಲ್ಪ ಹೊತ್ತಿನ ನಂತರ ತಿರುಗಿ ಇಬ್ಬರೂ ಮುದುಕರು ನಗತೊಡ ಗಿದರು!

ವಿನತಾ ನಾಚಿಕೆಯಿಂದ ತಲೆತಗ್ಗಿಸಿದಳು!

ಇದೇ ಲೇಖಕಿಯವರ

"ಹಿರಿಯರ ಪುರಾಣ"

(ಹರಟೆಗಳ ಸಂಗ್ರಹ)

ಬೇಗನೆ ಪ್ರಕಟವಾಗಲಿದೆ

ವಿವೇಕ ಸಾಹಿತ್ಯ ಮಾಲೆ, ಮಂಗಳೂರು—೩.

ನಮ್ಮ ಪ್ರಕಟಣೆಗಳು

1	ವಿಶ್ವಪ್ರೇಮಿ	ರಾ. ಮೊ. ವಿಶ್ವಾಮಿತ್ರ	(೨ನೇ ಮುದ್ರಣ)	1—8—0
*2	ಕುಟ್ಟಿದೊಣ್ಣೆ	ಎಮ್. ಸುಬ್ರಾಯನ್	(ಕಥಾಸಂಕಲನ)	0—8—0
*3	ಸ್ವರ್ಗಲೋಕ	ಎಮ್. ಕೆ. ಭಟ್	(ನಾಟಕ)	0—4—0
*4	ತಿಳಿವಿನ ಹಾದಿ	ರಾ. ಮೊ. ವಿಶ್ವಾಮಿತ್ರ	(ಕಾದಂಬರಿ)	0-12—0
*5	ದೇವರ ದಾರಿ	ಸೇವ ನಮಿರಾಜ ಮಲ್ಲ	(ಕಾದಂಬರಿ)	1—4—0
6	ಮಣ್ಣ ನಂಜು	ಎಮ್. ಎನ್. ಭಟ್	(ಕಾದಂಬರಿ)	0-14—0
7	ಬೇನೆಯ ಬಾಳ್ವೆ	ರಾ. ಮೊ. ವಿಶ್ವಾಮಿತ್ರ	(ಕಾದಂಬರಿ)	1—8—0
8	ಪುರಸ್ಕಾರ	ಗಣಪತಿ ಮೊಳೆಯಾರ	(ಕಾದಂಬರಿ)	0—8—0
9	ಭ್ರಾಂತಿಯ ಸುಳಿಯಲ್ಲಿ	ಎಂ. ಎನ್. ಭಟ್	(ಕಾದಂಬರಿ)	0-12—0
10	ಬೆಂದ ಜೀವಿ	ಪಂ.ಮೂ.ರುದ್ರಮುನಿಸ್ವಾಮಿ	(ಕಾದಂಬರಿ)	0-12—
11	ಸಮಾಜ ದರ್ಶನ	ಇಂದಿರಾತನಯ	(ಕಾದಂಬರಿ)	0—8—
12	ಹೃದಯ ವೀಣೆ	ಮ. ವಿ. ನಾಯಕ್	(ಕಥಾಸಂಕಲನ)	1—0—
13	ತ್ಯಾಗಮಯಿ	ರಾ. ಮೊ. ವಿ	(ಕಾದಂಬರಿ)	1—4—
14	ಮೊದ್ದು ಮಗು	ನವಗಿರಿನಂದ	(ಕಾದಂಬರಿ)	0-12—
15	ಸಂಶೋಧನೆ	ಆನಂದ ರಾವ್ ಎಂ. ಎ.	(ನಾಟಕ)	0—8—
16	ಕಾಳಿಗೆ ಕಾಣಿಕೆ	ಕೈಂತಜೆ ಗೋವಿಂದ ಭಟ್	(ಕಥಾಸಂಕಲನ)	0—8—
17	ರಕ್ತದಾನ	ರಾ. ಮೊ. ವಿಶ್ವಾಮಿತ್ರ	(ಕಾದಂಬರಿ)	0-12—
18	ಕುರುಡು ಕಾಸು	ಎಮ್. ಎನ್. ಭಟ್	(ಕಾದಂಬರಿ)	1—0—
19	ಅಂಕುರ	ಎಂ. ಎ. ನೀಲಮ್ಮ	(ಕಥಾ ಸಂಕಲನ)	1—0—

ಮುಂದಿನ ಕುಸುಮಗಳು:

20 ಹಳ್ಳಿಯ ಹಳಬರು (ಗ್ರಾಮೀಣ ವ್ಯಕ್ತಿಚಿತ್ರಸಂಗ್ರಹ) ರಾ. ಮೊ. ವಿ.

*ಪ್ರತಿಗಳು ತೀರಿವೆ.

11



ಕೊಡಗಿನ ನಾಲ್ಕು ನಾಡಿನ ನೆಲಜಿ ಎಂಬ ಹಳ್ಳಿಯೊಂದರಲ್ಲಿ ಇವರು ಜನಿಸಿದರು. ನಾಪೊಕ್ಲಿನ ಸರಕಾರಿ ಹೈಸ್ಕೂಲಿನಲ್ಲಿ ವ್ಯಾಸಂಗ ನಡೆಸುತ್ತಿರುವಾಗಲೇ ಸಾಹಿತ್ಯಾಭಿರುಚಿ ಇವರಲ್ಲಿ ಬೆಳೆಯಿತು.

ಶಿಕ್ಷಣ ಮುಗಿದು ನಿರುದ್ಯೋಗ ಹಾಗೂ ಆತ್ಮೀಯ ಜನರ ಪ್ರೇರಣೆಯಿಂದಲಾಗಿ ಸಾಹಿತ್ಯ ವ್ಯವಸಾಯರಂಗಕ್ಕಿಳಿದ ಇವರು ಕೊಡಗಿನ ಹಾಗೂ ದಕ್ಷಿಣ ಕನ್ನಡದ ಪತ್ರಿಕೆಗಳ ಮೂಲಕ ಜನಾದರ ಗಳಿಸಿಕೊಂಡರು. "ಯೋಗಿನಿ" "ಗಿನಿ" ಎಂಬ ಅಂಕಿತದಿಂದ ಬರೆಯುತ್ತಿರುವ ಎಂ. ಎ. ನೀಲಮ್ಮನವರು ಈಗ ಸಹಕಾರಿ ಸಂಸ್ಥೆಯಲ್ಲಿ ಉದ್ಯೋಗ ನಡೆಸುತ್ತಿರುವರು. ಹಿಂದಿಯಲ್ಲೂ ಸಾಕಷ್ಟು ಪರಿಜ್ಞಾನವಿದೆ.

ಉತ್ಸಾಹಿಗಳಾದ ಇವರಿಂದ ಇನ್ನೂ ಉತ್ತಮ ಕೃತಿಗಳು ಬರಲೆಂದು ಹಾರೈಸುವೆವು.